ಅರೆಭಾಷೆ-ಕನ್ನಡ-ಇಂಗ್ಲಿಷ್
ಶಬ್ದಕೋಶ

ಅರೆಭಾಷೆ ಗಾದೆಗ ಮತ್ತು ನುಡಿಗಟ್ಟ್‌ಗ

ಸಂಪಾದಕರ್
ಕೆ. ಆರ್. ಗಂಗಾಧರ

ಅರೆಭಾಷೆ - ಕನ್ನಡ - ಇಂಗ್ಲಿಷ್
ಶಬ್ದಕೋಶ

ಅರೆಭಾಷೆ ಗಾದೆಗ ಮತ್ತು ನುಡಿಗಟ್ಟ್‌ಗ

ಸಂಪಾದಕರ್
ಕೆ.ಆರ್. ಗಂಗಾಧರ

ಪ್ರಕಾಶಕರ್
ಗೌಡ ಸೋಶಿಯೋ ಎಜ್ಯುಕೇಶನ್ ಟ್ರಸ್ಟ್ (ರಿ.)
ಸುಳ್ಯ, ದಕ್ಷಿಣಕನ್ನಡ

Arebashe- Kannada- English Shabdakosha
Arebashe Gadega mattu Nudigattuga
A Dictionary of Arebashe- Kannada- English with
Arebashe Idioms and Proverbs

Prepared and Edited by
K.R.Gangadhar
Retd. Principal
Ramagiri Farms 'Kurunji'
Aranthodu - 574314
Sulya Tq, Dakshina Kannada
Tel. : 08257-265266, 9448549744

Published by
Gowda Socio- Education Trust (R)
Sulya Tq, Dakshina Kannada

First Edition : 2013

Pages : 240

Price : Rs. 100

For Copies contact
Master Medicals
KVG Medical Complex
Sri Rampete, Main Road, Sulya
Tel. : 08257 232266, 9844845513

Typesetting
Digi Plus
Sri Rampet, Sulya

Cover Design
Kalloor Nagesh

Page designed & printed at
Aakrithi Prints
Light House Hill Road, Manglaore - 1
Tel. : 0824 2443002

ಅರ್ಪಣೆ



60ರ ದಶಕದ
ನಮ್ಮ ಭಾರಿ ಕಷ್ಟದ ದಿನಗಳ್‌ಲಿ
ನನ್ನ ಓದ್‌ಸಿ ಪದವೀಧರನಾಗಿ
ಮಾಡಿ ಮಾಸ್ಟ್ರ ಆಕೆ ಪ್ರೇರೇಪಣೆ
ನೀಡ್ದ ನನ್ನ ಪೂಜ್ಯ ಅಪ್ಪ
ದಿ| ಕುರುಂಜಿ ರಾಮಯ್ಯ ಮಾಸ್ಟ್ರಿಗೆ



ಆ ಬಡತನದ ದಿನಗಳ್‌ಲಿ ಕೂಡಾ
ಮನೆ ನಿರ್ವಹಣೆಯೊಟ್ಟಿಗೆ
ನಂಗೆ ಪ್ರೋತ್ಸಾಹ, ಬೆಂಬಲ ಕೊಟ್ಟ್
ನನ್ನ ಬೆಳವಣಿಗೆನ ಹಿಂದೆ
ಗಟ್ಟಿಯಾಗಿ ನಿತ್ತ
ನನ್ನ ಪೂಜ್ಯ ಅವ್ವ
ದಿ| ಗಿರಿಜಾ ರಾಮಯ್ಯನವ್‌ಕೆ



ಎರಡ್ನೆ ಅವ್ವನಾಂಗೆ
ನಮ್ಮೆಲ್ಲ ತಮ್ಮಂದರ ಮತ್ತೆ ತಂಗೆಕಳ
ಮೇಲೆ ಪ್ರೀತಿನ ಧಾರೆ ಎರ್ದ್
ನಮ್ಮ ಸಾಕಿ ಸಲಹಿದ ನಮ್ಮ ದೊಡ್ಡಕ್ಕ
ದಿ|ಅಂಬಾ ಶೇಷಪ್ಪನವ್‌ಕೆ
ಈ ನನ್ನ ಸಂಪಾದನಾ ಕೃತಿನ
ಅರ್ಪಿಸುತ್ತಾ ಒಳೆ

ಮುನ್ನುಡಿ

ಭಾಷೆ ಯಾವುದೇ ಇರ್‌ಲಿ, ಒಂದು ಭಾಷೆಲಿ ಬಳ್ಸುವ ಪದಗಳ ಒಂದು ಕಡೆ ಕಲೆ ಹಾಕುವ ಕೆಲ್ಸ, ಆ ಭಾಷೆನ ಉಳ್ಸುವ ಮತ್ತು ಬೆಳ್ಸುವ ದೃಷ್ಟಿಂದ ತುಂಬಾ ಗಮನಾರ್ಹ. ಅರೆ ಭಾಷೆಂತ ಕರಿವ ಗೌಡಕನ್ನಡಕ್ಕೆ ತನ್ನದೇ ಆದ ಲಿಪಿ ಇಲ್ಲದಿದ್ದರೂ ಕರಾವಳಿ ಹಾಂಗೂ ಕೊಡಗು ಜಿಲ್ಲೆಲಿ ವಾಸ ಮಾಡುವ ಈ ಭಾಷೆನ ಮಾತಾಡ್ಬ ಜನಂಗಳಿಗೆ ತಮ್ಮ ಮಾತೃ ಭಾಷೆನ ಕಾಪಾಡ್ವ ಮತ್ತು ಅದ್‌ಕೊಂದು ಮೂರ್ತ ರೂಪ ಕೊಡುವ ನಿಟ್ಟ್‌ಲಿ ಒಂದು ಅರ್ಥಕೋಶದ ಅವಶ್ಯಕತೆ ಇತ್ತ್. ಇದ್ ನಿಜಕ್ಕೂ ನಮ್ಮ ಈ ಭಾಷೆನ ಬಹುಕಾಲದ ಬೇಡಿಕೆ ಕೂಡಾ ಆಗಿತ್ತ್. ಈ ಕೊರತೆನ ಈಗ ಶ್ರೀ ಕೆ.ಆರ್ ಗಂಗಾಧರನವು ನೀಗಿಸೊಳೊ. ಸಾಹಿತ್ಯ ಕ್ಷೇತ್ರಲಿ ಇದ್ ಅವರ ಮೊದಲ ಪ್ರಯತ್ನ. ಇವು ಸುಳ್ಯ ತಾಲೂಕ್‌ನ ಅರಂತೋಡುಲಿ ಇರುವ "ನೆಹರು ಮೆಮೊರಿಯಲ್ ಪದವಿಪೂರ್ವ ಕಾಲೇಜ್‌ಲಿ" ಪ್ರಿನ್ಸಿಪಾಲ್ ಆಗಿದ್ದ್, ಈಗ ನಿವೃತ್ತರಾಗೊಳೊ. ಇವು ರಾಷ್ಟ್ರ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರೂ ಕೂಡಾ ಹೌದು. ತಾನ್ ಮಾಡುವ ಯಾವುದೇ ಕೆಲ್ಸನ ಸಮರ್ಥವಾಗಿ ಮತ್ತು ಅಚ್ಚ್‌ಕಟ್ಟಾಗಿ ಮಾಡುವ ಜಾಣ್ಮೆ ಹೊಂದಿದವು. ಇವು ಸಂಗ್ರಹಿಸಿ, ಹೊರತಂದ ಈ ಅರೆಭಾಷೆ ಅರ್ಥಕೋಶದ ರಚನೆಲಿ ಇವು ಯಶಸ್ವಿ ಯಾಗೊಳೊ ಎಂದೇ ಭಾವಿಸಿನೆ. ಅವರ ಈ ಕೊಡುಗೆ ತುಂಬಾ ಮೆಚ್ಚುವಂತದ್ ಹಾಂಗೂ ಶ್ಲಾಘನೀಯ ಕೆಲ್ಸ. ಅರೆಭಾಷೆ ಸಾಹಿತ್ಯ ಕ್ಷೇತ್ರಲಿ ಕೆಲ್ಸಮಾಡೊಕ್ಕೆ ಮುಂದಿನ ದಿನಲಿ ಈ ಅರ್ಥಕೋಶ ಒಂದು ದಾರಿದೀಪ ಅಗುದರ್ಲಿ ಯಾವುದೇ ಸಂಶಯ ಇಲ್ಲೆ.



ಕುಯಿಂತೋಡು ದಾಮೋದರ
ನಿವೃತ್ತ ಪ್ರಾಂಶುಪಾಲರು
ಬಾಲೆಂಬಿ ಅಂಚೆ
ಚೆಂಬು ಗ್ರಾಮ, ಸಂಪಾಜೆ

ಮಾನವ ಭಾಷಾ ಜೀವಿ. ಭಾಷೆ ಮಾನವ ಕಂಡ್‌ಕೊಂಡ ಭಾರಿ ದೊಡ್ಡ ಸಂಪತ್ತ್. ಅದ್ ಅವನ ಜೀವನನ ರೂಪಿಸುವ ಪ್ರಕ್ರಿಯೆಲಿ ಬಹು ಮುಖ್ಯ ಪಾತ್ರವಹಿಸಿದೆ. ಈ ನಮ್ಮ ಜಗತ್‌ನ ಪ್ರತಿ ಒಂದು ಭಾಷೆನ ಹುಟ್ಟು ಮತ್ತು ಬೆಳವಣಿಗೆ ನಿಜಕ್ಕೂ ಒಂದು ವಿಸ್ಮಯಕಾರಿ ಅಂಶ ಅವನ ನಾಗರಿಕತೆಯೊಟ್ಟಿಗೆ ಭಾಷೆನೂ ಬೆಳೆದು ಬಂದುಟು. ಭಾಷೆ, ಅಂವ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಹೀಂಗೆ ಎಲ್ಲಾ ರಂಗಗಳ್‌ಲಿ ಬೆಳ್ದ್ ಬಂದ ಹಾದಿನ ಒಂದು ಕೈಗನ್ನಡಿ ಎಂಬುದರ್ಲಿ ಸಂಶಯ ಇಲ್ಲೆ.

ಸಾಮಾನ್ಯವಾಗಿ ಎಲ್ಲಾ ಭಾಷಿಕರ ದೈನಂದಿನ ವ್ಯವಹಾರಲಿ ಅವರ ದಿನ ಬಳಕೆಗೆ ಸಿಕ್ಕುವ ಪದಗ ತುಂಬಾ ಸೀಮಿತವಾಗಿದ್ದದೆ. ಅಂತ ಸಂದರ್ಭಲಿ ನಮ್ಮ ವ್ಯವಹಾರಂದ ಮರೆಯಾಗಿ ಹೊವಂತಹ ಪದಗಳ ಒಂದು ಕಡೆ ಸಂಗ್ರಹ ಮಾಡಿ ಕೂಡಿ ಹಾಕುವ ಕಾರ್ಯ ಆಗದಿದ್ದರೆ ನಾವು ಅನೇಕ ಪದಗಳ ಮರ್ತ್ ಬುಡುವ ಹಾಂಗೂ ಕೆಲವು ಪದಗ ತಮ್ಮ ನೈಜ ರೂಪನ ಕಳ್ದ್‌ಕಂಬ ಸಾಧ್ಯತೆ ಇದ್ದದೆ. ನಮ್ಮ ಈ ಅರೆಕನ್ನಡ ಭಾಷಾ ವಿಚಾರಲಿ ಹಾಂಗೆನೇ ಆವುಟೂಂತ ನಂಗೆ ಅನ್ಸುತ್ತಾ ಉಟ್ಟು. ಆದ್ದರ್‌ಂದ ಇಂತಹ ಶಬ್ಧಕೋಶದ ರಚನೆ ಕನಿಷ್ಟ ಪಕ್ಷ ನೂರು- ನೂರೈವತ್ತ್ ವರ್ಷಗಳ ಹಿಂದೆನೇ ಅಂದರೆ ಮೂರ್‍ನಾಲ್ಕ್ ತಲೆಮಾರ್‌ಗಳ ಹಿಂದೆನೇ ಆಕಾಯ್ತ್‌ಂತ ನನ್ನ ಭಾವನೆ. ಈಗೀಗ ನಮ್ಮ ಜೀವನ ಶೈಲಿ ಹೆಚ್ಚೆಚ್ಚ್ ಸಂಕೀರ್ಣವಾಗ್ತಾ ಉಟ್ಟು. ಈಗ ಶಿಕ್ಷಣ ರಂಗಲಿ ನಾವು ತುಂಬಾ ಮುಂದುವರ್ದೊಳೊ.

ನಮ್ಮ ನೆರೆಕರೆಲಿ ಅನ್ಯ ಭಾಷಿಕರ್ ಒಳೊ. ಉದ್ಯೋಗಕ್ಕಾಗಿ ಪರ ಊರಿಗೊ, ಪರದೇಶಕ್ಕೊ ಹೋಗಿ ನೆಲೆಸುವೆ. ಕೆಲವು ತಮ್ಮ ಮನೆಲಿ ಶಿಷ್ಠ ಕನ್ನಡನೊ ಅಥವಾ ಬೇರೆ ಭಾಷೆನೋ ಮಾತಾಡುವೆ. ಇನ್ನು ತಮ್ಮ ಹುಟ್ಟು ಭಾಷೆನ ಬದ್‌ಲ್ ಬೇರೆ ಭಾಷೆಲಿ ಮಾತಾಡ್ದು ದೊಡ್ಡಸ್ತಿಕೆ ಎಂಬ ಭಾವನೆ ಇರೊವು ಇಲ್ಲದಿಲ್ಲೆ. ತುಳು ಭಾಷೆ ಮಾತಾಡುವ ಗೌಡ್ರುಗ ಕೂಡಾ ನಮ್ಮಲ್ಲಿ ಒಳೊ. ಇಂತ ಕಾರಣಗಳ್‌ಂದ ಅನೇಕ ಅರೆಕನ್ನಡ ಪದಗ ವ್ಯವಹಾರಂದ ಮರೆಯಾಗಿ ಹೋಗ್ತಾ ಉಟ್ಟುಂತ ನಂಗನ್ಸಿದೆ. ಹಾಂಗಾಗಿ ನಂಗೆ ನನ್ನ ಎಳೆಯ ಪ್ರಾಯಲಿ ಹಳ್ಳಿ ಮನೆಗಳ್‌ಲಿ ಕೇಳಿ ಬರ್ತಿದ್ದ ಅನೇಕ ಪದಗ ಇಂದ್ ಕೇಳಿ ಬರ್ತಾ ಇಲ್ಲೆ. ಈ ಹಿನ್ನೆಲೆಲಿ ಎಂದೋ ಆಕಾಗಿದ್ದ ಈ ಶಬ್ಧಕೋಶದ ಕಾರ್ಯ ಇಂದಾರ್ ಕೈಗೂಡಿಬಂದದ್ ನಂಗೆ ಖುಷಿ ತಂದುಟು.

ನಮ್ಮ ಜನಾಂಗದ ಪೂರ್ವ ಇತಿಹಾಸದ ಬಗ್ಗೆ ಸ್ಪಷ್ಟವಾದ ವಾದಗ ಇಲ್ಲೆ. ಅದರ ಕಟ್ಟುವ ಕೆಲಸ ಹಿಂದೆ ಆತ್‌ಲೆ. ಶಿಕ್ಷಣದ ಕೊರತೆ, ಅನಾಸಕ್ತಿ, ಬದುಕ್‌ನ ಹೋರಾಟದ ಬವಣೆ, ಹೀಂಗೆ ಒಂದಲ್ಲ ಒಂದು ಕಾರಣಂದ ಈ ಕೆಲ್ಸ ಹಾಂಗೆ ಒಳ್ಳಂಡ್‌ತ್‌ಂತ ಅನ್ಸಿದೆ. ನಮ್ಮ ಜನ ತುಂಬಾ ಮುಗ್ಧ ಮನ್ಸ್‌ನ ಪ್ರಾಮಾಣಿಕ ಜನ. ದುಡ್ದ್ ತಿಂಬ ನಾವು ಬೇರೆಯವ್ಕೂ ಉಣ್ಸುವ ಸಹೃದಯ ಹೊಂದಿದವುಂತ ಹೇಳ್‌ರೆ ಖಂಡಿತ ತಪ್ಪಾಕಿಲೆ. ಗೌಡ ಜನಾಂಗದವು ಮೂಲತಃ ಬಂಗಾಳ ಮತ್ತು ಒರಿಸ್ಸಾ ರಾಜ್ಯದ ಮಧ್ಯ ಭಾಗದ ಗೌಡ ದೇಶಂದ ದಕ್ಷಿಣಕ್ಕೆ ಬಂದವೂಂತ ಊಹೆಉಟ್ಟು. ಒಂದು ಪ್ರದೇಶದ ಯಜಮಾನ್ರಾಗಿ, ಒಡೆಯರಾಗಿ, ನಾಯಕರಾಗಿ, ಕೃಷಿಕರಾಗಿ ಬಾಳು ಕಂಡವು ನಮ್ಮ ಜನ. ಕರ್ನಾಟಕದ

ಬಯಲು ಸೀಮೆಲಿ ಇದ್ದವು, ಮೂಲ ಗುಂಪುಂದ ಬೇರ್ಪಟ್ಟು ಘಟ್ಟದ ಕೆಳಗಿಳ್ದ್ ಬಂದ್ ಕರಾವಳಿ ಜಿಲ್ಲೆಗಳ್‌ಲಿ ಮತ್ತು ಕೊಡಗ್‌ಲಿ ನೆಲೆ ನಿಂತ್ ತಮ್ಮದೇ ಭಾಷೆ, ಕಟ್ಪ್‌ಪಾಡ್, ಸಂಪ್ರದಾಯ, ವಿಶಿಷ್ಠ ಜೀವನ ಶೈಲಿನ ಅಳವಡ್ಸಿಕಂಡ್, ಕೃಷಿನೇ ತಮ್ಮ ಮೂಲವೃತ್ತಿಯಾಗ್ಸಿಕಂಡ್; ಹಳ್ಳಿನ, ಗ್ರಾಮದ ಯಜಮಾನರಾಗಿ ಜೀವನ ನಡ್ಸಿಕೊಂಡ್ ಬಂದವು ನಮ್ಮ ಹಿರಿಯವು. ಈ ನಮ್ಮ ಜನರ ಭಾಷೆನ ಹಿನ್ನೆಲೆನ, ಪ್ರಾಚೀನತೆನ ಭಾಷಾ ವಿಜ್ಞಾನಿಗಳೇ ಬಗೆ ಹರ್ಸೋಕು ಅಷ್ಟೆ.

ಏನೇ ಇರ್ಲಿ, ಶ್ರೀ ಕುರುಂಜಿ ಗಂಗಾಧರನವು ತುಂಬಾ ಶ್ರಮ ವಹಿಸಿ ಸಂಪಾದಿಸಿ ಕೊಟ್ಟ ಈ ಶಬ್ದಾರ್ಥ ಕೋಶ ಈಗ ನಮ್ಮ ಮುಂದೆ ಉಟ್ಟು. ಒಂದು ನಿಘಂಟ್‌ನ ರಚನೆ, ಕಥೆ, ಕವನ, ಕಾದಂಬರಿ ರಚನೆ ಮಾಡ್ದಾಂಗಲ್ಲ ಭಾಷಾ ಜ್ಞಾನದ ಹಿನ್ನಲೆ ಬೇಕು, ಪರಿಶ್ರಮನೂ ಬೇಕು. ಶಬ್ದಾರ್ಥ ಕೋಶಂತೇಳ್ರೆ ಪದಗಳ ಕ್ರೋಢಿಕರಣ ಮತ್ತು ಅದರ ಅರ್ಥನ ವಿಶಧಿಕರಿಸುವ ಗ್ರಂಥ. ಆಧುನಿಕ ಶಬ್ಧಕೋಶಗಳ್‌ಲಿ ಶಬ್ಧಗಳ ಉಚ್ಚರ್ಸುವ ರೀತಿ, ಪದಗಳ ಉತ್ಪತ್ತಿ, ಅದರ ಬಳಕೆ ವಿಧಾನ, ಸಮಾನಾರ್ಥಕ ಪದಗ, ವ್ಯಾಕರಣ ಅಂಶ ಹಾಂಗೂ ಚಿತ್ರಗಳ ಕೊಟ್ಟು ವಿವರವಾದ ಅರ್ಥ ಕೊಟ್ಟವೆ. ಅದರೆಲ್ಲ ನಾವು ಇಲ್ಲಿ ನಿರೀಕ್ಷಿಸುವ ಹಾಂಗಿಲ್ಲೆ. ಏಕೆಂತೇಳ್ರೆ ಇದ್ ಮೊತ್ತ ಮೊದಲ ಬಾರಿಗೆ ಹೊರಬರುವ ಅರೆಕನ್ನಡ ಭಾಷೆಯ ಶಬ್ಧಕೋಶಂತ ಮರಿಯಕಾಗದ್. ಕೆಲವೊಂದು ಸಣ್ಣಪುಟ್ಟ ಲೋಪದೋಷಗ ಇದ್ದರೂ ಕೂಡಾ ಮಂದೆನ ದಿನಗಳ್‌ಲಿ ಇನ್ನಷ್ಟ್ ಸುಧಾರಿತ ಶಬ್ಧಕೋಶ ಹೊರಬಾಕೆ ಇದ್ ನಾಂದಿ ಆಗಲೀಂತ ನಾವು ಆಶಿಸಮೊ. ಇಲ್ಲಿ ಶಬ್ದಾರ್ಥಕೋಶನ ಅಕ್ಷರಾನುಕ್ರಮಣಿಕೆಯಲ್ಲಿ ಅಚ್ಚುಕಟ್ಟಾಗಿ ರಚಿಸೊಳೊ. ವ್ಯಾಕರಣದ ಅಂಶಗಳ ನಮೂದಿಸೊಳೊ. ಹೆಚ್ಚಿನ ಕಡೆಗಳ್‌ಲಿ ಇಂಗ್ಲಿಷ್ ಭಾಷೆನ ವಿವರಣೆ ನೀಡಿಯೊಳೊ. ಇದ್ ಅರ್ಥಗ್ರಹಿಕೆಗೆ, ಸ್ಪಷ್ಟತೆಗೆ ತುಂಬಾ ಸಹಾಯ ಆದೆ. ಇದೊಂದು ಬಹಳ ದಿನಂದ ಅರೆಭಾಷೆ ಮಾತಾಡವು ನಿರೀಕ್ಷೆ ಮಾಡ್ತಿದ್ದ ಬಹುಬೇಡಿಕೆಯ ಮೆಚ್ಚೋಕಾದ ಪ್ರಯತ್ನ ಅದ್ದಾಗಿ ನಾ ಅವರ ತುಂಬು ಹೃದಯಂದ ಅಶೀರ್ವದಿಸಿನೆ ಮತ್ತು ಅಭಿನಂದಿಸಿನೆ.

ಇವು, ಅರ್ಥಕೋಶದೊಟ್ಟಿಗೆ ಅರೆಭಾಷೆವು ಬಳ್ಸುವ ಸಾಕಷ್ಟು ಗಾದೆಗಳ ಮತ್ತು ನುಡಿಗಟ್ಟ್‌ಗಳ ಕೂಡಾ ಸಂಗ್ರಹಿಸಿ, ಅದರ ಕೂಡಾ ಇದೇ ಪುಸ್ತಕಲಿ ಹೊರತರುತ್ತಾ ಒಳೊ. ಅರೆಭಾಷೆನ ಕ್ರಿಯಾಪದಗ ಯಾವ ರೀತಿ ರೂಪಾಂತರ ಹೊಂದುವೆ ಎಂಬ ಅಂಶಗಳ ಒಂದು ಮಾದರಿನ ಕೂಡಾ ಪುಸ್ತಕಲಿ ಕೊಟ್ಟು ಅರೆಭಾಷೆ ಶಬ್ಧಗಳ ಬಳಕೆನ ಬಗ್ಗೆ ಸೂಕ್ಷ್ಮವಾಗಿ ಮಾಹಿತಿ ನೀಡಿಯೊಳೊ ಭಾಷಾಭಿಮಾನಿಗ ಇವರ ಈ ಪ್ರಯತ್ನನ ಸ್ವೀಕರ್ಸಿ ಪ್ರೋತ್ಸಾಹಿಸುವೊಂತ ನಾ ನಂಬಿಯಳೆ.

ಕುಯಿಂತೋಡು, ಬಾಲೆಂಬಿ

13 ಆಗಸ್ಟ್ 2013

ಪ್ರಕಾಶಕರ ಮಾತ್

ಸುಳ್ಯ ತಾಲೂಕು ಗೌಡರ ಯುವ ಸೇವಾ ಸಂಘದ ಆಶ್ರಯಲಿ ಸ್ಥಾಪನೆ ಆದ ಗೌಡ ಸೋಶಿಯೋ ಎಜ್ಯುಕೇಶನ ಟ್ರಸ್ಟ್ (ರಿ.) ಸುಳ್ಯದ ಸಾಮಾಜಿಕ, ಸಾಂಸ್ಕೃತಿಕ ಹಾಂಗೂ ಶೈಕ್ಷಣಿಕ ಕ್ಷೇತ್ರಲಿ ತನ್ನ ತೊಡಗಿಸಿಕಂಡ್ ಯಶಸ್ವಿಯಾಗಿ ಮುನ್ನಡೆ ಸಾಧಿಸ್ತಾ ಸುಳ್ಯ ತಾಲೂಕುನ ನಮ್ಮ ಜನಾಂಗದ ಕ್ರಿಯಾಶೀಲ ಸಂಸ್ಥೆಯಾಗಿ ಬೆಳೆಯುತ್ತಾ ಉಟ್ಟು. ಸುಳ್ಯದ ಕೊಡಿಯಾಲ್ ಬೈಲ್‌ಲಿ ಇರುವ ಸ್ವಂತ 6ಎಕರೆ ಜಾಗಲಿ ಒಂದು ಪೊರ್ಲುನ ಕನ್ನಡ ಮಾಧ್ಯಮದ ಹೈಸ್ಕೂಲ್‌ನ ಸ್ಥಾಪಿಸೊಳೊ. ನಮ್ಮ ಜನಾಂಗದ ಯುವಕರ ಸಂಘಟನೆ ಮಾಡ್ತಾ ನಮ್ಮ ಜನಾಂಗದವರ ಏಳಿಗೆಗಾಗಿ ಸಕ್ರಿಯವಾಗಿ ತೊಡಗಿಸಿಕೊಂಡ್ ಒಳೊ. ಇಷ್ಟರ್‌ಲೇ ನಾವು ಎರ್‌ಡ್ ಸರ್ತಿ ನಮ್ಮ ಜನಾಂಗದ ಬೃಹತ್ ಸಮಾವೇಶನ ಭಾರಿ ಅದ್ದೂರಿಲಿ ಏರ್ಪಡಿಸೊಳೊ. ನಮ್ಮ ಹೈಸ್ಕೂಲ್‌ನ ಹಕ್ಕಲೆ ಒಂದು ಬೃಹತ್ ಮಟ್ಟದ ಒಂದು ಹಾಲ್ ಕಟ್ಟ್‌ಸೊಕೊಂತ ಯೋಜನೆ ಹಾಕೊಂಡೊಳೊ. ಇದರೊಟ್ಟಿಗೆ ಒಂದು ಒಳ್ಳೆ ಕ್ರೀಡಾಂಗಣ; ನಮ್ಮ ಸಂಸ್ಕೃತಿನ ಅನಾವರಣ ಮಾಡುವ ಒಂದು ಮ್ಯೂಸಿಯಂ ಕೂಡಾ ಮಾಡೊಕೊಂತ ನಮ್ಮ ಪ್ರಯತ್ನ ಸಾಗುತ್ತಾ ಉಟ್ಟು. ನಮ್ಮ ಜನಾಂಗದವು ಎಲ್ಲವೂ ಏಕರೀತಿಯ ಸಂಪ್ರದಾಯನ ಪಾಲಿಸೊಕು ಎಂಬ ಯೋಜನೆಂದ ನಮ್ಮ ಶುಭಕಾರ್ಯಗಳ ಸಾಂಪ್ರದಾಯಿಕ ಕಟ್ಟುಕಟ್ಟಳೆಗಳ ಒಂದು ಗ್ರಂಥ ಈಗಾಗಲೇ ಪ್ರಕಟಿಸಿ ಮಾರ್ಗದರ್ಶನ ನೀಡಿಕೆ ಪ್ರಯತ್ನಿಸುತ್ತಾ ಒಳೊ. ಇದರೆಲ್ಲದರ ಒಟ್ಟಿಗೆ ನಮ್ಮ ಸಂಸ್ಥೆನ ವತಿಂದ ನಡಿವ ವೆಂಕಟರಮಣ



ದಿನೇಶ್ ಮಡಪ್ಪಾಡಿ
ಅಧ್ಯಕ್ಷರು, ಗೌಡ ಸೋಶಿಯೋ
ಎಜ್ಯುಕೇಶನ್ ಟ್ರಸ್ಟ್ (ರಿ.)
ಸುಳ್ಯ, ದ.ಕ

ಕ್ರೆಡಿಟ್ ಕೊ– ಓಪರೇಟವ್ ಸೊಸ್ಯಾಟಿ ಭಾರಿ ಲ್ಯಾಕ್‌ಲಿ ಸಾಗ್‌ತಾ ಉಟ್ಟು. ಮುಂದಿನ ದಿನಗಳ್‌ಲಿ ನಮ್ಮ ಜನಾಂಗದ ಮನೆ ಮಾತಾದ 'ಅರೆಭಾಷೆ'ಗೆ ಪ್ರಾಮುಖ್ಯತೆ ಸಿಕ್ಕುವ ದೃಷ್ಟಿಲಿ ಒಂದು ಅರೆಭಾಷೆ 'ಸಾಂಸ್ಕೃತಿಕ ವೈಭವ'ನ ಏರ್ಪಡಿಸಕೂಂತೊಳೊ. ನಮ್ಮ ಜನಾಂಗದ, ನಮ್ಮ ಸಂಸ್ಕೃತಿನ ಹಾಂಗೂ ಮಾತೃ ಭಾಷೆನ ಬೆಳ್ಸಿಕೆ ನಮ್ಮ ಸಂಸ್ಥೆ ಕಟಿಬದ್ಧವಾಗುಟ್ಟು.

ಈ ದಿಸೆಲಿ ನಮ್ಮ ಸಂಘದ ಸಕ್ರಿಯ ನಿರ್ದೇಶಕರ್ ಹಾಂಗೂ ಮಾರ್ಗದರ್ಶಕರ್ ಆದ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕರಾದ ಶ್ರೀ ಕುರುಂಜಿ ಗಂಗಾಧರನವು ನಮ್ಮ ಬಹುದಿನಗಳ ಅವಶ್ಯಕತೆ ಆದ ನಮ್ಮ ಮಾತೃಭಾಷೆ ಅರೆಭಾಷೆಗಾಗಿ ಒಂದು ಶಬ್ಧಕೋಶನ ಸಂಪಾದಿಸಿ ನಮ್ಮ ಸಮಾಜಕ್ಕೆ ಹಾಂಗೂ ನಮ್ಮ ಭಾಷೆಗಾಗಿ ಕೊಡುಗೆ ನೀಡ್ಯೊಳೊ. ಅವರ ಈ ಕೃತಿ ಮುಂದೆ ಅರೆಭಾಷೆ ಪ್ರೇಮಿಗಳ್ಗೆ ಪ್ರೇರೇಪಣೆ ನೀಡಲೀಂತ ಆಶಿಸಿಕಂಡ್ ಅವುಕೆ ನಾ ನಮ್ಮ ಸಂಘದ ಪರವಾಗಿ ಅಭಿನಂದನೆ ಸಲ್ಲುಸ್ತಾ, ಅವರ ಈ ಕೃತಿನ ಅರೆಭಾಷೆಪ್ರೇಮಿಗ ಎಲ್ಲಾ ತಕಂಡ್ ಅವರ ಶ್ರಮಕ್ಕೆ ಬೆಂಬಲ, ಪ್ರೋತ್ಸಾಹ ಕೊಡುಕೂಂತ ವಿನಂತಿ ಮಾಡ್ತಾ ಮುಂದೆನ ದಿನಗಳ್‌ಲಿ ಅರೆಭಾಷೆಲಿ ಇನ್ನಷ್ಟ್ ಸಾಹಿತ್ಯ ಕೃತಿಗ ಹೊರಬರ್‌ಲೀಂತ ಕೇಳಿಕಂಡ್, ಅದ್ಕಾಗಿ ನಮ್ಮ ಸಂಸ್ಥೆ ಸದಾ ಬೆಂಬಲ ಕೊಟ್ಟದೇಂತ ಭರವಸೆ ನೀಡ್ತಾ ನನ್ನ ಮಾತ್‌ಗಳಿಗೆ ವಿರಾಮ ನೀಡ್‌ತಾ ಒಳೆ.

ಸಂಪಾದಕರ ಮಾತ್

ಆತ್ಮೀಯರೇ,

ಸುಳ್ಯ ತಾಲೂಕುಲಿ ವಾಸ ಮಾಡುವ ಬಹು ಸಂಖ್ಯಾತ ಗೌಡ ಜನಾಂಗದವರ ಮಾತೃ ಭಾಷೆ ಅರೆ ಭಾಷೆ. ಇಲ್ಲಿನ ಬಹು ಸಂಖ್ಯಾತರ್ ಮಾತಾಡುವ ಭಾಷೆ ಇದಾದರ್‌ಂದ ಸುಳ್ಯದ ಬಹುತೇಕ ಎಲ್ಲವೂ ಅರೆಭಾಷೆನ ಲ್ಯಾಕ್‌ಲಿ ಮಾತಾಡುವೆ. ಒಂದು ವೇಳೆ ಮಾತಾಡಿಕೆ ಹಂಞ ಕಷ್ಟ ಆದರೂ ಅರ್ಥ ಮಾಡಿಕಂಬಕೆ ಏನೂ ಸಮಸ್ಯೆ ಇಲ್ಲೆ. ಹೊರೆಗೆನ ಊರ್‌ಂದ ಉದ್ಯೋಗಕ್ಕಾಗಿ ಇಲ್ಲಿಗೆ ಬಂದವು ಕೂಡಾ ಇಲ್ಲಿಂದ ಬುಟ್ಟು ಹೋಕನ ಅರೆ ಭಾಷೆನ ಭಾರಿ ಲ್ಯಾಕ್‌ಲಿ ಮಾತಾಡಿಕೆ ಕಲ್ತಿದ್ದ್, ಈಗ ಫೋನ್‌ಲಿ ನಮ್ಮೊಟ್ಟಿಗೆ ಮಾತಾಡ್‌ಕನ ಅರೆಭಾಷೆಲಿ ಭಾರಿ ಆತ್ಮೀಯವಾಗಿ ಮಾತಾಡ್ತಾ ಇರ್ದು ನಾವ್‌ಗೆ ಖುಷಿ ಕೊಟ್ಟದೆ. ಸುಳ್ಯದ ಹೆಚ್ಚಿನ ಎಲ್ಲಾ ಅಂಗ್‌ಡಿಗಳ್‌ಲಿ, ಶಾಲೆಗಳ್‌ಲಿ, ಸಮಾರಂಭ ಗಳ್‌ಲಿ, ಮೀಟಿಂಗ್‌ಗಳ್‌ಲಿ ಅರೆಭಾಷೆನೇ ಸಂಪರ್ಕ ಭಾಷೆ ಆಗಿ ಬೆಳ್ದ್ ನಿತ್ತುಟು. ಈ ದಿಸೆಲಿ ಡಾ। ಬಿಳಿಮಲೆ ಹೇಳ್ದಾಂಗೆ 'ಅರೆಭಾಷೆ' ಸುಳ್ಯದ ರಾಜಭಾಷೆ ಆಗಿ ಮೆರಿಯುತ್ತಾ ಇರ್ದು ನಮ್ಮ ಜನಾಂಗಕ್ಕೆ ಖುಷಿ ಕೊಡುವ ವಿಷಯ.

ಅರೆಭಾಷೆ ನಮ್ಮೆಲ್ಲರ ಮಾತೃಭಾಷೆ, ತಾಯ್ನುಡಿ ಆದರ್‌ಂದ ಇದ್ ನಮ್ಮೆಲ್ಲವರ ಎದೆ ತುಂಬಿದ ಭಾಷೆ ಆಗಿ ಸ್ಥಾನ ಗಿಟ್ಟಿಸಿಕೊಂಡುಟು. ಅರೆಭಾಷೆ ಮಾತಾಡ್ವ ನಮ್ಮ ಜನ ಎಲ್ಲಿ ಸಿಕ್ಕಿರೂ ನಮ್ಮ ಈ ಭಾಷೆಲಿ ಮಾತಾಡ್‌ಕನ ಆವ ಒಂದು ಆತ್ಮಿಯತೆ, ನಿಜಕ್ಕೂ ನಾವ್‌ಗೆ ತುಂಬಾ ಖುಷಿ ಕೊಟ್ಟದೆ. ಅದೂ ನಾವು ದೂರದ ಚೆನ್ನೈಗೋ, ಡಿಲ್ಲಿಗೋ ಹೋಕನ, ಅಲ್ಲಿ ನಮ್ಮ ಊರ್‌ನವು ಸಿಕ್ಕಿ, ನಮ್ಮ ಅರೆಭಾಷೆಲಿ ಮಾತಾಡ್‌ಕನ ನಾವ್‌ಗೆ ಮರುಭೂಮಿಲಿ ಓಯಸಿಸ್ ಸಿಕ್ಕಿದಷ್ಟೇ ಖುಷಿ ಆದೆ.



ಕೆ.ಆರ್. ಗಂಗಾಧರ
ನಿವೃತ್ತ ಪ್ರಾಂಶುಪಾಲರು
'ರಾಮಗಿರಿ ಫಾರ್ಮ್ಸ್', ಕುರುಂಜಿ,
ಅರಂತೋಡು, ಸುಳ್ಯ – 574314

ಇತ್ತೀಚೆಗೆ ನಮ್ಮ ಕರ್ನಾಟಕ ಸರ್ಕಾರ, ನಮ್ಮ ಮಾನ್ಯ ಭೋಪಯ್ಯನವರ ಮತ್ತು ಮಾನ್ಯ ಡಿ.ವಿ. ಸದಾನಂದನವರ ಒತ್ತಾಸೆಂದಾಗಿ, ಅರೆಭಾಷೆಗೊಂದು ಅಧಿಕೃತ ಎಕಾಡೆಮಿ ಸ್ಥಾಪನೆ ಮಾಡ್‌ದರ್‌ಂದ ನಮ್ಮ ಅರೆಭಾಷೆಗೆ ಒಂದು ಅಧಿಕೃತ ಮನ್ನಣೆ ಸಿಕ್ಕಿದಾಂಗಾವುಟು. ನಮ್ಮ ಈ ಅರೆಭಾಷೆ ಕೇವಲ ಸಂಪರ್ಕ ಭಾಷೆ ಮಾತ್ರ ಅಲ್ಲ, ಅದರ ಹಿಂದೆ ಒಂದು ಪೊರ್ಲುನ ಸಾಂಸ್ಕೃತಿಕ ಸೊಗಡು ಉಟ್ಟು ಅಲ್ಲದೇ ಸಾಹಿತ್ಯಕ್ಕೆ ಬೇಕಾದ ಸಾಕಷ್ಟು ವಸ್ತು ಉಟ್ಟು. ಅದ್ದರ್‌ಂದ, ನಮ್ಮ ಜನಕ್ಕೆ ಮಾತ್ರ ಅಲ್ಲ ಇಡೀ ಜಗತ್ತ್‌ಗೆ ತೋರ್‍ಸಿಕೊಡುವ ಉದ್ದೇಶಂದ ಈ ಎಕಾಡೆಮಿ ಸ್ಥಾಪನೆ ಆದ್ದ್ ಅರೆಭಾಷೆಗೆ ಒಂದು ಆನೆ ಬಲ ಬಂದಾಂಗಾವುಟು.

ಅರೆ ಭಾಷೆ ಸಾಹಿತ್ಯ ಕ್ಷೇತ್ರಲಿ ಸಾಕಷ್ಟು ಕೃಷಿ ನಡ್ಡರೂ, ನಾವು ಹೇಳಿಕಂಬಂತಹ ಅಥವಾ ಕೊಚ್ಚಿಕಂಬಂತಹ ಗಟ್ಟಿ ಸಾಹಿತ್ಯ ಇನ್ನಷ್ಟೇ ಸೃಷ್ಟಿ ಆಕಾದೆ ಎಂಬುದೇ ನನ್ನ ಅನ್ಸಿಕೆ. ನಮ್ಮ ಅರೆಭಾಷೆನ ಹಿಂದೆ ನಮ್ಮ ಗೌಡ ಜನಾಂಗದವರ ಮಾತ್ರ ಅಲ್ಲ, ಅರೆಭಾಷೆ ಮಾತಾಡ್ವ ಕೊಡಗು, ದಕ್ಷಿಣ ಕನ್ನಡ ಜಿಲ್ಲೆನ ಎಲ್ಲಾ ಜನರ ಒಂದು ಶ್ರೇಷ್ಠ ಹಾಗೂ ವಿಶಿಷ್ಠ ಸಂಸ್ಕೃತಿ ಮೇಳೈಸಿ ಕಂಡುಟ್ಟು. ಇದರ ಆಧಾರಲಿ ಇನ್ನಷ್ಟ್. ಗಟ್ಟಿ ಸಾಹಿತ್ಯ ಕೃತಿಗ ಹೊರಬರಕಾದ ಅವಶ್ಯಕತೆ ಉಟ್ಟು.

ಶಿಷ್ಠ ಕನ್ನಡಕ್ಕೆ ಹೋಲ್ಸಿರೆ ನಾವು ಅರೆಭಾಷೆ ಮಾತ್‌ಗಳ ತುಂಬಾ ಕತ್ತ ಮಾಡಿ ಮಾತಾಡುದರ್‌ಂದ (ಉದಾ: ನಾನು ಹೋಗುತ್ತೇನೆ– ನಾ ಹೋನೆ) ನಮ್ಮ ಭಾಷೆನ ಅರೆಭಾಷೆಂತ ಕರಿತಾ ಒಳೊಂತ ನಂಗೆ ಅನ್ಸಿದೆ. ಆದರೆ ಹೀಂಗೆ ಕತ್ತಗೊಳ್ಸ್‌ಕಾಕನ ಸಂಪರ್ಕಕ್ಕೆ (Communication aspect) ಏನೂ ತೊಂದರೆ ಆಗ್ತಾ ಇಲ್ಲೆ. ಬದಲಿಗೆ ನಮ್ಮ ಸಮಯ, ಶ್ರಮ ಎಲ್ಲಾ ಒಳ್ದದೆ ಎಂಬುದು ಸ್ಪಷ್ಟ. ಅರೆಭಾಷೆ ಮಾತಾಡುವ ಜನರ ಜೀವನ ಕ್ರಮ ಮತ್ತೆ ಅವರ ಕೆಲಸ ಕಾರ್ಯ ಕೂಡಾ ಅವು ಮಾತಾಡುವ ಭಾಷೆನಾಂಗೆ ಭಾರಿ ಜಟ್‌ಪಟ್ ಎಂಬ ಹೊಗಳಿಗೆ ಕೂಡಾ ನಮ್ಮ ಮೇಲುಟ್ಟು.

ಅಕ್ಷರ ಜಗತ್ತ್‌ಂದ ದೂರ ಇದ್ದ (ಅಥವಾ ದೂರ ಇರ್‍ಸಿದ) ರೈತ ಸಮುದಾಯದ ಜನಾಂಗದವು ನಮ್ಮ ಅರೆಭಾಷೆ ಮಾತಾಡುವ ನಮ್ಮ ಹಿರಿಯರ್. ನಮ್ಮ ಸಂಸ್ಕೃತಿ, ಸಂಪ್ರದಾಯ, ಅಜ್ಜಿಕಥೆ, ಪದ, ಪಳ್ಮೆ, ಬಿನ್ನೆ, ಗಾದೆ, ನುಡಿಗಟ್ಟ್ ಮುಂತಾದ ಬಾಯ್ ಮಾತ್‌ನ ಸಾಹಿತ್ಯಗಳ, ತಾಳೆ ಗರಿಗಾಗಲಿ, ಶಾಸನಗಳಾಗಲಿ ದಾಖಲೆ ಮಾಡಿಕೆ ಅವ್‌ಕೆ ಆತ್‌ಲೆ. ಹಾಂಗಾಗಿ ಓದು ಬರಹ ಬಾರದ ನಮ್ಮ ಹಿರಿಯರ್ ಅವರ ಅನುಭವ ಜನ್ಮ ಜ್ಞಾನನ ಪೀಳಿಗೆಂದ ಪೀಳಿಗೆಗೆ ಹರ್‍ಸಿ ತಂದೊ. ನಮ್ಮ ಊರ್‌ನ ಎಲ್ಲಾ ಕೃಷಿ ಕಾರ್ಯಗಳ ಬೆಳವಣಿಗೆ ಏನುಟ್ಟೋ ಅದ್ ನಮ್ಮ ಅರೆಭಾಷೆ ಮಾತಾಡ್ವ ನಮ್ಮ ಶ್ರಮ ಜೀವಿ ಹಿರಿಯರ ಕೊಡುಗೆಂತೇಳ್ರೆ ತಪ್ಪಾಕಿಲೆ. ಆದರೆ ಅಂದ್ ಕೊಟ್ಟ್, ಪಿಕ್ಕಾಸ್, ನೇಗಿಲ್ ಹಿಡ್ಡ ನಮ್ಮ ಹಿರಿಯರ ಮಕ್ಕ ಇಂದ್ ಕೈಲಿ ಪೆನ್ ಹಿಡ್ಡೊಳೊ. ನಮ್ಮ ಚರಿತ್ರೆನ, ನಮ್ಮ ಸಾಧನೆಗಳ, ನಮ್ಮ ಬೆಳವಣಿಗೆನ, ನಮ್ಮ ಸಂಸ್ಕೃತಿನ ಬರ್ದ್ ದಾಖಲಿಸಿಕೆ ಸಮರ್ಥರಾಗೊಳೊ. ಈ ದಾಖಲೆ ಕಾರ್ಯ ನಮ್ಮ ಅರೆಭಾಷೆಲೇ ನಡಿಯಲಿ ಎಂಬ ಒಂದು ಆಶೆಲಿ ಸುಮಾರ್ 4000 ಅರೆಭಾಷೆ ಶಬ್ದಗಳ, 500 ಅರೆಭಾಷೆ ಗಾದೆಗಳ ಮತ್ತು 300 ನುಡಿಗಟ್ಟ್‌ಗಳ ಸಂಗ್ರಹಿಸಿ ಈ ಶಬ್ದಕೋಶದ ಸಂಪಾದನೆ ಮಾಡಿ ನನ್ನ ಒಂದು ಸಣ್ಣ ಹಾಂಗೂ ವಿನಮ್ರ ಪ್ರಯತ್ನ ಮಾಡ್ತಾ ಒಳೆ.

"ಒಂದು ಜನಾಂಗನ ನಾಶ ಮಾಡೊಕೂಂತಾದರೆ ಅವರ ಭಾಷೆನ ಮುಂದೆ ನಾಶ

ಮಾಡ್"– ಹೀಂಗೆ ನೆಪೋಲಿಯನ್ ಹೇಳ್ದ ಮಾತ್‌ನ ಎಲ್ಲೋ ಓದಿದ ನೆನ್ಪು. ಈ ವಾಕ್ಯನ ಚಿಂತ್‌ಸ್‌ಕನ ನಮ್ಮ ಈ ಮಾತೃ ಭಾಷೆನ ನಾವ್ ಎಲ್ಲೋ ದೂರ ಮಾಡುವ ಮೂಲಕ ನಮ್ಮ ಜನಾಂಗದ ನಾಶಕ್ಕೆ ಕಾರಣ ಆಗ್ತಾ ಒಳೊಂತಾ ನಂಗೂ ಅನ್ನಿದೆ. ಪಾಶ್ಚಿಮಾತ್ಯ ಸಂಸ್ಕೃತಿ, ಇಂಗ್ಲಿಷ್ ಭಾಷೆನ ಪ್ರಭಾವ, ಆಧುನಿಕ ಜೀವನದ ಸೋಗು, ನಮ್ಮ ಜೀವನದ ಮಟ್ಟದ ಏರಿಕೆ, ಟಿ.ವಿ.ನ ಪ್ರಭಾವ, ನಗರಗಳ್‌ಲಿ ವಾಸ ಮಾಡುವ ನಮ್ಮ ನೆಂಟ್ರ್‌ಗಳ ಪ್ರಭಾವ –ಹೀಂಗೆ ತುಂಬಾ ಕಾರಣಗಳಂದಾಗಿ ನಮ್ಮ ಮನೆಗಳ್‌ಲಿ ಕೂಡಾ ಇಂದ್ 'ಮಮ್ಮಿ–ಡ್ಯಾಡಿ' ಸಂಸ್ಕೃತಿ ತುಂಬಿ ಹೋಗಿ ನಾವು ನಮ್ಮ ತಾಯ್ನುಡಿನ ಎಲ್ಲಾ ಸಂದರ್ಭಗಳ್‌ಲಿ ಬಳ್‌ಸದೆ, ಇಂಗ್ಲಿಷ್ ಮಿಶ್ರ ಆದ ಶಿಷ್ಠ ಕನ್ನಡಲಿ ನಮ್ಮ ಮಕ್ಕಳೊಟ್ಟಿಗೆ ಮಾತಾಡುದರ್‌ಂದ ನಮ್ಮ ಹಕ್ಕಲೆನ ಬಂಧುಗಳಿಗೆ ಕೂಡಾ ನಮ್ಮ ಮಕ್ಕಳ ಪರಕೀಯರ ಹಾಂಗೆ ಮಾಡ್ತಾ ಒಳೊ. ಇದರ ಪರಿಣಾಮ ಇಂದ್ ಅರೆಭಾಷೆನ ಅನೇಕ ಪದಗ ಕಾಣೆಯಾಗಿ ನಶಿಸಿ ಹೋಗುತ್ತಾ ಉಟ್ಟು. ಕೆಲವೊಂದು ಶಬ್ದಗ, ಇದ್ ಅರೆಭಾಷೆ ಶಬ್ದ ಹೌದೊ, ಅಲ್ಲನಾ ಎಂಬ ಗೊಂದಲ ಕೂಡಾ ನಾವ್‌ಗೆ ಇಂದ್ ಆಗುತ್ತಾ ಇರ್ದು ಒಂದು ದೊಡ್ಡ ವಿಪರ್ಯಾಸಾಂತ ನಂಗೆ ಅನ್ನಿದೆ. ಆದ್ದರ್‌ಂದ ನನ್ನ ಗಮನಕ್ಕೆ ಬಂದ, ಈಗಾಗಲೇ ಮರ್ತ್ ಹೋದ ಇಂತ ತುಂಬಾ ಶಬ್ದಗಳ ದಾಖಲೆ ಮಾಡುವ ಒಂದು ವಿನಮ್ರ ಪ್ರಯತ್ನನ ನಾ ಮಾಡ್ತಾ ಒಳೆ.

"ಅರೆಭಾಷೆ– ಕನ್ನಡ– ಇಂಗ್ಲಿಷ್ ಶಬ್ದಕೋಶ"ದ ಅವಶ್ಯಕತೆಯ ಬಗ್ಗೆ ನಂಗೆ ಅಂತ ಖಚಿತ ಅಭಿಪ್ರಾಯ ಏನೂ ಇಲ್ಲದಿದ್ದರೂ ಅನೇಕ ಅರೆಭಾಷೆ ಶಬ್ದಗಳ ದಾಖಲೆ ಮಾಡುವ ಕೆಲ್ಸನ ನಮ್ಮ ತಾಯ್ನುಡಿ ಮೇಲ್‌ನ ಪ್ರೀತಿಂದ ಮಾಡ್ತಾ ಒಳೆ. ಸಾಕಷ್ಟ್ ಶಬ್ಧಗಳಿಗೆ ನಂಗೆ ತಿಳ್‌ದಷ್ಟ್ ಮಟ್ಟಿಗೆ ಅದರ ಸರಿ ಹೋಲಿಕೆ ಆವಂತಹ ಕನ್ನಡ ಮತ್ತು ಇಂಗ್ಲಿಷ್ ಶಬ್ಧಗಳ ಕೊಡಿಕೆ ಪ್ರಯತ್ನಿಸೊಳೆ. ಆ ರೀತಿಲಿ ಅರೆಭಾಷೆ ಶಬ್ದಗಳಿಗೆ ಸ್ಪಷ್ಟವಾದ ಅರ್ಥ ಕೊಡಿಕೆ ಸಾಧ್ಯ ಆತ್‌ಂತ ಅನ್ನಿದೆ. ಕೆಲವೊಂದು ಶಬ್ಧಗ ನಮ್ಮ ಮಣ್ಣ್‌ನ ಸಂಸ್ಕೃತಿನ ಶಬ್ಧಗಳಾದರ್‌ಂದ ಅವುಕೆ ಇನ್ನೊಂದು ಭಾಷೆಲಿ ಅರ್ಥ ನೀಡಿಕೆ ತುಂಬಾ ಕಷ್ಟ (ಅದ್ ನನ್ನ ಅಸಮರ್ಥತೆ ಇರಿಕೂ ಸಾಕ್) ಆಗ್ತಾ ಇರುದರ ನೀವು ದಯಮಾಡಿ ಅರ್ಥ ಮಾಡ್ಕಂಡ್ ಈ ಕೃತಿನ ತಕೊಣೂಕುಂತ ನಾ ಕೇಳಿಕಣೆ. ನಮ್ಮ ಅರೆಭಾಷೆ ಮೇಲೆ ನಮ್ಮ ಸಹೋದರ ಭಾಷೆ ಆದ ತುಳು ಭಾಷೆನ ಪ್ರಭಾವ ತುಂಬಾ ಉಟ್ಟು. ತುಂಬ ಶಬ್ಧಗ ತುಳುಲಿ ಹಾಂಗೂ ಅರೆಭಾಷೆಲಿ ಒಂದೇ ರೀತಿ ಉಟ್ಟು. ತುಳು ಮಾತಾಡೊವು ಹಾಂಗೂ ಅರೆಭಾಷೆ ಮಾತಾಡೊವು ಒಟ್ಟಿಗೆ ಬದುಕುದರ್‌ಂದ ಈ ಪ್ರಭಾವ ಬೀರಿರಿಕೂ ಸಾಕ್. ಈ ಶಬ್ದ ಕೋಶಲಿ ಕೆಲವು ಕೆಟ್ಟ ಶಬ್ದಗಳ ಕೂಡಾ ದಾಖಲಿಸಿ ಅದ್ಕೆ ಅರ್ಥ ಕೊಡ್ತಾ ಒಳೆ. ಆ ಶಬ್ಧಗಳ ಗಾಂಭೀರ್ಯತೆ (Seriousness) ಮತ್ತು ಅದರ ಕೆಟ್ಟತನ ಎಷ್ಟ್ ಉಟ್ಟುಂತ ಅರ್ಥ ಮಾಡ್ಕಂಡ್ ಅಂತ ಶಬ್ಧಗಳ ಬಳಕೆನ ಜನ ಕಡಿಮೆ ಮಾಡುವೊ ಎಂಬ ದೃಷ್ಟಿಲಿ ಇಂತ ಶಬ್ಧಗಳ ದಾಖಲಿಸಳೆ ಹೊರ್ತು ಆ ಶಬ್ದಗಳ ವೈಭವಿಕರಣ ಮಾಡುವ ಉದ್ದೇಶ ಖಂಡಿತಾ ನನ್ನದಲ್ಲ.

ಈ ಶಬ್ಧ ಕೋಶಲಿ ಬರುವ ತುಂಬಾ ಶಬ್ಧಗ ನಮ್ಮ ಬದುಕ್‌ನ ಬೇರೆ ಬೇರೆ ಆಯಾಮಗಳ ಅನಾವರಣ ಮಾಡ್ತಾ ಉಟ್ಟು. ನಮ್ಮ ಜೊತೆ ಬದುಕುವ ಸಾಕ್ ಪ್ರಾಣಿಗ, ಹಿಂದೆ ನಮ್ಮ ಮನೆಗಳ ಸುತ್ತ ಮುತ್ತೆಲ್ಲ ಕಾಂಬಕೆ ಸಿಕ್ಕ್‌ತಿದ್ದ, ಇಂದ್ ನಶಿಸಿ ಹೋಗ್‌ತಾ ಇರುವ ಕಾಡ್ ಪ್ರಾಣಿಗ, ಇಲ್ಲಿನ ಹಳ್ಳ, ಜೋಡಿ, ಕೆರೆಗಳ್‌ಲಿ ಬದುಕುತ್ತಾ ಇದ್ದ ಬೇರೆ ಬೇರೆ ಜಾತಿನ

ಮೀನ್‌ಗ, ನಮ್ಮ ಮನೆ ಹಿತ್ತ್‌ಲ್‌ಗಳ್‌ಲಿ ಓಡಾಡ್ತಿದ್ದ ಭಯ ಹುಟ್ಟುಸ್ತಿದ್ದ ಹಾವುಗ, ನಮ್ಮ ದೈನಂದ್‌ನ ಜೀವನಕ್ಕೆ ಪೂರಕ ಆಗಿದ್ದ ಅನೇಕ ಬಹುಪಯೋಗಿ ಮರಗ, ಬಳ್ಳಿಗ, ದೈಗ; ನಮ್ಮ ಆರೋಗ್ಯ ಕಾಪಾಡಿಕೊಂಡ್ ಇರುವ ತುಂಬಾ ತುಂಬಾ ಮೊದ್ದುನ ಸಸ್ಯಗ, ಮೂಲಿಕೆಗ, ಬೇರ್‌ಗ, ರುಚಿರುಚಿ ಆದ ಕಾಡ್ ಹಣ್ಣ್‌ಗ, ನಮ್ಮ ಹಳ್ಳಿ ಜನರ ತಾಂತ್ರಿಕ ಕೌಶಲ್ಯಗ; ಹಳ್ಳಿಗಳ ಅಡಿಗೆ ಮನೆಗಳ್‌ಲಿ ತಯಾರ್ ಮಾಡ್ತಿದ್ದ ಹುಳ್ಳಂಗೆ ಇರುವ ದೇಶಿ ತಿಂಡಿಗ; ಪ್ಲಾಸ್ಟಿಕ್, ಸ್ಟೀಲ್, ಫೈಬರ್ ಬಾಕೆ ಮುಂದೆ ಅಡುಗೆ ಕೋಣೆಲಿ ಬಳ್ಸುತ್ತಿದ್ದ ಚೆಂಬು, ಚೆರ್ಗೆ ಹಾಗೂ ಕಂಟೈನರ್‌ಗ; ನಮ್ಮ ಮೂಲ ವೃತ್ತಿ ಆದ ಕೃಷಿಲಿ ಬಳ್ಸುತ್ತಿದ್ದ ಕೃಷಿ ಉಪಕರಣಗ; ಜನರ ಬಾಧಿಸುತ್ತಿದ್ದ ಕಾಯಿಲೆ ಕಸಾಲೆಗ– ಮೊದಲಾದ ಚಿತ್ರಣ ಈ ಶಬ್ದಕೋಶ ಓದುತ್ತಾ ಹೋದಾಂಗೆ ನಮ್ಮ ಸ್ಮೃತಿ ಪಟಲಲಿ ಹಾದು ಹೋವ ಸಾಧ್ಯತೆ ಖಂಡಿತಾ ಉಟ್ಟು.

ಒಟ್ಟಿಗೆ ನಮ್ಮ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಬದುಕ್‌ನ ವಿವಿಧ ದೃಶ್ಯಗ ನಮ್ಮ ಮುಂದೆ ಬಂದ್ ನಿತ್ತದೆ. ನಾವು ಆಚರ್‌ಸ್ತಾ ಇರುವ ಪೂಜೆ ಪುರಸ್ಕಾರಗ, ನಮ್ಮ ಧಾರ್ಮಿಕ ಬದುಕ್‌ನ ಅಭಿಭಾಜ್ಯ ಅಂಗ ಆಗಿರುವ ಭೂತಾರಾಧನೆ, ಆಚರ್ಸುವ ಬೇರೆ ಬೇರೆ ಹಬ್ಬಗ, ನಮ್ಮ ಸಾಮಾಜಿಕ ಬದುಕ್‌ನ ಸಂಪ್ರದಾಯಗ, ಕಟ್ಟು ಕಟ್ಟಳೆಗ, ನಮ್ಮ ಕೌಟುಂಬಿಕ ಜೀವನದ ಸಂಬಂಧಗ ಕೂಡಾ ನಮ್ಮ ನೆನ್‌ಪ್‌ಲಿ ಹಾದ್ ಹೋದೆ. ಕೆಲವೊಂದು ಇಂಗ್ಲಿಷ್ ಶಬ್ಧಗಳ ನಾವು ಅರೆಭಾಷೆಲಿ ಬಳ್ಸಿ ಕಂಡ್ ಹಾಂಗೆ ಉಪಯೋಗಿಸ್ತಾ ಒಳೊ. ಉದಾ: ಪಿಟ್ಚರ್, ಪೆಟ್ರೋಲ್, ರೈಸುದು, ಡಾಕ್ಟ್ರ, ಪೋಲಿಸ್ ಇತ್ಯಾದಿ. ಇದರ್‌ಲಿ ನಾವು ಹೆಚ್ಚಿನ ಮಡಿವಂತಿಕೆ ಮಾಡದೆ ಅಂತ ಶಬ್ಧಗಳ ಹಾಂಗೆ ಬಳ್ಸುದು ಒಳ್ಳೆದ್‌ಂತ ನನ್ನ ಅನ್ಸಿಕೆ.

ತಮಾಷೆ ಹಾಂಗೂ ಹಾಸ್ಯದ ಪ್ರಸಂಗಗಳ ಭಾರಿ ರಸವತ್ತಾಗಿ ವರ್ಣಿಸಿಕೆ ಸಾಕಷ್ಟ್ ಶಬ್ಧಗ ಅರೆಭಾಷೆಲಿ ಉಟ್ಟು. ನೂರಾರು ಗುಣವಾಚಕಗ, ನಾಮ ವಿಶೇಷಣಗ, ಕ್ರಿಯಾ ವಿಶೇಷಣಗ ಅರೆಭಾಷೆನ ಸಮೃದ್ಧಗೊಳಿಸಿಟು. ಈ ಎಲ್ಲಾ ಸಕಾರಾತ್ಮಕ ಅಂಶಗಳ ಉಳ್ಸಿಕಂಡ್, ಅರೆಭಾಷೆ ಮಾತಾಡುವ ಜನರ್‌ಂದ ಹಾಂಗೂ ಈಗಾಗಲೇ ಸಾಹಿತ್ಯ ಕೃಷಿ ಮಾಡುವ ಸಾಹಿತಿಗಳ್‌ಂದ ಅರೆಭಾಷೆಲಿ ಇನ್ನಷ್ಟ್ ಕೃಷಿ ಮಾಡಿಕೆ ಹಾಂಗೂ ಗಟ್ಟಿ ಸಾಹಿತ್ಯ ಕೊಡಿಕೆ ತುಂಬಾ ಅವಕಾಶ ಉಟ್ಟು. ನಮ್ಮ ಅರೆಭಾಷೆ ಮಾತಾಡ್ವ ಜನ ಇಂದ್ ಇಡೀ ದೇಶದ ಮೂಲೆ ಮೂಲೆಲಿ ಇದ್ದರೂ, ಮೂಲತಃ ದಕ್ಷಿಣ ಕನ್ನಡದ ಸುಳ್ಯ, ಪುತ್ತೂರು, ಬಂಟ್ವಾಳ ಮತ್ತು ಬೆಳ್ತಂಗಡಿ ತಾಲೂಕುಗಳ್‌ಲಿ ಹಾಂಗೂ ಕೊಡಗ್‌ನ ಎಲ್ಲಾ ಮೂರು ತಾಲೂಕುಗಳ್‌ಲಿ ಮತ್ತೆ ಕರ್ನಾಟಕದ ಗಡಿಭಾಗದ ಕಾಸರಗೋಡು ಜಿಲ್ಲೆಲಿ ಬದುಕುವ ಜನ ಮುಖ್ಯವಾಗಿ ಗೌಡ ಜನಾಂಗದವು ಮಾತಾಡ್ವ ಈ ಭಾಷೆಲಿ ಸಾಕಷ್ಟ್ ಪ್ರಾದೇಶಿಕ ವ್ಯತ್ಯಾಸ ಕಂಡ್ ಬಂದದೆ. ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆನ ಅರೆಭಾಷೆಲಿ, ಶಬ್ಧಗಳ ಬಳಕೆಲಿ ಒಂದಷ್ಟ್ ಭಿನ್ನತೆ ಕಂಡ್‌ಬಂದದೆ. ಸುಳ್ಯ ತಾಲೂಕುನ ಒಳಗೆ ಮುಖ್ಯವಾಗಿ ಸುಳ್ಯಲಿ ಮಾತಾಡ್ವ ಭಾಷೆಗೂ, ಗುತ್ತಿಗಾರ್‌ಲಿ ಮಾತಾಡ್ವ ಭಾಷೆಗೂ, ಚೊಕ್ಕಾಡಿಲಿ ಮಾತಾಡ್ವ ಅರೆಭಾಷೆಲಿ ಕೂಡಾ ಸಣ್ಣಪುಟ್ಟ ವ್ಯತ್ಯಾಸನ ಗುರ್ತಿಸಕ್, ಆದರೆ ಇದೆಲ್ಲಾ ಒಂದು ರೀತಿಲಿ ಕಡೆಗಣ್ಸುವಂತ (negligible) ವ್ಯತ್ಯಾಸ ಆದರ್‌ಂದ ಹೆಚ್ಚಿನ ಭಿನ್ನತೆ ಕಾಂಬಕೆ ಸಾಧ್ಯ ಇಲ್ಲೆ.

ಕನ್ನಡ ಲಿಪಿನ ಮೂಲಕ ಅರೆಭಾಷೆನ ಸ್ಪಷ್ಟ ಉಚ್ಚಾರ ಬರಿಯಕೆ ಸ್ವಲ್ಪ ಕಷ್ಟ. ಒಂದು ಭಾಷೆನ, ಅದು ಉಪಭಾಷೆ ಆದರೂ ಕೂಡಾ ಇನ್ನೊಂದು ಭಾಷೆನ ಲಿಪಿಲಿ ಬರಿಯಕನ ಆವ

ತಾಂತ್ರಿಕ ಅಡಚಣೆನ ದಯಮಾಡಿ ನೀವೆಲ್ಲ ಅರ್ಥ ಮಾಡಿಕಣಕೂಂತ ವಿನಂತಿಸಿ ಕಣೆ.

ಈ ಶಬ್ಧಕೋಶದ ಕೊನೇಲಿ ನನ್ನ ಗಮನಕ್ಕೆ ಬಂದ ಒಂದಷ್ಟ್ ಗಾದೆಗಳ ಮತ್ತು ನುಡಿಗಟ್ಟ್‌ಗಳ ಕೂಡಾ ಕೊಟ್ಟಳೆ. ಇದ್ ಅರೆಭಾಷೆ ಗಾದೆಗಳ ಸಮಗ್ರ ಸಂಗ್ರಹ ಅಲ್ಲ. ನನ್ನ ಗಮನಕ್ಕೆ ಬಂದದರ, ಕೆಲವಷ್ಟರ, ಈ ರೀತಿ ಅರೆ ಭಾಷೆಲಿ ಕೂಡಾ ಸಾಕಷ್ಟ್ ಗಾದೆಗ, ನುಡುಗಟ್ಟ್‌ಗ ಒಳೊ ಎಂಬುದರ ತಿಳ್ಸಿಕೆ ಮಾತ್ರ ಬರ್ದಳೆ. ಇಲ್ಲಿ ಕೆಲವು ಅಪ್ಪಟವಾದ ಅರೆಭಾಷೆ ಗಾದೆಗ ಆದರೆ, ಇನ್ನೂ ಕೆಲವು ಅರೆಭಾಷೆಲಿ ಬಳ್ಸುವ ಕನ್ನಡ ಗಾದೆಗಳ ಕೂಡಾ ಸಂಗ್ರಹಿಸಿ ಪ್ರಕಟ ಆವುಟು. ಈ ಗಾದೆಗಳ್‌ಲಿ ಒಂದಷ್ಟ್ ಅಶ್ಲೀಲತೆ ಉಟ್ಟು. ಆದರೆ ಅದರ ಬದಲಾಯಿಸಿಕೆ ಹೋದರೆ ಅದರ ನೈಜತೆ ಹೋಗಿ ಬುಡುವ ಸಾಧ್ಯತೆ ಇರುದರ್‌ಂದ ಅದರ ಹಾಂಗೆನೆ ಕೊಟ್ಟಳೆ. ದಯಮಾಡಿ ಅಪಾರ್ಥ ಮಾಡಿಕಂಬಕೆ ಆಗದ್‌ಂತ ನನ್ನ ಬೇಡಿಕೆ.

ಈ ಶಬ್ಧ ಕೋಶದ ಸಂಪಾದನೆ ನನ್ನ ಒಂದು ವಿನಮ್ರ ಪ್ರಯತ್ನ. ಇದರ್ಲಿ ಎಲ್ಲವೂ ಸರಿ, ಪಾಂಡಿತ್ಯ ಪೂರ್ಣವಾಗಿ ಉಟ್ಟೂಂತ ಸಮರ್ಥಿಸಿ ಕಂಬ ಪೊಡ್‌ಂಬ ನಾ ಅಲ್ಲ. ಇದರ್ಲಿ ಅದೆಷ್ಟೊ, ತಪ್ಪುಗ, ದೋಷಗ, ನನ್ನ ಗಮನಕ್ಕೆ ಬಾರದೆ ಖಂಡಿತಾ ನುಸುಳಿರ್ದು. ಈ ಎಲ್ಲಾ ಲೋಪಗಳ ದಯಮಾಡಿ ನನ್ನ ವಿಳಾಸಕ್ಕೆ ಕಾಗದ ಬರಿಯುವ ಮೂಲಕ ತಿಳ್ಸೊಕಾಗಿ ನಮ್ರವಾಗಿ ವಿನಂತಿಸಿ ಕಣೆ. ಅರೆಭಾಷೆ ಶಬ್ಧಗಳ ಸಂಗ್ರಹ ಕಾರ್ಯನ ನಿರಂತರವಾಗಿ ಮುಂದುವರ್ಸು ಕೂಂತ ನಾ ಯೋಚಿಸಳೆ. ಪ್ರತೀ ಮೂರು ಯಾ ಐದ್ ವರ್ಷಕ್ಕೊಮ್ಮೆ ಹೊಸ ಆವೃತ್ತಿನ ತರುವ ಯೋಜನೆ ನನ್ನ ಮನ್‌ಸ್‌ಲಿ ಉಟ್ಟು. ಆ ಸಂದರ್ಭಲಿ ಈ ಆವೃತ್ತಿಲಿ ಆದ ಲೋಪದೋಷಗಳ ತಿದ್ದಿ ಸರಿಪಡ್ಸುವ ವಿನಮ್ರತೆನ ಕೂಡಾ ನಿಮ್ಮ ಮುಂದೆ ಮಂಡಿಸ್ತಾ ಒಳೆ.

ಸಂಪಾಜೆ ಹೈಸ್ಕೂಲ್‌ಲಿ ನಾ ಮಾಸ್ತ್ರಾಗಿ ಕೆಲ್ಸ ಮಾಡ್ದ ಆರಂಭದ ಸುಮಾರ್ 10 ವರ್ಷ ನನ್ನ ತಿದ್ದಿ, ತೀಡಿ ಒಂದು ಒಳ್ಳೆ ಮಾಸ್ತ್ರಾಗಿ ಬೆಳಿಯಕೆ ಕಾರಣಕರ್ತರಾದ ನನ್ನ ಗುರುಸಮಾನರಾದ ಶ್ರೀ ಕುಯಿಂತೋಡು ದಾಮೋದರನವು ಈ ಶಬ್ಧಕೋಶಕ್ಕೊಂದು ಅರ್ಥಪೂರ್ಣ ಮುನ್ನುಡಿ ಬರ್ದ್ ನಂಗೆ ಶುಭ ಹಾರೈಸೊಳೊ. ಅವುಕೆ ನನ್ನ ಎದೆ ತುಂಬಿದ ಪ್ರಣಾಮಗಳ ಸಲ್ಲಿಸಿನೆ.

ಈ ಶಬ್ಧಕೋಶದ ಸಂಪಾದನೆ ಮಾಡುವ ಹಂತಲಿ, ಶಬ್ಧಗಳ ಸಂಗ್ರಹಲಿ, ಅವುಗಳ ವ್ಯಾಕರಣ ಸ್ಥಾನಮಾನಗಳ ನಿಗದಿ ಮಾಡುವಲ್ಲಿ, ಅರ್ಥನ ಸರಿಪಡ್ಸಿ ಕಂಬಲ್ಲಿ, ಮುದ್ರಣ ಹಂತಲಿ ತಿದ್ದಿ ಸರಿಪಡ್ಸುವಲ್ಲಿ ನಂಗೆ ಎಲ್ಲಾ ರೀತಿಲಿ ಸಹಕಾರ ನೀಡ್ದ ನನ್ನ ಹಿಂದೆನ ಸಹೋದ್ಯೋಗಿಗ ಹಾಂಗೂ ನನ್ನ ಹಿರಿಯ ವಿದ್ಯಾರ್ಥಿ ಗೆಳೆಯರಾದ ಅರಂತೋಡು ನೆಹರು ಸ್ಮಾರಕ ಪದವಿ ಪೂರ್ವ ಕಾಲೇಜ್‌ನ ಕನ್ನಡ ವಿಭಾಗದ ಅಧ್ಯಾಪಕರ್ ಆದ ಶ್ರೀಮತಿ ಯು.ಬಿ. ಕುಸುಮಾವತಿ ಕಾನತ್ತಿಲ ಹಾಂಗೂ ಶ್ರೀ ಸೀತಾರಾಮ ಮಜಿಕೋಡಿಯವ್‌ಕೆ ನನ್ನ ಎದೆ ತುಂಬಿದ ಕೃತಜ್ಞತೆನ ದಾಖಲಿಸ್ತಾ ಒಳೆ. ಜೊತೆಗೆ ಕ್ಷೇತ್ರ ಅಧ್ಯಯನಲಿ ನಂಗೆ ಸಹಕರ್ಸಿದ ನೆಹರು ಸ್ಮಾರಕ ಪದವಿಪೂರ್ವ ಕಾಲೇಜಿನ ಅರೆಭಾಷೆ ಮಾತಾಡ್ವ ಪಿ.ಯು.ಸಿ. ಓದುವ ಮಕ್ಕಳಿಗೂ ಹಾಂಗೂ ಅವ್‌ಕೆ ಸಹಕರ್ಸಿದ ಅವರ ಮನೆವ್ಕೂ ಕೂಡಾ ನನ್ನ ಮನ ತುಂಬಿದ ಕೃತಜ್ಞತೆಗ. ಭೂತಾರಾಧನೆಗೆ ಸಂಬಂಧಪಟ್ಟ ಕೆಲವೊಂದು ಶಬ್ಧಗಳ ಬಗ್ಗೆ ಮಾಹಿತಿ

ಕೊಟ್ಟ ಮಿತ್ರ ಶ್ರೀ ಯು.ಕೆ. ತೀರ್ಥರಾಮ ಪರ್ನೋಜಿ ಹಾಂಗೂ ಶ್ರೀ ಹೇಮನಾಥ ಕುರುಂಜಿ ಯವ್‌ಕೆ ಕೂಡಾ ನಾ ವಂದನೆ ಸಲ್ಲಿಸಿನೆ. ಅನೇಕ ಶಬ್ಧಗಳ ಸಂಗ್ರಹಿಸಿ ಕೊಡುವಲ್ಲಿ, ಕೆಲವೊಂದು ಶಬ್ಧಗಳಿಗೆ ಇಂಗ್ಲೀಷ್ ಶಬ್ದಾರ್ಥಗಳ ನೀಡುವಲ್ಲಿ ಹಾಂಗೂ ಕನ್ನಡ ಸಮಾನಾಂತರ ಶಬ್ಧಗಳ ವ್ಯಾಕರಣಾಂಶಗಳ ಸ್ಥಿರೀಕರಣ ಮಾಡುವಲ್ಲಿ ನಂಗೆ ಸಾಥ್ ಕೊಟ್ಟ ನನ್ನ ಹಿತೈಷಿ ಬಂಧುಗಳಾದ ಪ್ರೊ। ಸೀತಾರಾಮ ಕೇವಳ ಮತ್ತೆ ಅವರ ಪತ್ನಿ ಪ್ರೊ। ಹರಿಣಿ ಸೀತಾರಾಮನವ್‌ಕೂ, ಕೆಲವೊಂದು ಕಾಡುಪ್ರಾಣಿಗಳಿಗೆ ಇಂಗ್ಲಿಷ್ ಹೆಸ್ರ್‌ನ ಹೇಳಿಕೊಟ್ಟ ಪ್ರೊ। ದೇವಿಪ್ರಸಾದನವ್‌ಕೂ ನನ್ನ ಕೃತಜ್ಞತಾ ಪೂರ್ವಕ ನಮನಗ. ಅರೆ ಭಾಷೆ ಗಾದೆಗಳಿಗೆ ಇಂಗ್ಲಿಷ್‌ಲಿ ವಿವರಣೆ ಕೊಡುವಲ್ಲಿ ಮಾರ್ಗದರ್ಶನ ಮಾಡ್ದ ಸುಳ್ಯದ ಶಿಕ್ಷಣ ಸಂಪನ್ಮೂಲ ಕೇಂದ್ರದ ಸಮನ್ವಯಾಧಿಕಾರಿ ಶ್ರೀ ಚಂದ್ರಶೇಖರ್ ಪೇರಾಲ್‌ರವರ ಕೂಡಾ ನಾ ನೆನ್ಸಿಕಣೆ.

ಅನೇಕ ಶಬ್ಧಗಳ ವಿಶ್ಲೇಷಣೆಗೆ ಒಳಪಡ್ಸ್‌ಕಾಕನ ನನ್ನ ಜೊತೆ ಚರ್ಚೆಲಿ ಪಾಲ್ಗೊಂಡ್, ಹೇಳ್‌ಕನ ಕೇಳ್‌ಕನ ಕಪಾಟ್‌ಂದ ನಂಗೆ ಬೇಕಾದ ಪುಸ್ತಕಗಳ ಎಲ್ಲಾ ತೆಗ್ದ್‌ಕೊಟ್ಟ್ ನನ್ನ ಕಿರಿಕಿರಿನ ಸಹಿಸಿ ಕಂಡ ನನ್ನ ಹೆಣ್ಣ್ ಶ್ರೀಮತಿ ಪಾರ್ವತಿ, ವೈದ್ಯಕೀಯ ಶಬ್ಧಗಳಿಗೆ ಅರ್ಥ ಕೊಡುವಲ್ಲಿ ಸಹಕಾರ ಕೊಟ್ಟ ಅಳಿಯ ಡಾ। ದಿನೇಶ್, ಮಗಳು ಡಾ। ನಮ್ರತಾ, ಈ ಶಬ್ಧಕೋಶನ ಹೊರ ತರುವಲ್ಲಿ ಆರಂಭಂದ ಕೊನೆ ತನಕ ತೊಡಗಿಸಿಕಂಡ ನನ್ನ ಮಂಜ ಕೆ.ಜಿ. ಹರಿಚರಣ್, ಹಿರಿಯಣ್ಣ ಶ್ರೀ ಕೆ. ಆರ್. ಪದ್ಮನಾಭ ಇವರೆಲ್ಲರ ಸಹಕಾರನ ನಾ ಯಾಗೋಳು ನೆನಪ್‌ಲಿ ಹಿಸಿಕಣೆ.

ಈ ಶಬ್ಧಕೋಶದ ಪ್ರಕಾಶನದ ಜವಾಬ್ದಾರಿ ಹೊತ್ತ್ ಅದರ ಬಿಡುಗಡೆ ಮಾಡ್ವ ಕಾರ್ಯಕ್ರಮನ ವ್ಯವಸ್ಥೆ ಮಾಡ್ದ ಸುಳ್ಯದ ಗೌಡರ ಯುವ ಸೇವಾ ಸಂಘದ ಪ್ರವರ್ತನೆಯ ಗೌಡ ಸೋಶಿಯೋ ಎಜ್ಯುಕೇಶನ್ ಟ್ರಸ್ಟ್ (ರಿ) ಇದರ ಎಲ್ಲಾ ಪದಾಧಿಕಾರಿಗಳಿಗೆ, ಅದಲ್ಲೂ ಮುಖ್ಯವಾಗಿ ಟ್ರಸ್ಟ್‌ನ ಅಧ್ಯಕ್ಷ ಶ್ರೀ ದಿನೇಶ್ ಮಡಪ್ಪಾಡಿಯವ್‌ಕೆ ನಾ ಯಾಗೋಳ್ ಋಣಿಯಾಗಿ ಒಳೆ.

ಈ ಶಬ್ಧಕೋಶದ ಎಲ್ಲಾ ಪುಟಗಳ ಅಚ್ಚುಕಟಾಗಿ ಟೈಪ್ ಹಾಂಗೂ ಕಂಪೋಸ್ ಮಾಡಿಕೊಟ್ಟ ಸುಳ್ಯದ ಡಿಜಿ ಪ್ಲಸ್‌ನ ಮಾಲಕ ಗೆಳೆಯ ಶ್ರೀ ಚಂದ್ರಶೇಖರ ನಂಜೆ ಮತ್ತು ಅವರ ತಂಡಕ್ಕೂ, ಟೈಪ್ ಮಾಡಿಕೊಡುವಲ್ಲಿ ಸಹಕರ್ಸಿದ "ವಿನೂ ಎಂಟರ್‌ಪ್ರೈಸಸ್" ಸುಳ್ಯ ಇದರ ಮಾಲಕಿ ಶ್ರೀಮತಿ ವಿನೋದಿನಿ ಯನ್. ರೈ ಮತ್ತು ಸಿಬ್ಬಂದಿಯವುಕೂ, ಭಾರಿ ಪೊರ್ಲುಲಿ ಮುದ್ರಿಸಿಕೊಟ್ಟ ಮಂಗಳೂರ್‌ನ ಆಕೃತಿ ಪ್ರಿಂಟ್ಸ್‌ನ ಶ್ರೀ ಕಲ್ಲೂರು ನಾಗೇಶ್ ಮತ್ತು ಅವರ ತಂಡಕ್ಕೂ ನನ್ನ ಕೃತಜ್ಞತೆನ ಇಲ್ಲಿ ದಾಖಲು ಮಾಡ್ತಾ ಒಳೆ.

ಮುಂದೆ ಮೂರ್ ಯಾ ಐದ್ ವರ್ಷ ಕಳ್ದ್, ಇನ್ನೂ ನೂರಾರ್ ಶಬ್ಧಗಳ ಸೇರ್ಸಿ ಕಂಡ್, ಸಾಧ್ಯ ಆದರೆ ಆ ಶಬ್ಧಗಳಿಗೆ ಚಿತ್ರಗಳ ಕೂಡಾ ಅಳವಡ್ಸಿ ಕಂಡ್ ಹೊಸ ಆವೃತ್ತಿನೊಟ್ಟಿಗೆ ನಿಮ್ಮ ಮುಂದೆ ಬನ್ನೆ ಎಂಬ ಭರವಸೆ ಕೊಡುತ್ತಾ ಈ ಸಂಪಾದಿತ ಶಬ್ಧಕೋಶನ ಓದುವ ಹಾಂಗೂ ನಿಮ್ಮ ಮನೆಯ ಪುಸ್ತಕ ಭಂಡಾರಕ್ಕೆ ಸೇರ್ಸಿದ ನೀವ್‌ಗೂ ನಮಸ್ಕಾರ ಹೇಳ್ತಾ ಒಳೆ. ಕಡೇಗೆ ಇಂಗ್ಲೀಷ್‌ನ ಒಂದ್ ಮಾತ್ ನೆನಪಾದೆ "If you are satisfied tell others; if you are not satisfied tell us". ಈ ಶಬ್ದಕೋಶ ಮನ್ಸಿಗೆ ಖುಷಿ ಕೊಟ್ರೆ ಉಳ್ದವ್‌ಕೆ ಹೇಳಿ, ನೀವ್‌ಗೆ ಖುಷಿ ಕೊಡದಿದ್ದರೆ, ಯಾಕೆ ಖುಷಿ ಕೊಟ್ಟತ್ಲೆಂತ ಪಟ್ಟಿ ಮಾಡಿ ನಂಗೊಂದು ಉದ್ದದ ಕಾಗದ ಬರಿನೀಂತ ಹೇಳ್ತಾ ಈ ಸಂಪಾದಕರ ಮುನ್ನುಡಿಗೆ ವಿರಾಮ ನೀಡ್ತಾ ಒಳೆ.

ಸಂಕ್ಷಿಪ್ತ ರೂಪದ ಸೂಚಿ

ನಾ	– ನಾಮಪದ
ಕ್ರಿ	– ಕ್ರಿಯಾಪದ
ನಾ.ವಿ	– ನಾಮ ವಿಶೇಷಣ
ಕ್ರಿ.ವಿ	– ಕ್ರಿಯಾ ವಿಶೇಷಣ
ಗು	– ಗುಣವಾಚಕ
ಅ	– ಅವ್ಯಯ
ಸ.ನಾ	– ಸರ್ವನಾಮ ಪದ
ಉ:	– ಉದಾಹರಣೆ
ಭಾ.ಅ	– ಭಾವಸೂಚಕ ಅವ್ಯಯ
ಪ್ರ	– ಪ್ರಶ್ನಾರ್ಥಕ ಪದ
ಏ.ವ	– ಏಕವಚನ
ಬ.ವ	– ಬಹುವಚನ
ದ್ವಿ	– ದ್ವಿರುಕ್ತಿ
ಸಂ	– ಸಂಬೋಧನೆ

ಅ

ಅಂಕ್ ಡೊಂಕ್ (ನಾ.ವಿ) – ಓರೆಕೋರೆ, ವಕ್ರ, meandering with lot of bends.

ಅಂಗ್‌ಡಿ (ನಾ)–ಮಾರಾಟ ಮಳಿಗೆ, ಅಂಗಡಿ, place where goods are bought and sold.

ಅಂಗ (ನಾ) – ಪಾನೀಯ, ನೀರು (ಚಿಕ್ಕಮಕ್ಕಳ ಭಾಷೆಯಲ್ಲಿ) somthing to drink.

ಅಂಗತನೆ (ಕ್ರಿ. ವಿ)– ಮೇಲ್ಮುಖವಾಗಿ ಮಲಗು ಅಥವಾ ಬೀಳು,
ಅಂಗತನೆ ಮಲ್ಗ್ / ಅಂಗತನೆ ಬೀಳ್
lie with face upward.

ಅಂಗಾರ ಬಾಕುಡ (ನಾ)– ಪ್ರಕೃತಿ ಶಕ್ತಿಯನ್ನು ಸಾಂಕೇತಿಸುವ ದೈವ.
ಹಸುವಿನ ಹಾಲು ಕರೆದು ಈ ದೈವಕ್ಕೆ ಅರ್ಪಿಸುವ ಸಂಪ್ರದಾಯ ಇದೆ.
a daivam representing nature.

ಅಂಗಿ (ನಾ)– ಕುಪ್ತ, ಶರಟು shirt.

ಅಂಗುಲ (ನಾ)– ಉದ್ದವನ್ನು ಅಳೆಯುವ ಸಾಧನ. ಆಚಾರಿಕೋಲು : 24 ಅಂಗುಲ = 1ಕೋಲು = 28ಇಂಚು. (ಮರದ ಅಳತೆಯಲ್ಲಿ ಬಳಸುತ್ತಾರೆ)
ಶಿಲ್ಪಿಕೋಲು : 36 ಇಂಚು = 1 ಗಜ ಕೋಲು (ಮಣ್ಣಿನ ಅಳತೆ, ಮನೆಯ ಆಯಗಳ ಅಳತೆಯಲ್ಲಿ ಬಳಸುತ್ತಾರೆ.)

ಅಂಗೈ (ನಾ)– ಕೈಯ ಒಳಭಾಗ, palm.

ಅಂಜಿಕೆ (ಕ್ರಿ)– ಹಿಂಜರಿಯುವಿಕೆ, hesitation.

ಅಂಟ್‌ಸ್(ಕ್ರಿ)– ಅಂಟಿಸು, ಅಂಟು, ಗೋಂದು paste, stick on, gum

ಅಂಡ್ (ನಾ)– ಕುಂಡೆ ಅಂಡ್,
ತಿಕದ ಬೊಡ್ಡೆಗಳು ಪೃಷ್ಠ, ಪಿರ್ರೆ buttock

ಅಂಡ್‌ಸ್ (ಕ್ರಿ) – ಒಂದು ಬದಿಗೆ ತಳ್ಳು, ಕಡೆಗಣಿಸು, push him to one side, neglect.

ಅಂಡಾಟೆ (ನಾ)– ಹೊಲಗಳಲ್ಲಿ ಪ್ರಾಣಿಗಳನ್ನು ಓಡಿಸುವರೇ ಸದ್ದು ಮಾಡಲು ಬಿದಿರಿನ ತುಂಡಿನಿಂದ ಮಾಡಿದ ಸಾಧನ.
a model made of bamboo to irrace the wild animals from the paddy fields.

ಅಂಡೆ (ಹಂಡೆ) (ನಾ)– ಅಗಲ ಬಾಯಿಯ ದೊಡ್ಡ ಪಾತ್ರೆ, a big vessel, cauldron

ಅಂಡೆಪಿರ್ಕಿ (ಗು)– ಮಾತಿನಲ್ಲಿ ಅನಗತ್ಯ ಕಿರಿಕಿರಿ ಮಾಡುವ ವ್ಯಕ್ತಿ, a disturbing person talking unwanted things all the time.

ಅಂತವು (ಸ.ನಾ)– ಅಂತವರು, ಆ ರೀತಿ ಯವರು, people of that kind,
ಅಂತ್‌ವ್‌ಕೆ – ಅಂತವರಿಗೆ,
ಅಂತವ್‌ಕೆಲ್ಲಾ – ಅಂತವರಿಗೆಲ್ಲಾ.

ಅಂತಸ್ತ್ (ನಾ.ವಿ)– ಜೀವನ ಮಟ್ಟ, ಪ್ರತಿಷ್ಠೆ, ಸಾಮಾಜಿಕ ಸ್ಥಾನಮಾನ,
status, standard, position.

ಅಂದಾಜ್ (ಕ್ರಿ) – ಸುಮಾರಾಗಿ ಊಹಿಸು, ಯೋಜಿಸು ಉದಾ: ಅಂದಾಜ್ ಒಂದು ಸಾವಿರ ಜನ ಆವೋ.
estimate, tentative.

ಅಂಬಡೆ ಸುಡಿ (ನಾ)– ತಲೆಕೂದಲಿನ ಸುಡಿ, ಕೇಶಾಲಂಕಾರದ ಒಂದು ಶೈಲಿ.
Hair plaited in the form of bun.

ಅಂಬುಲಿ (ನಾ) – ರಾಗಿಯಿಂದ ಮಾಡಿದ ಗಂಜಿ/ಪಾಯಸ. kanji made of ragi.

ಅಂಬೆರ್ಪು (ಕ್ರಿ) – ಅವಸರ, hurry, haste.

ಅಂಚೆಲ್ (ನಾ.ವಿ) – ಗೊಂಚಲಿನಲ್ಲಿ ಪೂರ್ತಿ ಇಲ್ಲದಿರುವುದು, loose bunch.

ಅಂರ್ಬುದು (ಕ್ರಿ) – ಪರದಾಡು, ಒದ್ದಾಡು, ಚಡಪಡಿಸು, restlessness.

ಅಂವ (ಸ.ನಾ)– ಅವನು, he, ಅಂವಂಗೆ– ಅವನಿಗೆ, him, ಅಂವನ – ಅವನ, his

ಅಕ್ಕ್ (ಕ್ರಿ)– ಆದು, ಆಗಬಹುದು, yes, OK.

ಅಕಸ್ಮತ್ (ಕ್ರಿ.ವಿ)– ಅನಿರೀಕ್ಷಿತ, ಆಕಸ್ಮಿಕ, accidental, unexpected.

ಅರ್ಕಿಲ್ (ನಾ)– ಬೇಸಿಗೆ, ಕಡು ಬಿಸಿಲಿನ ಕಾಲ, summer.

ಅರ್ಕೆ (ನಾ)– ಕೃಷಿ ಕಾರ್ಯಗಳಲ್ಲಿರುವ ಮನೆಗಳಲ್ಲಿ ಕತ್ತಿಗಳನ್ನು ಸಿಕ್ಕಿಸಿ ಇಡುವ ಬಿದಿರಿನಿಂದ ಮಾಡಿದ ಸಾಧನ, rack made of bamboo to keep sickles.

ಅರ್ಕೆಬಳ್ಳಿ (ನಾ)– ದನಗಳಿಗೆ ಆಹಾರವಾಗಿ ನೀಡುವ ಎಲೆಗಳಿರುವ ಬಳ್ಳಿ, creeper used as fodder for cows.

ಅಕೇರಿಗೆ (ಕ್ರಿ.ವಿ) – ಕೊನೇಗೆ, ಕಡೇಗೆ, ಅಕೇರಿಗೆ, at the end, at last, finally.

ಅಗರ್ (ನಾ)– ಕಂದಕ, ದೊಡ್ಡಕಣಿ, ಬೇಲಿ ಯಾಗಿ ಮತ್ತು ಗಡಿ ಗುರುತಿಸಲು ತೆಗೆಯುವ ದೊಡ್ಡ ಕಂದಕ, ಕಣಿ. trench used as fence as well as boundary.

ಅಗಳು (ನಾ) – ಅಗೇಲ್, ಭೂತ, ದೈವಗಳಿಗೆ ಆರಾಧನೆಯ ಸಂದರ್ಭದಲ್ಲಿ ಸಾಂಕೇತಿಕ ವಾಗಿ ಬಳಸುವ ಆಹಾರ, food served to the divine dieties at the time of their worship.

ಅಗ್ರ (ನಾ)– ನಾಲಗೆಯ ಮೇಲೆ ಶೇಖರಣೆ ಯಾಗುವ ಬಿಳಿ ಪದಾರ್ಥ, tiny food items deposited on the tongue whileeating.

ಅಗ್ರಾಣೆ ಹಾಕು (ಕ್ರಿ)– ಒಗ್ಗರಣೆ ಹಾಕು, mixing hot oil with mustard and neem leaves to the dishes to enhance its taste.

ಅಗ್ತೆ (ಕ್ರಿ)– ನೀರು ಇಂಗಿ ಹೋಗಲು ಮಣ್ಣಿನ ಅಗತೆ ಮಾಡುವುದು. Digging the land to soak the water.

ಅರ್ಗು (ಕ್ರಿ)– ಜೀರ್ಣವಾಗು, get digested.

ಅಚ್‌ಕಟ್ (ನಾ.ವಿ) – ವ್ಯವಸ್ಥಿತವಾದ, ಸರಿಯಾದ, ಅಚ್ಚುಕಟ್ಟಾದ clean, organised, well arranged.

ಅಚ್‌ಕಟ್ (ಕ್ರಿ)– ಕೋಳಿ, ಹಂದಿ ಬೇಟೆ ಮಾಡಿದ ಪ್ರಾಣಿಗಳ ಮಾಂಸವನ್ನು ಪದಾರ್ಥ ಮಾಡುವರೇ ಸಜ್ಜುಗೊಳಿಸು ವುದು. (ನೋಡಿ –ಹಜಿರ್)

ಅಚ್ಚು (ನಾ)– ಚಿಹ್ನೆ, ಒಂದೇ ತರದ, mark, duplicate, of same type, similar.

ಅಜ್ಜ (ನಾ) – ತಂದೆಯ ತಂದೆ ಅಥವಾ ತಾಯಿಯ ತಂದೆ, ತಾತ, ಮುದುಕ, ಉಗ್ಗಪ್ಪ, ಚಾಮೆಪ್ಪ. Father's father or mother's father, grand father, old man.

ಅಜ್ಜಿ (ನಾ) – ತಂದೆಯ ತಾಯಿ ಅಥವಾ ತಾಯಿಯ ತಾಯಿ, ಮುದುಕಿ, ಉಗ್ಗವ್ವ, ಚಾಮೆವ್ವ. father's mother or mother's mother, grandmother, old woman.

ಅಜೀರ್ಣ (ಕ್ರಿ)– ಜೀರ್ಣವಾಗದಿರುವುದು indigestion.

ಅರ್ಜಿಲ್ (ಕ್ರಿ)– ಗೋಳು ಹೊಯ್ದುಕೊಳ್ಳು, ಆಗ್ರಹಿಸು, ಒತ್ತಾಯಿಸು compell, urge, persuade.

ಅಟ್ಟ (ನಾ)– ಹಂಚಿನ ಮನೆಗಳಲ್ಲಿ ಮರದ ಹಲಗೆಯಿಂದ ಮಾಡಿದ ಮುಚ್ಚಿಗೆಯ ಮೇಲಿನ ಭಾಗ, ಮಾಡಿನ ತಳಹದಿಯ ಅಂತಸ್ತು, attic, loft.

ಅಟ್ಟಾಸ್ (ಗು)– ಜಂಭ, pride.

ಅಟ್ಟೋಳಿಗೆ (ನಾ) – ಹೊಲಗಳಲ್ಲಿ ರಾತ್ರಿ ಕಾವಲು ಕಾಯಲು ಅಥವಾ ಬೇಟೆ ಯಾಡಲು ಎತ್ತರದಲ್ಲಿ ಕಟ್ಟುವ ವಿಶ್ರಾಂತಿ ವೇದಿಕೆ, ಅಟ್ಟಣಿಗೆ a platform built quite above the ground level to safe guard the crops or for hunting purpose.

ಅಟ್ಟಿ (ನಾ) – ಒಂದರ ಮೇಲೆ ಇನ್ನೊಂದು ಇಟ್ಟು ಅಟ್ಟಿ ಕಟ್ಟುವುದು piling of things.

ಅಟ್ಟೆಕಾಲು (ನಾ.ವಿ) – ಒಳಬಾಗಿದ ಕಾಲು, in ward bent legs.

ಅಡಂಗಾಯಿ (ನಾ) – ನೆಕ್ಕರೆ ಮಾವಿನಕಾಯಿ ಯನ್ನು ಹೋಳು ಮಾಡಿ ಹಾಕಿದ ಉಪ್ಪಿನಕಾಯಿ, pickles made from the pieces of nekkare mango.

ಅಡರ್ (ನಾ)– ಎಲೆ ತೆಗೆದ ಚಿಕ್ಕ ರೆಂಬೆ, small branch of a tree without leaves, twig.

ಅಡವು (ಕ್ರಿ)– ಅಡಮಾನ ಮಾಡುವುದು, ಚಿನ್ನ, ಬೆಳ್ಳಿ, ಆಭರಣ, ವಾಹನ ಇತ್ಯಾದಿಗಳನ್ನು ಅಡವು ಇಟ್ಟು ಸಾಲ ಪಡೆಯುವುದು. mortgage, hypothecate.

ಅಡವು (ನಾ)– ಒಂದು ಜಾತಿಯ ಸಮುದ್ರ ಮೀನು, a kind of sea fish.

ಅಡ್ಕ (ನಾ)– ಸಣ್ಣ ಪೊದೆಗಳಿಂದ ಕೂಡಿದ ಸಮತಟ್ಟಾದ ಪ್ರದೇಶ, ದನಗಳ ಮೇವಿಗಾಗಿ ಕೂಡಾ ಬಳಸುತ್ತಾರೆ. a level land with some bushes here and there.

ಅಡ್ಡ (ನಾ)– ಗೋಡೆಯಿಂದ ಗೋಡೆಗೆ, ಮೇಲಿನಿಂದ ಮರದ ಹಲಗೆ ಹಾಕಲು ಹಾಕುವ ಮರದ ದಿಮ್ಮಿ, cross beam.

ಅಡ್ಡಕಾಲಾಕುದು (ಕ್ರಿ)–ತೊಂದರೆ ಕೊಡುವುದು, ತಡೆ ಉಂಟುಮಾಡುವುದು giving trouble, disturb.

ಅಡ್ಡಗಟ್ಟ್ (ಕ್ರಿ)– ದಾರಿಗಡ್ಡವಾಗಿ ನಿಲ್ಲು, ಮುನ್ನಡೆಯನ್ನು ತಡೆಗಟ್ಟು, blocking the movement, stop, obstruct.

ಅಡ್ಡ ಪಂಕ್ತಿ (ನಾ)– ಹಿಂದಿನ ಕಾಲದಲ್ಲಿ ಮದುವೆ ಇನ್ನಿತರ ಸಮಾರಂಭಗಳಲ್ಲಿ ಹಿಂದುಳಿದ ಜಾತಿಗಳವರನ್ನು ಊಟಕ್ಕೆ ಕುಳಿಸುತ್ತಿದ್ದ ಪ್ರತ್ಯೇಕ ಪಂಕ್ತಿ.

ಅಡ್ಡಬಾಯಿಹಾಕ್ (ಕ್ರಿ) – ಇಬ್ಬರು ಮಾತನಾಡು ವಾಗ ಮಧ್ಯದಲ್ಲಿ ಮಾತನಾಡುವುದು. Interference in the conversation.

ಅಡ್ಡಮಾಡ್ (ನಾ)– ಉದ್ದನೆಯ ಮಾಡಿಗೆ ಅಡ್ಡವಾಗಿ ಹಾಕುವ ಮಾಡು.

ಅಡ್ಡ ಮಾತ್ (ನಾ.ವಿ)– ಒಂದು ವಿಷಯದ ಬಗ್ಗೆ ಮಾತನಾಡುತ್ತಿರುವಾಗ ಇನ್ನೊಂದು ವಿಷಯವನ್ನು ಪ್ರಸ್ತಾಪಿಸುವುದು. Interference with changing the subject.

ಅಡ್ಡಮುರಿ (ನಾ)– ಮರ ಸಿಗಿಯುವ ಗರಗಸ, ಬಾಳು, saw used for parallel cutting.

ಅಡ್ಡ ಹಾಕ್ (ಕ್ರಿ)– ತಡೆಯುವುದು, ಮುಂದುವರಿಯದಂತೆ ತಡೆಗಟ್ಟುವುದು. block from proceeding.

ಅಡ್ಪಳೆ (ನಾ)– ತೆಂಗಿನ ಮರದಿಂದ ತೆಂಗಿನ ಕಾಯಿ ಒಣಗಿ ಉದುರಿದ ಮೇಲೆ ಉಳಿಯುವ ಒಣಗಿದ ಗೊನೆ, ಚಪ್ಪರಿಗೆ.

ಅಡ್ಡಾಡ್ (ಕ್ರಿ)– ತಿರುಗಾಡು, ಸುಳಿದಾಡು, wander .

ಅಡ್ಡಾದಿಡ್ಡಿ (ಕ್ರಿ.ವಿ) – ಅವ್ಯವಸ್ಥಿತವಾಗಿ, unorganized, in a haphazard manner.

ಅಡಿಕುರುಂಟು (ನಾ) – ಮದುಮಗಳನ್ನು ಕಳುಹಿಸಿ ಕೊಡುವಾಗ ಜೊತೆಯಲ್ಲಿ ಕಳುಹಿಸುವ ಸಂಗಾತಿ,

ಅಡಿಗೆರ (ನಾ) – ಅನ್ನವನ್ನು ಬಸಿಯಲು ಬಳಸುವ ಪಾತ್ರೆ, ಗಂಗುಳನ್ನು ತುಂಬಿಸಿ ಡುವ ಪಾತ್ರೆ
a vessel to keep the kanji water.

ಅಡಿಮುಂಗ (ನಾ)– ಸದಾ ತಲೆಕೆಳಗೆ ಹಾಕಿ ಕೊಂಡು ಕುಳಿತುಕೊಳ್ಳುವವ. Always sitting with the head down.

ಅಡಿಮುಟ್ಟ (ಕ್ರಿ.ವಿ)– ತಳದ ತನಕ till the bottom.

ಅಡಿಹಿಡಿ (ಕ್ರಿ)– ಜಾಸ್ತಿ ಬೆಂಕಿಯಿಂದಾಗಿ ಅಥವಾ ಸರಿಯಾಗಿ ಕಲಕದಿದ್ದಾಗ ಪಾತ್ರೆಯಲ್ಲಿ ಆಹಾರದ ತಳಭಾಗ ಕರಟಿ ಹೋಗುವುದು. get charred.

ಅಡ್ಡಿಲ್ (ನಾ)– ಸಣ್ಣಪುಟ್ಟ ಕಾಡು ಪ್ರಾಣಿಗಳನ್ನು ಹಿಡಿಯಲು ಬಿದಿರು ಅಥವಾ ಅಡಿಕೆ ಮರದ ಸಲಾಕೆಯಿಂದ ತಯಾರು ಮಾಡುವ ಗೂಡು. a pattern made to catch small wild animals.

ಅಡ್ಡಿ (ಕ್ರಿ)– ತಕರಾರು, ತಡೆಮಾಡು, ತೊಂದರೆ ಕೊಡು, object, disturb.

ಅಡ್ಕೆಮಣೆ (ನಾ)– ಅಡಿಕೆ ತೆಗೆಯುವವರು ಅಡಿಕೆ ಮರದಲ್ಲಿ ಹಗ್ಗದಿಂದ ನೇತುಹಾಕಿ ಕುಳಿತುಕೊಳ್ಳುವ ಮಣೆ. a wooden plank on which the arecanut pluckers sit while plucking the nut.

ಅಡ್ಮೆ (ನಾ)– ಕೆಳಗೆ, below, under.

ಅಡೋಳಿ (ನಾ)– ಮದುಮಗನ ಜೊತೆ ಆತನ ಸಹಾಯಕನಾಗಿ ನಿಲ್ಲುವ ಭಾವಮೈದುನ (ದ.ಕ ಜಿಲ್ಲೆಯಲ್ಲಿ ಅಕ್ಕ/ತಂಗಿಯ ಗಂಡ, ಕೊಡಗಿನಲ್ಲಿ ಸೋದರ ಮಾವನ ಮಗ)

ಅಣ್‌ಂಗೈ (ನಾ)– ಮಾವಿನಕಾಯಿ ಉಪ್ಪಿನಕಾಯಿ, mango pickles.

ಅಣ್‌ಕ್ (ನಾ)– ಚಿಪ್ಪು ಹಂದಿ, pangolin

ಅಣ್‌ಂಗ್ (ಕ್ರಿ)– ಅಡಗು, hide
ಅಣ್‌ಂಗ್‌ಸ್ – ಅಡಗಿಸು, conceal.

ಅಣಿ (ನಾ)– ಭೂತ/ ದೈವದ ಕಿರೀಟ, crown of the daivam.

ಅತ್ತ (ಸ.ನಾ)– ಆಚೆ, ಆಕಡೆ, little away.

ಅತಿ (ನಾ.ವಿ) – ಜಾಸ್ತಿ, ಹೆಚ್ಚಾಯಿತು, ಅತಿ ಆಯಿತು, too much, over.
ಉದಾ: ಅವಂದ್ ಅತಿ ಆತ್.

ಅತಿರೇಕ (ನಾ)– ಮಿತಿಮೀರಿದ, excess, more than normal.

ಅರ್ತಿಕಾಯಿ (ನಾ)– ಅರ್ತಿಮರದ ಕಾಯಿ, country figs.

ಅರ್ತಿಕೊಡಿ (ನಾ)– ಅರ್ತಿ ಮರದ ಕಾಂಡದ ಕೊಡಿ (ತುದಿ)ಯನ್ನು ಪೂಜೆಗಳಲ್ಲಿ ಬಳಸುತ್ತಾರೆ.

ಅತ್ರೋಣ (ಕ್ರಿ)– ಕಿತಾಪತಿ, ಸಮಾಜಬಾಹಿರ ಕೆಲಸ/ ವರ್ತನೆ, nuisance, anti-social behaviour or work.

ಅರ್ಥಮಾಡ್ಕ (ಕ್ರಿ)– ಅಭ್ಯೆಸಿಕೊಳ್ಳು, ಮನನ ಮಾಡಿಕೊಳ್ಳು, understand, grasp.

ಅದ್ (ಸ.ನಾ)– ಅದು, it, that.

ಅದ್‌ರ್ (ಕ್ರಿ)– ಕಂಪಿಸು, ಅಲ್ಲಾಡು, ನಡುಗು, ಭೂಮಿ ಅದುರ್ದು, tremor, tremble, ದೇಹವನ್ನು ಕೆಲಸದಲ್ಲಿ ತೊಡಗಿಸಿಕೊಳ್ಳುವುದು, indulging in work.

ಅದಲ್‌ಬದಲ್ (ಕ್ರಿ)– ಬದಲಿ ಹೋಗುವುದು, ಅದಲುಬದಲಾಗುವುದು, exchange.

ಅದರ್ಲಿ (ಸ.ನಾ)– ಅದರಲ್ಲಿ
in that, on that.

ಅರ್ಧಮರ್ದ (ಕ್ರಿ.ವಿ)– ಅರ್ಧಮರ್ದ, ಪೂರ್ತಿಯಾಗದ, incomplete, unfinished.

ಅದ್ಕು ಇದ್ಕು (ಸ.ನಾ)– ಅದಕ್ಕೂಇದಕ್ಕೂ, for this and that

ಅಧ್ವಾನ (ಕ್ರಿ.ವಿ)– ಅವ್ಯವಸ್ಥೆ,
not systematic. not orgnised properly.

ಅಧಿಕ ಪ್ರಸಂಗ (ನಾ)– ಅಪ್ರಸ್ತುತ, ಅನಗತ್ಯ, ಅಸಂಬದ್ಧ, ಅನುಚಿತ ಅಥವಾ ಮಿತಿಗಿಂತ ಮೀರಿದ ಮಾತು ಹಾಗೂ ವರ್ತನೆ, impertinent, more than normal or unwanted speech or behaviour
ಅಧಿಕ ಪ್ರಸಂಗಿ impertinent person.

ಅಧೋಗತಿ (ನಾ)– ಅವನತಿ
down fall, decline, decay.

ಅನಾಹುತ (ನಾ)– ತೊಂದರೆ, ಅಪಘಡ, disaster, accident.

ಅನಿಷ್ಠ (ನಾ)– ಕೆಟ್ಟದ್ದನ್ನು ಅಥವಾ ದುರ್ದೆಸೆಯನ್ನು ತರುವವ
one who brings bad luck or distress.

ಅನಿಸು (ಕ್ರಿ) – ತನಗೆ ಅನಿಸಿದ್ದು, ತನಗೆ ತೋಚಿದ್ದು, ಭಾವಿಸಿದ್ದು,
opinion, opines, feelings.

ಅನುವು (ಕ್ರಿ)– ಅವಕಾಶ, ಅನುವು ಮಾಡಿಕೊಡು, opportunity, chance.

ಅಪ್ಪ (ನಾ)– ತಂದೆ, ಪಪ್ಪ, father.

ಅಪ್ಪದಿಟ್ಟ್ (ನಾ)– ಏಳು ಗುಳಿಗಳಿರುವ ಕಾವಲಿಯಲ್ಲಿ ತಯಾರಿಸಿದ ದುಂಡಗಿನ ಹಿಟ್ಟು, ಪದ್ದು.

ಅಪ್ಪಳ್ಸ್ (ಕ್ರಿ)– ಅಪ್ಪಳಿಸು, ಡಿಕ್ಕಿಹೊಡೆ, ಜೋರಾಗಿ ಬಂದು ತಾಗು
smash, hit, crash.

ಅಪ್ಪಿತಪ್ಪಿ (ಕ್ರಿ.ವಿ) - ಅಕಸ್ಮಿಕ, ತಿಳಿಯದೆ, ಅರಿಯದೆ, unknowingly, not intentional, accidental.

ಅರ್ಪುದು (ಕ್ರಿ) – ಬಸಿಯುವುದು, ಗಂಜಿ ಅರ್ಪುದು, filter, remove the wet part/ remove the watercontent.

ಅರ್ಪೆ (ನಾ)– ಆಲಿಕೆ, ಬಸಿಯುವ ಸಾಧನ, funnel, filtering equipment.

ಅಬರ್ಬುರ್ (ಕ್ರಿ.ವಿ)– ಅರೆಬರೆ, not clear, not complete. ಉದಾ: ಅಂವ ಹುಲ್ಲು ಅಬರ್ಬುರ್ ಹೆರ್ದುಟು.

ಅವರ್ತ್‌ಕುದ್ರು (ಕ್ರಿ)– ಅಡಗಿ / ಅವಿತು ಕುಳಿತುಕೊಳ್ಳು, sit hiding.

ಅಮ್‌ಕು (ಕ್ರಿ)– ಅದುಮಿಹಿಡಿ, ಒತ್ತಿಹಿಡಿ, hold tightly.

ಅಮುರ್ಸು (ಕ್ರಿ)– ಒತ್ತಿ ಹಿಡಿ, catch by putting physical pressure.

ಅಮೆ (ನಾ)– ಮಗು ಜನಿಸಿದ ಐದನೆ ದಿನದ ಶಾಸ್ತ್ರ ಪದ್ಧತಿ, ritual performed after five days of child birth.

ಅಮೆ (ನಾ)– ಒಂದು ಜಾತಿಯ ಬಿದಿರು, a kind of bamboo.

ಅಯ್ಯನ ಬಂಡೆ! (ಉದ್ಗಾರ) – ಸೋತು ಹೋಗಿ ಸುಸ್ತಾಗಿ ಕುಳಿತಾಗ ಹೇಳುವ ಉದ್ಗಾರ, an exclamation after defeat or losing.

ಅಯ್ಯೆ (ನಾ)– ಅಮ್ಮ, ತಾಯಿ, mother.

ಅರ್‌ಶಣ (ನಾ)– ಅರಸಿನ, turmeric.

ಅರಶಣ ಬಣ್ಣ (ನಾ)– ಅರಸಿನ ಬಣ್ಣ yellow colour.

ಅರ್‌ಶಣ ಕಾಮಾಲೆ (ನಾ)– ಅರಸಿನ ಕಾಮಾಲೆ ರೋಗ, jaundice, ಅರಸಿನ ಮಂಡಿಗೆ.

ಅರ್ಗಂಟ್ (ಕ್ರಿ.ವಿ)– ತರ್ಕ, ಹಟ, ಮೊಂಡುತನ, adamant, stubborn, obstinate.

ಅರಿ (ನಾ)– ಎರಡು ಕೈಗಳಲ್ಲಿ ಹಿಡಿಯಬಹುದಾದಷ್ಟು, quantity which could be hold in both hands. ಒಂದು ಅರಿಸೊಪ್ಪು, ನಾಲ್ಕು ಅರಿ= ಒಂದು ಹೊರೆ.

ಅರಿದು (ಕ್ರಿ)– ಅರೆಯು, grinding, wet pulverising, ಬೇರು ಅರಿದು (ಅರ್ದ್) ಕುಡಿ.

ಅರಿದು (ಕ್ರಿ)– ಅರೆಯುವುದು, flow down, ಸುರಿಯುವುದು, ಸ್ರವಿಸು, ಬೆವರು ಅರಿದು.

ಅರೆ (ನಾ.ವಿ)– ಅರ್ಧ, ಅರೆಜೀವ half, semi.

ಅರೆ! (ಉದ್ಗಾರ) – ಎಲಾ! ಎಂದು ಉದ್ಗರಿಸುವುದು, exclamation, oh!.

ಅರ್ವೆ (ನಾ) – ಬಟ್ಟೆ, cloth.

ಅರೆಂಜ (ನಾ)– ಮಲೆನಾಡಿನ ಹೊಳೆ, ತೋಡುಗಳಲ್ಲಿ ಕಂಡುಬರುವ ಉದ್ದ ಜಾತಿಯ ಮೀನು, ನೊಳು. a long fish of about one to two feet long found in the rivers of malnad area.

ಅಲ್ಪ (ಗು)– ಜಿಪುಣ, ಆಸೆಬುರುಕ, greedy person, stingy, a person with less knowledge, ಅಜ್ಞಾನಿ, ತಿಳುವಳಿಕೆಯ ಕೊರತೆ ಇರುವವ.

ಅರೆಪು (ನಾ)– ಹುಳಿಮೆಣಸು, ಪದಾರ್ಥಕ್ಕೆ ಬಳಸುವ ಕಡೆದ ಮಸಾಲೆ, grinded wet masala used for the curry.

ಅಲ್‌ಗ್ಸ್ (ಕ್ರಿ)– ಅಲುಗಾಡಿಸು shake violently.

ಅಲ್ಸಂಡೆ (ನಾ)– ಅಲಸಂಡೆ, lentils.

ಅಲ್ಲಾಡ್ಸ್ (ಕ್ರಿ)– ಅಲ್ಲಾಡಿಸು, shake.

ಅಲ್ಲಿ (ಸ.ನಾ)– ಆ ಜಾಗದಲ್ಲಿ there, in that place.

ಅಲ್ರ್ದು (ಕ್ರಿ)– ಅರಳು, blossom, ಹೂ ಅಲ್ರ್ದು, ಅಲ್ರಿದ (ಅರಳಿದ) ಹೂವು.

ಅವ್‌ತಾರ (ನಾ) – ಮರುಹುಟ್ಟು, incarnation ವೇಷಭೂಷಣ, costume, dress, ಬಾಹ್ಯ/ ದೈಹಿಕ ಚಹರೆ, physical appearance ಉದಾ: ನೋಡು ಅವನ ಅವ್‌ತಾರ!.

ಅವಮಾನ ಮಾಡ್ (ಕ್ರಿ)– ಅಪಮಾನ, ಅಗೌರವ, insult, disrespect.

ಅವ್ಲಕ್ಕಿ (ನಾ)– ಭತ್ತವನ್ನು ಬೇಯಿಸಿ, ಹುರಿದು, ಕುಟ್ಟಿ ಚಪ್ಪಟೆ ಮಾಡಿದ ಅಕ್ಕಿ, beaten rice, ಅವಲಕ್ಕಿ.

ಅವ್ವ (ನಾ) – ಅಮ್ಮ, ತಾಯಿ, mother

ಅವು (ಸ.ನಾ) – ಅವರು, they, ಅವುಕೆ– ಅವರಿಗೆ, them.

ಅವುಸಾನ (ನಾ)– ಸಾವಿನ ಸಮಯ, ಸಾವು, ಮರಣ, death, demise.

ಅಳ್ಕ್ (ಕ್ರಿ.ವಿ)– ಅಳುಕು, ಹಿಂಜರಿಕೆ, hesitation.

ಅಳ್‌ಂಚ್ (ಕ್ರಿ) – ಅಳುಂಚುದು, ನೀರಿನ ಒಳಗೆ ಅತ್ತಿತ್ತ ಓಡಾಡುತ್ತಾ ಕೆಸರು ಎಬ್ಬಿಸುವುದು.

ಅಳಂಬು (ನಾ)– ಅಣಬೆ, mushroom.

ಅಳ್ಚಿ (ಕ್ರಿ)– ಕೆಸರೆಬ್ಬಿಸು raise, muddy water.

ಅಳಿಗೆ (ನಾ)– ಪದಾರ್ಥ ಮಾಡುವ ಮಣ್ಣಿನ ಪಾತ್ರೆ, clay vessel used to cook dishes.

ಅಳ್ಗಿಲ್ (ನಾ)– ಅಳು, ಕೂಗು, ರೋಧಿಸು, sob, cry, weep.

ಅಳ್ತೆ (ಕ್ರಿ)– ಅಳೆಯು, measure.

ಅಳ್ಳೆ (ನಾ)– ಭುಜದ ಕೆಳಗಿನ/ ಎದೆಯ ಪಕ್ಕದ ಭಾಗ, axilla.

ಆ

ಆಂಕ್ರಿಕೆ (ನಾ)– ಭಾರಿ ತುರಿಕೆ ಉಂಟುಮಾಡುವ ಒಂದು ಗಿಡ, a plant which makes severe scratching.

ಆಂಬರ (ನಾ)– ತುಂಡು ಇಲ್ಲದ ಸಾಂಬಾರು, ಗಟ್ಟಿ ಸಾರು, gravy.

ಆಂಜುದು (ಕ್ರಿ)– ಮಿಂಚಿದಂತೆ ಕಾಣು, ಸರಿದಂತೆ ಕಾಣು. glimpse.

ಆಕಡೆ (ನಾ)– ಅತ್ತ, ಆಚೆಬದಿ, the other side, that side.

ಆಕಳ್ಸ್ (ಕ್ರಿ)– ಆಕಳಿಸು, yawn, ಆಕಳಿಕೆ (ನಾ)

ಆಕಿಲೆ (ಕ್ರಿ)– ಆಗಲಿಕ್ಕಿಲ್ಲ, ಆಗಲಾರದು, not possible, can't.

ಆಕು (ಕ್ರಿ)– ಆಗಬೇಕು, to be done, ಆಕುಂತ (ಕ್ರಿ)– ಆಗಬೇಕೆಂದು, have to be done.

ಆಗಲಿ (ಕ್ರಿ)– ಆಗಬಹುದು, ಆಗಿಹೋಗಲಿ, yes, you do it, OK, can be done.

ಆಗಿರ್ದು (ಕ್ರಿ)– ಆಗಿರಬಹುದು likely to be.

ಆಗಿನ/ನೆ (ನಾ)– ನೇಮ, ಕೋಲ, ನಡಾವಳಿ, ಜಾತ್ರೆಗೆ ಗೊನೆ ಕಡಿದ ನಂತರದ ದಿನಗಳಲ್ಲಿ ಮುಂದೆ ಆ ಕಾರ್ಯಕ್ರಮ ಮುಗಿಯುವ ತನಕ ಊರಿನಲ್ಲಿ ಯಾವುದೇ ಕಾರ್ಯಕ್ರಮ ನಡೆಯುವಂತಿಲ್ಲ ಹಾಗೂ ಮಾಂಸಾಹಾರ ಸೇವನೆ ನಿಷಿದ್ಧ holy days during the time of temple festivals or daiva kolam.

ಆಗುಟು/ಆವುಟು (ಕ್ರಿ)– ಆಗಿದೆ, completed.

ಆಗುಹೋಗು (ನಾ)– ಮನೆಯಲ್ಲಿ ನಡೆಯುವ ಕಾರ್ಯಕ್ರಮಗಳು/ ಚಟುವಟಿಕೆಗಳು, the programs, function and activities going on in the house.

ಆಗೊಳೆ (ಕ್ರಿ) – ಆಗಿದ್ದೇನೆ, I have become, ಉದಾ: ನಾ ಪೋಲಿಸ್ ಆಗೊಳೆ.

ಆಗೊಳೇಂತ (ಕ್ರಿ)– ಆಗಿದ್ದೇನೆಂದು, for having become.

ಆಗೊಳೆನಾ? (ಪ್ರ)– ಆಗಿದ್ದೇನಾ? Have I become?, ಆಗೊಳೊ (ಕ್ರಿ) – ಆಗಿದ್ದಾರೆ, have become.

ಆಚಾರಿ (ನಾ)– ಬಡಗಿ, ಮರದ ಕೆಲಸಗಾರ, carpenter.

ಆಚೆ (ನಾ)– ಅತ್ತ, ಆಕಡೆ, there, that side.

ಆಡ್ (ಕ್ರಿ)– ಆಟ ಆಡು, play.

ಆಡ್ (ನಾ)– ಆಡು, goat.

ಆಣೆಮಾಡ್ (ಕ್ರಿ)– ದೇವರನ್ನು/ ತನ್ನ ಆತ್ಮೀಯರನ್ನು ಹೇಳಿ ಪ್ರಮಾಣಿಕರಿಸುವುದು, swear.

ಆತ್ (ಕ್ರಿ)– ಆಯಿತು, yes, ok, possible

ಆತ್‌ಂತ (ಕ್ರಿ)– ಆಯಿತೆಂದು, will be done

ಆತ್ಲೆ (ಕ್ರಿ)– ಆಗಲಿಲ್ಲ, not done, couldnot.

ಆದು (ಕ್ರಿ)– ಆಗಬಹುದು, yes, OK, possible; ಆದುಲೆ– ಆಗಲಾರದು, ಆಗುವುದಿಲ್ಲ, not possible.

ಆನೆಕಾಲ್ (ನಾ)– ಆನೆಕಾಲು ರೋಗ, filariasis, elephantiasis.

ಆನೆಚಕ್ತೆ (ನಾ)– ಸಾಕಷ್ಟು ದೊಡ್ಡದಾದ ಎಲೆ ಹೊಂದಿರುವ ಔಷಧಿಯ ಗಿಡ, a medicated plant with quite a large leaf.

ಆನೆ ಘೀಳಿಡ್ದು (ಕ್ರಿ)– ಆನೆ ಕೂಗುವುದು, elephant trumpets.

ಆನೆ ಮುಟ್ಟಿ (ನಾ)– ನೆಲ ಹೊಡೆದು ಸಮತಟ್ಟು ಮಾಡುವ ಆನೆಯ ಪಾದದಂತಿರುವ ಮುಟ್ಟಿ (ಪೊಳಿಮಣೆ) ನೋಡಿ – ಪೊಳಿ ಮಣೆ.

ಆಪತ್ತ್ (ನಾ)– ಕಷ್ಟ, ಸಂಕಷ್ಟ difficulty, problem.

ಆಪು (ನಾ)– ಸೌದೆ ಒಡೆಯಲು ಬಳಸುವ ಕಬ್ಬಿಣದ ಸಾಧನ, a piece of sharp small and stout steel rod.

ಆಬರ್ಾಯ್ (ಕ್ರಿ)– ದೊಡ್ಡ ಸ್ವರದಿಂದ ಕಿರುಚು, cry with a loud voice.

ಆಯ (ನಾ)– ವಾಸ್ತುವಿಗೆ ಅನುಗುಣವಾಗಿ ಮನೆಯ ಸುತ್ತಳತೆಯ ಲೆಕ್ಕಾಚಾರ, measurement of the area of the house. ಉದಾ : ಗರ್ಭಆಯ, ಧ್ವಜಆಯ ಇತ್ಯಾದಿ.

ಆರ್ (ಕ್ರಿ)– ಆರು, ಆರ್ದ್ರ, ಒಣಗು, get dried. ಉದಾ: ಒಣ್‌ಗಿಕೆ ಹಾಕಿದ ಬಟ್ಟೆ ಆರ್ತ್, ಬಟ್ಟೆ ಆರಿಕೆ ಹಾಕೊಳೊ.

ಆರಣೆ (ನಾ)– ಉಡದಂತೆ ಕಾಣುವ ಓತಿ.

ಆರಾಟ (ನಾ)– ಜಾತ್ರೋತ್ಸವದ ಕೊನೆಯ ದಿನ ದೇವರ ಬಲಿ, ಜಳಕ, ಪ್ರಸಾದ ವಿತರಣೆಯ ಆಚರಣಾ ಉತ್ಸವ.

ಆಲ್ಸ್ (ಕ್ರಿ) – ಆಲಿಸು, listen, ಯೋಚಿಸು – think.

ಆರ್ವಾಡ್ (ಕ್ರಿ)– ಅಬ್ಬರ, ಆರ್ಭಟ, cry loudly, show power on others.

ಆವುಟ್ (ಕ್ರಿ)– ಆಗಿದೆ, finished, ಉದಾ : ಕೆಲಸ ಆವುಟು.

ಆಳ್ವುದು (ಕ್ರಿ)– ಸುಧಾರಿಸು, manage, ನಿಯಂತ್ರಿಸು, controle.

ಇ

ಇಂಗ್ (ಕ್ರಿ)– ನೀರು ಇಂಗುವುದು, soaking, quench, sucked by earth.

ಇಂಗ್ (ನಾ)– ಇಂಗು, ಸಂಭಾರ ಪದಾರ್ಥ, asafoetida.

ಇಂದ್ (ನಾ)– ಇಂದು, ಇವತ್ತು, today.

ಇಂದನಿ/ ಇಂದನಿಯಾ (ಸಂ)– ಗಂಡನನ್ನು ಕರೆಯಲು ಬಳಸುವ ಪದ, word used by the wife to call her husband.

ಇಂದಾ (ಸ.ನಾ)– ಇಕೊ
ಉದಾ: ಇಂದಾ ತಕ,
ಇಂದನೆ (ಏ.ವ), ಇಂದರಿ (ಬ.ವ).

ಇಂಬುಕೊಡು (ಕ್ರಿ)– ರಕ್ಷಣೆ ಕೊಡು, ಆಶ್ರಯ ಕೊಡು, give security, give shelter, ಒಳ್ಳೆಯದಾಗುವಂತೆ ಮಾಡು.

ಇಕ್ಕ್ (ಕ್ರಿ)– ಬಳಸು, serve, ಹೊಡಿ, beat.

ಇಕ್ಕಡೆ (ನಾ)– ಎರಡೂ ಕಡೆ, ಎರಡೂ ಬದಿ, on both side.

ಇಜ್ಪು (ಕ್ರಿ)– ಎಳೆದು ತೆಗೆ, pluck out. ಉದಾ: ಅಡ್ಕೆ ಇಜ್ಪುದು.

ಇಜ್ಜಿಲ್ (ನಾ)– ಅಂಗಳ, ಜಾಲು, yard of the house.

ಇಟ್ಟಿ (ಚಿಕ್ಕದು) (ನಾ)– ಸಿಗಡಿ, shrimp.

ಇಟ್ಟಿ (ದೊಡ್ಡದು) (ನಾ)– ಸಿಗಡಿ, prawns.

ಇಟ್ಟೆಂಜ (ನಾ)– ದೊಡ್ಡ ಎಲೆಯ ಒಂದು ಕಾಡುಗಿಡ.

ಇಟ್ಟೋ (ಕ್ರಿ)– ಬಿಸಾಡಿದರು, thrown by them.

ಇಡ್ (ಕ್ರಿ)– ಬಿಸಾಡು, throw, sling, ಇಡು.

ಇಡ್ತಲೆ (ನಾ)– ಎರಡೂಕಡೆ ತಲೆ ಇದೆ ಎಂದು ಭಾವಿಸಲಾಗುವ ಹಾವು, a snake, it is said that it has head on both sides.

ಇಡ್ಲಿ ಮಿಳ್ಳಿ (ನಾ)– ಇಡ್ಲಿ ಬೇಯಿಸುವ ಚಿಕ್ಕ ಪಾತ್ರೆ, a tiny pot used to bake idli.

ಇಣ್ಕ್ (ಕ್ರಿ)– ಇಣುಕಿ ನೋಡುವುದು, peep.

ಇರ್ಣ ಅಮಾವಾಸ್ಯೆ (ನಾ) – ಹಿರಣ್ಯ ಅಮಾವಾಸ್ಯೆ ಎಂಬ ಹಬ್ಬ, ಸೋಣ ತಿಂಗಳಲ್ಲಿ ಬರುವ ಅಮಾವಾಸ್ಯೆ.

ಇತ್ಲರೆ (ಕ್ರಿ)– ಇರದಿದ್ದರೆ, if I don't have.

ಇದ್ (ಸ.ನಾ)– ಇದು, this.

ಇದರ್ಲಿ (ಸ.ನಾ)– ಇದರಲ್ಲಿ, in this.

ಇದ್ದಂವ (ಕ್ರಿ)– ಸಂಪತ್ತು ಹೊಂದಿದವ, ಶ್ರೀಮಂತ, possesser, rich, well to do.

ಇರ್ದರ (ನಾ)– ಎರಡನೇ ಬಾರಿ, ಪುನಃ, once again, second time.

ಇದ್ದೊ (ಕ್ರಿ)– ಇದ್ದರು, ವಾಸಿಸುತ್ತಿದ್ದರು, was there, was present, was living by that time.

ಇನಾಮು (ನಾ)– ಬಹುಮಾನ, ಉಡುಗೊರೆ, prize, gift, presents.

ಇರ್ (ಕ್ರಿ)– ಇರು, ಅಲ್ಲಿ ಇರು, ಕಾದಿರು, ತಾಳು, wait, be patient, ಸುಮ್ಮನಿರ್ – keep quiet.

ಇರ್ಂಜಿರ್ (ನಾ)– ಗುಡ್ಡ ಕಾಡಿನಲ್ಲಿರುವ ಪೊದರು ಮತ್ತು ಬಳ್ಳಿ, bush cum creeper.

ಇರಾದೆ (ನಾ) – ಉದ್ದೇಶ, purpose, ಅಭಿಪ್ರಾಯ, opinion.

ಇರಿಕೆ (ಕ್ರಿ)– ಇರಲು, ವಾಸಿಸಲು, ನೆಲೆಸಲು, to stay, to live, to reside

ಇರಿಕಿಲೆ – ಇರಲಾರೆ, may not be.

ಇರುವೆ – ಇರುವೆನು, ಇದ್ದೇನು, will be there.

ಇರೊಮೊ – ಇರುವ, let us be.

ಇರೊಕು – ಇರಬೇಕು, likely to be, have to be there.

ಇರೊಮೋಂತ – ಇರುವ ಎಂದು, hope let us be.

ಇರ್ಕನ – ಇರುವಾಗ, when I have it.

ಇರುಮುಡಿ (ನಾ)– ಶಬರಿಮಲೆ ಯಾತ್ರಿಕರು ತಮ್ಮ ಯಾತ್ರೆಗೆ ಅವಶ್ಯವಿರುವ ಹಾಗೂ ಅಲ್ಲಿ ಅರ್ಪಿಸುವ ಕಾಣಿಕೆಗಳನ್ನು ಇರಿಸಿ ಮಾಡುವ ಕಪ್ಪು ಅಥವಾ ಕಾವಿ ಬಟ್ಟೆಯ ಕಟ್ಟು.

ಇರ್ಲ್ (ನಾ)– ರಾತ್ರಿ, ಕತ್ತಲೆ, night.

ಇಲ್ಲಿ (ಕ್ರಿ.ವಿ)– ಈ ಸ್ಥಳದಲ್ಲಿ, here, in this place.

ಇಲೆತ್ರ (ನಾ)– ಕರವಸ್ತ್ರ, ಚೌಕಬಟ್ಟೆ, handkerchief.

ಇಲ್ಲೆ (ಕ್ರಿ.ವಿ)– ಇದರಲ್ಲಿ ಇಲ್ಲ, ಏನೂ ಇಲ್ಲ, No, don't have.

ಇಸ್ (ಕ್ರಿ)– ಇರಿಸು, keep

ಇಸಿಕ – ಇರಿಸಿಕೊ, keep it with you.

ಇಸಿಕಣಕು – ಇರಿಸಿಕೊಳ್ಳಬೇಕು, keep it with.

ಇಸಿಕಂಬಡ – ಇರಿಸಿಕೊಳ್ಳಬೇಡ, don't keep with.

ಇಸ್‌ಕನ – ಇರಿಸಿಕೊಳ್ಳುವಾಗ, when I possess it.

ಇಸ್‌ಮುಳ್ಳು (ನಾ)– ಮಣ್ಣಿನ ಅಳತೆ ಮಾಡಲು ಬಳಸುವ ಚೂಪಾದ ಮುಳ್ಳುಗಳುಳ್ಳ ಸಾಧನ.
A fork like spade used to dig the cultivated land.

ಇಸೊಕು (ಕ್ರಿ)– ಇರಿಸಬೇಕು, have to be kept, ಇಸೊಕಾ? – ಇರಿಸಬೇಕಾ?

ಇಳ್ಕಂಡ್ (ಕ್ರಿ)– ಇಳಿದುಕೊಂಡು, ಕೆಳಗಿಳಿದು ಕೊಂಡುಹೋಗು,
go down, getting down.

ಇಳ್ಜಾರ್ (ನಾ.ವಿ)– ಇಳಿಜಾರು ಪ್ರದೇಶ, slope.

ಇಳಿ (ಕ್ರಿ)– ಕೆಳಗೆ ಇಳಿ, get down.

ಈ

ಈಂಚ್ (ಕ್ರಿ)– ಹಿಡಿಸೂಡಿ ತಯಾರಿಸಲು ಸೋಗೆಯಿಂದ ಕಡ್ಡಿ ತೆಗೆಯುವುದು.

ಈಂಚಣಿಗೆ (ನಾ)– ತಲೆಯಿಂದ ಹೇನು ತೆಗೆಯಲು ಬಳಸುವ ಬಾಚಣಿಗೆ, a kind of comb used to remove louse from the hair of the ladies.

ಈಂದ್ ಮರ (ನಾ) – ಈಚಲು ಮರ, ಬೈನೆಮರ, wild date tree, ಈ ಮರದ ಹಿಂಗಾರದಿಂದ ಶೇಂದಿ ತೆಗೆಯುತ್ತಾರೆ.

ಈಚಾರ್ (ನಾ)– ಆರಾಮ ಕುರ್ಚಿ, ಆರಾಮ ವಾಗಿ ಕುಳಿತುಕೊಳ್ಳಬಹುದಾದ ಕುರ್ಚಿ, easy chair, an easy chair made from wooden frame and thick cloth for sitting liesurely.

ಈಚೆ (ನಾ.ವಿ)– ಇತ್ತ, ಈ ಬದಿ, this side.

ಈಟ್ (ನಾ)– ಗೊಬ್ಬರ, fertilizer.

ಈಡ್ (ಕ್ರಿ)– ಬೇಟೆಯ ಗುರಿ, ಈಡ್ ನೋಡು – ಗುರಿ ನೋಡು, take position before shooting.

ಈಡ್ (ನಾ)– ಕೇಪು ಕೋವಿ (muscle loading gun)ಗೆ ಒಂದು ಹೊಡೆತಕ್ಕೆ ತುಂಬಿಸುವಷ್ಟು ಕೋವಿ ಮದ್ದು, material requried for one shot.

ಈಡ್ ಕಟ್ಟುವುದು (ಕ್ರಿ.ವಿ)– ಮನೆಯ ಭದ್ರತೆಗೆ ಕಟ್ಟುವ ಮಂತ್ರಿಸಿದ ವಸ್ತುಗಳು, ಅಥವಾ ದೇವರಿಗೆ ಹರಕೆ ಹೇಳಿಕೊಂಡಾಗ ಕಟ್ಟಿಡುವ ಹಣ.

ಉ

ಉಂಗಿಲ (ನಾ)– ಉಂಗುರ, ring.

ಉಂಡಳೆ (ಕ್ರಿ)– ಊಟ ಆಗಿದೆ, finished the meal.
ಉಂಡರೇ? ಉಂಡಾತಾ? ಉಂಡುಕಣಿ– ಊಟ ಮಾಡಿಕೊಳ್ಳಿ; ಉಂಡುಕ–ಊಟ ಮಾಡಿಕೊ, ಉಂಬದು–ಊಟ ಮಾಡು ವುದು – eating, ಉಂಬಕೆ – ಊಟ ಮಾಡುವುದಕ್ಕೆ to eat, ಉಂಬಕನ – while eating.

ಉಂಡಾಡಿ (ಗು) – ಸದಾ ತಿರುಗಾಡುವವ, ಕೆಲಸ ಇಲ್ಲದವ, ಸೋಮಾರಿ, wanderer, man without work.

ಉಂಡೆ (ನಾ)– ಉರುಟಾದ ತಿಂಡಿ, ಲಾಡು ಉಂಡೆ, ಸುಕ್ರುಂಡೆ, round eatable.

ಉಂಡೆ ಹುಳಿ (ನಾ)– ಮರದಲ್ಲಿ ಬೆಳೆಯುವ ಉರುಟಾದ ಹುಳಿಕಾಯಿ.

ಉಂಬಳಿ(ನಾ)–ದಾನವಾಗಿ ಅಥವಾ ಬಹುಮಾನ ವಾಗಿ ನೀಡಿದ ಅಥವಾ ದೊರೆತ ಭೂಮಿ, land given or received in the form of alms or reward, received in the form of alms or reward.

ಉಂಬುಳು (ನಾ)– ಜಿಗಣೆ, leach.

ಉಕ್ಕಪ್ಪ (ನಾ)– ಅಜ್ಜ, ತಾತ, ತಂದೆ ಅಥವಾ ತಾಯಿಯ ತಂದೆ ಅಥವಾ ಅವರಿಗೆ ಸಮಾನರು, ಬಂಧು ಮುದುಕ, grandfather, a relative old man.

ಉಕ್ರ್ಬ (ನಾ)– ಮಂತ್ರಿಸಿದ ಚಿಕ್ಕ ಉರುಟಾದ ಪೆಟ್ಟಿಗೆ, ತಾಯತ.

ಉಕ್ಕ್‌ಸ್ರ್ಬ (ಕ್ರಿ) – ಕುದಿಸು, boil.

ಉಗ್ಗವ್ವ (ನಾ) – ಅಜ್ಜಿ, ತಂದೆ ಅಥವಾ ತಾಯಿಯ ತಾಯಿ, ಅಥವಾ ಅವರಿಗೆ ಸಮಾನರು, ಬಂಧು ಮುದುಕಿ, grand mother, a relative old woman.

ಉಗ್ರಾಣಿ (ನಾ)– ಹಿಂದೆ ಗ್ರಾಮದ ರೆವಿನ್ಯೂ ಮುಖ್ಯಸ್ಥರಾದ ಶ್ಯಾನುಭೋಗರ ಸಹಾಯಕ assistant to the shanbhogue.

ಉಗಿ (ಕ್ರಿ)– ಉಗಿಯುವುದು, spit.

ಉರ್ಗಿಲ್ (ನಾ)– ಬಿದಿರಿನ ದಂಡುಗಳಿಂದ ಮಾಡಿದ ಗೇಟು.

ಉಗುರ್ (ನಾ)– ಉಗುರು, nail.

ಉಗುರ್ ಬಿಸಿ (ನಾ)– ನೀರು ಸಣ್ಣ ಬಿಸಿ ಯಾಗಿರುವುದು, luke warm water with light heat.

ಉಗುರ್‌ಸುತ್ತು (ನಾ)– ಕೈ ಉಗುರಿನ ಸುತ್ತು ಬರುವ ಹುಣ್ಣು. Whitlow soar which comes round the nails.

ಉಗ್ಗು (ನಾ)– ಚಿಕ್ಕ ಮಕ್ಕಳಿಗೆ ಅರೆದು ಕೊಡುವ ಅನ್ನ. food given to the little babies

ಉಗ್ರ್ಬ (ಕ್ರಿ)– ಊದು, blow, puff.

ಉಚ್ಚು (ನಾ)– ಕಚ್ಚುವಂತಹ ಕೀಟಗಳು, biting insects.

ಉಚ್ರ್ಬ (ಕ್ರಿ)– ಭೇದಿಮಾಡು, dysentery. ಉಚ್ಚೆಲ್ – ಭೇದಿ.

ಉಚ್ಚೆ (ನಾ)– ಮೂತ್ರ, urine.

ಉಚ್ಚೆ ಪೊಟ್ಟೆ (ನಾ)– ಮೂತ್ರಕೋಶ, urinery bladder.

ಉಜ್ಜಾಲ್ (ನಾ)– ಉಯ್ಯಾಲೆ, swing.

ಉಜಿರ್ ಕಣಿ (ನಾ)– ತೋಟಗಳಲ್ಲಿ ಸದಾ ನೀರು ಇಳಿದು ಹೋಗುವಂತೆ ಮಾಡುವ ಆಳವಾದ ಕಣಿ. A deep gutter inside the garden so that the flooded water flows freely during the monsoon.

ಉಜುಂಬು (ಕ್ರಿ)– ಗಾಢವಾಗಿ ನೆಕ್ಕುತ್ತಾ ಹೀರು, ಚೀಪು, suck deeply.

ಉಟ್ಟಾ? (ಕ್ರಿ) – ಉಂಟಾ? ಇದೆಯಾ?
Do you have?

ಉಟ್ಟು (ಕ್ರಿ)– ಇದೆ, ಉಂಟು,
I have, possess.
ಉಟ್ಟು ಗಡ – ಉಂಟಂತೆ.

ಉಟ್ಟು (ಕ್ರಿ)– ಧರಿಸು, ಉಟ್ಟುಕೊ, ಸೀರೆ ಉಟ್ಟು ಬಾತ್, Wear, ಉಟ್ಟುಕ – ಧರಿಸಿಕೊ.

ಉಡಾಳ (ಗು)– ಬೇಜವಾಬ್ದಾರಿ,
irresponsible.

ಉಡಿದಾರ (ನಾ)– ಸೊಂಟಕ್ಕೆ ಕಟ್ಟಿಕೊಳ್ಳುವ ದಪ್ಪನೆಯ (ಪಟ್ಟೆ) ನೂಲು. G- string.

ಉಡು (ಕ್ರಿ) – ಧರಿಸು, Wear.
ಉದಾ : ಸೀರೆ ಉಡು

ಉಡು/ಉಡ (ನಾ) – ಹೋಳಿಕೆಯಂತಹ ಹಲ್ಲಿ ಜಾತಿಗೆ ಸೇರಿದ ಪ್ರಾಣಿ, Ghorpad, ಅನಿಷ್ಟದ ಸಂಕೇತ

ಉಣು (ಕ್ರಿ)– ಊಟಮಾಡು, ತಿನ್ನು, eat.
ಉಣ್ಸು – ಉಣಿಸು, ತಿನ್ನಿಸು,
ಮೊಲೆಉಣ್ಸು. ಉಣಿ– ಊಟಮಾಡಿ.

ಉಣ್ಂಗ್ (ನಾ)– ಉಳುಂಗು, flea

ಉರ್ತ (ಕ್ರಿ)– ಮಿತಿಮೀರಿದ ತುಂಟತನ,
ಉರ್ತಬಾದು,
over mischievousness.

ಉದುರು (ಕ್ರಿ)– ಕೆಳಗೆಬೀಳು, ಉದಾ: ಗಾಳಿ ಬಂದ್ ಹಣ್ಣ್‌ಗ ಎಲ್ಲಾ ಉದುರಿಬೀತ್,
fall down naturally.

ಉದುರ್ಸು (ಕ್ರಿ)– ಕೆಳಗೆ ಬೀಳಿಸು, ಉದುರಿಸು.
made to fall by force.

ಉದ್ದು (ನಾ)– ಉದ್ದು ಎಂಬ ದ್ವಿದಳ ಧಾನ್ಯ, ಹುಳಿ ಹಿಟ್ಟು ಮಾಡಲು ಅಕ್ಕಿಯ ಜೊತೆ ಬಳಸುತ್ತಾರೆ.
Pulse used with rice to make dosa, idli etc. Black gram

ಉದ್ದು (ಕ್ರಿ)– ತಿಕ್ಕು, ಉಜ್ಜು, rub.

ಉಪದ್ರ (ಕ್ರಿ)– ಕಿರುಕುಳ, ತೊಂದರೆ,
disturb, create problem.

ಉಪ್ಪಣ (ನಾ)– ಒಣಗಿಸಿದ ಬೇಟೆ ಮಾಂಸ,
dry game meat.

ಉಪ್ಪಣ ಬೊಡ್ಡ (ನಾ)– ಮಲೆನಾಡಿನಲ್ಲಿ ಕಂಡುಬರುವ ಹಕ್ಕಿ. a kind of bird found in the malnad woods.

ಉಪ್ಪರಿಗೆ (ನಾ) – ಮಾಳಿಗೆ, balcony,
ಮೇಲಂತಸ್ತು, Top floor.

ಉಪಾಸ (ನಾ)– ಉಪವಾಸ, fasting.

ಉಪ್ಪು (ನಾ)– ಉಪ್ಪು, salt, ಲವಣ.

ಉಪ್ಪು ತಿಂದ ಮನೆ (ನಾ) – ಊಟ ಮಾಡಿದ ಮನೆ, ಅನ್ನ ತಿಂದ ಮನೆ, ಋಣಭಾರ ವಿರುವ ಮನೆ. House with moral obligation, owe so much to that house.

ಉಪ್ಪುಕರಿ (ನಾ)– ಉಪ್ಪು, ತೆಂಗಿನಕಾಯಿ ಹುರಿ ಹಾಕಿ ಎಣ್ಣೆಯಲ್ಲಿ ಕರಿದ ಪದಾರ್ಥ,
roasted dish.

ಉಪ್ಪು ತೋಳೆ (ನಾ) – ಹಲಸಿನ ಹಣ್ಣಿನ ತೋಳೆಯನ್ನು ಕೆಡದಂತೆ ಉಪ್ಪಿನಲ್ಲಿ ಹಾಕಿ ಇರಿಸುವುದು,
jackfruit slices preserved in salt.

ಉಬರ್ ಹತ್ತುದು (ಕ್ರಿ)– ಮಳೆಗಾಲದಲ್ಲಿ ಭಾರಿ ಮಳೆ ಬಂದಾಗ ಮೊಟ್ಟೆ ಇಡಲು ಮೀನುಗಳು ಹೊಳೆಗಳಿಂದ ಚಿಕ್ಕ ಪುಟ್ಟ ತೋಡುಗಳ ಮುಖಾಂತರ ಮೇಲಕ್ಕೆ ಸಾಗುವುದು.

ಉಬರ್ ಮೀನ್ (ನಾ) – ಉಬರ್ ಹತ್ತುವ ಮೀನುಗಳು,
fishes which come to the small streams to lay eggs during the monsoon.

ಉಬ್ಬೆಸ (ಕ್ರಿ.ವಿ)– ತಿಂದು ಜಾಸ್ತಿ ಆದ ಸ್ಥಿತಿ,
over eating position,
ಗೂರಲು ರೋಗ, asthama.

ಉಬ್ರುಳಿ (ನಾ.ವಿ)– ನಗ್ನ, ಬೆತ್ತಲೆ, nude, with out any clothes on the body.

ಉಬ್ಬೆಲ (ನಾ.ವಿ)– ಹೊಗಳಿ, ಮುಖಸ್ತುತಿ ಮಾಡಿದಾಗ ಮಾನಸಿಕವಾಗಿ ಉತ್ತೇಜನಗೊಳ್ಳುವವ,
person who gets elated while flattering.

ಉಬ್ಬೆಲ (ನಾ.ವಿ)– ಅವಸರ ಮಾಡುವವ,
one who always in a hurry.

ಉಮ್ಮತ್ತ (ನಾ)– ಒಂದು ಔಷದೀಯ ಸಸ್ಯ, ಕೆಪ್ಪಾಟ್ರಾಯಕ್ಕೆ ಚಿಕಿತ್ಸೆ ನೀಡಲು ಇದರ ಎಲೆಯನ್ನು ಅರೆದು ಲೇಪಿಸುತ್ತಾರೆ ಹಾಗೂ ಕುಡಿಯಲು ನೀಡುತ್ತಾರೆ,
Datura a medicated plant used in the treatment of mumps.

ಉಮ್ಮಪ್ಪ (ಕ್ರಿ.ವಿ)– ನನಗೇನು ಆ ಬಗ್ಗೆ ತಿಳಿದಿಲ್ಲ,
dont't know any thing about it.

ಉಮಿ (ನಾ)– ಭತ್ತದ ಸಿಪ್ಪೆ, bark or husk of the paddy.

ಉಮಿಕರಿ (ನಾ) – ಭತ್ತದ ಸಿಪ್ಪೆಯಿಂದ ಮಾಡಿದ ಕರಿ. ಇದನ್ನು ಗೊಬ್ಬರವಾಗಿ ಬಳಸುತ್ತಾರೆ, soot of the husk.

ಉಮ್ಮುಣಿ (ನಾ)– ಚಿಕ್ಕ ನುಸಿ,
tiny mosquito

ಉಮೇದ್ (ಕ್ರಿ.ವಿ)–ಉತ್ಸಾಹ, ಆಸಕ್ತಿ, ಹುರುಪು,
interest, motivation spirit.

ಉರಿ (ಕ್ರಿ)– ಸುಡು, ಜ್ವಾಲೆ, ಬೆಂಕಿ ತಾಗಿದಾಗ ಆಗುವ ಉರಿ, burning sensation.

ಉರಿ (ನಾ)– ದ್ವೇಷ, ಸಂಕಟ, ಕೆರಳು,
enrage, hatredness.

ಉರಿ ಉಟ್ಟಾಣ ಬಿಸಿಲ್ (ನಾ.ವಿ)– ಧಗಧಗನೆ ಉರಿವ ಬಿಸಿಲು,
scorching sunshine.

ಉರಿಕೊಳ್ಳಿ (ನಾ.ವಿ) – ಭಾರಿ ತುಂಟ, ಕಿಡಿಗೇಡಿ, ಅಧಿಕ ಪ್ರಸಂಗಿ,
very very mischievous.

ಉರಿದುಂಡು (ನಾ.ವಿ)– ಸಿಡುಕು ಮುಖ, ಕೆರಳಿದ ಮುಖ, ಉರಿಮುಸುಂಡು,
angry face, enraged face.

ಉರಿಯೊಳು (ನಾ)– ಕಾಡುಪಾಪ, ದೊಡ್ಡ ಕಣ್ಣಿನ ಕಪಿಯಂತಹ ಅತ್ಯಂತ ಸೌಮ್ಯ ಸ್ವಭಾವದ ಕಾಡುಪ್ರಾಣಿ, loris.

ಉರು (ಕ್ರಿ.ವಿ)– ಉರು ಹೊಡೆಯುವುದು, ಬಾಯಿಪಾಠ ಮಾಡು, by heart, memorize.

ಉರುಂಟು (ನಾ.ವಿ) – ದುಂಡಗಿರುವ, ಉರುಟು, round,
ಉರುಟುಮುಖ – round face.

ಉರುಂಬಿ ಓಡ್ (ಕ್ರಿ)– ಹಿಡಿತದಿಂದ ತಪ್ಪಿಸಿ ಕೊಂಡು ಹೋಗು, escape from the clutches. ಉದಾ: ಪೋಲಿಸರ ಹಿಡ್ತಂದ ಕಳ್ಳ ಉರುಂಬಿ ಓಡ್ತ್.

ಉರ್‌ಡ್ (ಕ್ರಿ)– ಉರುಡಾಡು, ನೆಲದಮೇಲೆ ಉರುಳಾಡುತ್ತಾ, ಜನರ ಗುಂಪಿನ ಮಧ್ಯೆ ನುಗ್ಗುತ್ತಾ.

ಉರುವೆ (ನಾ)– ಮಿಡಿ, tender nut, ಅಡಿಕೆ ಉರುವೆ – ಅಡಿಕೆ ಮಿಡಿ.

ಉರ್ಲಿ (ನಾ)– ಕಲ್ತಪ್ಪ ಮಾಡುವ ಹಿತ್ತಾಳೆ ಪಾತ್ರೆ.

ಉರ್ಲು(ನಾ)– ಉರುಳು, ಕಾಡುಪ್ರಾಣಿಗಳನ್ನು ಹಿಡಿಯಲು ಹಗ್ಗದಿಂದ ಉರುಳು ಹಾಕುವುದು.

ಉಸ್‌ರಾಟ (ಕ್ರಿ)– ಉಸಿರು ತೆಗೆಯುವುದು ಮತ್ತು ಬಿಡುವುದು, breathe, respirate.

ಉಸಾಬರಿ (ನಾ) – ಜವಾಬ್ದಾರಿ, ಹೊಣೆಗಾರಿಕೆ, responsibility.

ಉಸ್ಕ್‌ಡಂ (ಕ್ರಿ.ವಿ)– ಮಾತೆತ್ತದೆ ಸುಮ್ಮನಾಗು, ಏನು ಮಾಡಬೇಕೆಂದು ತೋಚದಾಗು, keep silent with out reaction, do not know what to do.

ಉಳ್ಕ/ಒಳ್ಕ (ಕ್ರಿ)– ಉಳಿದುಕೊಳ್ಳು, ಉಳಿ, stay, halt. ಉದಾ: ಇಂದು ಉಳ್ಕಂಡ್ ನಾಳೆ ಹೋಗು.

ಉಳ್ಳಾಕ್ಲು (ನಾ) – ಈರ್ವೆರ್ ಉಳ್ಳಾಕ್ಲು ಎಂದು ಆರಾಧಿಸಲ್ಪಡುವ ತುಳುನಾಡಿನ ದೈವಗಳು the twin divine dieties worshipped by the people of Tulunad.

ಉಳಿ (ಕ್ರಿ)– ಬದುಕಿ ಉಳಿ, survive.

ಉಳಿ (ನಾ)– ಬಡಗಿ ಮರಕೆತ್ತಲು ಬಳಸುವ ಉಪಕರಣ, chisel.

ಉಳ್ಕು (ಕ್ರಿ)– ನರ ಹೊರಳುವುದು, sprain.

ಉಳ್ಸು (ಕ್ರಿ)– ಉಳಿತಾಯ ಮಾಡು, save.

ಉಳ್ಳುಕಿಣೆ (ಕ್ರಿ.ವಿ) – ಒಳಗಿಂದೊಳಗೆ ಉಪಾಯ ಮಾಡುವುದು, ಇತರರಿಗೆ ಅರಿವಾಗದಂತೆ ವಂಚಿಸುವುದು, deceive without one's knowledge

ಊ

ಊಂದು (ಕ್ರಿ)– ತಳ್ಳು, ದೂಡು, push.

ಊಚು (ನಾ.ವಿ)– ಉತ್ತಮ, ಉತ್ಕೃಷ್ಟ, of good quality, extremely good.

ಊದು ಬತ್ತಿ (ನಾ)– ಅಗರ್‌ಬತ್ತಿ. Agarbathi.

ಊನೆ (ನಾ.ವಿ)– ಸೂನೆ, ಕೊಂಕು, ಲೋಪ, find fault with; ಊನ– ಅಂಗವಿಕಲತೆ, damage, ಉದಾ: ಅಂವನ ಕಾಲೊಂದು ಊನ. ಅಂವಂಗೆ ಯಾವುದೇ ಊನೆ ಇಲ್ಲೆ.

ಎ

ಎಂತಕೆ? (ಪ್ರ) – ಏಕೆ? ಏಕಾಗಿ? Why for?

ಎಕ್ಕ್‌ಡಿಕೆ (ಎಕ್ಕ್‌ಳಿಕೆ) (ನಾ)– ಬಿಕ್ಕಳಿಕೆ, hiccup

ಎಕ್ಕ್‌ಳ್‌ಸ್ (ಕ್ರಿ)– ತುದಿಗಾಲಿನಲ್ಲಿ ನಿಂತು ಎತ್ತರದಲ್ಲಿ ವಸ್ತುವನ್ನು ಹುಡುಕುವುದು.

ಎರ್ಕ್ (ಕ್ರಿ)– ನೀರು ಹರಿದು ಬಂದು ತುಂಬುವುದು, flooding of water ಉದಾ: ಕಟ್ಟಲಿ ನೀರ್ ಎರ್ಕಿಟು.

ಎಕ್ಕಡ (ನಾ)– ಚಪ್ಪಲಿ, ಪಾದರಕ್ಷೆ, chappal, slippers.

ಎಗ್ಗೆ (ನಾ)– ಗಿಡದಲ್ಲಿ ಕೊಂಬೆ ಒಡೆಯುವುದು, tender branches in a tree.

ಎಡವಟ್ಟ್ (ಕ್ರಿ.ವಿ)– ತಿಳಿದು, ತಿಳಿದು ತಪ್ಪು ಮಾಡುವುದು.
self mistake, ತೊಂದರೆ ಮಾಡಿಕೊಳ್ಳು.

ಎಡ್ಗ್ (ಕ್ರಿ)– ಎಡವು, tread.

ಎಡೆ (ನಾ)– ಎರಡು ವಸ್ತುಗಳ ಮಧ್ಯೆ ಇರುವ ಜಾಗ, place in between two things, space, ಅವಕಾಶ, opportunity.

ಎಡೇಲಿ (ನಾ)– ಅವುಗಳ/ ಇವುಗಳ ಮಧ್ಯೆ, in the midst of this/ that.

ಎಡೆಇಕ್ಕ್ (ಕ್ರಿ)– ಭೂತ ಪ್ರೇತಾದಿಗಳಿಗೆ ಕೋಳಿ ಪದಾರ್ಥ ಮತ್ತು ಹಿಟ್ಟು ಮಾಡಿ ಬಳಸುವುದು.

ಎಣ್ಣೆಕೊಡ್ದು (ಕ್ರಿ)– ಭೂತಕ್ಕೆ ಎಣ್ಣೆ ಕೊಡ್ದು, ಭೂತ ಕಟ್ಟುವವರಿಗೆ ಭೂತ ಕಟ್ಟಿಸುವವರು ಎಣ್ಣೆ ಕೊಡುವುದರ ಮೂಲಕ ಅಧಿಕೃತ ಆದೇಶ ನೀಡುವುದು, giving official order to bhootha performers to perform bhootha kolam by giving oil.

ಎತ್ತ್ (ಕ್ರಿ)– ಸಾಕಾಗು, ತಲುಪುವುದು, reach, ಎತ್ತಿಟು – ಸಾಕಾಗಿದೆ. ಎಲ್ಲವ್ಕ ಎತ್ತಿಟು – ಎಲ್ಲರಿಗೂ ಸಾಕಾಗಿದೆ, ತಲಪಿದೆ. ಎತ್‌ಕ್‌ನ – ತಲುಪಿದಾಗ.

ಎತ್ತ್ (ಕ್ರಿ)–ಎತ್ತುವುದು, ಕಾಲು ಎತ್ತುವುದು, lift.

ಎತ್ತ್ (ನಾ)– ಎತ್ತು, ಹೋರಿ, ox.

ಎತ್ತ್‌ತಿತ್ತ್ (ಕ್ರಿ)– ಸಾಕಾಗುತ್ತಿತ್ತು, would be sufficient, enough.

ಎತ್ತ್‌ತಿತ್ತ್‌ಲೆ (ಕ್ರಿ)– ಸಾಕಾಗುತ್ತಿರಲಿಲ್ಲ, would not be enough, insufficient.

ಎದ್‌ರ್ಸ್ (ಕ್ರಿ)– ಎದುರಿಸು, face it.

ಎದ್ರ್ (ಕ್ರಿ)– ಏಳು, ಎದ್ದ, wake up.

ಎದ್ರ್‌ಸ್ (ಕ್ರಿ)– ಏಳಿಸು, ಎಬ್ಬಿಸು make him to awake.

ಎದೆ ಒಡ್ಡಿಕಂಡ್ (ಕ್ರಿ.ವಿ.)– ಎದೆಯುಬ್ಬಿಸಿ, ಮುಂದೆ ಬರು ಉದಾ: ಅಂವ ಎದೆ ಒಡ್ಡಿಕಂಡ್ ಬಾತ್, come with all courage as if to attack.

ಎಪ್ಪುರ್ (ಗು)– ಜಿಪುಣ, ಆಸೆಬುರುಕ, stingy, greedy.

ಎಯ್‌ಪಂಜಿ (ನಾ)– ಮುಳ್ಳು ಹಂದಿ, porcupine.

ಎರುಮೈಂದ (ಗು)– ಬೋಧಾಳ, inactive man, a person without interest, ಅಸಡ್ಡೆಯಿಂದ ಕೂಡಿದ, negligent.

ಎಲ್ಲವು (ಸ.ನಾ)– ಎಲ್ಲರು, all the people ಸರ್ವರೂ.

ಎಲಾಡ್ಕೆ (ನಾ)– ವೀಳ್ಯ, ವೀಳ್ಯದೆಲೆ + ಸುಣ್ಣ + ಅಡಿಕೆ ಹೋಳುಗಳನ್ನು ಸೇರಿಸಿ ಮೆಲ್ಲಲು ಬಳಸುವುದು. (ನೋಡಿ–ಬೀಡ) betel laves +lime+arecanut pieces for chewing.

ಎಲಿ (ನಾ)– ಇಲಿ, rat.

ಎಲಿ ಪಾಷಾಣ (ನಾ)– ಇಲಿಗಳನ್ನು ಕೊಲ್ಲಲು ಬಳಸುವ ವಿಷ, poison with arsenic used to kill the rats.

ಎಲು (ನಾ)– ಎಲುಬು, ಮೂಳೆ, bone.

ಎಲೆನಾಗರ (ನಾ)– ಎಲೆ, ಬಾಳೆಲೆಗಳಲ್ಲಿ ಕಂಡುಬರುವ ವಿಷಜಂತು, asp.

ಎಸ್ಂಡ್ (ನಾ)– ಏಡಿ, crab.

ಎಸ್ಳ್ (ನಾ)–ಹೂವಿನ ಎಸಳು, ದಳ, petal.

ಎಳ್ಕ್ಸ್ (ಕ್ರಿ)– ಎಬ್ಬಿಸು, ಕಿತ್ತುತೆಗೆ, remove.

ಎಳ್ತ್ (ನಾ)– ಎಳೆಯ, ಬಲಿಯದ, tender.

ಎಳ್ಪ್ (ಕ್ರಿ)– ಅಗೆಯುವುದು, ಎಳ್ಳುವುದು, dig, ತೋಡು.

ಎಳ್ಪ್ (ನಾ)– ಎಳ್ಳು, sesame seed.

ಎಳ್ಪ್ಸ್ (ಕ್ರಿ)– ಎಳ್ಳಿಸು, ಅಗೆಯಿಸು, made to dig.

ಎಳ್ಕಂಡ್ (ಕ್ರಿ)– ಎಳೆದುಕೊಂಡು, pulling on.

ಎಳಿ (ಕ್ರಿ)– ಎಳೆಯುವುದು, pull. ಉದಾ: ಗಾಡಿ ಎಳಿ. ಎಳಿ– ಹೀರಿಕೊಳ್ಳು, ಉದಾ: ಇದಕ್ಕೆ ಉಪ್ಪು ಎಳ್ದುಟು, ಇದಕ್ಕೆ ಉಪ್ಪು ಎಳ್ತ್ಲೆ.

ಏ

ಏಂಟ್ (ಕ್ರಿ)– ಕುಂಟುತ್ತಾ ನಡೆ, hobbling.

ಏಕೆ?/ ಯಾಕೆ? (ಪ್ರ)– ಏಕೆ? Why for?
ಏಕೆಂತೇಳ್ರೆ – ಏಕೆಂದರೆ?
ಏಕೇಂತ– ಏಕೆಂದು?

ಏಣಿ (ನಾ)– ಮೇಲಕ್ಕೆ ಹೋಗಲು ಬಳಸುವ ಸಾಧನ, ladder.

ಏಣೆಲು (ನಾ) – ಮಳೆ ಬಿದ್ದ ತಕ್ಷಣ ಆರಂಭಿಸುವ ಮೊದಲ ಭತ್ತದ ಬೆಳೆ, first paddy crop soon after the rainfall.

ಏದುದು (ಕ್ರಿ)– ಹೊಂದಿಕೊಳ್ಳು, ಸುಧಾರಿಸಿ ಕೊಳ್ಳು, ನಿಭಾಯಿಸು,
adjust, manage.

ಏನ್? (ಪ್ರ) – ಏನು?
what?

ಏನ್ನೆ? (ಪ್ರ) – ಹಿರಿಯರು ಕಿರಿಯ ಹುಡುಗಿಯರನ್ನು ಮಾತನಾಡಿಸುವ ರೀತಿ (ಏ.ವ.), ಹೇಗಿದ್ದಿಂಯಾ? ಎಂಬ ಅರ್ಥದಲ್ಲಿ ಈ ರೀತಿ ಕೇಳುತ್ತಾರೆ.
How are you? ಚೆನ್ನಾಗಿದ್ದಿಯಾ?

ಏನ್ರಾ?/ ಏನ್ಯಾ (ಪ್ರ)– ಹಿರಿಯರು ಕಿರಿಯ ಹುಡುಗರನ್ನು ಅಥವಾ ಗೆಳೆಯರು/ ಆಪ್ತರು ಒಬ್ಬರನ್ನೊಬ್ಬರು ಮಾತನಾಡಿಸುವ ರೀತಿ. (ಏ.ವ.); ಹೇಗಿದ್ದಿಯಾ?
How are you? ಚೆನ್ನಾಗಿದ್ದಿಯಾ?.

ಏನಿಲ್ಲೆ (ಕ್ರಿ)– ಏನೂ ಇಲ್ಲ,
nothing, don'thave anything.

ಏನುಟ್ಟು (ಕ್ರಿ)– ಏನು ಇದೆ?
What do you have?

ಏರ್ಪಾಡ್ (ಕ್ರಿ)– ವ್ಯವಸ್ಥೆ ಮಾಡು,
arrange.

ಏಪೆ (ನಾ)– ಗ್ರಾಮೀಣ ಪ್ರದೇಶದ ತೋಡುಗಳ/ ತೊರೆಗಳ ಸಣ್ಣಪುಟ್ಟ ಜಲಪಾತಗಳಲ್ಲಿ ಉಬರ್ ಮೀನುಗಳನ್ನು ಹಿಡಿಯಲು ಬೆತ್ತ/ ಓಟೆ / ಬಿದಿರಿನ ಸಲಾಕೆಯಿಂದ ಮಾಡಿದ ಆಯತಾಕಾರದ ಬುಟ್ಟಿ. (ನೋಡಿ : ಉಬರ್ ಹತ್ತುದು, ಉಬರ್ ಮೀನು), a kind of basket to catch fish at the water falls in the tiny streams.

ಏಮೆ (ನಾ)– ಆಮೆ, tortoise.

ಏಲಂ (ನಾ)– ಹರಾಜು, auction.

ಏವುದು (ಕ್ರಿ)– ಉತ್ಸಾಹ, ಆಸಕ್ತಿ, interest, zeal, spirit, ಹುರುಪಿನಿಂದ ಕೆಲಸ ಮಾಡುವುದು, work with one's very best.

ಏಳ್ಂದ್‌ಲೆ (ನಾ)– ಗುಂಪು ಗುಂಪಾಗಿ ಇರುವ ತಿಳಿ ಹಸಿರು ಬಣ್ಣದ ಕಾಡುಹಕ್ಕಿ, light green colored birds living in flocks in the malnad forests.

ಏಳಿಗೆ (ನಾ)– ಅಭಿವೃದ್ಧಿ, ಪ್ರಗತಿ, ಅಭ್ಯುದಯ, progress, development, prosperity.

ಐ

ಐಸ್‌ರ (ನಾ.ವಿ)– ದೊಡ್ಡಸ್ತಿಕೆ, superiority complex.

ಐನ್‌ಮನೆ (ನಾ)– ಹಿಂದೆ ಅವಿಭಕ್ತ ಕುಟುಂಬದವರು ವಾಸ ಮಾಡುತ್ತಿದ್ದ ನಾಲ್ಕು ಸೂತ್ರದ ಮೂಲ ಮನೆ, quadrangle shaped ancient house where the joint family lived together.

ಐಮರ (ನಾ) – ಜಗಲಿಯಲ್ಲಿನ ಎತ್ತರವಾದ ಮರದ ಆಸನ, ಮರದ ತಿಟ್ಟೆ, fixed wooden seat in the verandah.

ಒ

ಒಂಟಿ (ನಾ)– ಏಕಾಂಗಿ, lonely, alone, ಕಿವಿಯ ಆಭರಣ, ear ornament.

ಒಂಟಿ ನಳಿಗೆ ಕೋವಿ (ನಾ)– ಒಂದು ನಳಿಗೆ ಇರುವ ಕೋವಿ, single barrel gun.

ಒಂಟಿಜ (ಸ.ನಾ) – ಒಂಟಿ ಸಲಗ, ಒಬ್ಬನೇ ಇರುವವ, only one.

ಒಂದುದು (ಕ್ರಿ)– ಒಂದು ಬದಿಯಲ್ಲಿ ಸೇರು, pushed to one side.

ಒಕ್ಕಣೆ (ನಾ.ವಿ) – ಹೇಳುವ ಶೈಲಿ ಮಾತನಾಡುವ ವಿಧಾನ, ಬರೆಯುವ ಶೈಲಿ, style of speaking and writing.

ಒಕ್ಕು (ಕ್ರಿ)– ಕೇರು, ತೋಡು, ಉದಾ: ಕೋಳಿ ಒಕ್ಕುದು, ಕಾಲಿನಿಂದ/ ಕೈಯಿಂದ ಕೆರೆಯುವುದು. burrow with hands or legs.

ಒಕ್ಲು (ನಾ)– ಒಕ್ಕಲು, ವಾಸ, ಬಾಡಿಗೆಗೆ ಇರುವವ, ಗೇಣಿಗೆ ಬೇಸಾಯ ಮಾಡುವವ, tenant.

ಒರ್ಕೆ (ನಾ)– ಪುರುಸೊತ್ತು, ವಿರಾಮ, liesure, rest.

ಒರ್ಕೆನ್ನೆ (ನಾ)– ತಲೆಯ ಒಂದು ಭಾಗದಲ್ಲಿ ಪದೇ, ಪದೇ ತಲೆ ನೋವಾಗುವುದು, migraine.

ಒರ್ಗ್ (ಕ್ರಿ)– ವಾಲು, ಒರಗು, ಬಾಗು, lean or rest on one side.

ಒಗ್ಗರಣೆ ಹಾಕುವುದು (ಕ್ರಿ)– ಪದಾರ್ಥಗಳ ರುಚಿ ಹೆಚ್ಚಿಸಲು ಹಾಕುವ ಎಣ್ಣೆಯ ಪಾಕ, ನೋಡಿ : ಅಗ್ರಾಣಿ.

ಒಗಿ (ಕ್ರಿ)– ಒಗೆಯು, ಬಟ್ಟೆ ಒಗಿ, wash.

ಒಗ್ಗು (ಕ್ರಿ)–ಹೊಂದಿಕೊಳ್ಳು, ಸೂಕ್ತವೆನಿಸುವುದು get adjusted, get accustomed.

ಒರ್ಗೆಲ ಹಂದಿ (ನಾ)– ಒಂಟಿ, ದಢೂತಿ, ಗಂಡು ಹಂದಿ.

ಒರ್ಚ್ (ಕ್ರಿ) – ತಾಗು, ಉಜ್ಜು, ತರಚು, ಘರ್ಷಿಸು, rub.

ಒರ್ಚಿಕಂಡ್ (ಕ್ರಿ.ವಿ)– ತಾಗಿಕೊಂಡು, ಸವರಿಕೊಂಡು, ಹತ್ತಿರದಿಂದ,
very near by, very close.
ಉದಾ: ಕಾರ್ ನಂಗೆ ಒರ್ಚಿಕೊಂಡ್ ಹೋತ್.

ಒಚ್ಚಿಮಣೆ (ನಾ)– ಕತ್ತಿ ಹರಿತ ಮಾಡುವ ಮಣೆ, wooden piece to sharpen the sickle.

ಒಚ್ಚು (ಕ್ರಿ)– ತೂಗು, ತೊಟ್ಟಿಲು ಒಚ್ಚುದು, rocking, swinging.

ಒಟ್ಟಾರೆ (ಕ್ರ.ವಿ)–ವ್ಯವಸ್ಥಿತವಲ್ಲದ, ಸಂಪೂರ್ಣ not organized, in toto.

ಒಟ್ರಾಸಿ (ಕ್ರಿ.ವಿ)– ಒಟ್ಟಿನಲ್ಲಿ, ವ್ಯವಸ್ಥಿತವಲ್ಲದ, unorganized, haphazard
ಉದಾ : ಅಲ್ಲಿ ಕುರ್ಚಿಗಳ ಒಟ್ರಾಸಿ ಹಿಸಿಯೊಳೊ.

ಒಟ್ಟಿಹೋದು (ಕ್ರಿ)– ಜಜ್ಜಿ ಹೋಗುವುದು, ನಗ್ಗಿ ಹೋಗುವುದು, ಮುದುಡಿಹೋಗುವುದು, damaged

ಒಟ್ಟು ಗೂಡ್ಸ್ (ಕ್ರಿ)– ಸಂಗ್ರಹಿಸು, ಒಂದು ಕಡೆ ಸೇರಿಸು, collect, gather, made to assemble in one place.

ಒಟ್ಟುದು (ಕ್ರಿ) – ಕ್ರಮಪ್ರಕಾರವಾಗಿ ಅಟ್ಟಿ ಇಡುವುದು, ಮುದುಡಿ ಹೋಗುವುದು.
keep in order,
keep in a systematic way
ಉದಾ: ಸೌದೆ ಒಟ್ಟುದು.

ಒಟ್ಟೆ (ನಾ)– ತೂತು, ರಂಧ್ರ, hole.

ಒಟ್ಟೆ ಕೋಳಿ (ನಾ)–ಕೋಳಿಕಟ್ಟದಲ್ಲಿ ಸತ್ತ ಕೋಳಿ the dead cock in the cock fight.

ಒಡ್ಡ್ (ನಾ) – ತೆನೆ ಕೊಯ್ದ ನಂತರ ಉಳಿಯುವ ಬುಡದ ಭಾಗ
the bottom part of the straw that is left after harvest.

ಒಡ್ಡ್ಸಿ ಕೊಡು (ಕ್ರಿ)– ತಾನೇ ಅವಕಾಶ ಮಾಡಿ ಕೊಡು. Giving opportunity to other.

ಒಡನೆ (ಕ್ರ.ವಿ)– ತಕ್ಷಣ,
at once, immediately.

ಒಡಹುಟ್ಟಿದಂವ (ಸ.ನಾ)– ಸಹೋದರ, ಒಂದೆ ತಾಯಿಗೆ ಹುಟ್ಟಿದವರು, direct brother.

ಒಡ್ಕದ (ನಾ)– ಕೊನೆಯ,
last, final, at the end.

ಒಡ್ಡ (ನಾ) – ಕೊಳಕ, ಸ್ವಚ್ಛತೆಗೆ ಗಮನ ಕೊಡದವ, dirty fellow.

ಒಡ್ಜಿಲ್ (ನಾ) – ಆವರಣದೊಳಗಿರುವ ಅವರವರ ಸ್ವಂತ ಜಾಗ, own property within the boundary.

ಒಡ್ಡು (ನಾ)– ಮಣ್ಣಿನ ಒಡ್ಡು, ತಡೆಗೋಡೆ, little dam made of mud, retaining wall.

ಒಡ್ಡು (ನಾ)– ಆವರಿಸು, ಮಳೆ ಒಡ್ಡುದು, cover, show all symptoms.

ಒಡ್ಡುವ ಕಥೆ (ನಾ)– ಒಗಟು.

ಒಣ್‌ಗಿಲ್ (ನಾ.ವಿ)– ಒಣಗಿದ, dried ಉದಾ: ಒಣ್‌ಗಿಲ್ ಮೀನ್.

ಒಣ್ಕೆ (ನಾ)– ಒನಕೆ, pestle.

ಒತ್ತ (ಕ್ರಿ)– ಒದೆ, kick.

ಒತ್ತರೆ (ಕ್ರ.ವಿ)– ಎಲ್ಲವನ್ನು ಸ್ವಚ್ಛಗೊಳಿಸಿ ಮತ್ತೆ ವ್ಯವಸ್ಥಿತವಾಗಿ ಇರಿಸುವುದು. ಉದಾ: ಮದುವೆ ಕಳ್ದ ಮೇಲೆ ಮನೆ ಸಾಮಾನ್‌ಗಳ ಒತ್ತರೆ ಮಾಡ್‌ಕನ ಸಾಕ್‌ಸಾಕಾತು.

ಒತ್ತಿಕಂಡ್ (ಕ್ರಿ)– ತಾಗಿಕೊಂಡು, ಒತ್ತಿ ಹಿಡಿದು ಕೊಂಡು, touching, very near by, press.

ಒತ್ತಿಲಿಕೆ (ಕ್ರಿ)– ಭತ್ತ ಕುಟ್ಟುವ ಮೊದಲ ಭಾಗ, first phase of beating the paddy.

ಒತ್ತು (ಕ್ರಿ)– ಒತ್ತಿ ಹಿಡಿ, press.

ಒತ್ತುವರಿ (ಕ್ರಿ)– ಅತಿಕ್ರಮಿಸು, encroach.

ಒತ್ತೆಕೋಲ (ನಾ)– ವಿಷ್ಣುಮೂರ್ತಿ ದೈವವನ್ನು ಆರಾಧಿಸುವ ಭೂತಕೋಲ, bhootha kolam worshipping Vishnumoorthi daivam.

ಒರ್ತೆ (ನಾ)– ಒರತೆ, ನೀರಿನ ಒರತೆ, ಅಂತರ್ ಜಲ, ಭೂಮಿಯಿಂದ ನೀರು ಒಸರು, under ground water gushing out

ಒದ್ದಾಟ (ಕ್ರಿ)– ಚಡಪಡಿಸು, ಹೊರಳಾಡು, difficult to bear, expression of dissatisfaction and anger.

ಒರ್ದ (ನಾ)– ಒಂದು ಪಕ್ಕಕ್ಕೆ, ಒಂದು ಬದಿಗೆ, to one side.

ಒದಿ (ಕ್ರಿ)– ಕಾಲಿನಿಂದ ಒದೆಯುವುದು, kick in the legs.

ಒನಲೆ (ನಾ)– ದವಸಧಾನ್ಯಗಳನ್ನು ಗಾಳಿಸಲು ಬಿದಿರಿನ ಅಥವಾ ಬೆತ್ತದ ಸಲಾಕೆಯಿಂದ ಮಾಡಿದ ಸಾಧನ. A pattern made from cane or bamboo bars to filter and process the grain.

ಒಪ್ಪತ್ತ್ (ನಾ) – ದಿನದಲ್ಲಿ ಒಂದು ಹೊತ್ತು ಮಾತ್ರ ಶಾಖಾಹಾರಿ ಊಟ ಮಾಡಿ ಆಚರಿಸುವ ಉಪವಾಸ ವ್ರತ observe fasting by taking vegetarian food only once in a day, partial fasting.

ಒಪ್ಪು (ಕ್ರಿ)– ಸಮ್ಮತಿಸು, ಒಪ್ಪಿಗೆ ನೀಡು, consent, agree, say ‘yes’.

ಒಬ್ಬ (ನಾ)– ಒಂದು ವ್ಯಕ್ತಿ, ಒಬ್ಬನೆ, single person.

ಒವರ್ಾಡ್ (ನಾ)– ಒಂದು ಬದಿಯಲ್ಲಿ ಇಳಿಸಿದ ಮಾಡು, single roof built on one side of the house or building.

ಒಮ್ಮೆ (ನಾ)– ಒಂದು ಬಾರಿ, ಒಂದು ಸಲ, once.

ಒರ್‌ಂಗ್‌ಸ್ (ಕ್ರಿ)– ಆಂಗಿಕ ಭಾಷೆಯಲ್ಲಿ ಗೇಲಿ ಮಾಡುವುದು.
mocking in the body language.

ಒರ್‌ಕೈ (ಕ್ರಿ)– ಒಂದು ಕೈಯಿಂದ ಕೆಲಸ ಮಾಡು, ಒಬ್ಬನೇ ಮಾಡಿದ ಕೆಲಸ, work in a single hand, work done by single person.

ಒರಟ (ಗು)– ಸೌಜನ್ಯತೆ ಇಲ್ಲದವ, ನಯ, ವಿನಯ ಇಲ್ಲದವ, ಮೊಂಡ,
very rough and tough.

ಒರಲು (ನಾ)– ಉಳುಮೆ ಮಾಡುವಾಗ ನೇಗಿಲು ಹಿಡಿದವ ಮಾಡುವ ಓssss ಎಂಬ ಆಲಾಪನೆ.

ಒರ್ಸು (ಕ್ರಿ)– ಉಜ್ಜು, ತಿಕ್ಕು, rub, wipe.

ಒರೆ (ನಾ)– ಚೂರಿ ಅಥವಾ ಖಡ್ಗ ಇರಿಸುವ ಚೀಲ, metal or leather cover to keep long knife or sword.

ಒಲಿ (ನಾ)– ತೆಂಗಿನ ಗರಿ,
coconut palm leaf.

ಒಲ್ಲಿ (ನಾ)–ಮಲಗುವಾಗ ಹೊದೆದುಕೊಳ್ಳುವ ಬಟ್ಟೆ, blanket, bed sheet.

ಒಲ್ಯ್‌ಕಲ್ಲ್ (ನಾ)– ಭತ್ತ ಕುಟ್ಟಲು ಬಳಸುವ ಕಲ್ಲು.

ಒಲೆತಿಂಟೆ (ನಾ)– ಒಲೆಯ ಮೂರು ಬದಿಯ ಸ್ಥಳ, place round the hearth.

ಒರ್ಲೆ (ನಾ)– ಗೆದ್ದಲು, termite.

ಒಸ್‌ಡ್ (ನಾ)– ವಸಡು, ದಂತಪಂಕ್ತಿ,
row of teeth.

ಒಸಿ (ನಾ)– ಸ್ವಲ್ಪ, little, small quantity,
ನೋಡಿ: ಹಂಞ, ಹನೀಸ್.

ಒಳ (ಕ್ರಿ)– ಇರು, ಇದ್ದಿಯ, ನೀ ಒಳ– you are included, ಆಗ ನೀ ಅಲ್ಲಿ ಒಳ– you were there.

ಒಳ (ನಾ)– ಒಳಗಡೆ, ಒಳಭಾಗ, inner part, inner surface, ಒಳ ಕೋಣೆ– room inside the house.

ಒಳಂತೇಳಿ (ಕ್ರಿ)– ಇದ್ದೀಯ ಎಂದು, ಇರಬಹುದೆಂದು, may be there, hope you are there.

ಒಳಜಾತಿ (ನಾ)– ಉಪಜಾತಿ, subcaste.

ಒಳದ್ (ಕ್ರಿ)– ನನ್ನಲ್ಲಿರುವುದು, I have it, ಉದಾ: ಅದು ನನಕ್ಕಲೆ ಒಳದ್.

ಒಳನಾ (ಪ್ರ)– ಇದ್ದಿಯಾ? ನೀ ಇಲ್ಲಿ ಒಳನಾ? Are you here? Will you be here? ಒಳನಾ (ಏ.ವ), ಒಳರಿಯಾ (ಬ.ವ).

ಒಳ್ದ (ನಾ)– ಉಳಿದ, ಬಾಕಿಯಾದ, ಉಳಿಕೆ, balance, remains.
ಒಳ್ದುಟು ಉಳಿದಿದೆ, has remained.

ಒಳಮೈ (ನಾ.ವಿ)– ಒಳಗಿನ ಭಾಗ,
inner surface.

ಒಳ್ಳಹಾವು (ನಾ)– ಸರ್ಪ, cobra, serpent.

ಒಳಿ (ನಾ)– ರಾತ್ರಿ ಹೊತ್ತು ಬೇಟೆಯಾಡಲು ಕಾಡುಪ್ರಾಣಿಗಳು ಅಲೆದಾಡುವ ಜಾಗ ದಲ್ಲಿ ಸಾಕಷ್ಟು ಎತ್ತರದಲ್ಲಿ ಮರದ ಮೇಲೆ ಕಟ್ಟುವ ಅಟ್ಟಣಿಗೆ, platfrom built on the tree to hunt wild animals in the night.

ಒಳಿಕುದ್ರುದು (ಕ್ರಿ)– ಒಳಿಯಲ್ಲಿ ಬೇಟೆಯಾಡಲು ಹೊಂಚುಹಾಕುತ್ತಾ ಕುಳಿತುಕೊಳ್ಳುವುದು. Sitting on the platform waiting for the wild animals for hunting.

ಒಳಿ (ಕ್ರಿ)_ ಉಳಿದುಕೊ, stay, ಇಂದು ಒಳಿ, ಇಂದ್ ಒಳ್ದ್ ನಾಳೆ ಹೋಗು.

ಒಳ್ಸು (ಕ್ರಿ)– ಉಳಿಸು, ಉಳಿತಾಯ ಮಾಡು, save.

ಒಳೆ (ಕ್ರಿ)– ಇದ್ದೇನೆ, ಇರುವೆನು, ನಾಒಳೆ– ನಾನಿದ್ದೇನೆ, I will be with you.

ಒಳ್ಬೆ (ನಾ)– ಎರಡೂ ಬದಿ ಇಳಿಜಾರು ಪ್ರದೇಶ ವಿದ್ದು ಮಧ್ಯದ ತಳಭಾಗ, ಕಣಿವೆ, the place between the slopes, valley.

ಒಳ್ಳೆಮೆಣ್ಸ್ (ನಾ) – ಕರಿಮೆಣಸು, Pepper.

ಒಳ್ಳೆಹಾವು (ನಾ)– ನೀರುಹಾವು. a poisonless snake living in the water, water snake.

ಒಳೊ (ಕ್ರಿ) – ಇದ್ದಾರೆ (ಬ.ವ), ಒಳೆ (ಏ.ವ) – ಇದ್ದಾನೆ, ಒಳೊ (ಬ.ವ), ಒಳೆ– ಇದ್ದೇನೆ. they are there; he is there.

ಓ

ಓಂಕ (ಕ್ರಿ)– ಓಗೊಡು, vocal response to a call.

ಓಂಕಂಬುದು (ಕ್ರಿ)– ಇನ್ನೊಬ್ಬರು ಕರೆದಾಗ ತಾನು 'ಓ' ಎಂದು ಕೂಗಿ ತನ್ನ ಇರುವಿಕೆ ಯನ್ನು ತೋರಿಸಿಕೊಳ್ಳುವುದು.

ಓಂಗು (ಕ್ರಿ)– ಆಸೆಯಿಂದ ನಿರೀಕ್ಷಿಸು greedy, expectation.

ಓಂತಿ (ನಾ)– ಓತಿ, ಓತಿಕ್ಯಾತ, chameleon, a kind of lizard.

ಓಟೆ (ನಾ)– ತೆಳ್ಳಗಿನ ಬಿದಿರು thin and tender bamboo.

ಓಟೆ ಹುಳಿ (ನಾ)– ಹುಣಸೆ ಹುಳಿ tamarind.

ಓಡ್ (ನಾ)– ಹಂಚು, tiles, ಮಣ್ಣಿನ ಕಾವಲಿ– clay pan.

ಓಡ್‌ಹಿಟ್ಟ್ (ನಾ)– ಮಣ್ಣಿನ ಓಡಿನ ಕಾವಲಿ ಯಲ್ಲಿ ಮಾಡಿದ ದೋಸೆಯಂತಹ ದಪ್ಪಗಿನ ಹಿಟ್ಟು, roti roasted in clay pan.

ಓಡ್ಸು (ಕ್ರಿ)– ಓಡಿಸು, ಬೆನ್ನಟ್ಟು, chase.

ಓಣಿ (ನಾ)– ಕಿರಿದಾದ ದಾರಿ, ಗಲ್ಲಿ, narrow way, ಎರಡೂ ಬದಿ ಎತ್ತರ ಗೋಡೆಗಳ ಮಧ್ಯದ ಇಕ್ಕಟ್ಟಾದ ದಾರಿ.

ಓಮ (ನಾ)– ಸಂಭಾರ ಜೀನಸು, a kind of spice, omum, ajwain.

ಓದ್ (ಕ್ರಿ)– ಓದು, read.

ಓಯ್ (ಸಂಭೋಧನೆ) – ಇನ್ನೊಬ್ಬ ಸಮಾನ ವ್ಯಕ್ತಿಯನ್ನು ಆತ್ಮೀಯವಾಗಿ ಸಂಭೋದಿಸುವುದು, ಉದಾ: ಓಯ್, ನಮಸ್ಕಾರ, addressing an intimate person.

ಓರೆ (ನಾ.ವಿ)– ಕೊಂಕು, ವಕ್ರ, ಓರೆಕೋರೆ, not straight.

ಓಸಿ (ಕ್ರಿ)– ಸದಾ ಇನ್ನೊಬ್ಬನನ್ನು ಅವಲಂಬಿಸಿ ಬದುಕುವುದು, always leading a dependent life.

ಕ

ಕಂಕಣೆ (ಕ್ರಿ.ವಿ)– ಮುಖ ಕೆಳಗೆ ಬೆನ್ನು ಮೇಲೆ ಇರುವಂತೆ ಮಲಗು, sleep on one's belly.

ಕಂಕುಳು (ನಾ)–ಭುಜದ ಅಡಿಭಾಗ, armpit

ಕಂಗಾಲ್ (ನಾ)– ನಿಶ್ಯಕ್ತಿ, ಕ್ಷೀಣ, physical weakness ಬಡತನ, poverty

ಕಂಚಿನಕ್ಕಿ (ನಾ)–ಕಲಶ ಕನ್ನಡಿ, ಮದುವೆಯ ದಿಬ್ಬಣ ಮತ್ತು ಧಾರಾಮುಹೂರ್ತದ ಸಂದರ್ಭದಲ್ಲಿ ವಧು–ವರರ ಜೊತೆ ತರುವ ಸಾಂಪ್ರದಾಯಿಕ ಕಲಶದೀಪ.

ಕಂಚಿಮಿ (ನಾ)– ಕಂಚಿನಕ್ಕಿ ಕೊಂಡೊಯ್ಯುವ ವರನ ಹಾಗೂ ವಧುವಿನ ಸಹೋದರಿ.

ಕಂಚುಗಾರ (ನಾ) – ಕಂಚುಗಾರ ನೊಣ, ಚುಚ್ಚುವ ಸಾಧ್ಯತೆಯಿರುವ ಮನೆಯ ಗೋಡೆ, ಕವಾಟು, ಮರಗಳ ರಂಧ್ರಗಳಲ್ಲಿ ಗೂಡುಕಟ್ಟುವ ದೊಡ್ಡ ಗಾತ್ರದ ನೊಣ.

ಕಂಚುಗಾರ (ನಾ) – ಕಂಚು, ಹಿತ್ತಾಳೆ ಕೆಲಸ ಮಾಡುವವ, ಕಲಾಯಿ ಹಾಕುವವ, a skilled person who does the work of bronze and brass, ತವರದ ಲೇಪ ಹಾಕುವವ tinner

ಕಂಜಿ೯ (ನಾ.ವಿ)–ಕಪ್ಪು ಬಣ್ಣದ ಹುಡುಗಿ dark skinned girl

ಕಂಟ್‌ಕೈಂಪೆ (ನಾ.ವಿ.)–ಕಟ್ಟಾ ಸ್ವಾಭಿಮಾನ, person with a lot of self respect

ಕಂಟಕ (ನಾ)–ತೊಂದರೆ, ವಿಘ್ನ danger obstacle, impediment

ಕಂಟಕೊತ್ತಿ (ನಾ)–ಗಂಡು ಬೆಕ್ಕು, male Cat

ಕಂಡಾಬಟ್ಟೆ (ಕ್ರಿ.ವಿ)–ಸಿಕ್ಕಾಬಟ್ಟೆ, ಎರ್ರಾಬಿರ್ರಿ wreckless

ಕಂಡೆ೯ಕಾಯಿ (ನಾ) – ಉರುಟಾದ ಚಿಕ್ಕ ಕಾಯಿ, a round jungle nut

ಕಂಡೆ೯ ಬೆಡಿ (ನಾ) – ಕಂಡೆ೯ಕಾಯಿಯನ್ನು ಗುಂಡು ಆಗಿ ಬಳಸಿ ಓಟೆಯಿಂದ ಮಾಡಿದ ಹಳ್ಳಿಯ ಆಟಿಕೆ ಕೋವಿ. (ನೋಡಿ – ಓಟೆ) a toy gun of countryside made of thin bamboo in which a 'karande' nut is used as bullet.

ಕಂತ್ (ಕ್ರೀ)–ಮುಳುಗು, dive,drown,sink. ಕಂತ್‌ಸಿ–ಮುಳುಗಿಸಿ, drowning ಕಂತ್‌ಸ್–ಮುಳುಗಿಸು, made to sink

ಕಂತ್ರಿ (ನಾ.ವಿ.)– ಅಯೋಗ್ಯ, unworthy ಅಪ್ರಮಾಣಿಕ, dishonest ಹಳ್ಳಿಯ ತಳಿ, ದೇಸಿ ತಳಿ, local breed

ಕಂದ್ ಹೋದು (ಕ್ರೀ) – ದೇಹದ ಒಂದು ಭಾಗ ಜಜ್ಜಿ ಹೋದಾಗ ಆ ಭಾಗದ ಚರ್ಮ ಕಂದು ಬಣ್ಣಕ್ಕೆ ಬದಲಾಗುವುದು.

ಕಂದಡಿ(ನಾ)–ಕಚ್ಚಿದರೆ ನಂಜೇರುವ ಒಂದು ಜಾತಿಯ ದೊಡ್ಡ ಹಾವು, viper

ಕಂಪಗದ್ದೆ (ನಾ) – ಎರಡರಿಂದ ಮೂರಡಿ ಆಳದ ತನಕ ಕೆಸರು ಇರುವ ಗದ್ದೆ.

ಕಂಪರ (ಕ್ರಿ.ವಿ)– ಮುಖ ಕೆಳಗೆ ಮಾಡಿ ಬೆನ್ನು ಮೇಲೆ ಮಾಡಿ ಮಲಗು. ನೋಡಿ: ಕಂಕಣಿ sleep with face down and back up

ಕಂಬ (ನಾ)–ಸ್ತಂಭ, pillar

ಕಂಬಳ (ನಾ)–ಕೋಣಗಳ ಓಟದ ಸ್ಪರ್ಧೆ, buffalo race competition

ಕಂಬಾಯಿ (ನಾ)–ಬಣ್ಣದ ಲುಂಗಿ, lungi

ಕಂಬ್ಳಿ ಹಣ್ಣ್ (ನಾ)– ರುಚಿಕರ ಕಾಡುಹಣ್ಣು ಬಳ್ಳಿಯಲ್ಲಿ ಬೆಳೆಯುವ ಈ ಹಣ್ಣಿನ ಹೊರ ಭಾಗ ಜುಂಗುಗಳಿಂದ ಕೂಡಿದ್ದು ಕಂಬಳಿ ಯಂತಿದೆ.

ಕಂಬ್ಳಿ ಹುಳ (ನಾ) – ಜುಂಗು ಇರುವ ಹುಳ, cater pillar

ಕಂಬೆಡಿ (ನಾ) – ಬಿದಿರಿನ ತುಂಡಿಗೆ ಮಾಡಿದ ತೂತಿಗೆ ಸೀಮೆ ಎಣ್ಣೆ ಸುರಿದು, ಊದುತ್ತಾ ಬೆಂಕಿ ಕೊಟ್ಟು ದೊಡ್ಡ ಶಬ್ದ ಉಂಟು ಮಾಡುವ ಸಾಧನ

ಕಕ್ಕ್ (ಕ್ರೀ) –ವಾಂತಿಮಾಡು, vomit

ಕರ್ಕ್ (ನಾ) – ಬಲಿಯದ, ಅರೆಬೆಳೆದ, not yet ripened ಮಿಡಿಗಿಂತ ದೊಡ್ಡದು

ಕರ್ಕಂಡ್ (ಕ್ರೀ)–ಕರೆದುಕೊಂಡು, take along with him

ಕಕ್ಕಟ್ಟ್ (ನಾ)–ಕಾಡುಕಲ್ಲಿನಲ್ಲಿ ಕಟ್ಟಿದ ಆವರಣ ಗೋಡೆ, compound wall built with local little stone boulders

ಕಕ್ಕಾಬಿಕ್ಕಿ (ಕ್ರಿ) – ದಿಕ್ಕು ತೋಚದಂತಾಗು, ಕಂಗೆಟ್ಟು ಹೋಗು, flabbergasted, frightened, do not know what to do

ಕಕ್ಕೆ (ನಾ) – ಕಾಗೆ, crow.

ಕಕ್ಕೆ ಕರಿದು (ಕ್ರಿ.ವಿ.)– ಕಾಗೆ ಕೂಗುವುದು, caws

ಕಕ್ಕೆ ಮುಟ್ಟುದು (ಕ್ರಿ) – ಮಹಿಳೆಯರು ಮುಟ್ಟಾಗುವ ಪ್ರಕ್ರಿಯೆ, menstration

ಕಗ್ಗಂಟ್ (ಕ್ರಿ.ವಿ.) – ಜಟಿಲವಾದ ಸಮಸ್ಯೆ, rigid problem, problem which can not be solved.

ಕರ್ಗಲ್ಲ್ (ನಾ)– ಕರಿಕಲ್ಲು, granite

ಕಚ್‌ಗಲ್ (ನಾ)–ಅಕ್ಕಿ ತೊಳೆದ ನೀರು, water in which rice is washed before cooking.

ಕಚ್‌ಡಾ (ನಾ.ವಿ)– ಕೀಳು ಮಟ್ಟದ, of low quality, ಕೊಳಕಾದ, ಕಳಪೆ ವಸ್ತು, junk, dirty, unclean

ಕಚ್ಚ್ (ಕ್ರೀ)–ಕಡಿಯು, bite.

ಕಚ್ಚೆ (ನಾ) –ವೇಸ್ಟಿಯನ್ನು ಎರಡೂ ಕಾಲಿಗೆ ಸುತ್ತಿ ಹಿಂದಕ್ಕೆ ಸಿಕ್ಕಿಸಿಕೊಳ್ಳುವುದು. ವರನಿಗೆ ಮದುವೆಯ ಸಂದರ್ಭದಲ್ಲಿ ಕಚ್ಚೆ ಕಟ್ಟುತ್ತಾರೆ.

ಕಜ್ಜಾಯ (ನಾ)–ಹಣ್ಣಿನಿಂದ ತಯಾರಿಸಿದ ಕಾಯಿಸಿದ ತಿಂಡಿ roasted dish made out of fruits like jack fruit and plantains

ಕಜ್ಜಿ (ನಾ) –ಚರ್ಮದಲ್ಲಿ ಬರುವ ಹುಣ್ಣು, scabies, itches

ಕಜೆ (ನಾ) – ಸದಾ ನೀರು ನಿಲ್ಲುವ ಪ್ರದೇಶ, ಜವುಗು ಭೂಮಿ, marshy land, watery ground

ಕಟ್ಟ್ ಕಟ್ಲೆ (ನಾ) – ಸಂಪ್ರದಾಯ, ರೀತಿ ರಿವಾಜುಗಳು customs and traditions

ಕಟ್ಟ್ (ಕ್ರಿ)–ಕಟ್ಟುವುದು, ಹಗ್ಗದಿಂದ ಕಟ್ಟಿ ಹಾಕುವುದು, tie, tie with rope

ಕಟ್ಟ್ ಕಟ್ಟುದು (ಕ್ರಿ) –ಶಬರಿಮಲೆಗೆ ಹೋಗುವ ಮುನ್ನ ದೇವರಿಗೆ ಅರ್ಪಿಸುವ ಎಲ್ಲಾ ವಸ್ತುಗಳನ್ನು ಜೋಡಿಸಿ ಇರುಮುಡಿ ಕಟ್ಟುವುದು.

ಕಟ್ರ್ (ನಾ)–ಅಜೀರ್ಣವಾಗಿ ಹೊಟ್ಟೆ ಒಳಗೆ ಸ್ಥಿರವಾಗಿ ನಿಲ್ಲುವುದು, food gets stucked in the stomach due to indigestion.

ಕಟ್ಲ್(ನಾ) – ಮಂಚ, cot

ಕಟ್ಟ (ನಾ)–ಎಲ್ಲಾ ವಸ್ತುವನ್ನು ಕಟ್ಟಿ ಮಾಡುವ ಹೊರೆ, ಸೌದೆ ಕಟ್ಟ bundle

ಕಟ್ಟ (ನಾ)–ನೀರಿನ ಕಟ್ಟ, ನೀರು ನಿಲ್ಲಿಸಲು ತೋಡು, ಹೊಳೆಗೆ ಅಡ್ಡವಾಗಿ ಕಟ್ಟುವ ಒಡ್ಡು, little dam

ಕಟ್ಟಕಡೆಗೆ (ಕ್ರಿ) – ಕೊನೆಯಲ್ಲಿ, at the end, finally

ಕಟ್ಟ ಹಾಕ್ (ಕ್ರೀ)–ಕಟ್ಟುವುದು, tie with rope, ಕಟ್ಟುದು

ಕಟ್ಟ ಪುಣಿ (ನಾ) – ಗದ್ದೆಯ ದಿಡ್ಡು, edge of the paddy field

ಕಟ್ಟ ಬಳ್ಕರಿ (ನಾ) – ಕಟ್ಟಿನ ಹಾವು, krait

ಕಟ್ಲಡೆ (ನಾ)–ಹೊಳೆಗಳಲ್ಲಿ ಕಂಡುಬರುವ ದೊಡ್ಡ ಗಾತ್ರದ ಒಂದು ಜಾತಿಯ ಮೀನು, a large fish found in the malnad rivers

ಕಟಿಗೆರ (ನಾ)–ಚಿಕ್ಕ ಜಾತಿಯ ಮರ, ಇದರ ಕಾಯಿಯನ್ನು ಹೊಳೆಗೆ ಕಡು ಹಾಕಲು ಬಳಸುತ್ತಾರೆ.

ಕಟ್ಟುಪಾಡ್ (ನಾ)– ನಿರ್ದಿಷ್ಟ ಸಾಮಾಜಿಕ ವ್ಯವಸ್ಥೆ, ಸಂಪ್ರದಾಯ, ಕಟ್ಟುಕಟ್ಟಳೆ customs and traditions, social bonds

ಕಟ್ಟೆ ಭತ್ತ (ನಾ) – 60 ವರ್ಷಗಳಿಗೊಮ್ಮೆ ಬಿದಿರು ಹೂ ಬಿಡುವಾಗ ಅದರಲ್ಲಿ ಉಂಟಾಗುವ ಚಿಕ್ಕ ಬೀಜ, ಆಹಾರವಾಗಿ ಬಳಸುತ್ತಾರೆ

ಕಟ್ಟುಮಸ್ತ್ (ನಾ.ವಿ)–ದೃಢಕಾಯ, physically well built, strong and sturdy
ಉ: ಅಂವ ಒಳ್ಳೆ ಕಟ್ಟ್ ಮಸ್ತ್‌ನ ಹುಡುಗ

ಕಟ್ಟೇರಿ(ನಾ)–ದೊಡ್ಡ ಜಾತಿಯ ಕಟ್ಟಿರುವೆ, a dark and stinging ant of big size.

ಕಟ್ಲೇರಿ (ನಾ) – ಆಹಾರ ವಸ್ತುಗಳನ್ನು (ಜಿನಸಿ) ಹೊರತುಪಡಿಸಿ ಉಳಿದಂತೆ ಎಲ್ಲಾ ದಿನಬಳಕೆಯ ವಸ್ತುಗಳು, ಕಟ್ಲೇರಿ ಅಂಗಡಿ, stationery shop, a shop where all kinds of goods are sold except groceries

ಕಡ್‌ಂದೋಳು (ನಾ) – ಕಣಜದ ಹುಳು, ಕೂಡೋಳು, ದೊಡ್ಡ ಜಾತಿಯ ಕಚ್ಚುವ ಕ್ರೂರ ನೊಣ,
A cruel stinging fly, lives in group and attacks in group

ಕಡ್‌ಂಗ (ನಾ)–ಕಂದಕ, ಅಗರು, trench ಗಡಿ ಗುರುತಿಗಾಗಿ ಅಥವಾ ಬೇಲಿಗಾಗಿ ತೆಗೆಸುವ ಆಳವಾದ ಕಣಿ
a trench formed to identify the border and also as fence.

ಕಡಕಲ್ಲ್ (ನಾ) – ಕಡೆಯುವ ಕಲ್ಲು, grinding stone

ಕಡ್ತ (ನಾ) – ಇನ್ನೂ ಮೊಟ್ಟೆ ಇಡದ ಹೇಂಟೆ ಕೋಳಿ
young hen not yet laid eggs.

ಕಡ್ಡಕಲ್ಲ್ (ನಾ) – ಘನಾಕೃತಿಯಲ್ಲಿ ಕಡಿದ ಮುರಕಲ್ಲು, ಜಂಬಿಟ್ಟಿಗೆ
laterite stone used to build walls

ಕಡಸ್ (ನಾ)–ಕರು ಹಾಕಲು ಪ್ರಾಯಕ್ಕೆ ಬಂದ ದನ, ಕರು ಹಾಕದ ಹರಯದ ದನ,
a cow yet to give birth to a calf

ಕಡ್ಪ (ಗು) –ಗಾಢ, ತೀಕ್ಷ್ಣ, ಖಡಕ್, deep, sharp, ಅಂವ ಭಾರಿ ಕಡ್ಪ ಉಟ್ಟು

ಕಡ್ಪ (ಕ್ರಿ.ವಿ) – ಆ ಕಡೆಗೆ, to the other side, over ಉ: ಅಂವ ಆ ಕಲ್ಲ್‌ನ ಕಡ್ಪ ಹಾರ್ತ್

ಕಡ್ಪತ್ತಿ (ನಾ)–ದೊಡ್ಡ ಕತ್ತಿ, a big sickle

ಕಡ್ಯಕ್ಕಿ (ನಾ) – ಕಡಿ ಅಕ್ಕಿ, ತುಂಡು ತುಂಡಾದ ಅಕ್ಕಿ, ನುಚ್ಚು, split rice pieces

ಕಡಾಯ (ನಾ)–ಕೊಪ್ಪರಿಗೆ, a large vessel

ಕಡಿ (ಕ್ರಿ)– ಕಡಿಯುವುದು,
ಉದಾ: ಕತ್ತಿಂದ ಕಡಿ, ಮರಕಡಿ,
cut with sickle or axe

ಕಡಿಕೆ/ಕದಿಕೆ (ನಾ)–ಭತ್ತ ಸಂಗ್ರಹ ಮಾಡುವ ಮರ ಅಥವಾ ಬೆತ್ತದ ಕೋಡಿ, a large drum type structure made of wood or cane to store paddy

ಕಡು (ನಾ) – ಮೀನು ಹಿಡಿಯಲು ಹೊಳೆಗೆ ಹಾಕುವ ಕಾಡುವಸ್ತುಗಳಿಂದ ತಯಾರಿಸಿದ ವಿಷ,
the non-chemical poison put to the river to catch the fish

ಕಡ್ಪು (ನಾ.ವಿ) – ಭಾರಿ ಘಾಟಿ, ಜೋರು, ಆಳವಾಗಿ ತಿಳಿದವ,
having deep knowledge

ಕಡ್ಪು (ನಾ)– ಕಾಡಿನಲ್ಲಿ ಪ್ರಾಣಿಗಳು ಅಡ್ಡಾಡುವ ದಾರಿ,
path used by the wild animals in the forest.

ಕಡೆ (ನಾ.ವಿ)–ತಳಭಾಗ, ಕೆಳಭಾಗ, bottom ಉ: ಯಾವ ಕಡೆ–ಯಾವ ದಿಕ್ಕಿನಲ್ಲಿ, in which direction; ನಾಯಿಂದಲೂ ಕಡೆ – ನಾಯಿಗಿಂತಲೂ ಕೀಳು
Worse than the dog

ಕಡೆಗಣ್ಸ್ (ಕ್ರೀ)–ಕಡೆಗಣಿಸು, ತಿರಸ್ಕಾರದಿಂದ ಕಾಣು,
look with contempt careless

ಕಡೇಗೆ (ಕ್ರಿ.ವಿ)–ಕೊನೇಗೆ
at last, finally

ಕಡೆಹಲ್ಲ್ (ನಾ)–ದವಡೆಯ ಕೊನೆಯ ಹಲ್ಲು, molas

ಕಡ್ಡೆ (ನಾ)–ಕಾಡು ದನ, ಕಡವೆ,
wild cow, antelope

ಕಣ್ಕ್/ ಕಳಂಕ್ (ನಾ.ವಿ)– ಮಣ್ಣುಮಿಶ್ರಿತ ಕೆಂಪುನೀರು, muddy water.

ಕಣ್ಣ್ (ನಾ)–ಕಣ್ಣು, ನೇತ್ರ, eye ತೆಂಗಿನಕಾಯಿ, ಅಡಿಕೆ ಮುಂತಾದ ಕಾಯಿಗಳಲ್ಲಿ ಮೊಳಕೆ ಬರುವ ಜಾಗ

ಕಣ್ಣ್ ಬೇನೆ (ನಾ)–ಕಣ್ಣು ನೋವು,
eye pain, eye sore

ಕಣ್ಣ್‌ಕಪ್ಪು (ನಾ)–ಕಾಡಿಗೆ, Soot

ಕಣ್ಣ್ ತಪ್ಪು (ನಾ)–ಸೂಕ್ಷ್ಮವಾಗಿ ಗಮನಿಸದೆ ಮಾಡುವ ತಪ್ಪು,
Mistake by oversight

ಕಣ್ಣ್ ನೆತ್ತಿಲಿ (ಗು) – ಅಹಂಕಾರ ಅಥವಾ ಜಂಭದ ಪರಮಾವಧಿ,
extreme pride or ego, too much superiority complex

ಕಣಲೆ (ನಾ) – ಬಿದಿರಿನ ಚಿಗುರು,
tender coconut, bamboo shoot

ಕಣ್ಣ (ನಾ)–ಹಾಲು ಹಾಕದ ಕಾಫಿ/ಚಾ
Coffee or tea without milk

ಕಣ್ಣಜ್ಜ/ ಕಣ್ಣೋಜಿ (ಗು) – ನೇರ ನಡೆನುಡಿ ಇಲ್ಲದವ, ಒಳಗೊಂದು ಹೊರಗೊಂದು ವರ್ತನೆಯವ
not frank, cunning.

ಕರ್ಣಕುತ್ತ (ಕ್ರಿ.ವಿ) – ತಲೆ ಕೆಳಗಾಗಿ ಕಾಲು ಮೇಲಾಗಿ ಉರುಳುವುದು,
Roll with head down and legs up.
ಕರ್ಣ ಕುತ್ತ ಮೊಗಿದು.

ಕಣ್ಣಾಡ್ಸ್ (ಕ್ರೀ)–ದೃಷ್ಟಿ ಹಾಯಿಸು
Keep an eye

ಕಣಿ (ನಾ) – ನೀರು ಹೋಗಲು ಮಾಡುವ ಚರಂಡಿ, gutter to flow water

ಕಣಿಯ (ನಾ) – ಮಾಂತ್ರಿಕ, ಮಾಟಗಾರ, ಜ್ಯೋತಿಷಿ, a person who performs witchcraft, astrologer

ಕಣ್ಣೀರ್ (ನಾ)–ಕಣ್ಣೀರು, tears

ಕಣ್ಣುರಿ (ನಾ.ವಿ) – ಹೊಟ್ಟೆಕಿಚ್ಚು, ಅಸೂಯೆ,
jealous

ಕಣೆ (ನಾ) – ಕೋಲು, ಸೊಪ್ಪಿನಕಣೆ, ಹಸಿ ಅಡರ್
undressed branch of a plant

ಕಣೆಬುಡ್ಡು (ಕ್ರಿ) – ಕಾಲಿನ ಬೆರಳಿನ ಅಡಿ ಒಡೆಯುವುದು ಅಥವಾ ಸೀಳುವುದು;
ulcer under the fingers of the leg

ಕಣೆರೋಗ (ನಾ) – ದನಗಳ ಗೊರಸಿನ ಅಡಿಯಲ್ಲಿ ಹುಣ್ಣಾಗುವುದು,
ulcer under the hoof of the cows or horses.

ಕಣ್ಣೆ (ನಾ) – ಸೌದೆಯ ಅಟ್ಟಿ,
systematic piling of firewood

ಕಣ್ಣೊಲೆ (ನಾ) – ದೊಡ್ಡ ಒಲೆಯಿಂದ ಉಷ್ಣತೆ ಮತ್ತು ಜ್ವಾಲೆ ಬರುವ ಹಾಗೆ ತೂತು ಇರಿಸಿಕೊಂಡು ಪಕ್ಕದಲ್ಲೇ ನಿರ್ಮಿಸಿದ ಚಿಕ್ಕ ಒಲೆ.

ಕತ್ತಲೆ (ನಾ)–ರಾತ್ರಿ, night

ಕತ್ತಂಗೆ (ಕ್ರಿ)–ಹಾಗೆಯೇ, same as,
ಉ: ಎಲ್ಲರ ಕತ್ತಂಗೆ ಇರೊಕು; ಅಂವ ಕಳ್ಳರ ಕತ್ತಂಗೆ ಮಾಡ್ದೆ

ಕತ್ತಿ (ನಾ) – ಕತ್ತಿ, sickle

ಕತ್ರಿ (ನಾ) – ಕತ್ತರಿ scissor

ಕತ್ತೆ ಅರ್ಚುದು (ಕ್ರೀ)– ಕತ್ತೆ ಕೂಗುವುದು,
donkey brays

ಕದ್‌ರ್ (ನಾ)–ಫಲಭರಿತ ತೆನೆ, corn

ಕದ್ವಂಜಿ (ನಾ) – ತಲೆಗೆ ಸ್ನಾನ ಮಾಡಲು ಬಳಸುವ ಲೋಳೆಯ ಅಂಶವಿರುವ ಸಸ್ಯ

ಕದಿ (ನಾ) – ಭತ್ತದ ರಾಶಿಯಲ್ಲಿ ಇರುವ ಕಸ waste pieces found in the heap of paddy, stubble

ಕದಿ (ಕ್ರೀ)–ಕದಿಯು, steal

ಕನರ್ (ನಾ)– ಒಗರುರುಚಿ, pale taste

ಕನ್ನಡಕ (ನಾ) – ಕನ್ನಡಕ, ಚಸ್ಮ, goggle, spectacle

ಕನಿಕರ (ಕ್ರಿ.ವಿ) – ಅನುಕಂಪ, Sympathy

ಕನಿಬೆರಳ್ (ನಾ)– ಕಿರುಬೆರಳು, Little finger

ಕನ್ನಿಕಂಬ/ ಕನ್ನೆಕಂಬ (ನಾ)– ಐನ್‌ಮನೆಗಳಲ್ಲಿ ಶುಭಕಾರ್ಯಗಳ ಆರಂಭಕ್ಕೆ ಮುನ್ನ ದೇವರಿಗೆ ದೀಪ ಇರಿಸುವ ಸ್ಥಳದಲ್ಲಿ ಸ್ಥಾಪಿಸುವ ಹಲಸಿನ ಮರದ ಶಿವಲಿಂಗ ದಂತಹ ಕಂಬ

ಕನ್ನಿಕೋಂಬರೆ (ನಾ) – ಐನ್‌ಮನೆಗಳಲ್ಲಿ ಕನ್ನಿಕಂಬವಿರುವ ಕೋಣೆ

ಕನ್ನುಗುಂಡು (ನಾ)– ಗುಲ್ಮಗ್ರಂಥಿ, spleen

ಕಪಾತ್(ಕ್ರಿ) – ಅಲಂಕಾರಕ್ಕಾಗಿ ಬೆಳೆಸುವ ಗಿಡಗಳನ್ನು ಓರಣವಾಗಿ ತುಂಡರಿಸುವುದು Systematic cutting of decorative plant

ಕಪಿಲೆ (ನಾ) – ಬಿಳಿ ಜಾತಿಯ ಹಸುಗಳು white colored cows

ಕರ್ಪು(ಕ್ರಿ)–ಕೊರೆದು ತಿನ್ನು, eat little by little,nibble

ಕರ್ಪೂರ (ನಾ)–ಆರತಿ ತಟ್ಟೆಯಲ್ಲಿ ದೀಪ ಉರಿಸುವರೇ ಬಳಸುವ ವಸ್ತು, camphor

ಕಪ್ಪೆ (ನಾ)–ಕಪ್ಪೆ, frog

ಕಪ್ಪೆ ವಟಗುಟ್ಟಿದು – ಕಪ್ಪೆ ಕೂಗುವುದು frog croaks

ಕಫ (ನಾ)–ದಪ್ಪನೆಯ ಎಂಜಲು, sputum

ಕಬರ್ (ನಾ)–ಕವಲು, deviation

ಕಬರ್‌ಕೋಲು (ನಾ) – ಆಧಾರಕೋಲು, ಮಾಡಿನ ಮಧ್ಯದಲ್ಲಿ ಆಧಾರಕ್ಕಾಗಿ ಕೊಡುವ ಕಂಬ supporting pole

ಕಬೆ (ನಾ)–ಮರದ ಕಂಬ, wooden pole

ಕರ್ಬೆಳ್ಳೆ (ನಾ)–ಕಪ್ಪು ಬಿಳಿ ಮಿಶ್ರಿತ ಗರಿಗಳಿರುವ ಹುಂಜ

ಕಮ್ಮನೆ (ನಾ.ವಿ) – ರುಚಿಕರವಾದ, very tasty, delicious

ಕಮಾನ್ (ನಾ)–ಕಮಾನು ಆಕಾರದ, arch

ಕಮ್ಬಿ ಹಾಕ್ (ಕ್ರಿ)–ತಲೆಕೆಳಗಾಗಿ ಇಡು, ಕವಚಿ ಹಾಕು, keep the thing with top downward ಉದಾ : ಗ್ಲಾಸ್‌ನ ಕಮ್ಬಿ ಇಸ್–ಆ ಪಾತ್ರೆನ ಕಮ್ಬಿ ಹಾಕ್

ಕಮ್ಬಿ ಮಲ್ಗ್ (ಕ್ರಿ)–ಹೊಟ್ಟೆ ಕೆಳಗೆ ಬೆನ್ನು ಮೇಲೆ ಮಾಡಿ ಮಲಗು, lie on one's belly

ಕಮ್ಮಿ (ನಾ)–ಕಡಿಮೆ, less
ಕಮ್ಮಿರೊಕು–ಕಡಿಮೆ ಇರಬೇಕು
ಕಮ್ಮಿಟ್ಟು– ಕಡಿಮೆ ಇದೆ

ಕಮ್ಮು (ನಾ)–ಅಡಿಕೆ ಮರ, arecanut tree

ಕರ್ (ನಾ)–ಕರು, ದನದ ಮರಿ, ಪುಟ್ಟ ದನ calf

ಕರ್‌ಂಟಿ ಹೋದು (ಕ್ರಿ)–ಅತಿ ಬಿಸಿಯಾಗಿ ಕರಟಿ ಹೋಗುವುದು, get charred due to heavy heat or over baking

ಕರ್‌ಗೋಟ್ (ನಾ)–ಕಪ್ಪಾದ ಸುಲಿದ ಅಡಿಕೆ, dark colored arecanut

ಕರ್ಲ್ ಕಾಯದು (ಕ್ರಿ) – ಹೊಟ್ಟೆಗಿಲ್ಲದೆ ಕರುಳು ನಿಮಿರಿಕೊಳ್ಳುವುದು.

ಕರಡಿಗೆ (ನಾ) – ಮುಚ್ಚಳ ಇರುವ ಚಿಕ್ಕ ಉರುಟಾದ ಪಾತ್ರೆ, a small round vessel with lid, ಕುಂಕುಮ ಕರಡಿಗೆ, ಚಿನ್ನದ ಕರಡಿಗೆ

ಕರಾರ್ (ನಾ)–ಒಪ್ಪಂದ, agreement

ಕರಿ (ಕ್ರಿ)–ಬಾ ಎಂದು ಕರಿ, call, ಕರಿದು, ಕರೆಯುವುದು, calling

ಕರಿ (ನಾ)–ಕಪ್ಪು ಬಣ್ಣದ ಹುಡಿ, ಮಸಿಹುಡಿ, ಸೀಮೆಎಣ್ಣೆಯ ಕರಿ,
black substance, black soot

ಕರಿ ಆದು (ಕ್ರಿ)–get charred

ಕರಿಮೀನ್ (ನಾ)–ಹೊಳೆಗಳಲ್ಲಿ ಕಂಡುಬರುವ ದೊಡ್ಡ ಜಾತಿಯ ಮೀನು

ಕರಿಯ (ನಾ)–ಕಪ್ಪಗಿರುವವ, dark skinned man

ಕರಿಯಡ (ನಾ)–ಯಕೃತ್, liver

ಕರುಂಬುಳಿ (ನಾ)–ಕಪ್ಪಾಗಿ ತೊನೆಯಿಕ್ಕು, ಅಟ್ಟ/ ಬೆಸಗೆ ಅಡಿಯ ಕರಿ, dripping of dark, wet object

ಕರುಬುಡು (ಕ್ರಿ) – ಹಾಲು ಕರೆಯು, milking

ಕರೆ (ನಾ) – ಬದಿ,ಅಂಚು, ಆಚೆ ಕರೆ – ಆ ಬದಿ, ಈಚೆಕರೆ – ಈ ಬದಿ
side, edge, this side, that side

ಕರೆ (ಕ್ರಿ)–ಕರೆ ಮಾಡು, phone call
ಉದಾ : ಅಂವಂಗೆ ಒಂದು ಫೋನ್ ಕರೆ ಮಾಡ್

ಕರೆ (ನಾ)–ಬಟ್ಟೆಗೆ ಕರೆ ಆದು, ಬಣ್ಣ ಅಳಿಸಿ ಹೋಗದಿರುವುದು, coloured mark

ಕಲ್ಲ್ ಕಾವ್‌ಲಿ (ನಾ)–ಬಳಪ ಕಲ್ಲಿನ ಕಾವಲಿ pan made out of flat balapa stone

ಕಲ್ಲ್ ಪಣೆ (ನಾ) – ಮುರಕಲ್ಲು ಕಡಿಯುವ ಜಾಗ
place where laterite stones are cut

ಕಲ್ಲ್ ಬಿತ್ತ್ (ನಾ)–ಕಾಲಿನ ಹಿಮ್ಮಡಿ ನೋವು. ache in the heel of the leg, ಕಾಲಾಣಿ

ಕಲ್ಲ್‌ಮುಳ್ಳ (ನಾ)–ಹೊಳೆಗಳಲ್ಲಿ ನೀರೊಳಗಿರುವ ಕಲ್ಲುಗಳಲ್ಲಿ ಕಂಡುಬರುವ ಮೀನು.
a fish found on the stone under the water.

ಕಲ್ಲ್ ಮುಳ್ಳ್ (ದ್ವಿ)–ಕಲ್ಲು ಮತ್ತು ಮುಳ್ಳುಗಳು
stones and thorns,
ಕಲ್ಲುಮುಳ್ಳಿನ ದಾರಿ.

ಕಲ್ಲ್‌ಸಕ್ಕರೆ (ನಾ) – ಗಟ್ಟಿಯಾದ ಸಕ್ಕರೆ ತುಂಡು ಗಳು, rock candy

ಕಲ್ಸ್ (ಕ್ರಿ) – ಕಲಿಸು, teach

ಕಲ್ಸ್ (ಕ್ರಿ) – ಕಲಸುವುದು, ಮಿಶ್ರ ಮಾಡುವುದು
mix up, ಕಲ್ಸುದು

ಕಲ್ತಪ್ಪ (ನಾ)–ಕೆಳಗಿನಿಂದ ಮತ್ತು ಮೇಲಿನಿಂದ ಕೆಂಡ ಇಟ್ಟು ಬೇಯಿಸುವ ಹಿಟ್ಟು, ಕೆಂಡದ ಹಿಟ್ಟ್.

ಕಲಾಯಿ ಹಾಕುದು (ಕ್ರಿ)–ಪಾತ್ರೆಗಳ ಒಳಭಾಗಕ್ಕೆ ತವರವನ್ನು ಲೇಪಿಸುವುದು, tinning, tinner, ಕಲಾಯಿಗಾರ

ಕಲಿ (ಕ್ರಿ) – ಕಲಿಯುವುದು, ಅಧ್ಯಯನ ಮಾಡುವುದು, learn, study

ಕಲಿಕಾಲ (ನಾ)–ಧರ್ಮ ಕ್ಷೀಣಿಸುವ ಕಾಲ, ಅಧರ್ಮ ಹೆಚ್ಚಾಗುತ್ತಿರುವ ಕಾಲ. ನಾಲ್ಕು ಯುಗಗಳಲ್ಲಿ ಒಂದು – ಕೃತ, ತ್ರೇತ, ದ್ವಾಪರ, ಕಲಿ

ಕಲ್ಲುರ್ಟಿ (ನಾ) – ಪಾಷಾಣಮೂರ್ತಿ ದೈವ, ಸ್ತ್ರೀ ಶಕ್ತಿಯ ಆರಾಧನೆ, Pashanamoorthi daivam, a faminine divine diety

ಕಲ್ಕುಡ (ನಾ)–ತುಳುನಾಡಿನಲ್ಲಿ ಆರಾಧಿಸಲ್ಪಡುವ ದೈವ
Daivam worshipped in Tulunad

ಕವ್ಳೆ (ನಾ)–20 ವೀಳ್ಯದೆಲೆಗಳುಳ್ಳ ಒಂದು ಅಟ್ಟಿ
4 ಕವ್ಳೆ = 1 ಸುಡಿ
a pile of 20 betel leaves

ಕವ್ಳೆ ಹಿಡಿ (ಕ್ರಿ)–ವೀಳ್ಯದೆಲೆಗಳನ್ನು 20ರಂತೆ ಅಟ್ಟಿ ಇಡುವುದು, piling of 20 betel leaves

ಕವಂಗ (ನಾ)–ದೊಡ್ಡ ಪಾತ್ರೆಯಿಂದ ಚಿಕ್ಕ ಪಾತ್ರೆಗೆ ತೋಡುವ ಕೈ ಪಾತ್ರೆ.

ಕವಣೆ (ನಾ) – ಕಲ್ಲನ್ನು ದೂರಕ್ಕೆ ಎಸೆಯಲು ಹಗ್ಗದಿಂದ ಮಾಡಿದ ಸಾಧನ, sling

ಕಷ್ಟ (ನಾ) – ತೊಂದರೆ, ತಾಪತ್ರಯ, difficulties, problems

ಕಸ್ಂಡ್ (ನಾ) – ಎಣ್ಣೆ ಪದಾರ್ಥಗಳು ಕೆಟ್ಟಾಗ ಬರುವ ಗಮಟು ವಾಸನೆ, unpleasant smell coming from spoiled oil products

ಕಸ್ಂಡ್ (ಗು)–ಅನಾಗರಿಕ, ಸೌಜನ್ಯತೆ ಇಲ್ಲದವ, ಉತ್ತಮ ಸಂಬಂಧ ಹೊಂದದವ uncivilised impolite

ಕಸ (ನಾ)–ಹಸು ಕರು ಹಾಕಿದ ಮೇಲೆ ಬೀಳುವ ಗರ್ಭದ ಪೊರೆ, placenta

ಕಸರತ್ (ಕ್ರಿ.ವಿ)–ಒಳ ಉಪಾಯ, intrigue ಸರ್ಕಸ್, ಜಿಮ್ನಾಸ್ಟಿಕ್ಸ್‌ಗಳಲ್ಲಿ ಮಾಡುವ ದೈಹಿಕ ಕಸರತ್ತು

ಕಷಾಯ (ನಾ)–ಎಲೆ, ಮೂಲಿಕೆ, ತೊಗಟೆ, ಬೇರುಗಳನ್ನು ಕುದಿಸಿ ತಯಾರಿಸುವ ದ್ರವ ಔಷಧ.
decoction(Ayurvedic medicine) prepared from boiling leaves, herbs, barks and roots.

ಕಳ್ಚ್ (ಕ್ರಿ)_ ಬಿಚ್ಚುವುದು, dismantle
ಉದಾ : ಫಿಟ್ಟರ್ ಬಂದ್ ಇಂಜಿನ್‌ನ ಕಳ್ಚಿ ಹಾಕಿಟು

ಕಳ್ದ್ ತೆಗಿದು (ಕ್ರಿ) – ದೇಹಕ್ಕೆ ಸೋಂಕಿರುವ ಮಾನಸಿಕ ಆತಂಕವನ್ನು ಮಾಂತ್ರಿಕ ಶಕ್ತಿ ಮೂಲಕ ನಿವಾರಿಸುವ ವಿಧಾನ
treatment given to mental/ psychic problem through witchcraft

ಕಳ್ಸ್ (ಕ್ರಿ)–ಕಳುಹಿಸು, ರವಾನೆ ಮಾಡು send, make him to go

ಕಳ (ನಾ)–ಪಾತಿ, ತರಕಾರಿ ಅಥವಾ ಹೂವಿನ ಪಾತಿ, bed

ಕಳಂಕ್ (ನಾ)–ಮಣ್ಣುಮಿಶ್ರಿತ ಕೆಂಪು ನೀರು muddy water

ಕಳಸಕನ್ನಡಿ (ನಾ)–ಮದುವೆ ಶಾಸ್ತ್ರಗಳಲ್ಲಿ ಕಂಚಿನಕ್ಕಿ ಹಿಡಿಯುವ ಅಕ್ಕಿ ತೆಂಗಿನಕಾಯಿ ಗಿಂಡಿಚೆಂಬುಗಳಿಂದ ಕೂಡಿದ ಆರತಿ ತಟ್ಟೆ

ಕಳಸಿಗೆ (ನಾ) – 14 ಸೇರುಗಳಷ್ಟು ಧಾನ್ಯ ಹಿಡಿಯುವ ಅಳತೆಯ ಮರ ಅಥವಾ ಬೆತ್ತದಿಂದ ಮಾಡಿದ ಸಾಧನ; 3 ಕಳಸಿಗೆ= 1 ಮುಡಿ

ಕಳಸೊಂತೆ (ನಾ) – ಕಳದಲ್ಲಿ / ಪಾತಿಯಲ್ಲಿ ಬೆಳೆಸಿದ ಸೌತೆಕಾಯಿ, cucumber grown on the soil beds

ಕಳ್ಕ (ಕ್ರಿ)–ಕಳೆದುಕೊಳ್ಳು, lose

ಕಳ್ಳ (ನಾ)–ಕದಿಯುವವ, ಕದ್ದವ, thief ಮಾತಿಗೆ ತಪ್ಪುವವ, ಮೈಗಳ್ಳ–ಸೋಮಾರಿ; ಅಪ್ರಾಮಾಣಿಕ

ಕಳ್ಳ (ನಾ)–ಕೋವಿಯಲ್ಲಿ ಗುಂಡು ಹಾರಿಸುವ ಕೀಲಿ, trigger of the gun

ಕಳ್ಳ (ನಾ)–ಕಣ್ಣಿನಲ್ಲಿ ಏಳುವ ಹುಣ್ಣು, boil rising in the eye. ಕಣ್ಣಗುಳ್ಳೆ, stye

ಕಳೆ (ಕ್ರಿ) – ಕಳೆಯುವುದು, minus

ಕಳೆ (ನಾ)–ದಾಣೆ, ಕಡಾಯದಂತಹ ದೊಡ್ಡ ಪಾತ್ರೆಗಳಲ್ಲಿ ಆಹಾರವನ್ನು ತಿರುವಲು ಬಳಸುವ ಮರದ ಉದ್ದನೆಯ ಸಟ್ಟುಗ

ಕಳೆ ಅಡಿ (ನಾ) – ಬೆಸಗೆಯ ಅಡಿಭಾಗ lower part of the rack made over hearth

ಕಳ್ಳಿ (ನಾ)–ಕದಿಯುವ ಹೆಂಗಸು/ಹೆಣ್ಣು feminine thief

ಕಳ್ಳಿ ದೈ (ನಾ)–ಕಳ್ಳಿ ಗಿಡ, cactus plant

ಕಳ್ಳು (ನಾ)–ಶೇಂದಿ, toddy

ಕಳೆಂಜ (ನಾ) – ಆಟಿ ತಿಂಗಳಲ್ಲಿ ಮಾರಿ ಓಡಿಸಲು ಮನೆ ಮನೆ ಬರುವ ಭೂತ

ಕಾಂಕ್‌ರ್ಸ್ (ಕ್ರಿ.ವಿ)–ಕ್ಯಾಕರಿಸಿ; ಕಾಂಕ್‌ರ್ಸಿ ಉಗಿದು – ಕ್ಯಾಕರಿಸಿ ಉಗಿಯುವುದು spitting by excreting all the sputum from the throat

ಕಾಂಪ್ರಿ (ನಾ)–ಹೊಲಸು, ಕೊಳಕು ಪದಾರ್ಥ dirty eatables

ಕಾಂಬದು(ಕ್ರಿ)–ಕಾಣುವುದು, able to see, Can see, ಕಾಂಬದುಲೆ– ಕಾಣುವುದಿಲ್ಲ Can't see.
ಕಂಡಳಾ – ಕಂಡಿದ್ದೀಯಾ?
Have you seen?
ಕಾಂಬಕಿಲೆ – ಕಾಣಲಾರದು,
Can't see;
ಕಾಂಬಕಾತ್‌ಲೆ – ಕಾಣಲಾಗಲಿಲ್ಲ
could'nt see.
ಕಾಂಬಡ– ಕಾಣಿಸಿಕೊಳ್ಳಬೇಡ
do not appear.

ಕಾಗಡೆ (ನಾ)–ಕೆಳಭಾಗ, lower portion

ಕಾಗದ (ನಾ)– ಪತ್ರ, letter, ಉದಾ: ನಾ ಅಪ್ಪಂಗೆ ಕಾಗದ ಬರ್ದಳೆ.

ಕಾಚ (ನಾ) – ಜನನಾಂಗವನ್ನು ಮುಚ್ಚಿ ಕೊಳ್ಳಲು ಬಳಸುವ ಒಳಉಡುಪು inner wear to cover the genital organ

ಕಾಚುಕುಳ್ಳ (ನಾ) – ಉದ್ದ ಗರಿಗಳ ಬಾಲ ವಿರುವ ಒಂದು ಜಾತಿಯ ಸಣ್ಣ ಹಕ್ಕಿ
a small bird with long black feather

ಕಾಚುಪುಳಿ (ನಾ) – ಪನ್ಪುಳಿ / ಮಂತುಳಿ ಹಣ್ಣಿನಿಂದ ತಯಾರಿಸಿದ ಹುಳಿರಸ
sour juice made from Garcinea fruit

ಕಾಚೆಲ್ (ನಾ.ವಿ) – ಭಾರಿ ಬಿಸಿಲಿನ ತಾಪ, ಭಾರಿ ಸೆಕೆ, ಅತ್ಯಧಿಕ ಉಷ್ಣತೆ
too much heat, high temperature

ಕಾಜೋವು (ನಾ)–ಹೊಳೆಗಳಲ್ಲಿ ಕಂಡುಬರುವ 6 ಇಂಚಿನಿಂದ 1 ಅಡಿ ಉದ್ದದ ಮೀನು
A kind of fish with a length of 6" to 1' found in the rivers of malnad

ಕಾಟ (ಕ್ರಿ) – ಉಪದ್ರ, ಉಪಟಳ, ತೊಂದರೆ, disturb, create trouble
ಉದಾ: ಅಂವ ನಂಗೆ ಭಾರಿ ಕಾಟ ಕೊಟ್ಟದೆ

ಕಾಟ (ನಾ)–ಚಿತೆ, funeral pyre

ಕಾಟಿ (ನಾ)–ಕಾಡುಕೋಣ, bison, wild buffelo

ಕಾಡ್ (ನಾ)–ಅರಣ್ಯ, ಕಾಡು, forest, jungle

ಕಾಡ್ (ನಾ) – ಕಸ, waste pieces thrown here and there

ಕಾಡಿಗೆರ (ನಾ) – ಒಂದು ಜಾತಿಯ ಕಾಡು ಮರ. ಇದನ್ನು ಕಡಿದಾಗ ಹೊರಸೂಸುವ ಸೊನೆ ದೇಹದಲ್ಲಿ ಹುಣ್ಣು ಉಂಟು ಮಾಡುತ್ತದೆ.
A kind of jungle wood, it's resin causes sore on the body

ಕಾಣಿಕೆ (ನಾ) – ಅರ್ಪಣೆಯ ವಸ್ತುಗಳು ಅಥವಾ ಹಣ, offerings.

ಕಾಣೆ (ಕ್ರಿ.ವಿ)–ಕಂಡುಬರುವುದಿಲ್ಲ, found missing, absconding

ಕಾಣೆ (ನಾ)–ಹೊಳೆ ಸಮುದ್ರಕ್ಕೆ ಸೇರುವಲ್ಲಿ ವಾಸಿಸುವ ಉದ್ದನೆಯ ತಿನ್ನಲು ರುಚಿಕರ ವಾದ ಮೀನು.

ಕಾರ್ತಿಂಗಳ ಹರ್ಕೆ – ತುಳು ತಿಂಗಳಾದ ಕಾರ್ತೆಲ್‌ನಲ್ಲಿ ಪಾಷಾಣಮೂರ್ತಿ ದೈವಕ್ಕೆ ಎಡೆ ಇಕ್ಕುವುದು.

ಕಾನ (ನಾ)–ವರ್ಗ ಜಾಗಕ್ಕೆ ಪೂರಕವಾಗಿ ಅತ್ಯಂತ ಕಡಿಮೆ ಭೂಕಂದಾಯ ವಿಧಿಸಿ ಸರಕಾರ ಅಧಿಕೃತವಾಗಿ ನೀಡಿದ ಪಕ್ಕದ ಜಾಗ,
nearby land officially given by the govt in support of agricultural patta land

ಕಾರ್ನೂರು (ನಾ)–ಅಗಲಿದ ಹಿರಿಯರಿಗೆ ಊಟ ಬಡಿಸಿ ಪ್ರಾರ್ಥಿಸುವ ಮೂಲಕ ಆಶೀರ್ವಾದ ಪಡೆಯುವ ಸಂಪ್ರದಾಯ, remembering our ancestors serving food and praying for their blessings
– ಗುರು ಕಾರ್ನೂರಿಗೆ ಬಳಸುದು

ಕಾಪಾಡ್(ಕ್ರಿ)–ರಕ್ಷಿಸು, ಉಳಿಸು, ಸಂರಕ್ಷಿಸು, protect, save, defend

ಕಾಫಿ (ನಾ)– ಬೆಳಗ್ಗಿನ ಉಪಾಹಾರಕ್ಕೆ ಕಾಫಿ ಎಂದೇ ಕರೆಯುತ್ತಾರೆ.
ಉದಾ : ಕಾಫಿ ಆತಾ?
ಕಾಫಿ, ತಿಂಡಿ ಆಯಿತಾ?
ಕಾಪಿ–coffee

ಕಾಪು (ನಾ)–ಹೇಂಟೆ ಕೋಳಿಗೆ ಮೊಟ್ಟೆ ಇಟ್ಟು ಕಾವು ಕೊಡಲು ಸ್ವಲ್ಪ ಎತ್ತರದಲ್ಲಿ ಕಟ್ಟುವ ಬುಟ್ಟಿ, a basket placed at some high places for the hen to lay and hatch eggs

ಕಾಪುಕುತ್ತುದು (ಕ್ರಿ) –ಭತ್ತದ ಗದ್ದೆಯ ತೆನೆಗಳ ಮಧ್ಯದಲ್ಲಿ ದೃಷ್ಠಿ ತಾಗದಂತೆ ನೆಲದ ಮೇಲೆ ಕುತ್ತಿ ಇಡುವ ಎಲೆಗಳಿರುವ ಕಾಸರಕನ ಕೊಂಬೆ

ಕಾಯರ (ನಾ)–ಕಾಸರಕನ ಮರ, ಕಾಯರ್ ಕೊನೆ – ಕಾಸರಕನ ಮರದ ಚಿಗುರು

ಕಾಯಿ (ನಾ) – ಮಿಡಿಗೂ ಹಣ್ಣಿಗೂ ಇರುವ ಮಧ್ಯದ ಸ್ಥಿತಿ – ಮಾವಿನಕಾಯಿ, unripened nut/ fruit.

ಕಾಯಿ (ನಾ) – ಹಣ್ಣಾಗುವುದಕ್ಕೆ ಮೊದಲೇ ಕೀಳುವ ಫಲಗಳು ಹಾಗೂ ತರಕಾರಿಗಳು – ನೆಲ್ಲಿಕಾಯಿ, ತೊಂಡೆಕಾಯಿ, ಬೆಂಡೆ ಕಾಯಿ ಇತ್ಯಾದಿ, ಚಿಪ್ಪು ಇರುವಂತಹ ಫಲಗಳು – ತೆಂಗಿನಕಾಯಿ, ಜಾಯಿ ಕಾಯಿ ಇತ್ಯಾದಿ

ಕಾಯಿ (ಕ್ರಿ)– ಕಾಯುವುದು, wait, ಕಾಯುದು – ಕಾಯುವಂತೆ ಮಾಡು, ಸ್ವಲ್ಪ ಕಾಯಿ, ಈಗ ಬಸ್ ಬಂದದೆ.

ಕಾಯಿ ಪಲ್ಯೆ (ನಾ) –ತರಕಾರಿ, vegetables

ಕಾಯಿಲೆ (ನಾ) – ರೋಗ, ಅನಾರೋಗ್ಯ, disease, ill-health

ಕಾಯ್ಮು (ಕ್ರಿ.ವಿ) – ಖಾಯಂ ಆಗಿ, ಯಾವಾಗಲೂ, ಸದಾ, permanent

ಕಾಯ್ಸು (ಕ್ರಿ)–ಕಾಯಿಸು, ಬೇಯಿಸು, ಕುದಿಸು, boil, bake

ಕಾಯೆಣ್ಣೆ (ನಾ) – ತೆಂಗಿನಕಾಯಿ ಎಣ್ಣೆ, ಕೊಬ್ಬರಿ ಎಣ್ಣೆ, coconut oil

ಕಾರ್ (ಕ್ರಿ) – ವಾಂತಿಮಾಡು, ಕಾರುವುದು, vomit

ಕಾರ್‌ಬಾರ್ (ಕ್ರಿ) – ವ್ಯವಹಾರ, ಆಡಳಿತ, ಸ್ಥಿತಿಗತಿ, ಪರಿಸ್ಥಿತಿ, ಕಾರ್ಯಭಾಗ affair, administration, position, condition, status

ಕಾರ (ನಾ) – ತೀಕ್ಷ್ಣವಾದ ರುಚಿ, ಮೆಣಸಿನ ಕಾರ

ಕಾರಿ (ನಾ)–ಹಕ್ಕಿಗೂಡು, birds nest

ಕಾರಿ (ನಾ) – ಕಪ್ಪು ಬಣ್ಣದ ಗಂಡು ದನಗಳು (ಹೋರಿ, ಎತ್ತುಗಳು)

ಕಾಲ್‌ಕೀಳ್ (ಕ್ರಿ) – ಕಾಲುಕೀಳು, ಓಡಿಹೋಗು run away, escape

ಕಾಲ್‌ಗಂಟ್ (ನಾ) – ಕಾಲಿನ ಪಾದದ ಮೇಲಿನ ಗಂಟು, ankle

ಕಾಲ್‌ದೀಪ (ನಾ) – ನೀಲಾಂಜನ, ಎತ್ತರದ ಪೀಠದ ಮೇಲಿರುವ ದೀಪ

ಕಾಲ್‌ಬೀಣೆ (ನಾ) – ಕಾಲಿನ ಹಿಮ್ಮಡಿಯ ಮೇಲ್ಭಾಗ, upper part of the back side of the ankle

ಕಾಲ್‌ಬೆರಳ್ (ನಾ) – ಕಾಲಿನ ಬೆರಳು, finger of the leg toe

ಕಾಲ್ಗಡಗ (ನಾ) – ಬೇಡಿ, ಕಾಲಿನ ಬಳೆ, anklet

ಕಾಲಾಣಿ (ನಾ)–ಕಲ್ಲೊತ್ತು, corn

ಕಾಲ್ದಾರಿ (ನಾ) – ನಡೆದುಕೊಂಡು ಹೋಗುವ ದಾರಿ, footpath

ಕಾಲುಂಗುರ (ನಾ) – ಮದುವೆಯಾದ ಸ್ತ್ರೀಯರು ಕಾಲಿನ ಬೆರಳಿಗೆ ಹಾಕುವ ಉಂಗುರ ring worn on the second finger of the right leg by the married ladies.

ಕಾಲೆಳಿದು (ಕ್ರಿ) – ಏಳಿಗೆ ಆಗದಂತೆ ಒಳಗಿಂದೊಳಗೆ ತೊಂದರೆ ಕೊಡುವುದು, pulling the legs

ಕಾಲುಪಲೆ (ನಾ) – ಭೂತದ ಆಯುಧ ಗಳನ್ನಿಡುವ ಮಂಚ, A wooden platform on which the weapons of bhootha are kept

ಕಾವಂಗ (ನಾ) – ಆಹಾರ ಪದಾರ್ಥ ಬಳಸಲು ಕೈ ಇರುವ ದುಂಡಗಿನ ಸಣ್ಣ ಪಾತ್ರೆ. A small vessel with handle used to serve food.

ಕಾವು (ನಾ)– ಹಾರೆ, ಫಿಕ್ಕಾಸುಗಳ ಮರದ ಹಿಡಿ, ತಳ್ಳೆ, hilt

ಕಾವು ಕೊಡು (ಕ್ರಿ) – ಮರಿ ಮಾಡಲು ಕೋಳಿ ಮೊಟ್ಟೆ ಮೇಲೆ ಕುಳಿತು ಶಾಖ ಕೊಡುವುದು.

ಕಾಸ್ (ನಾ)–ಹಣ, ದುಡ್ಡು, money
ಉದಾ : ಅಂವ ಭಾರಿ ಕಾಸ್‌ನಂವ

ಕಾಸ್‌ತಾಳಿ (ನಾ) – ವಧು ವರರಿಗೆ ಮದುವೆ ಕಾರ್ಯಕ್ರಮ ಆರಂಭಕ್ಕೆ ಮುನ್ನ ಕಟ್ಟುವ ಸರ, ನಂತರ ಸೂತಕ ಇಲ್ಲ. A gold chain put to the neck of the bride or bride groom at the begining of the marriage

ಕಾಸಿ ಹಾಕುದು (ಕ್ರಿ)–ಪದಾರ್ಥಗಳಿಗೆ ಒಗ್ಗರಣೆ ಹಾಕುವುದು
ನೋಡಿ : ಒಗ್ಗರಣೆ ಹಾಕುದು

ಕಿಂಡಿ (ನಾ)–ತೂತು, ರಂಧ್ರ, hole

ಕಿಂಟ್ರ್ (ನಾ) – ಮೂಗಿನ ಹೊಲಸು, waste coming out of nose, ಗಾಯದ ಮೇಲಿನ ಒಣಗಿದ ಭಾಗ

ಕಿರ್ಕ್ (ಗು)–ಸದಾ ಕಿರಿಕಿರಿ ಮಾಡುವ ವ್ಯಕ್ತಿ irritating person

ಕಿರ್ಬ (ನಾ) – ಚಿಕ್ಕ ಜಾತಿಯ ಚಿರತೆ, cheetah, leopard, ದರ್ಗ್ ಹುಲಿ

ಕಿರ್ಚ್ (ಕ್ರಿ) – ಕಿರುಚು, scream

ಕಿರ್ಚಾಟ (ಕ್ರಿ) – ಕೂಗಾಟ, ಅರಚಾಟ, shouting

ಕಿಚ್ಚಿ (ನಾ) – ಬೆಂಕಿ, fire

ಕಿಚ್ಚಿ ಮರ್ಡುದು (ಕ್ರಿ) – ಬೆಂಕಿಯಲ್ಲಿ ಸೌದೆ ಉರಿಯುವಾಗ ಉಂಟಾಗುವ ಸದ್ದು; the sound which comes when the firewood is burning

ಕಿಡಿ (ನಾ)–ಬೆಂಕಿಯ ಕಣ, ಕೆಂಡದ ಕಣ a tiny piece of ember

ಕಿಡಿಂಜೋಳು (ನಾ) – ತೆಂಗಿನಮಡಲಿನಿಂದ ತಯಾರಿಸಿದ ಗೊರಬೆ

ಕಿತ್ತ್‌ಕ (ಕ್ರಿ)–ಕಸಿದುಕೊಳ್ಳು, snatch, pluck

ಕಿತಾಪತಿ (ಕ್ರಿ) – ಗಲಾಟೆ, ಅಪಥ್ಯ ಕೆಲಸ, nuisance, disturbing, behaviour

ಕಿತ್ತಾಟ (ಕ್ರಿ) – ಒಂದು ವಸ್ತುವನ್ನು ಕಿತ್ತುಕೊಳ್ಳಲು/ ಕಸಿದುಕೊಳ್ಳಲು ನಡೆಯುವ ಜಗಳ/ ಹೋರಾಟ, quarrel in order to get away something

ಕಿನಿಬೆರಳ್ (ನಾ)–ಕಿರುಬೆರಳು, little finger

ಕಿನ್ನಿರಿಬಳ್ಳಿ (ನಾ) – ಒಂದು ಜಾತಿಯ ಔಷಧೀಯ ಸಸ್ಯದ ಬಳ್ಳಿ, a creeper having medicated elements, ನೂತನ ಮನೆಯ ಗೃಹಪ್ರವೇಶ ಸಂದರ್ಭದಲ್ಲಿ ಮನೆಯ ಸುತ್ತಲೂ ಈ ಬಳ್ಳಿಯನ್ನು ಕಟ್ಟುತ್ತಾರೆ. This creeper is tied round the house during the house warming ceremony.

ಕಿರಿಕಿರಿ (ಕ್ರಿ)–ಮಾನಸಿಕ ಅಡಚಣೆ, ಮಾನಸಿಕ ಕಿರಿಕಿರಿ, mental irritation

ಕಿಲಾಡಿ (ಗು)– ತುಂಟ, ಪೋಲಿ, mischievous, miscreant.

ಕಿಲೆಂಬು (ನಾ)–ಕಿಲುಬು, ಜಿಡ್ಡಿನಕೊಳೆ, oily dirt which remains on the utensils and vessels

ಕಿಸೆ (ನಾ)–ಜೇಬು, pocket attached to the shirt or pant

ಕಿಳಿಕಿಳಿ (ಕ್ರಿ)–ಕಚಗುಳಿ, tickling sensation

ಕಿಳ್ಳಿ (ನಾ)–ದ್ರವರೂಪದ ಆಹಾರ ಹೊರ ಚೆಲ್ಲದಂತೆ ಬಾಳೆ ಎಲೆಯ ಮೂಲೆಗಳಲ್ಲಿ ಹಾಕುವ ಕಟ್ಟ, ಹಾಳೆಯ ಎರಡೂ ಬದಿಗೆ ಹಾಕುವ ಕಟ್ಟ

ಕೀಂತ್ (ನಾ) – ಎಲೆ ಅಥವಾ ಬಟ್ಟೆಯ ತುಂಡು piece of leaf or cloth, ಕೀಂತ್ ಬಾಳ್‌ಲೆ

ಕೀಜಣ್ (ನಾ) – ಮಳೆನಾಡಿನ ಹೊಳೆಗಳಲ್ಲಿ ಕಂಡುಬರುವ 6"ನಿಂದ 10" ಉದ್ದದ ತನಕ ಇರುವ ಒಂದು ಜಾತಿಯ ಮೀನು, a kind of fish found in the malnad rivers

ಕೀಜಿ (ನಾ) – ಅಲ್ಯೂಮಿನಿಯಂ, ಕೀಜಿ ಪಾತ್ರೆ – aluminium utensils

ಕೀಟ್ಲೆ (ಕ್ರಿ)–ಚೇಷ್ಟೆ, ತೊಂದರೆ ಕೊಡು, ಕಿರಿಕಿರಿ ಮಾಡು, disturb, create nuisance

ಕೀಳ್ (ಕ್ರಿ)– ಕೀಳು, pluck, ಉದಾ: ಹುಲ್ಲು ಕೀಳು, ಹಲ್ಲು ಕೀಳು; ಕೆಳಮಟ್ಟದ, of low cadre, mean.

ಕುಂರ್ಜಿ (ನಾ)–12 ವರ್ಷಕ್ಕೊಮ್ಮೆ ಅರಳುವ ಹೂವು. a flower which blossoms once in 12 year
ಸುಳ್ಯದಲ್ಲಿ 'ಕುರುಂಜಿ' ಎಂಬ ಮನೆತನ ಇದೆ

ಕುಂಞಿ (ನಾ)–ಪುಟ್ಟ ಮಗು, little baby

ಕುಂಞಿಕತ್ತಿ (ನಾ)–ಪುಟ್ಟ ಕತ್ತಿ, a small sickle

ಕುಂಟುಮ್ಯಾಪು (ನಾ) – ಬಳಸಿ ಬಳಸಿ ಚಿಕ್ಕದಾದ ಹಿಡಿಸೂಡಿ, worn out broom

ಕುಂಟು ನೆಪ (ನಾ) – ಸಕಾರಣವಲ್ಲದ ಸಮರ್ಥನೆ, ಸಣ್ಣ ಪುಟ್ಟ ಕಾರಣ, silly reason, silly justification

ಕುಂಟಿಗೆ ನಿಲ್ಲ್ (ಕ್ರಿ) – ಸತ್ತವನ ಕರ್ಮ ಮಾಡಲು ನಿಲ್ಲುವುದು. accepting the responsibility of performing the obsequial rituals

ಕುಂಟೆ (ನಾ) – ದೊಡ್ಡ ಗಾತ್ರದ ಸೌದೆ, firewood of haavy and big size

ಕುಂಡ (ನಾ) – ಕಚ್ಚುವಂತಹ ಒಂದು ಜಾತಿಯ ಕಪ್ಪು ಬಣ್ಣದ ಚಿಕ್ಕ ಇರುವೆ. a small black stinging ant

ಕುಂಡಕೋಳಿ (ನಾ)–ಒಂದು ಜಾತಿಯ ಉದ್ದ ಕೊಕ್ಕಿನ ಕೊಕ್ಕರೆ, a kind of stork with long neck living near the paddy fields.

ಕುಂಡತ/ಕುಂಡಚ್ಚ (ನಾ)– ಅಳಿಲು, squirrel

ಕುಂಡೆ (ನಾ)–ಪೃಷ್ಠ, ತಿಕ, buttock

ಕುಂಡೋಳಿಂಜ (ನಾ) – ಲಕ್ಷ್ಮೀಚೇಳು, centipede

ಕುಂಬ್ಳಕಾಯಿ (ನಾ) – ಕುಂಬಳಕಾಯಿ, ಬೂದುಗುಂಬಳ, pumpkin

ಕುಂಬಾರ (ನಾ) – ಮಡಿಕೆ ಮಾಡುವವ potter

ಕುಂಬು (ನಾ) – ಶಿಥಿಲಗೊಂಡ, ಗಟ್ಟಿತನ ಕಳಕೊಂಡ, decomposed

ಕುಂಯ್‌ಗುಟ್ಟು (ಕ್ರಿ)– ನಾಯಿಮರಿ ಕುಂಯ್‌ಗುಟ್ಟುವುದು, whimper

ಕುಕ್ಕೆ (ನಾ) – ಬೆತ್ತ ಅಥವಾ ಬಿದಿರಿನ ಸಲಾಕೆಯಿಂದ ಮಾಡಿದ ಬುಟ್ಟಿ basket prepared out of cane or bamboo bar

ಕುರ್ಚಟೆ (ನಾ)– ಮಣ್ಣಿನ ಬಟ್ಟಲು clay plate

ಕುಜ್ಜೆ (ನಾ)– ಹಲಸಿನ ಮಿಡಿ, tender jackfruit

ಕುಟ್ಟ (ಸ.ನಾ) – ಹರಯದ ಗಂಡು ಪ್ರಾಣಿ– ಮನುಷ್ಯ, ಆಡು, ಕುರಿ, ಹೋರಿ adolscent male animal

ಕುಟ್ಟಿ (ಕ್ರಿ) – ತಲೆಗೆ ಮುಷ್ಠಿಯಲ್ಲಿ ಹೊಡೆಯುವುದು beat the head with fist

ಕುಟ್ಟಿ (ನಾ)– ಬಡಗಿಗಳು ಬಳಸುವ ಚಿಕ್ಕ ಮರದ ಅಥವಾ ಬಿದಿರಿನ ತುಂಡು, a small wooden piece

ಕುಟ್ಟಿ (ನಾ)–ಹಂದಿಯನ್ನು ಈ ಹೆಸರಿನಿಂದ ಕರೆಯುತ್ತಾರೆ, pig.

ಕುಟ್ಟು (ಕ್ರಿ)–ಭತ್ತ ಕುಟ್ಟುವುದು, beating the rice

ಕುಡ್ಕ (ನಾ) – ಮದ್ಯವ್ಯಸನಿ, ಮದ್ಯಪಾನಿ, drunkard

ಕುಡ್ಕ (ಕ್ರಿ) – ಕುಡಿದುಕೊ, drink ಉದಾ: ಆಯಾಸ ಆದ್ರೆ ನೀರ್ ಕುಡ್ಕ

ಕುಡ್ತ (ನಾ) – ಅಂಗಿ, shirt

ಕುಡಿ (ಕ್ರಿ) – ಕುಡಿಯುವುದು, drink

ಕುಡಿ (ನಾ) – ಒಕ್ಕಲು, tenant, heir ಉತ್ತರಾಧಿಕಾರಿ, ವಂಶದ ಕುಡಿ

ಕುಡಿಯಕೆ ಆದೆ (ಕ್ರಿ) – ಬಾಯಾರಿಕೆ ಆಗುತ್ತದೆ, feel thirsty.

ಕುಡು (ನಾ)–ಹುರುಳಿ, horse gram

ಕುಡ್ಪು (ನಾ) – ಅನ್ನ ಬಸಿಯಲು ಹಾಗೂ ಬಸಿದ ಅನ್ನವನ್ನು ತುಂಬಿಸಿಡಲು ಬಳಸುವ ಬೆತ್ತ ಅಥವಾ ಬಿದಿರಿನ ಸಲಾಕೆಯಿಂದ ಮಾಡಿದ ಅಗಲವಾದ ಬುಟ್ಟಿ, basket to filter the rice and used to keep the rice to get dried

ಕುಡ್ತೆ (ನಾ) – ಹಾಲು, ತುಪ್ಪ, ಎಣ್ಣೆಯನ್ನು ಅಳೆಯುವ ಸಾಧನ
6ಕುಡ್ತೆ = 1 ಸೇರು, 1 ಕುಡ್ತೆ=ಸುಮಾರು 165 ml

ಕುರ್ಣೆಹಕ್ಕಿ (ನಾ) – ಸೀತೆಹಕ್ಕಿ, a kind of bird

ಕುತಂತ್ರಿ (ನಾ.ವಿ)–ಒಳಂಗಿದೊಳಗೆ ಮೋಸ ಮಾಡುವವ, ಕಪಟಿ cunning

ಕುತ್ತ (ಕ್ರಿ.ವಿ)–ನೇರವಾಗಿ, keep straight, in a perpendicular style, ಲಂಬವಾಗಿ.

ಕುತ್ತ (ನಾ)–ಖಾಯಿಲೆ, ರೋಗ, disease, illness

ಕುತ್ತಕಂಡೆ (ಕ್ರಿ)–ಕಾಲುಮೇಲೆ ತಲೆಕೆಳಗಾಗಿ ಬೀಳು ಕುತ್ತಕಂಡೆ ಬೀಳು,
fall with legs up and head down

ಕುತ್ರಿ (ನಾ)–ಪುನುಗಿನ ಬೆಕ್ಕು, rivet cat

ಕುತ್ತಿ (ನಾ)–ಹಾಲು, ಎಣ್ಣೆ, ತುಪ್ಪ ಅಳೆಯುವ ಮಾನ 6 ಕುಡ್ತೆ=ಒಂದು ಸೇರು; 12 ಸೇರು = ಒಂದು ಕುತ್ತಿ

ಕುತ್ತಿಗೆ (ನಾ) – ಗಂಟಲಿನ ಹೊರಭಾಗ, ತಲೆ ಮತ್ತು ದೇಹವನ್ನು ಜೋಡಿಸುವ ಭಾಗ, neck

ಕುತ್ತಿಗೆ ಕೊಯ್ಯಂವ (ನಾ.ವಿ)–ಅಪಾಯಕಾರಿ ವ್ಯಕ್ತಿ, ಮೋಸದಿಂದ ಸೋಲಿಸುವವ, ವಂಚಿಸುವ, cut throat

ಕುತ್ತು (ಕ್ರಿ)–ಚುಚ್ಚು, ಇರಿಯು, prick, stab

ಕುರ್ತೆಲ್ (ನಾ.ವಿ)–ಹೊಲಸು, dirty, things

ಕುತ್ತೇಟಿ (ನಾ)–ಸದಾ ಕಾಯಿಲೆ ಸ್ಥಿತಿಯಲ್ಲಿರುವ, always sicky

ಕುದಂಟಿ (ನಾ) – ಕೋಲು, ಅಡರ್, ಒಣಗಿದ ಕೊಂಬೆ, small, dried branch of a tree

ಕುದೋಳು (ನಾ)–ಸಣ್ಣ ನೇಗಿಲು, small plough

ಕುದ್ಕ (ನಾ) – ಗುಳ್ಳೆನರಿ, fox, jackal

ಕುದುರೆ (ನಾ) – ತೋಟೆಗೆ ತಾಗುವ ಕೋವಿಯ ಭಾಗ, cock of the gun

ಕುದ್ರು (ಕ್ರಿ)–ಕುಳಿತುಕೊ, sit down, ಕುದ್ದಂವ–ಕುಳಿತುಕೊಂಡವ, ಕುದ್ದದ್–ಕುಳಿತುಕೊಂಡದ್ದು, ಕುದ್ರಿ–ಕುಳಿತುಕೊಳ್ಳಿ

ಕುರ್ದಿ(ನಾ)–ಸುಣ್ಣ ಮತ್ತು ಅರಸಿನಮಿಶ್ರಿತ ನೀರು; ಶುಭಕಾರ್ಯಗಳಲ್ಲಿ ಬಳಸುತ್ತಾರೆ, water mixed with lime and turmeric.

ಕುಪ್ಪ – ಕುಪ್ಪುಳು(ಕೆಂಬೂತ) ಹಕ್ಕಿಯ ಬಣ್ಣದ ಹುಂಜ,
cock with the colour of raven

ಕುಪ್ಪಿ (ನಾ)–ಗಾಜು, ಗಾಜಿನ ಬಾಟ್ಲಿ, glass, glass bottle, ಕುಪ್ಪಿ ಚೂರು, ಕುಪ್ಪಿ ಬಾಟ್ಲಿ, ಒಂದು ಕುಪ್ಪಿ ಕಷಾಯ.

ಕುಪ್ಪುಳು (ನಾ) – ಕೆಂಬೂತ ಹಕ್ಕಿ, raven

ಕುಪ್ಪುಳ್ಸ (ಕ್ರಿ) – ನೆಗೆಯುತ್ತಾ ಸಾಗುವುದು hop

ಕುಬೆ (ನಾ)–ಅಡಿಕೆ/ತೆಂಗಿನಮರದ ಹಿಂಗಾರ ಇರುವ ಹಾಗೂ ಫಸಲು ಕೊಡುವ ಭಾಗ. The part of arecanut and coconut tree which bears the nut and flower

ಕುಬೋಳು (ನಾ) – ಮನೆಯ ಮಾಡಿನ ತುದಿಯ ಭಾಗ, top most portion of the roof

ಕುಮ್ಮಾಯ (ನಾ)–ಸುಣ್ಣದ ಹುಡಿ, lime powder

ಕುಮೇರಿ (ನಾ)–ಗುಡ್ಡೆಗಳಲ್ಲಿ ಕಾಡುಕಡಿದು ಅದನ್ನು ಸುಟ್ಟು ಉಂಟಾದ ಫಲವತ್ತಾದ ಮಣ್ಣಿನಲ್ಲಿ ಮಾಡುವ ಭತ್ತ, ರಾಗಿಯ ಕೃಷಿ, ಕುಮೇರಿ ಬೆಳೆ, extensive cultivation.

ಕುರು (ನಾ)–ಹುಣ್ಣು boil, furuncle, ಕಣ್ಣುಗುಳ್ಳೆ–ಉಮಿಕುರು–ಚಿಕ್ಕ ಕುರು

ಕುರುಂಟು (ನಾ) –ದೇವಸ್ಥಾನಕ್ಕೆ ಭಕ್ತಿಯಿಂದ ಅರ್ಪಿಸುವ ಧಾನ್ಯದ ಕಟ್ಟು, a pack of grain offered to the temple

ಕುರುಂಟು (ನಾ) – ಮದುವೆಯ ಬಳಿಕ ಮದುಮಗಳು ಗಂಡನ ಮನೆಗೆ ಹೋಗುವಾಗ ಜೊತೆಯಲ್ಲಿ ಕಳುಹಿಸುವ ಒಡನಾಡಿ ವ್ಯಕ್ತಿ (ಅಡಿಕುರುಂಟು).

ಕುರುಂಟು ಕಲ್ಲ್ (ನಾ)–ಉಳುಮೆಯಾಗಿ, ಹಲಗೆಮೆಟ್ಟಿ ಸಮತಟ್ಟು ಮಾಡಿ ನಂತರ ನೀರು ಇಳಿದು ಹೋಗಲು ಒಂದು ಚಿಕ್ಕ ಕಣಿ ಮಾಡಲು ಉರುಳಿಸುವ ಕಲ್ಲು.

ಕುರೆ (ನಾ) – ಕಪಿ, ಮಂಗ, monkey,

ಕುಲುಕು (ಕ್ರಿ)–ಅಲ್ಲಾಡಿಸು, shake

ಕುರ್ಲೆ (ನಾ)– ಎಳೆಯ ಬಾಳೆಗಿಡ, tender banana plant.

ಕುವೆ ದೈ (ನಾ) – ಹಿಂಡಿಲು ಹಿಂಡಿಲಾಗಿ ಬೆಳೆಯುವ ದೊಡ್ಡ ಸೊಪ್ಪಿನ ಬಾಳೆಯಂತಹ ಎಲೆಯ ಗಿಡ, ಕಾಡಾನೆಗಳು ಇವುಗಳಿದ್ದಲ್ಲಿ ಹುಡುಕಿಕೊಂಡು ಬರುತ್ತವೆ. ಇದರ ಗೆಡ್ಡೆಯನ್ನು ತುಂಡು ಮಾಡಿ, ಒಣಗಿಸಿ, ಹುಡಿ ಮಾಡಿ ಅರಾರೂಟ್ ಹುಡಿಯಂತೆ ಬಳಸುತ್ತಾರೆ.

ಕುಶಾಲ್ (ಕ್ರಿ.ವಿ) – ತಮಾಷೆ/ಸಂತೋಷ/ನಗುವಿನಿಂದ ಕೂಡಿದ, happy go lucky, always cheerful

ಕುಸಿ (ಕ್ರಿ)–ಸಂತೋಷ, happiness, joy

ಕುಸ್ಕುದು (ಕ್ರಿ) – ಕುಸುಕಿಕೊಂಡು ಹೋಗುವುದು, ಹಿಡಿತದಿಂದ ಬಿಡಿಸಿಕೊಳ್ಳುವುದು get out of clutches

ಕುಳವಾರ್ (ಸ.ನಾ) – ಪ್ರತಿಯೊಂದು ಕುಟುಂಬ, each family, ಕುಳವಾರ್ ಲೆಕ್ಕ

ಕುಳ್ಚಟ (ನಾ) – ವಿಷ್ಣುಮೂರ್ತಿ ದೈವದ ಕೋಲದ ಮುನ್ನಾ ನಡೆಯುವ ದೈವ ಕೋಲ

ಕುಳ್ಳ (ನಾ.ವಿ)–ಗಿಡ್ಡ ವ್ಯಕ್ತಿ, short man, dwarf, ಕುಳ್ಳಿ – short woman

ಕೂಂಗು (ಕ್ರಿ) -- ಕೋಳಿ (ಹುಂಜ) ಕೂಗುವುದು. crowing of the cock

ಕೂಂಜೋಳು (ನಾ) –ಮೀನು ಹಿಡಿಯಲು ಬಳಸುವ ಬೆತ್ತ / ಬಿದಿರಿನ ಸಲಾಕೆಯಿಂದ ಮಾಡಿದ ಸಾಧನ. a pattern made out of bamboo / cane to catch fish

ಕೂಂಟೆಗೆ (ನಾ) –ಕೋಳಿಗಳನ್ನು ಮುಚ್ಚಿ ಹಾಕಲು ಬಳಸುವ ದೊಡ್ಡ ಬುಟ್ಟಿ. A big basket to keep the chickens inside.

ಕೂಕುಳು (ಕ್ರಿ) – ಕೂ... ಎಂದು ಕೂಗು ಹಾಕುವುದು Pant hoot

ಕೂಚು(ಗು)– ಅನ್ಯೋನ್ಯ, ಆತ್ಮೀಯ, intimate, close associate

ಕೂಟ (ನಾ) – ಸಮಾನ ಮನಸ್ಕರ ಒಂದು ಗುಂಪು, a group of like minded people

ಕೂಡ್‌ಗಟ್ಟ್ (ಕ್ರಿ)–ಒಡನಾಟ, ಪಾಲ್ಗೊಳ್ಳುವಿಕೆ intimacy, participation

ಕೂಡ್ಸು (ಕ್ರಿ) – ಕೂಡಿಸು, add

ಕೂರ (ಸ.ನಾ.) – ನಾಯಿಗಳನ್ನು ಕರೆಯುವ ಪದ, word used to call the dogs

ಕೂರಂಬೇಲ್ (ನಾ) – ತೊಂಡೆಬಳಿ ಹಬ್ಬಲು ಚಪ್ಪರದಲ್ಲಿ ಬಳಸುವ ಗಿಡ

ಕೂರ್ಲು (ನಾ)–ಹೊಳೆಯಲ್ಲಿ ಕಂಡುಬರುವ 1 ರಿಂದ 2 ಅಡಿ ಉದ್ದದ ರುಚಿಕರವಾದ ಮೀನು. A tasty fish living in a river of malnad for about one or two feet long.

ಕೂಸು (ನಾ) – ಮಗು, child

ಕೂಳಿ (ನಾ)–ಮೀನು ಹಿಡಿಯಲು ಬಳಸುವ ಬಿದಿರು ಕಡ್ಡಿಯಿಂದ ಮಾಡಿದ ಸಾಧನ. ಒಂದು ಬಾರಿ ಈ ಬುಟ್ಟಿಗೆ ಸೇರಿ ಕೊಂಡರೆ ಹೊರಗೆ ಬರಲು ಸಾಧ್ಯವಿಲ್ಲ.

ಕೂಳೆ (ನಾ)–ಭತ್ತದ ಸಿಪ್ಪೆ, ಒಳಗಿನ ತೆನೆಯ ಹುಲ್ಲಿನ ತುಂಡು. stubble

ಕೆಂಚಿ (ನಾ.ವಿ)–ಕೆಂಪುಬಣ್ಣದ, reddish ಕೆಂಚಿಕೂದಲು

ಕೆಂಚಿಲ್ (ನಾ) – ಕರುಗಳನ್ನು ಕಟ್ಟಿ ಹಾಕುವ ಚಿಕ್ಕ ಹಟ್ಟಿ, A small cowshed used to tether the calves

ಕೆಂಡ (ನಾ)–ಬೆಂಕಿ ಇರುವ ಇದ್ದಲಿನ ತುಂಡು ember, a piece of charcoal with fire

ಕೆಂದಿಟು (ಕ್ರಿ) – ನಾಟಿದೆ, ಮುಟ್ಟಿದೆ, ಪರಿಣಾಮ ಬೀರಿದೆ, ತಾಗಿದೆ, reached, pricked, had its effect

ಕೆಂದಾಳಿ (ನಾ) –ಕೆಂದೆಂಗು, ಕಿತ್ತಳೆ, ಹಳದಿ ಮಿಶ್ರಿತ ಬಣ್ಣದ ಗಿಡ್ಡ ಜಾತಿಯ ತೆಂಗಿನ ಕಾಯಿ, yellow, orange, dwarf breed of coconut

ಕೆಂಪ (ನಾ) – ಕಾಡಿನ ಆಡು, wild goat

ಕೆಂಪು (ನಾ)–ಕೆಂಪು ಬಣ್ಣ, red

ಕೆಂಪಿ (ಸ.ನಾ)–ಕೆಂಪು ಬಣ್ಣದ ದನಗಳು, Cows with reddish colour

ಕೆಂಬಡೆ (ನಾ) – ಸಿಹಿಕುಂಬಳಕಾಯಿ, pumpkin

ಕೆಕ್ಕರ್ಸಿ (ಕ್ರಿ.ವಿ) – ದುರುಗುಟ್ಟಿ, ಕೆಕ್ಕರ್ಸಿ ನೋಡು, staring

ಕೆರ್ಕ್ (ಕ್ರಿ)–ಕೆರೆಯುವುದು, ಅಡಿಕೆ ಕೆರ್ಕ್‌ದು cleaning with a knife or sickle

ಕೆಚ್ಚಲ್(ನಾ)–ದನ ಹಾಲು ಕೊಡುವ ಅಂಗ, ದನದ ಮೊಲೆ, udder

ಕೆಡ (ಕ್ರಿ)–ಬೀಳು, fall down

ಕೆಡ್ಸ್ (ಕ್ರಿ)–ನಂದಿಸು, extinguish

ಕೆಡು (ನಾ)–ಚರ್ಮದಲ್ಲಿ ಏಳುವ ಚಿಕ್ಕ, ಕಪ್ಪಗಿನ ದುರ್ಮಾಂಸ, ನರೋಲಿ wart, small protuberance on the skin

ಕೆಡು (ಕ್ರಿ)–ಹಾಳಾಗು, ಕೆಟ್ಟು ಹೋಗು, perish, get destroyed

ಕೆಡುಕು (ಗು)–ಕೆಟ್ಟತನ, ದುಷ್ಟತನ, evil destructive

ಕೆಪ್ಪ (ಗು)– ಕಿವುಡ, deaf.

ಕೆಮ್ಮು (ನಾ+ಕ್ರಿ)– ಕೆಮ್ಮು, ಕೆಮ್ಮುವ ಸದ್ದು ಮಾಡು, cough, coughing.

ಕೆಣಿ (ನಾ)– ಉಪಾಯ, idea, plan

ಕೆಣ್ದುಟು (ಕ್ರಿ)– ಸಿಕ್ಕಿಬೀಳು, ಶರಣಾಗು, ಸೋಲೊಪ್ಪು, caught, surrender, defeat.

ಕೆತ್ತೆ (ನಾ)–ಹಸಿ ಮರದ ತೊಗಟೆ, bark

ಕೆದ್‌ಕ್ (ಕ್ರಿ) – ಕೆದಕುವುದು, ಮತ್ತೆ ಮತ್ತೆ ಅದೇ ವಿಷಯವನ್ನು ಪ್ರಸ್ತಾಪಿಸುವುದು, ಪುನ: ನೆನಪಿಗೆ ತರು, remind, recapitulate

ಕೆದಲ್ (ನಾ)–ಮುಳಿ ಹುಲ್ಲು, straw used for the roof

ಕೆನೆಯುದು (ಕಿ)–ಕುದುರೆ ಕೆನೆಯುವುದು, horse nieghs

ಕೆನ್ನೆಗುಳಿ (ನಾ)–ಕೆನ್ನೆಯಲ್ಲಿ ಗುಳಿಬೀಳುವುದು, dimple

ಕೆಪ್ಪ (ನಾ.ವಿ) – ಮಂದ ಬುದ್ಧಿಯವ, ಬೋಧಾಳ, ಬೋಳ, mentally weak, addled

ಕೆಪ್ಪಟೆ (ನಾ) – ಕೆನ್ನೆ, ಕೆಪ್ಪೆ, cheek

ಕೆಪ್ಪಟ್ರಾಯ (ನಾ) – ಕೆನ್ನೆ ಬಾವು ರೋಗ, mumps

ಕೆಬಿ (ನಾ)–ಕಿವಿ, ear

ಕೆಬಿಚಂಡೆ (ನಾ)–ಕಿವಿ ಇರುವ ಕೆನ್ನೆ ಭಾಗ, portion of cheek near the ear

ಕೆಬಿನ (ನಾ) – ಭೂತದ ಕಿವಿಯ ಅಲಂಕಾರದ ಆಭರಣ, decorative ear ornaments of the bhootham

ಕೆಬುಳು (ನಾ) – ಕಿವಿರು, gills

ಕೆಮ್ಮೈರೆ (ಸ.ನಾ)–ಕೆಂಪು ಕಪ್ಪುಮಿಶ್ರಿತ ಬಣ್ಣದ ಹುಂಜ, a cock with red and black mixed colour

ಕೆರಿದು (ಕ್ರಿ) – ಹಾರೆಯಲ್ಲಿ ಕೆರೆಯುವುದು ಸೆಗಣಿ ಕೆರೆಯುವುದು/ಸಾರಿಸುವುದು

ಕೆಲ್ಲ್ ಸಾರುದು (ಕ್ರಿ) – ಕಾಲಿನ ಹೆಬ್ಬೆರಳಿನ ಬದಿಯಲ್ಲಿ ಕಲ್ಮಶ ತುಂಬಿ ಕೊಳೆಯುವುದು

ಕೆಲವ್‌ಕೆ (ನಾ) –ಕೆಲವರಿಗೆ, for some people

ಕೆಲ್ಸಿ (ನಾ) – ಕ್ಷೌರಿಕ, barber, ಬೈಗುಳ ಪದವಾಗಿಯೂ ಬಳಸುತ್ತಾರೆ

ಕೆಸ (ನಾ) – ಕೆಸುವಿನ ಗಿಡ colocasia

ಕೆರ್ಸುದು (ಕ್ರಿ) – ನೋಡಿ – ಕೆರ್ಕುದು, scrapping

ಕೆಳ ಅಂತಸ್ತ್ (ನಾ) – ನೆಲ ಅಂತಸ್ತ್ ground floor

ಕೇಡ್ (ಕ್ರಿ.ವಿ) – ನಂಜು, ಅಸೂಯೆ, ದ್ವೇಷ jealous, hatredness

ಕೇಡಿ (ನಾ.ವಿ) – ಪಾತಕಿ, criminal

ಕೇದಗೆ (ನಾ)–ಒಂದು ಜಾತಿ ಪರಿಮಳಯುಕ್ತ ಹೂವು, a kind of scented yellow flower

ಕೇನೆ (ನಾ) – ಸುವರ್ಣಗೆಡ್ಡೆ, yam

ಕೇಪು (ನಾ) – ಮದ್ದು ತುಂಬಿಸಿ ಬಳಸುವ ಕೋವಿ (ಕೇಪು ಕೋವಿ)ಯಲ್ಲಿ ಗುಂಡು ಹಾರಾಟವನ್ನು ಚಾಲು ಮಾಡಲು ಬಳಸುವ ಚಿಕ್ಕ ಸ್ಫೋಟಕ, percussion cap

ಕೇಪುನ ಕೋವಿ (ನಾ) – ಕೈಯಲ್ಲಿ ಮದ್ದು ತುಂಬಿಸಿ ಬಳಸುವ ಕೋವಿ, muscle loading gun

ಕೇರ್ಪು (ನಾ) – ಬಿದಿರಿನಿಂದ ಮಾಡಿದ ಏಣಿ, bamboo ladder

ಕೇಮ/ಕೆಮ್ಮ (ನಾ) – ಆಡಿನಂತಹ ಕಾಡು ಪ್ರಾಣಿ, barking deer

ಕೇರಟೆ (ನಾ)–ಸಹಸ್ರಪದಿ, millepede

ಕೇರ್ (ಕ್ರಿ) – ಒಕ್ಕುವುದು, ಉಗುರುನಿಂದ ಕೆರೆಯುವುದು

ಕೇಳ್ (ಕ್ರಿ) – ಕೇಳುವುದು, ಆಲಿಸುವುದು, ಬೇಕೆನ್ನುವುದು, hear, listen, demand

ಕೈ (ನಾ) – ಹಸ್ತ, hand

ಕೈ (ನಾ) – ಪೈರು, ತೆನೆ, corn

ಕೈಂಕಟೆ (ನಾ.ವಿ) – ಅತಿಯಾದ ಕಹಿ, too much bitter

ಕೈಂಪೆ (ನಾ.ವಿ)–ಪಿತ್ಥಕೋಶ, gall bladder, ಸಾಮರ್ಥ್ಯ, ಜಿದ್ದು, ಹೋರಾಟ ಮನೋಭಾವ

ಕೈಂತುಟು (ಕ್ರಿ)– ಮನಸ್ತಾಪ ಉಂಟಾಗು, ಸಂಬಂಧ ಹದಗೆಡು, broken relationship, hurt mind, mental rift.

ಕೈ ಕೊಡ್ಲಿ (ನಾ) – ಒಂದು ಕೈಯಲ್ಲಿ ಕಡಿಯಬಹುದಾದ ಕೊಡಲಿ, an axe used with one hand.

ಕೈಗೊಂಬೆ (ನಾ.ವಿ) – ಒಬ್ಬ ಹೇಳಿದಂತೆ ಕೇಳುವವ, ನಿರ್ಧಾರ ಕೈಗೊಳ್ಳಲು ಇನ್ನೊಬ್ಬನನ್ನು ಆವಲಂಬಿಸುವವ, always dependent to some one

ಕೈ ಚೆಲ್ಲ್ (ಕ್ರಿ) – ತನ್ನಿಂದ ಸಾಧ್ಯವಾಗಲಾರದೆಂದು ಕೈಚೆಲ್ಲಿ ಕುಳಿತುಕೊಳ್ಳುವವ, one who thinks that it is not possible for me, desperate

ಕೈ ತಪ್ಪು (ಕ್ರಿ)–ತನ್ನ ಹಿಡಿತದಿಂದ ಪಾರಾಗುವುದು, ಅವಕಾಶ ವಂಚಿತನಾಗುವುದು, deprived of opportunity

ಕೈ ನೋಡಂವ (ನಾ) – ಹಸ್ತ ನೋಡಿ ಭವಿಷ್ಯ ಹೇಳುವವ, palmist

ಕೈ ಬುಡು (ಕ್ರಿ) – ಮಧ್ಯದಲ್ಲಿ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುವವ, ಆಸರೆ ನೀಡಿ ಮಧ್ಯದಲ್ಲಿ ಹಿಂತೆಗೆದುಕೊಳ್ಳುವವ with draw support in the middle

ಕೈ ಮಗ್ಚು (ಕ್ರಿ)–ತಾತ್ಕಾಲಿಕ ಹಣಕಾಸಿನ ವ್ಯವಹಾರ,
temporary financial dealings

ಕೈ ಮರಿಗೆ (ನಾ)–ಅನ್ನ, ಪದಾರ್ಥ ಇತ್ಯಾದಿ ಬಳಸುವ ಚಿಕ್ಕಪಾತ್ರೆ,
a small hand vessel used to serve rice and other dishes

ಕೈ ಮಾಡ್ (ಕ್ರಿ) – ದೈಹಿಕವಾಗಿ ಹಲ್ಲೆ ಮಾಡು man handling

ಕೈ ಮೀರಿ (ಕ್ರಿ.ವಿ)–ತನ್ನ ಸಾಧ್ಯತೆಗೆ ಮೀರಿ, more than my capacity

ಕೈಯಾಡ್ಸ್ (ಕ್ರಿ) – ಭಾಗವಹಿಸು, ಪಾಲ್ಗೊಳ್ಳು, interfere, participate
ತೊಡಗಿಸಿಕೊಳ್ಳು, involve

ಕೈಯಾರೆ (ಕ್ರಿ.ವಿ) – ತನ್ನದೇ ಕೈಗಳಲ್ಲಿ, in my own hand

ಕೈಯಾಲೆ (ನಾ) – ಜಗಲಿ, ಹೊರಾಂಗಣ, verandah, ಕೈಸಾಲೆ

ಕೈಲಿ (ಕ್ರಿ)– ಕೈಯಲ್ಲಿ, in hand,
ಉಳಿಕೆ, net balance.

ಕೈ ಹಾಕ್ (ಕ್ರಿ) – ಪಾಲ್ಗೊಳ್ಳು,
ತೊಡಗಿಸಿಕೊಳ್ಳು,
involve, participate

ಕೈ ಹೊಡಿ (ಕ್ರಿ) – ತೆನೆಯನ್ನು ಹೊಡೆದು ಭತ್ತವನ್ನು ಬೇರ್ಪಡಿಸುವುದು,
separating the paddy from the corn

ಕೊಂಕನಾಳಿ (ನಾ)–ಕೋಳಿಯ ಕುತ್ತಿಗೆಯ ಭಾಗ, the neck of the cock

ಕೊಂಕುಮಾತ್ (ಕ್ರಿ.ವಿ)– ವಿನಾಕಾರಣ ತಪ್ಪು ಕಂಡುಹಿಡಿದು ಹಂಗಿಸಿ ಹೇಳುವ ಮಾತು.
ironical words after finding fault intentionally.

ಕೊಂಗ್ರ್ಲು (ನಾ) – ಕೊಕ್ಕರೆ, ಕುಂಡಕೋಳಿ, stork, crane

ಕೊಂಞ (ಗು) – ಕೊಂಞೆ ಮಾತು,
unclean expression or pronunciation

ಕೊಂಡಾಟ (ನಾ.ವಿ) –ಅತಿಯಾಗಿ ಮುದ್ದು ಮಾಡುವಿಕೆ,
spoilt by love and affection

ಕೊಂಡಿ (ನಾ) –ಒಂದಕ್ಕೊಂದು ಸೇರಿಸುವ ಕೊಕ್ಕೆ, joint hook ಗುಬ್ಬಿ– button

ಕೊಂತಣ (ಕ್ರಿ.ವಿ) – ಹಳ್ಳಿಯ ಸಣ್ಣಪುಟ್ಟ ತಾಂತ್ರಿಕ ಕೆಲಸ, local technical work

ಕೊಂತಿ (ನಾ+ನಾ.ವಿ)–ಮೂತಿ ಚೂಪಾಗಿರುವ ಮೀನು, garfish, ಅತೀ ತೆಳ್ಳಗಿನ ಎತ್ತರದ ಸಪೂರದ ಹುಡುಗಿಗೆ ತಮಾಷೆಗೆ ಮಾಡುವ ಪದ a mocking word for a thin and tall girl

ಕೊಂಬ (ನಾ)–ನಾಯಕ, ಆನೆಗಳ ನಾಯಕ, leader, boss

ಕೊಂಬ ಕಾಲ್ (ನಾ) – ಏಡಿಯ ಕಚ್ಚುವ ದೊಡ್ಡ ಕಾಲು, the biting strong leg of the crab

ಕೊಂಬಚೋೞ್ (ನಾ)–ಚೇಳು, scorpion

ಕೊಂಬರ್ಜ (ನಾ) – ಮಂಗ ಕುಣಿಸುವವ, one who trains and makes monkey to dance

ಕೊಂಬು (ನಾ+ನಾ.ವಿ.) – ಕೋಡು, horn ಅಹಂ, ಜಂಭ pride

ಕೊಂಬು (ನಾ) – ತೆಂಗಿನ ಮರದ /ತಾಳೆ ಮರದ / ಈಚಲು ಮರದ ಹಿಂಗಾರ, ಶೇಂದಿ ತೆಗೆಯುವ ಭಾಗ

ಕೊಂಬು ವಾಲಗ (ನಾ) – ಕೋಡು ಅಥವಾ ಕೊಂಬಿನಂತಹ ವಾಲಗ, ಯುದ್ಧ ಸಮಯದಲ್ಲಿ ಊದಲಾಗುತ್ತಿತ್ತು, trumpet

ಕೊಕ್ಕು (ನಾ) – ಹಕ್ಕಿಗಳ ಕೊಕ್ಕು, beak

ಕೊಕ್ಕೆ (ನಾ) – ಕಾಯಿ ಕೀಳಲು ಗಳೆಗೆ ಅಡ್ಡಲಾಗಿ ಕಟ್ಟುವ ಕುಟ್ಟಿ

ಕೊಕ್ಕೆ (ಕ್ರಿ)–ಅಡ್ಡಿ, ಆಕ್ಷೇಪಣೆ, objection, find fault with

ಕೊರ್ಗುವೇಷ (ನಾ) –ದಸರ ಸಮಯದಲ್ಲಿ ದೇಹಕ್ಕೆ ಸಂಪೂರ್ಣವಾಗಿ ಕರಿ ಲೇಪಿಸಿ ಕೊಂಡು, ಮುಟ್ಟಪ್ಪಾಳೆ ಇರಿಸಿಕೊಂಡು, ಕೊಳಲು ಊದುತ್ತಾ ಸಾಗುವ ವೇಷ

ಕೊಚ್ಚುದು (ಕ್ರಿ)– ಮರದ ಕೊಂಬೆಯನ್ನು ತುಂಡರಿಸುವುದು cutting the branches of trees

ಕೊಚ್ಚುದು (ಕ್ರಿ) – ತರಕಾರಿ, ಮಾಂಸ, ಇತ್ಯಾದಿಗಳನ್ನು ಚಿಕ್ಕ ತುಂಡುಗಳಾಗಿ ತರಿಯುವುದು, mincing, cutting into small pieces

ಕೊಚ್ಚುದು (ಕ್ರಿ)–ಜಂಭ ಕೊಚ್ಚಿಕೊಳ್ಳುವುದು, boasting of, ತನ್ನನ್ನು ತಾನೇ ಹೊಗಳಿ ಕೊಳ್ಳುವುದು, ಆತ್ಮಸ್ತುತಿ, self praising.

ಕೊಚ್ಚಿ (ನಾ)–ಮರಗಳಿರುವ ಗುಡ್ಡೆ, ಬೀಜದ ಕೊಚ್ಚಿ area with trees and bushes

ಕೊರ್ಚು (ಕ್ರಿ)–ಸದಾ ಕಿರಿ ಕಿರಿ ಮಾತಾಡುತ್ತಾ ಇರು, ಪರ್ಚು expressing impatient words all the time

ಕೊಚ್ಚೆ (ನಾ)–ಕೊಳಕು ನಿಲ್ಲುವ ಪ್ರದೇಶ, place where the dirt accumulates

ಕೊಟ್ಟ (ನಾ) – ಬಾಪು, ಬಾವು bump

ಕೊಟ್ಟ (ನಾ) – ಬೇಟೆಯ ಪಾಲು, share of the hunted animal

ಕೊಟ್ಟಿಗೆ (ನಾ) – ಹಲಸಿನ ಎಲೆಯಲ್ಲಿ ಮಾಡಿದ ಇಡ್ಲಿಯಂತಹ ಹಿಟ್ಟು

ಕೊಟ್ಟು (ನಾ) – ಹಾರೆ, mammutty

ಕೊಟ್ಟು ಕುಡ್ತಲೆ (ನಾ) –ತಲೆಯಲ್ಲಿ ಜುಟ್ಟು ಇರುವ ಮರಕುಟಿಗ ಹಕ್ಕಿ, wood pecker

ಕೊಟೆಗೆ (ನಾ) – ಕೊಟ್ಟಿಗೆ, shed, store

ಕೊಟ್ಟೆ (ಕ್ರಿ) – ಕೊಟ್ಟಾಯಿತು, already given ಕೊಟ್ಟಾತ್, ಕೊಟ್ಟುಬುಡಿ, give it

ಕೊಟ್ಟೆಕಾಯಿ ಕಟ್ಟ್ (ಕ್ರಿ) – ನಿಧನ ಹೊಂದು, ಮರಣಿಸು, dead

ಕೊಟ್ಟೆಕಣ್ಣ್ (ನಾ.ವಿ) – ದೊಡ್ಡ ಕಣ್ಣಿನವ, a person with a large eye

ಕೊಟ್ಟೆ ಬಾಳೆ/ಕಮ್ಮು (ನಾ.ವಿ)–ಅತೀ ಎತ್ತರಕ್ಕೆ ಬೆಳೆದ ಅತೀ ಹಳೆಯ ತೆಂಗಿನ ಮರ/ ಅಡಿಕೆ ಮರ

ಕೊಡ್ (ಕ್ರಿ)–ಹಸ್ತಾಂತರಿಸು, ನೀಡುವುದು Give, handover
ಕೊಡಿಕಿಲೆ–ಕೊಡಲಾರೆ won't give
ಕೊಟ್ಟನೆ–ಕೊಡುತ್ತೇನೆ will give
ಕೊಡೊಕು–ಕೊಡಬೇಕು, have to give

ಕೊಡ್ಬಡ (ಕ್ರಿ) – ಕೊಡಬೇಡ, don't give

ಕೊಡ್ಪಣ (ನಾ) – ಕೊಡಪಾನ, ಕೊಡ, metal pail

ಕೊಡಿ (ನಾ) – ತುದಿ, ಕೊಂಬೆಯ ತುದಿ, ಚಿರಿ top portion of a tree or pole or the branches

ಕೊಡ್ಜಿ (ಗು) – ಸೌಜನ್ಯತೆ ಇಲ್ಲದ ಹೆಚ್ಚು ಚಟುವಟಿಕೆಯಿಂದ ಕೂಡಿದ ಹುಡುಗಿ, overactive girl without mannerisms and politeness

ಕೊಡಿಮರ (ನಾ) – ದೇವಾಲಯದ ಮುಂಭಾಗದಲ್ಲಿ ಇರುವ ಕಂಚು ಲೋಹದ ಹೊದಿಕೆ ಇರುವ ಎತ್ತರದ ಮರದ ಸ್ತಂಭ, ಜಾತ್ರೆಯ ಆರಂಭದ ದಿನ ಕೊಡಿ ಏರುವುದರೊಂದಿಗೆ ಜಾತ್ರೋತ್ಸವ ಆರಂಭ, tall and heavywooden post covered with copper metal in the front of the temple

ಕೊಡ್ಪು (ಕ್ರಿ)–ಕುಕ್ಕು, peck, ಕೋಳಿ ಕೊಡ್ಪುದು

ಕೊಡ್ಸ್ (ಕ್ರಿ)–ಕೊಡಿಸು, make him to give

ಕೊಣ್ತ (ಕ್ರಿ)– ಕುಣಿತ, dance
ಕೊಣಿ–ಕುಣಿಯು(ಕ್ರಿ)
ಕೊಣ್ಸು–ಕುಣಿಯುವಂತೆ ಮಾಡು, make him to dance,
ಕೊಣಿದು/ ಕೊಣೆದು– ಕುಣಿಯುವುದು.

ಕೊತ್ತಂಬರಿ (ನಾ) – ಪದಾರ್ಥಕ್ಕೆ ಬಳಸುವ ಸಂಭಾರ ಜಿನಸು. coriander

ಕೊತ್ತಿ (ನಾ) – ಬೆಕ್ಕು cat

ಕೊತ್ತಳಿಕೆ (ನಾ) – ಒಣಗಿದ ತೆಂಗಿನ ಸೋಗೆಯ ಬುಡ,
dry palm branch,
ಸೌದೆಯಾಗಿ ಬಳಸುತ್ತಾರೆ,
used as firewood

ಕೊದಂಟಿ (ನಾ) – ಮರದ ಕೋಲು, ಕಣೆ, thin branch of a tree

ಕೊದಿ (ಕ್ರಿ) – ಆಸೆಪಡು, ಆಸೆಯಿಂದ, greedy desire, long for

ಕೊದಿ (ಕ್ರಿ)–ಕುದಿಯು, boil

ಕೊದಿ ಕೂಸು (ನಾ) – ಮೊದಲನೇ ಮಗು, first child

ಕೊದಿ ತೆಗಿದು (ಕ್ರಿ)–ದೃಷ್ಟಿ ನಿವಾರಿಸು, exterminate the evil eye fallen on him

ಕೊಲ್ಲ ಕೆಲ್ಸ (ಕ್ರಿ) – ಚಿಕ್ಕ ಪುಟ್ಟ ತಾಂತ್ರಿಕ ಕೆಲಸ, small techical work

ಕೊಲ್ಲ ಚೆರ್ಗ್ (ಕ್ರಿ) – ಗದ್ದೆಯ ನೀರಿನಲ್ಲಿರುವ ಚಿಕ್ಕ ಮೀನು, a small fish found in the water of paddy field

ಕೊಮ್ಮೆ (ನಾ)–ಭತ್ತ ಸಂಗ್ರಹಿಸಿಡುವ ದೊಡ್ಡ ಮರದ ಪೆಟ್ಟಿಗೆ, a big wooden box to store paddy

ಕೊಮ್ಮೆ (ನಾ) – ಡೊಳ್ಳೊಟ್ಟೆ, heavy belly

ಕೊರಂಟು (ನಾ) – ಗೊರಟು, shell, stone

ಕೊರಗು (ಕ್ರಿ) – ಚಿಂತಿಸು, ದುಃಖಿಸು, ವ್ಯಥೆ, worry, feel sad, grief

ಕೊರಳ್ (ನಾ)–ಭತ್ತದ ತೆನೆ, paddy

ಕೊಯ್ಯು (ಕ್ರಿ) –ತುಂಡುಮಾಡು, ತುಂಡರಿಸು cut, ಸಿಗಿಯು

ಕೊಯ್ಲು (ನಾ)–ಕಠಾವು, harvest

ಕೊಲ್ಲ್ (ಕ್ರಿ) – ಕೊಂದು ಹಾಕು, kill

ಕೊಲೆ (ನಾ)– ಸತ್ತ ವ್ಯಕ್ತಿಗಳ ಆತ್ಮ ಎಂಬ ನಂಬುಗೆ, ಪ್ರೇತಾತ್ಮ.

ಕೊಲೆ (ಕ್ರಿ) – ವ್ಯಕ್ತಿಗಳನ್ನು ಕೊಲ್ಲುವುದು, murder

ಕೊಸರಂಕೊಳ್ಳಿ (ಕ್ರಿ.ವಿ.) – ತೊಂದರೆ ಮಾಡುವವ, ಉಪದ್ರ ಕೊಡುವವ, troublesome, trouble creator

ಕೊರ್ಸಂಡಿ (ನಾ) – ವಾಸನೆಭರಿತ ಎಣ್ಣೆ, oil with bad smell
ಜಿಪುಣ – greedy, stingy

ಕೊಳ್ಂಬೆ (ನಾ) – ಮಡೆಗುತ್ತಿ, ಪಿಕದಾನಿ, ಎಂಜಲು ಬಿಗಿಯುವ ಪಾತ್ರೆ, spitoon

ಕೊಳಲ್ (ನಾ) – ಬಿದಿರು, ಓಟೆಯಿಂದ ಮಾಡುವ ವಾದ್ಯ, ಮುರಳಿ flute

ಕೊಳ್ಕ (ನಾ.ವಿ) – ಗಲೀಜು ಮನುಷ್ಯ, dirty fellow

ಕೊಳಿದು (ಕ್ರಿ) – ಕೊಳೆತು ಹೋಗು, decompose

ಕೊಳ್ಳಿ (ನಾ)– ಬೆಂಕಿ ಇರುವ ಸೌದೆ ತುಂಡು, firewood with fire

ಕೊಳ್ಳಿ ಕಡಿದು (ಕ್ರಿ) –ವಿಷ್ಣುಮೂರ್ತಿ ದೈವದ ಕೋಲಕ್ಕೆ ನಿರ್ಮಿಸುವ ಮೇಲೇರಿಗೆ ಸೌದೆ ಕಡಿಯುವುದು, ನೋಡಿ: ಮೇಲೇರಿ

ಕೊಳ್ಳಿ ಕೂಡ್ಸುದು (ಕ್ರಿ)–ಶವ ಸಂಸ್ಕಾರ ಪ್ರಕ್ರಿಯೆಯಲ್ಲಿ ದಹನಕ್ರಿಯೆ ನಡೆದ ಮಾರನೇ ದಿನ ಕಾಟದ ಸುತ್ತ ಚೆಲ್ಲಿದ ಸೌದೆಗಳನ್ನು ಪುನಃ ಮಧ್ಯಕ್ಕೆ ಹಾಕಿ ಸಂಪೂರ್ಣ ಸುಟ್ಟು ಹೋಗುವ ಹಾಗೆ ಮಾಡುವುದು.

ಕೊಳೆ (ನಾ)–ಕಸ, ಕಲ್ಮಶ, ಮಲಿನ, dirt, filth, unclean materials

ಕೊಳ್ಕೆ (ನಾ)–ಮೂರನೇ ಭತ್ತದ ಬೆಳೆ, third paddy crop
ಕೊಳ್ಕೆ ಗದ್ದೆ–ಮೂರು ಬೆಳೆ ಮಾಡುವ ಗದ್ದೆ

ಕೋಂಬ್ಳೆ (ನಾ.ವಿ)–ಚಿಕ್ಕ ಮಗು, little child,
ಚಿಕ್ಕ ಮಗುವಿನ ಹಾಗೆ ವರ್ತಿಸುವವ, a person who behaves like a child

ಕೋಂಬಕ್ಕಿ (ನಾ.ವಿ.) – ಕೊಡಗಿನ ಮಲೆ ಕಾಡುಗಳಲ್ಲಿ ವಾಸಿಸುವ ದೊಡ್ಡ ಜಾತಿಯ ಹಕ್ಕಿ (ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇದನ್ನು 'ಗುಳ್ಗುಮೆ' ಎಂದು ಕರೆಯುತ್ತಾರೆ). quite a big bird living in the dense jungles of Kodagu

ಕೋಂಬರೆ (ನಾ)–ಕೋಣೆ, ಕೊಠಡಿ, room

ಕೋಟ್ಲೆ (ನಾ)–ಮೈಲಿ ಬೀಳುವುದು, ಸೀತಾಳೆ ಸಿಡುಬು, chickenpox

ಕೋಡಂಗಿ (ನಾ)–ಯಕ್ಷಗಾನ, ಸರ್ಕಸ್‌ಗಳಲ್ಲಿ ಬರುವ ಹಾಸ್ಯ ಪಾತ್ರ, buffoon

ಕೋಮಣ (ನಾ)– ಜನನಾಂಗಗಳನ್ನು ಮುಚ್ಚಿ ಕಟ್ಟುವ ಬಟ್ಟೆ, ಕೌಪೀನ, inner wear

ಕೋರೆ (ನಾ) – ದಾಡೆ, tusk

ಕೋರೆ (ನಾ) – ಕೆಂಪುಕಲ್ಲು, ಮುರಕಲ್ಲು, ಕರಿಗಲ್ಲು ಕಡಿಯುವ ಪ್ರದೇಶ, area where granite or laterite stones are cut, quarry.

ಕೋಲ್‌ತ್ರಿ (ನಾ) – ಬಟ್ಟೆ ಸುತ್ತಿದ ಚಿಕ್ಕ ದೊಂದಿ. ಕೆಲವೊಂದು ದೈವಿಕ ಕಾರ್ಯಗಳಲ್ಲಿ ದೀಪವಾಗಿ ಬಳಸುತ್ತಾರೆ.

ಕೋಲ (ನಾ.ವಿ)–ವೇಷಭೂಷಣ, ಕೆಟ್ಟದಾಗಿ ಧರಿಸಿದ ಬಟ್ಟೆ, ಭೂತಕೋಲ

ಕೋಲಂತ್ರಿ – ಪತಂಗ ಹಾಗೂ ಚಿಟ್ಟೆಗಳನ್ನು ತಿನ್ನುವ ಹಕ್ಕಿ, a small bird which eats the butterflies and insects

ಕೋಲು (ನಾ)–ಮರದ ಚಿಕ್ಕ ದೊಣ್ಣೆ, ಬಡಿಗೆ, stick

ಕೋಲು (ನಾ)–ಅಳತೆಕೋಲು, measuring stick, ಮಣ್ಣಿನ / ಮರದ ಅಳತೆಗೆ ಬಳಸುವ ಕೋಲು
ಆಚಾರಿ ಕೋಲು – 24 ಅಂಗುಲ=28"
ಗಜ ಕೋಲು–36"=3 ಅಡಿ

ಕೋಲ್‌ಜೇನ್ (ನಾ) – ಮರ/ಗಿಡಗಳ ಕೊಂಬೆಗಳಲ್ಲಿ ಕಟ್ಟುವ ಬರೇ ಎರಿ ಮಾತ್ರ ಇರುವ ಜೇನು

ಕೋಸ್‌ಕಣ್ಣ್ (ನಾ.ವಿ)–ಮೆಳ್ಳೆಗಣ್ಣು, squint

ಕೋಸ್ (ಕ್ರೀ)–ಸಿಕ್ಕಿಸು, fix, ನೇತಾಡು–hang

ಕೋಸಿ ಕಂಬುದು–ನೇತಾಡಿಕೊಳ್ಳುವುದು
ಉ: ಅಂಗಿನ ಆಣಿಲಿ ಕೋಸಿ ಇಸುದು

ಕ್ಯೊಂತು (ಗು)– ನಿಷ್ಕ್ರೀಯ, ಜಡ್ಡ, ನಿಸ್ತೇಜ, inactive, pale, dull.

ಖ

ಖಂಡಿ (ನಾ) – ತೂಗಿ ಮಾಡುವ ಅಳತೆಯ ಮಾನ. 20 ಮಣ/250 ಕೆಜಿ=1 ಖಂಡಿ

ಖಂಡಿತ (ಕ್ರಿ.ವಿ)– ಚಾಚೂ ತಪ್ಪದೆ, definitely, certainly, without fail

ಖಡಾಖಡಿ(ಕ್ರಿ.ವಿ) – ಖಂಡತುಂಡಾಗಿ, ಸ್ಪಷ್ಟವಾಗಿ firmly, ಖಡಾಖಂಡಿತ

ಖಾತ್ರಿ (ಕ್ರಿ)–ಸಂದೇಹ ನಿವಾರಿಸಿಕೊಳ್ಳು, avoid doubt, ಖಾತ್ರಿಪಡಿಸಿಕೊಳ್ಳುವುದು, ಖಚಿತಪಡಿಸಿಕೊಳ್ಳುವುದು, confirm

ಖಾಲಿ (ಕ್ರಿ.ವಿ)–ಬರಿದಾಗು, ಏನೂ ಇಲ್ಲದಿರು, empty, ಉ: ಮನೆಖಾಲಿ ಮಾಡ್ದು ಕಿಸೆಲಿ ಇದ್ದ ದುಡ್ಡೆಲ್ಲಾ ಖಾಲಿ

ಖೆಡ್ಡಾಸ (ನಾ)–ಭೂಮಿ ತಾಯಿಯನ್ನು ಆರಾಧಿಸುವ ಹಬ್ಬ

ಗ

ಗಂಜಿ (ನಾ)– ತೆಳಿ ಇರುವ ಅನ್ನ, rice with rice water, ತೆಪ್ಪಲೆ, ಪಾತ್ರೆ, basin.

ಗಂಜಿಮುರಾಕ್ (ನಾ)– ಒಳಅಂಗಿ, banian.

ಗಂಟ್ (ಕ್ರಿ)– ಕಟ್ಟ, tie, knot.

ಗಂಟ್ (ನಾ)– ನಿಧಿ, treasure.

ಗಂಟ್ ಬೀಳ್ (ಕ್ರಿ)– ಅಂಟಕೊಳ್ಳು, ಬೆನ್ನ ಹಿಂದೆ ಬೀಳುವವರು, ನಮಗೆ ಮನಸ್ಸಿಲ್ಲ ದಿದ್ದರೂ ನಮ್ಮ ಜೊತೆ ಸಂಬಂಧವನ್ನು ಬಯಸುವವರು.
Desiring for relationship even though we are not interested.

ಗಂಟ್ಲ್ ಬೇನೆ (ನಾ.ವಿ)– ಗಂಟಲು ನೋವು, neck pain, sore throat.

ಗಂಡಾಳ್ (ನಾ) – ಗಂಡು ಕೆಲಸಗಾರ, maleservant.

ಗಂಡ್‌ಬೀರಿ (ನಾ.ವಿ) – ಗಂಡಸರಂತೆ ವರ್ತಿಸುವ ಹೆಣ್ಣು. Woman with masculine character.

ಗಂಡಾಂತರ (ಕ್ರಿ.ವಿ)– ಆಪತ್ತು, ಅಪಾಯ, impending danger.

ಗಂಡಿ (ನಾ) – ಕಂದಕ, ಅಗಳು, trench

ಗಗ್ಗರ (ನಾ)– ಭೂತ ಕಟ್ಟುವವರು ಕಾಲಿಗೆ ಕಟ್ಟುವ ನೃತ್ಯಾಭರಣ,
a musical anklet used by the bhootham performer.

ಗಜಕೋಲು (ನಾ)– 36" = 3ಅಡಿ ಉದ್ದದ ಅಳತೆಕೋಲು, a measuring stick 36"or 3feet in length.

ಗಟ್ಟಮಣೆ (ನಾ)– ಪೊಳಿಮಣೆ, ಅಂಗಳವನ್ನು ಹೊಡೆದು ಸಮಗೊಳಿಸಲು ಬಳಸುವ ಮರದ ಚಪ್ಪಟೆಯಾಕಾರದ ಮುಟ್ಟಿ. A flat wooden hammer used to set right the floor of the yard.

ಗಟ್ಟಿಂಜ (ಗು)– ಗಟ್ಟಿಗ, ಶೂರ, ಹುಶಾರು, active, skilful, brillliant, extra-ordinary, successful.

ಗಟ್ಟಿಕುಳ (ನಾ.ವಿ)– ಶ್ರೀಮಂತ, ಸ್ಥಿತಿವಂತ, ಆರ್ಥಿಕವಾಗಿ ಸಬಲರು, economically strong, rich, well placed.

ಗಡ್ಸ್ (ನಾ.ವಿ)– ತಾಕತ್ತು, ಧೈರ್ಯ, courage, capacity.

ಗಡ (ಕ್ರಿ)– ಅಂತೆ, ಹಾಗಂತೆ, ಹೌದುಗಡ– ಹೌದಂತೆ, ಕೊಡಕಡ– ಕೊಡಬೇಕಂತೆ, ಬಂದುಟುಗಡ– ಬಂದಿದ್ದಾನಂತೆ, suffix to declare some happening

ಗಡಂಗ್ (ನಾ)– ಸರಾಯಿ ಅಂಗಡಿ, arrack shop.

ಗಡಸ್ (ನಾ.ವಿ)– ಗಡಸುಧ್ವನಿ, ಕರ್ಕಶ ಧ್ವನಿ, rough voice.

ಗಡಿ (ನಾ)– ಗಾಯ, wound, ಗಾಯದ ಗುರುತು, wound mark.

ಗಡಿಗೆ (ನಾ)– ನೀರು ಹೊತ್ತೊಯ್ಯುವ ಪಾತ್ರೆ, pail, ತರಕಾರಿ ಗಿಡಗಳಿಗೆ ನೀರು ಕೊಂಡೊಯ್ದು ಹಾಕುವ ಮಣ್ಣಿನ ಪಾತ್ರೆ, pitcher.

ಗಡಿಬಿಡಿ (ಕ್ರಿ)– ಅವಸರ, haste, hurry, ನೋಡಿ: ಅಂಬೆರ್ಪು.

ಗಡು (ನಾ)– ವಾಯಿದೆ, due date.

ಗಣನೆ (ಕ್ರಿ)– ಗಮನಕ್ಕೆ ತೆಗೆದುಕೊಳ್ಳು, take notice of, give attention.

ಗತ್ತ್ (ನಾ.ವಿ)– ಜಂಭ, ಅಹಂ, ಅಹಂಕಾರ, pride, ego, overconfidence.

ಗತಿ (ಕ್ರಿ)– ಅವಲಂಬನೆ, dependence. ಉದಾ: ನಂಗೆ ಅವನೇ ಗತಿ.

ಗತಿಗೆಟ್ಟಂವ (ಗು)– ಗತಿಯಿಲ್ಲದವ, ಅನಾಥ, ಬಡವ, ನಿರ್ಗತಿಕ, orphan, poor, backward.

ಗದ್ರ್‌ಸ್ (ಕ್ರಿ)– ಗದರಿಸು, threaten.

ಗದ್ದಳ (ನಾ)– ಔತಣಕೂಟ, ಗಮ್ಮತ್ತು, ಗೌಜಿ, dinner, joyous moment.

ಗದ್ದೆ (ನಾ)– ಭತ್ತ ಬೆಳೆಯುವ ಸಮತಟ್ಟಾದ ಪ್ರದೇಶ, ಭತ್ತದ ಹೊಲ, paddy field.

ಗದ್ದೆ ಪುಣಿ (ನಾ)– ಗದ್ದೆಯಲ್ಲಿ ನೀರು ನಿಲ್ಲಿಸುವರೇ ಅದರ ಅಂಚಿಗೆ ಹಾಕುವ ದಿಡ್ಡು, ridge bund on the verge of paddy field.

ಗರ್ನಾಲ್ (ನಾ)– ಸಿಡಿಮದ್ದಿನ ಪಟಾಕಿ, cracker made out of gun powder.

ಗಪ್‌ಚಿಪ್ (ಕ್ರಿ)– ಮೌನ, silent, keep quiet.

ಗಬಗಬ (ದ್ವಿ)– ವೇಗವಾಗಿ ತಿನ್ನು, eat speedily or ravenously.

ಗಬ್ಬ (ನಾ)– ಗರ್ಭ, pregnancy.

ಗಬ್ಬಲ್ ಕೆತ್ತೆ (ನಾ)– ಮಗುವನ್ನು ಸ್ನಾನ ಮಾಡಿಸುವ ನೀರಿಗೆ ಹಾಕುವ ಗಬ್ಬಲ್ ಮರದ ಕೆತ್ತೆ,
bark of the gabbal tree which is put to the hot water in which little children are bathed.

ಗಮ್‌ಜಾಲ್ (ಕ್ರಿ)– ಕೆಲಸ ಇಲ್ಲದೆ ಮಜಾ ಮಾಡುವುದು, ಸದಾ ಮೋಜು ಮಾಡುತ್ತಾ ಕಾಲ ಕಳೆಯುವುದು,
leading free and irresponsible life.

ಗಮಗಮ (ದ್ವಿ)– ಪರಿಮಳ,
pleasant smell.
ಅಡುಗೆ ಮನೆಯಿಂದ ಬರುವ ಹಿತಕರ ಪರಿಮಳ, ತಿಂಡಿ ತಯಾರಿಸುವಾಗ ಬರುವ ಪರಿಮಳ,
hilarious smell.

ಗಮ್ಮ (ನಾ.ವಿ) – ಒಮ್ಮಿಂದೊಮ್ಮೆಲೆ ಬರುವ ವಾಸನೆ
bad smell coming suddenly.

ಗಮ್ಮತ್ತ್ (ನಾ)– ಔತಣಕೂಟ, ಸಮ್ಮಾನ,
dinner, ಭರ್ಜರಿ ಭೋಜನ,
ನೋಡಿ : ಗದ್ದಳ.

ಗಮನ (ನಾ.ವಿ)– ಅಡುಗೆಯ ಸುವಾಸನೆ, the plesant smell of the dishes.

ಗಮನ (ಕ್ರಿ)– ಮನಸ್ಸು ಕೇಂದ್ರೀಕರಿಸು,
ಎಚ್ಚರ ವಹಿಸು,
give attention, take care.

ಗಮಾರ (ನಾ)–ಹಳ್ಳಿಯವ, ದಡ್ಡ, ಅನಾಗರಿಕ, uncivilised, not modern.

ಗಯು (ನಾ) – ಹೊಳೆಗಳಲ್ಲಿ ಆಳವಾದ ವಿಶಾಲವಾದ ನೀರಿನ ಗುಂಡಿ, vast and deep places in the river.

ಗರ (ನಾ)– ಅಪಸ್ಮಾರ, ಮೂರ್ಚೆ ರೋಗ, epilepsy.

ಗರಿಕೆ ಹುಲ್ಲು (ನಾ)– ಔಷದೀಯ ಗುಣವುಳ್ಳ ಹುಲ್ಲು, ಪೂಜೆಗಳಲ್ಲಿ ಬಳಸುತ್ತಾರೆ, a madicated grass used in poojas

ಗರುಗ (ನಾ)– ಭೃಂಗರಾಜ ಗಿಡ, ಔಷದೀಯ ಸಸ್ಯ, eclipta alba.

ಗಲಾಟೆ (ಕ್ರಿ.ವಿ) – ಗದ್ದಲ, ಗಲಭೆ, disturbance, ಗೊಂದಲ, ಕೋಲಾಹಲ, bustle, ಬೊಬ್ಬೆ, too much noise.

ಗಲಿಬಿಲಿ (ಕ್ರಿ)– ಗೊಂದಲ, confusion, ಅವ್ಯವಸ್ಥೆ, ಕಕ್ಕಾಬಿಕ್ಕಿಯಾಗು, disorder.

ಗಲೀಜ್ (ನಾ.ವಿ)– ಸ್ವಚ್ಛತೆ ಇಲ್ಲದ, ಕೊಳಕು ತುಂಬಿದ, dirty, unclean, not hygenic.

ಗಸಿ (ನಾ)– ಸ್ವಲ್ಪ ಗಟ್ಟಿಯಾದ ಪದಾರ್ಥ, semi-hard side dish.

ಗಳಲೆ (ನಾ)– ದುಗ್ಧಗ್ರಂಥಿ, lymph node.

ಗಳಿಗೆ (ನಾ)– ಒಂದು ಕ್ಷಣ, a moment (ಪಂಚಾಂಗದ ಎರಡೂವರೆ ಗಳಿಗೆ ಒಂದು ಗಂಟೆ)

ಗಳು (ನಾ)– ಬಿದಿರು ಅಥವಾ ಮರದ ದಂಡಿನ ಫಕ್ಕಾಸು, ದಂಡು, rafter made out of bamboo or wooden pole.

ಗಳೆ (ನಾ)– ಅಡಿಕೆ/ ತೆಂಗಿನಕಾಯಿ/ ಕೀಳಲು ಬಳಸುವ ಉದ್ದನೆಯ ಹಾಗೂ ಸಪೂರ ವಾದ ಬಿದಿರು, long and thin bamboo used to pluck arecanut or coconut.

ಗಾಂಡ್‌ಮತ್ತ್ (ನಾ.ವಿ)– ಅಹಂ, ದೊಡ್ಡಸ್ಥಿಕೆ, ego, superiority complex.

ಗಾಣಿಂಜ (ನಾ)– ಗಾಣಿಗ, ವನಸ್ಪತಿ ತೈಲ ತಯಾರು ಮಡುವವರು, a community of pepole who prepare and sell edible oil.

ಗಾಬ್ರಿ (ಕ್ರಿ.ವಿ)– ಗಾಬರಿ, ಭಯ, ಗೊಂದಲ, flabbergasted, fear, afraid, confused.

ಗಾರಿಗೆ (ನಾ)– ಹಲಸಿನ ಹಣ್ಣಿನ ಮಿಶ್ರಣ ದಿಂದ ಮಾಡಿದ ಅಕ್ಕಿದೋಸೆ, rice dosa made mixing jackfruit.

ಗಾಳ (ನಾ)– ಮೀನು ಹಿಡಿಯಲು ಬಳಸುವ ಕೊಕ್ಕೆ, fish hook.

ಗಾಳ (ಕ್ರಿ)– ಆಮಿಷ ತೋರಿಸಿ ಒಬ್ಬನನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುವುದು.

ಗ್ಯಾರ್ದಣ್ಣ್ (ನಾ)– ಗೇರುಹಣ್ಣು, cashewnut fruit.

ಗಾಳಿಕಿಂಡಿ (ನಾ)– ಮೇಲ್‌ಕಿಡ್ಕೆ, ventilator

ಗಾಳಿಮರ (ನಾ) – ಒಂದು ಜಾತಿಯ ಚಿಕ್ಕ ಸೂಜಿಯಂತಹ ಎಲೆಗಳುಳ್ಳ ಮರ, cassurina tree.

ಗಾಳಿಸುದ್ದಿ (ನಾ) – ಸರಿಯಾದ ಆಧಾರ ಗಳಿಲ್ಲದೆ ಸುದ್ದಿ ಹರಡುವುದು, ವದಂತಿ, rumour, gossip.

ಗಾಳಿಸೋಂಕು (ನಾ) – ವಾತಾವರಣದ ಏರುಪೇರಿನಿಂದಾಗಿ ಉಂಟಾಗುವ ಅನಾರೋಗ್ಯ, ill health due to change in atmosphere.

ಗ್ಲಾಸ್ (ನಾ)– ಲೋಟ, cup.

ಗಿಂಡಿ (ನಾ)– ಚಿಕ್ಕ ಬಾಯಿ ಇರುವ ಪಾತ್ರೆ, ಗಿಂಡಿ ಚೆಂಬು, ಎಣ್ಣೆ ಗಿಂಡಿ– ಇದಕ್ಕೆ ಮುಚ್ಚಳ ಇರುತ್ತದೆ.

ಗಿಜಿಗಿಜಿ (ದ್ವಿ)– ಸಮಾರಂಭ, ಉತ್ಸವಗಳ ಸಂದರ್ಭದಲ್ಲಿ ಜನ ಜಂಗುಳಿಯಿಂದ ಉಂಟಾಗುವ ವಾತಾವರಣ, situation created due to heavy pressure of people.

ಗಿಡ್‌ಂಜ (ನಾ)– ಗಿಡುಗ, eagle, kite.

ಗಿಡ್ಡ (ನಾ.ವಿ)– ಚಿಕ್ಕ, ಪುಟ್ಟ, ಎತ್ತರಇಲ್ಲದ, ಕುಳ್ಳ, ಗಿಡ್ಡ ವ್ಯಕ್ತಿ. ಗಿಡ್ಡಿ – ಕುಳ್ಳಿ ಹೆಣ್ಣು short, dwarf lady.

ಗಿಡಿಯ (ನಾ.ವಿ) – ಬೂದು ಬಣ್ಣದ, ಗಿಡುಗನ ಬಣ್ಣದ ಹುಂಜ. a cock with ash colour similar to the colour of an eagle.

ಗಿಡ್ಡೆ (ನಾ) – ಚಿಕ್ಕಪೊದೆ, small bush, hedge, shrub.

ಗಿಢ (ಕ್ರಿ.ವಿ)– ಪೂರ್ತಿ, ಏನೊಂದು ಸ್ಥಳಾವಕಾಶ ಇಲ್ಲದಂತೆ. full, complete. ಉದಾ: ಹಾಲ್ ಒಳಗೆ ಜನಗಿಢ ತುಂಬಿದ್ದೊ.

ಗಿಣ್ಣ (ನಾ)– ಮಿದುಳು, brain.

ಗಿಣ್ಣಲ್ (ನಾ) – ಅನ್ನ ತೋಡುವ ಪಾತ್ರೆ.

ಗಿರಾಕಿ (ನಾ)– ಗ್ರಾಹಕ, customer. ಕಿರಿಕಿರಿ ಮನುಷ್ಯ (ವ್ಯಂಗ್ಯವಾಗಿ) nuisance person, ಮಹಾಗಿರಾಕಿ – ಚಾಲಾಕಿ ಹೆಂಗಸು, shrewd lady.

ಗಿರಿಗಿಟ (ನಾ)–ತೆಂಗಿನಗರಿಯಿಂದ ಮಾಡಿದ ಚಿಕ್ಕ ತಿರುಗುವ ಚಕ್ರ, a fan like material made out of palm leaf.

ಗಿಲೀಟ್ (ನಾ.ವಿ)– ನಯವಾದ ಮಾತು, ಲೋಹಗಳಿಗೆ ಬಳಿಯುವ ಬಣ್ಣ. rosy word, glittering colours applied to the metal.

ಗೀಚ್ (ಕ್ರಿ) – ಗೀಚುದು, ಓರೆಕೋರೆಯಾಗಿ ಬರೆ, ಕೆಟ್ಟಕೈಬರಹ, write illegibly, poor handwriting.

ಗೀಜಣ್ ಹಕ್ಕಿ (ನಾ)–ಗೀಜಗನ ಹಕ್ಕಿ, bulbul

ಗೀಟ್ (ನಾ) – ಗೆರೆ, ಗೀಟ್ ಎಳಿದು– ಗೆರೆ ಎಳೆಯುವುದು, line, drawing the line.

ಗೀಣ (ನಾ)– ಗಿಳಿ, parrot.

ಗೀರ್ (ಕ್ರಿ)– ಒಂದು ವಸ್ತುವನ್ನು ಇನ್ನೊಂದು ವಸ್ತುವಿಗೆ ವೇಗವಾಗಿ ಉಜ್ಜುವುದು, scratch speedily, ಉದಾ: ಬೆಂಕಿ ಕಡ್ಡಿ ಗೀರ್ದ್.

ಗೀಸುಳಿ (ನಾ)– ಮರವನ್ನು ನಯಗೊಳಿಸಲು ಬಡಗಿಗಳು ಬಳಸುವ ಉಪಕರಣ, ಗೀಸುಳಿ ಹಾಕುದು– ಪೀಠೋಪಕರಣ ಗಳನ್ನು ತಯಾರಿಸುವ ಮೊದಲು ಮರ ವನ್ನು ನಯಗೊಳಿಸುವುದು. smoothening the surface of the wood before making the furniture.

ಗೀಳ್ (ಕ್ರಿ.ವಿ)– ಚಟ, ಹವ್ಯಾಸ, habit, hobby.

ಗುಂಗು (ನಾ)– ಅಮಲು, ಜೊಂಪು, hangover, reverie.

ಗುಂಗುರು (ನಾ)– ಸುರುಳಿ ಸುರುಳಿಯಾಗಿ, curl, ಉದಾ: ಗುಂಗುರು ಕೂದಲ್, curly hair.

ಗುಂಡಿ (ನಾ)– ನೆಲದಲ್ಲಿ ತೋಡುವ ಹೊಂಡ, pit dug in the soil.

ಗುಂಡಿ ಕಡಿಯ (ಕ್ರಿ)– ಸತ್ತು ಹೋಗು ಎಂದು ಹೇಳುವ ಬಯ್ಗುಳ ಪದ, a cursing abuse for death.

ಗುಂಡು (ನಾ)– ಗೋಲಿ, bullet.

ಗುಂಡಗೆ (ನಾ.ವಿ)– ಉರುಟಾದ, round, ಗೋಳಾಕಾರದ, circular.

ಗುಂಬ (ನಾ)– ಆಹಾರ ವಸ್ತು, ಧಾನ್ಯ ಹಾಗೂ ಸಂಭಾರ ಜಿನಸುಗಳನ್ನು ತೆಗೆದಿರಿಸುವ, ಬಿದಿರಿನ ತುಂಡು ಅಥವಾ ಸೋರೆಕಾಯಿ ಮುಂತಾದ ತರಕಾರಿಗಳ ಹೊರ ಆವರಣ ದಿಂದ ತಯಾರಿಸಿದ ಮುಚ್ಚಳ ಇರುವ ಕೋಶ, container made out of the vegetable shell or bamboo piece.

ಗುಂಯ್‌ಗುಟ್ಟು (ಕ್ರಿ)– ಪದೇ ಪದೇ ನೆನಪಿಗೆ ಬರು, ಸದಾಮನಸ್ಸಿನಲ್ಲಿ ಹಾದುಹೋಗು, lingering in the mind.

ಗುಗ್ಗುರು (ನಾ) – ಕುಂಬಾದ ವಸ್ತುಗಳಲ್ಲಿ ಕಂಡುಬರುವ ಕೀಟ, an insect found in the dry decrnposed things.

ಗುಗ್ಗೆ (ನಾ) – ಕಿವಿಯಿಂದ ಹೊರಬರುವ ಕಲ್ಮಶ, earwax.

ಗುಗ್ಗೆ ಸಟ್ಟ್‌ಗ (ನಾ) – ಕಿವಿಯಿಂದ ಕಲ್ಮಶ ತೆಗೆಯುವ ಉಪಕರಣ, an equipment to remove the earwax.

ಗುಜ್‌ರಿ (ನಾ)– ಹಳೆಯ, ನಿರುಪಯುಕ್ತ, ದುಸ್ಥಿತಿಯಲ್ಲಿರುವ ವಸ್ತು, old and useless thing.

ಗುಜ್‌ರಿ (ನಾ)– ಹಳೆಯದಾದ ಹಾಗೂ ಕೆಟ್ಟು ಹೋದ ವಸ್ತುಗಳನ್ನು ಕೊಂಡು ಕೊಳ್ಳುವ ಹಾಗೂ ಮಾರಾಟ ಮಾಡುವ ಅಂಗಡಿ, junk shop.

ಗುರ್ಜಿ (ನಾ) – ಸಮಾಧಿ, ಗೋರಿ, grave, tomb.

ಗುಟ್ಟು (ನಾ)– ರಹಸ್ಯ, secret.

ಗುಡುಗ್ (ನಾ)– ಗುಡುಗುವುದು, thunder.

ಗುಡ್ಡ (ನಾ)– ಬಚ್ಚಲು ಮನೆ, bathroom (ಕೊಡಗಿನಲ್ಲಿ ಬಳಸುವ ಪದ)

ಗುಡಾರ (ನಾ)– ಕೋಳಿಗೂಡು hencoop.

ಗುಡ್ಜಿಲ್ (ನಾ)– ಗುಡಿಸಲು, cottage.

ಗುಡ್ಸು (ಕ್ರಿ)– ಗುಡಿಸು, sweep.

ಗುಡ್ಡೆ (ನಾ)– ಬೆಟ್ಟ, hill.

ಗುಡ್ಡೆ ಹಾಕ್ (ಕ್ರಿ)– ರಾಶಿಮಾಡು, pile up.

ಗುಣಪಡ್ಸ್ (ಕ್ರಿ) – ಚಿಕಿತ್ಸೆ ಕೊಡು, ಗುಣಪಡಿಸು, heal, treat.

ಗುಣ್ಸ್ (ಕ್ರಿ)– ಗುಣಿಸು, multiply.

ಗುತ್ತಿ (ನಾ) – ಮರ ಕಡಿದ ಮೇಲೆ ಉಳಿಯುವ ಬುಡ, stump
ಮಜ್ಜಿಗೆಗುತ್ತಿ – ಮಜ್ಜಿಗೆ ಕಡೆಯುವ ಬಿದಿರಿನ ತುಂಡು.

ಗುತ್ತು (ನಾ) – ಹಿಂದಿನ ಮೂಲ ಹಾಗೂ ಪ್ರತಿಷ್ಠಿತ ಮನೆತನ, ancient and prominent house.

ಗುತ್ತುಗಾರಿಕೆ (ನಾ)– ಜಮೀನ್ದಾರಿತನ, ಘನತೆ, ಗೌರವ, ಅಹಂ, zamindari ego and decorum and status.

ಗುರ್ತು (ಕ್ರಿ.ವಿ) – ಗುರುತು ಪರಿಚಯ, identity, familiarity.

ಗುದ್ದು (ಕ್ರಿ.ವಿ) – ಮುಷ್ಠಿಯಿಂದ ಹೊಡೆಯುವುದು, beat with fist.

ಗುನ್ಕ (ನಾ.ವಿ)– ಎಲ್ಲವನ್ನು ಮನಸ್ಸಿನಲ್ಲೇ ಇಟ್ಟುಕೊಳ್ಳುವವ, ಬಿಚ್ಚುಮನಸ್ಸಿನಲ್ಲದವ, ಅಂತರ್ಮುಖಿ, introvert.

ಗುಮ್ಮ (ನಾ)– ಗೂಬೆ, owl.

ಗುಮ್ಮಟೆ ಕಾಯಿ (ನಾ)– ಚಿಕ್ಕ ಗಿಡದಲ್ಲಿ ಆಗುವ ಸಿಹಿಯಾದ ಕಾಡುಹಣ್ಣು, a country sweet fruit.

ಗುಮ್ಮ ಹೂಂಗುಡ್ದು (ಕ್ರಿ) – ಗೂಬೆ ಕೂಗುವುದು, hooting of the owl.

ಗುರ್ಮೆ (ನಾ)– ರಂಧ್ರ ತೆಗೆಯುವ ಸಾಧನ, an instrrument to make a hole.

ಗುಮಾನಿ (ಕ್ರಿ)– ಸಂಶಯ, doubt, suspicion.

ಗುರುಕಾರ್ನೂರು (ನಾ) – ನಿಧನ ಹೊಂದಿದ ಪೂರ್ವಜರು.

ಗುರುಗುಟ್ಟು (ಕ್ರಿ)– ಸಿಟ್ಟಿನಿಂದ ದಿಟ್ಟಿಸಿ ನೋಡು, staring with anger.

ಗುರುನೆಲೆ (ನಾ)– ಕುಟುಂಬದ ಮೂಲ ಪುರುಷ,
first person of the family.

ಗುಲಾಮ (ನಾ)– ಹೇಳಿದಂತೆ ಕೇಳುವವ, ಪ್ರತಿಭಟಿಸದವ, most obedient one who never protests.

ಗುಲ್ಲು (ನಾ)– ಗಲಾಟೆ, ಬೊಬ್ಬೆ, turmoil, noisy.

ಗುಳ್ಳ (ನಾ.ವಿ)– ಗಿಡ್ಡ ಹಾಗೂ ತೋರದ ವ್ಯಕ್ತಿ, short & stout man.

ಗುಳ್ಳಿ (ನಾ.ವಿ)– ಗಿಡ್ಡ ಹಾಗೂ ತೋರದ ಮಹಿಳೆ, short & stout woman.

ಗುಳಿ (ನಾ)– ಗುಣಿ, ಚಿಕ್ಕ ಹೊಂಡ, pit, cavity.

ಗುಳಿಂಜ (ನಾ)– ಸಾಂಕೇತಿಕವಾಗಿ ಮಣ್ಣಿನ/ಪ್ರಕೃತಿಯ ಶಕ್ತಿಗಳನ್ನು ಗುಳಿಗ ಎಂಬ ಭೂತರೂಪದಲ್ಲಿ ಆರಾಧಿಸುವುದು. Worshipping nature in the from of 'Guliga'

ಗುಳ್ಗಮೆ (ನಾ) – ನೋಡಿ: ಕೋಂಬಕ್ಕಿ

ಗುಳ್ಳೆ (ನಾ) – ಬೊಕ್ಕೆ, blister,
ನೀರಿನ ಗುಳ್ಳೆ – water bubble.

ಗೂಂಜು (ನಾ)– ಹಣ್ಣಿನ ಮಧ್ಯ ಇರುವ ತಿರುಳು, ಹಲಸಿನ ಹಣ್ಣಿನ ಗೂಂಜು.

ಗೂಟ (ನಾ)– ಮರದ ಕಂಬ, small pole, ದನ ಕಟ್ಟಲು ಬಳಸುವ ಊರಿದ ದೊಣ್ಣೆ – peg.

ಗೂಡೆ (ನಾ)– ಹುಡುಗಿ, girl, lass.

ಗೂಡೆನೋಡ್ದು (ಕ್ರಿ)– ಕನ್ಯಾ ಪರೀಕ್ಷೆ, bridal interview.

ಗೂನ (ಗು)– ಬೆನ್ನು ಬಾಗಿದವ, hunch back.

ಗೂನು (ನಾ)– ಬೆನ್ನುಹುರಿ, spinal chord.

ಗೂರು (ಕ್ರಿ)– ಗೊರಕೆ, snore.

ಗೆಂಡೆ (ನಾ)– ಗೆಡ್ಡೆ, bulb.

ಗೆಬ್ಬು (ನಾ)– ಕಿವಿ ಇರುವ ಭಾಗ, part on the face where ear is located.

ಗೆಲ್ಲ್ (ನಾ)– ಮರದ ಕಾಂಡ, branch of a tree, bough.

ಗೆಳ್ಸ್/ಗೆಣ್ಸ್ (ನಾ)– ಗೆಣಸು, sweet yam

ಗೇನ (ಕ್ರಿ)– ಯೋಚನೆ, thought, memory.

ಗ್ರೇಸುದು (ಕ್ರಿ)– ಊಹಿಸು, ಗ್ರಹಿಸು, ನಿರೀಕ್ಷಿಸು, expect, anticipate, thought to be.

ಗೈಪು (ನಾ)– ಪದಾರ್ಥ, dish with pieces and gravy.

ಗೈಯ್ಯು (ಕ್ರಿ)– ದುಡಿಯುವುದು, ಶ್ರಮ, ಗೈಮೆ, work hard, toil hard.

ಗೊಂಚಲ್ (ನಾ)– ಗುಚ್ಛ, ಸಮೂಹ, ಕೀಲೆ, bunch, cluster.

ಗೊಂಡೆ (ನಾ)– ಸ್ತ್ರೀಯರು ತಲೆಗೂದಲು ಕಟ್ಟುವ ವಿಧಾನ, plaited hair style.

ಗೊಂಡೆ ಹೂ (ನಾ)– ಗಂಟೆ ಹೂವು, bell flower.

ಗೊರ್ಕೆ (ಕ್ರಿ)– ಗೊರಕೆ, snore, ನೋಡಿ: ಗೂರು.

ಗೊಗ್ಗರೆ (ನಾ.ವಿ)– ಉಬ್ಬು ಹಲ್ಲಿನವ, bucktooth/ teeth.

ಗೊರ್ಗ (ನಾ)– ಗೊರಬೆ, ನೋಡಿ: ಕಿಡಿಂಜೋಳು.

ಗೊಜ್ಜೆ (ನಾ.ವಿ) – ಸ್ವಚ್ಛವಿಲ್ಲದ, unclean, dirty.

ಗೊಟ್ಟೆ (ನಾ)– ದನ ಅಥವಾ ಪ್ರಾಣಿಗಳಿಗೆ ಮದ್ದು ಕುಡಿಸಲು ಓಟೆಯಿಂದ ಮಾಡಿದ ಸಾಧನ. A feeder made of bamboo to feed medicine to the animals.

ಗೊಟ್ಟೆ ಹಣ್ಣ್ (ನಾ)– ಮುಳ್ಳಿನ ಪೊದರಿ ನಂತಹ ಗಿಡದಲ್ಲಿ ಬೆಳೆಯುವ ರುಚಿಕರ ವಾದ ಚಿಕ್ಕ ಬಿಳಿ ಕಾಡುಹಣ್ಣು.

ಗೊಡ್ಂಗ್ ಕಾಯಿ (ನಾ)– ಕೊಬ್ಬರಿಕಾಯಿ, ನೀರು ಒಣಗಿದ ಕಾಯಿ, ಗೋಟು ಕಾಯಿ, coconut without water inside, dry coconut.

ಗೊಡ್ಡಿ (ಗು)– ಬಂಜೆ, animal without off springs.

ಗೊಡ್ಲು (ನಾ)– ಮಳೆನೀರು ಹೋಗಿ ಹೋಗಿ ಸವೆತ ಉಂಟಾಗಿ ನಿರ್ಮಾಣವಾದ ಮಳೆನೀರು ಕಣಿವೆ,
a trench formed out of soil erosion due to rain water.

ಗೊಣ್‌ಂಗುದು (ಕ್ರಿ)– ಗೊಣಗುಟ್ಟು, ಪಿಸುಮಾತು,
ತನ್ನಲ್ಲೆ ಮಾತನಾಡಿಕೊಳ್ಳುವುದು,
whishper, self talk.

ಗೊಣ್ಣೆ (ನಾ)– ನೆಗಡಿ, snivel.

ಗೊತ್ತಾ? (ಪ್ರ) – ಗೊತ್ತಿದೆಯ?
ತಿಳಿದಿದೆಯಾ? Do yo know?.

ಗೊತ್ತಾತ್ (ಕ್ರಿ)– ಅರಿವಾಯಿತು,
understood, make out,
ಗೊತ್ತಾಗ್– ಅರಿವಾಗು,

ಗೊತ್ತು (ಕ್ರಿ)– ಗೊತ್ತಿದೆ, I know.
ಗೊತ್ತು / ಗೊತ್ತುಂಟು.

ಗೊದ್ದ (ನಾ)– ತೊಂದೆಕಪ್ಪೆ, ಕಪ್ಪೆಮರಿ,
tad pole.

ಗೊನೆಕಡಿದು (ಕ್ರಿ)– ನೇಮ, ಕೋಲ, ನಡಾವಳಿ ಅಥವಾ ಜಾತ್ರೆ ಮುಂತಾದ ದೇವ ಕಾರ್ಯಗಳಿಗೆ ಅಗತ್ಯವಿರುವ ಬಾಳೆಹಣ್ಣಿಗಾಗಿ ವಾರ ಮುಂಚಿತವಾಗಿ ಬಾಳೆಗೊನೆ ಕಡಿಯುವ ಕಾರ್ಯಕ್ರಮ– ಅಂದಿನಿಂದ ಆಗಿನ ಆರಂಭ.

ಗೊಸ್ರು ಗದ್ದೆ (ನಾ)– ತುಂಬಾ ಕೆಸರಿರುವ ಗದ್ದೆ, ಕಾಲುಹೂತು ಹೋಗುವಷ್ಟು ಕೆಸರು ಇರುವ ಗದ್ದೆ.

ಗೋಂಕ್ರ್ ಕಪ್ಪೆ (ನಾ)– ದೊಡ್ಡ ಗಾತ್ರದ ಕಪ್ಪೆ,
a frog of big size.

ಗೋಂಕು (ನಾ)– ಗೇರುಹಣ್ಣು,
cashew fruit.

ಗೋಂಚು (ಕ್ರಿ)– ನೀರಿನಿಂದ ಬುಟ್ಟಿ ಅಥವಾ ಬಾಲ್ದಿಯಲ್ಲಿ ಗೋರಿ ತೆಗೆಯುವುದು.

ಗೋಂದು (ನಾ)– ಅಂಟುದ್ರವ, gum.

ಗೋಜು (ಕ್ರಿ)– ಸಹವಾಸ, ಒಡನಾಟ,
companionship, nearness, intimacy.
ಉದಾ: ನೀ ಅವನ ಗೋಜಿಗೆ ಹೋಬಡ

ಗೋಟು (ನಾ.ವಿ)– ಸಂಪೂರ್ಣ ಒಣಗಿದ ಕಾಯಿ, fully dried, ಗೋಟುಕಾಯಿ, ಗೋಟಡಿಕೆ.

ಗೋಣಿ (ನಾ)– ಸೆಣಬಿನ ಚೀಲ,
gunny bag.

ಗೋಮಯ (ನಾ) – ಹಸುವಿನ ಸೆಗಣಿ,
cowdung.

ಗೋರ್ ಗೋರ್ (ಕ್ರಿ.ವಿ)– ದರದರನೆ, ಗೋರ್ ಗೋರ್ ಎಳೆಯುವುದು, ನೆಲ ದಲ್ಲೇ ಎಳೆದುಕೊಂಡು ಹೋಗುವುದು,
drag on the floor.

ಗೋರ್ ಮಣೆ (ನಾ) – ಅಡಿಕೆ, ಭತ್ತ ಮುಂತಾದುವನ್ನು ರಾಶಿ ಮಾಡುವ ಮಣೆ, an implement used to pile up areanut or paddy.

ಗೋರಜನ (ನಾ) – ದನಗಳು ಮೇಕೆ ಕಡಿಯುವಾಗ ಹೊರಸೂಸುವ ಹಿತಕರ ವಾದ ಉಸಿರು.

ಗೋರಟೆ (ನಾ)– ಗೋರಂಟಿ ಹೂವು,
yellow, amaranth.

ಗೋರಿ (ನಾ) – ಗದ್ದೆ ಗೋರಿ, ಎಲ್ಲರೂ ಕೂಡಿ ಮಾಡುವ ಬೇಸಾಯ, colletive farming.

ಗೋರಿ (ಕ್ರಿ) – ಬಿದಿರಿನಿಂದ ಮಾಡಿದ ಮೀನು ಹಿಡಿಯುವ ಸಾಧನ, a pattern made of bamboo to catch fish.

ಗೋರು (ಕ್ರಿ)– ಕೆರೆದು ತುಂಬಿಸು.

ಗೋಲಿಂಜ (ನಾ) – ಜೇಡ, spider.

ಗೋಳಿಬಜೆ (ನಾ) – ಎಣ್ಣೆಯಲ್ಲಿ ಕಾಯಿಸಿದ ಮೈದಾ ಹುಡಿಯಲ್ಲಿ ತಯಾರಿಸಿದ ದುಂಡಗಿನ ತಿಂಡಿ, an eatable.

ಗೋಳು (ಕ್ರಿ.ವಿ) – ನರಕಯಾತನೆ, suffering.

ಗೋಳೆ (ನಾ.ವಿ) – ಟೊಳ್ಳಾದ ಭಾಗ, shallow, ಶೂನ್ಯ.

ಗೌಜಿ (ಕ್ರಿ.ವಿ)– ಭವ್ಯ, ಭಾರಿ ಆಡಂಭರದ, grand, ನೋಡಿ: ಗಮ್ಮತ್ತ್.

ಘ

ಘಾಟಿ (ನಾ)– ಬೆಟ್ಟ ಪ್ರದೇಶ, ಕಡಿದಾದ ಪ್ರದೇಶ, narrow hilly track, ಕಣಿವೆ ಬೆಟ್ಟಗಳ ನಡುವಣ ಇಕ್ಕಟ್ಟಿನ ದಾರಿ.
ಉದಾ: ಸಂಪಾಜೆ ಘಾಟಿ, ಶಿರಾಡಿ ಘಾಟಿ.

ಘಾಟಿ (ಗು)– ಚತುರ, ಅನುಭವಿ, expert, experienced, ಕಿಲಾಡಿ, ನಂಬಲು ಸಾಧ್ಯವಾಗದ, ಅತೀ ಬುದ್ಧಿವಂತ.

ಘಾತಿ (ನಾ)– ಕಾರ್ಯಸತ್ಯ, reality.

ಘಾತಿಗೆ ಹೇಳ್ದ್ (ಕ್ರಿ)– ಗಂಭೀರವಾಗಿ ಹೇಳಿದ ಮಾತು, told seriously.

ಘಾತಿಗೆ ಹೇಳ್ದಲ್ಲ (ಕ್ರಿ)– ಹಗುರವಾಗಿ ಹೇಳಿದ ಮಾತು, told in a lighter vein.

ಘೀಳಿಡ್ದು (ಕ್ರಿ) – ಆನೆಗಳ ಕೂಗುವಿಕೆ, trumpet.

ಚ

ಚಂಗು (ಗು) – ಬೋಳ, ನಿಷ್ಕ್ರೀಯ, inactive.

ಚಂಗುಳಿ (ನಾ)– ಬಲಿತ ಹಲಸಿನ ತೋಳೆ ಮತ್ತು ಬೀಜಗಳಿಂದ ತಯಾರಿಸಿದ ಪದಾರ್ಥ.
Dish made out of jackfruit kernels and its nut.

ಚಂಜಾಯ್ (ಕ್ರಿ.ವಿ)– ಗೆಳೆತನ, ಆತ್ಮೀಯತೆ, ಅನ್ಯೋನ್ಯತೆ,
friendship. Intimacy.

ಚಂಡ್ರುಪುಳಿ (ನಾ)– ಸಾಸಿವೆ ಹಾಕಿ ಮಾಡಿದ ಬೇಯಿಸದ ಮಾವಿನ ಹಣ್ಣಿನ ಪದಾರ್ಥ, an unbaked dish made from mango fruit using mustard.

ಚಂಡಿ (ನಾ.ವಿ)– ಒದ್ದೆ, wet.

ಚಂಡಿಹಿಡಿ (ಕ್ರಿ)– ಹಠಮಾಡು, ಮೊಂಡುತನ, obstinate, stubborn.

ಚಕ್ಕಳ (ನಾ) – ಚರ್ಮ, ಸಿಪ್ಪೆ, ಚೋಲಿ, skin.

ಚಕ್ಕಳ (ನಾ)– ಚಿಕ್ಕ ಮಕ್ಕಳನ್ನು ಮಲಗಿಸಲು ಬಳಸುವ ಚಾಪೆ, a small mat used for little children.

ಚಕ್ಕಳ ಪಕ್ಕಳ (ಕಿ.ವಿ)– ಕಾಲು ಮಡಚಿಕೊಂಡು ಪದ್ಮಾಸನ ಹಾಕಿ ಕುಳಿತಂತೆ ಕುಳಿತು ಕೊಳ್ಳುವುದು, sitting cross legged in the penance form.

ಚಕ್ಕೆ (ನಾ)– ಚಿಕ್ಕ ಹೆಣ್ಣು ಮಕ್ಕಳ ಜನನಾಂಗ, vagina of the female child.

ಚಕೋತ (ನಾ)– ಮುಸುಂಬಿಯಂತಹ ದೊಡ್ಡ ಹಣ್ಣು, pompelmoose.

ಚಗಣೆ (ನಾ)– ತಿಗಣೆ, bed bug.

ಚಚ್ಚ್ (ಕ್ರಿ) – ಜಜ್ಜು, crush, ಹೊಡೆಯು – beat severely.

ಚಟ್ಟ್ (ನಾ)– ಇಲಾತಿ ಚಟ್ಟ್, beans.

ಚಟ (ಕ್ರಿ.ವಿ)– ದುರಭ್ಯಾಸ, ಗೀಳು, bad habit.

ಚಟ್ಟ (ನಾ)– ಶವ ಹೊರಲು ಬಿದಿರಿನಿಂದ ತಯಾರಿಸಿದ ಸಾಧನ, stretcher made from bamboo.

ಚಟ್ಟೆ (ನಾ)– ಮಣ್ಣಿನ ಬಟ್ಟಲು, clay plate.

ಚಟ್ಟೆ (ನಾ.ವಿ)– ಚಪ್ಪಟೆ, flat, ಅಪ್ಪಚ್ಚಿ ಆಗುವುದು.

ಚಟ್ಟೆ ಭತ್ತೆ (ನಾ)– ಒಳಗಡೆ ಅಕ್ಕಿ ಇಲ್ಲದ ಭತ್ತ paddy without rice inside.

ಚಟ್ಟೆ ಕಂದಡಿ (ನಾ)– ತಲೆ ಚಪ್ಪಟೆಯಾಗಿರುವ ಒಂದು ಜಾತಿಯ ಕಂದಡಿ ಹಾವು, viper.

ಚಡಾಯ್ಸ್ (ಕ್ರಿ)– ಬಾರಿಸು, ಬಯ್ಯು, beat, curse.

ಚಡಿ (ನಾ)– ಮರ ಏರುವಾಗ ಕಾಲೂರಲು ಮಾಡುವ ಚಡಿ, a cut made on the tree to climb on to that.

ಚಡ್ಡಿ (ನಾ) – ಚಲ್ಲಣ, nicker, trouser.

ಚಣಿ (ಕ್ರಿ)– ತಣ್ಣಗಾಗು, get cold. ಚಣ್ಸ್ – ತಣಿಸು, ಚಣ್ದುಟು– ತಣ್ಣಗಾಗಿದೆ.

ಚಣಿಲ್ (ನಾ) – ಕೆಂಜಳಿಲು, ಅಳಿಲಿಗಿಂತ ಸ್ವಲ್ಪ ದೊಡ್ಡ ಗಾತ್ರದ ಕಾಡುಪ್ರಾಣಿ. giant squirrel.

ಚದ್ದಲೆ (ನಾ)– ತೆಂಗಿನ ಗರಿಗಳಿಂದ ಮಾಡಿದ ಚಾಪೆ, ತಟ್ಟಿ, mat made out of coconut palm.

ಚಪ್ಪಡಿ (ಕ್ರಿ)– ಕೆಲಸವನ್ನು ಸರಿಯಾಗಿ ನಿರ್ವಹಿಸದಿರುವುದು. Careless work, no dedication in work.

ಚಪ್ಪಡಿ (ನಾ)– ಚಪ್ಪಡಿ ಕಲ್ಲು, ಹಾಸುಕಲ್ಲು, ಚಪ್ಪಟೆ ಕಲ್ಲು, flat stone slab.

ಚಪ್ಪರ (ನಾ)– ತಾತ್ಕಾಲಿಕವಾಗಿ ನೆರಳಿಗಾಗಿ ಹಾಕುವ ಮಾಡು, pandal, temporary roof for shade.

ಚರ್ಪಟೆ (ನಾ.ವಿ)– ವಾಚಾಳಿ, ಅತಿಯಾಗಿ ಮಾತನಾಡುವವ. Always talkative, ಮಾತಿನ ಮೂಲಕ ಕೇಳುಗರಿಗೆ ಚಿಟ್ಟು ಹಿಡಿಸುವವ.

ಚಪ್ಡಾಂಗಿ (ನಾ.ವಿ) – ಕೆಲಸಕ್ಕೆ ಬಾರದ ಮಾತುಗಾರ, (ಬುಡೆಲ್) only in work, not in deed.

ಚಪ್ಡಾಸ್ (ಗು)– ಚಪ್ಪಡಿ ಮಾಡುತ್ತಾ ಕಾಲ ಕಳೆಯುವವ. not serious, irresponsible, ಬೊಗಳೆ ಬಿಡುವವ, bluffer.

ಚಪ್ಪುದು (ಕ್ರಿ.ವಿ)– ಚಪ್ಪರಿಸು, ಚಪ್ಪರಿಸುತ್ತಾ ತಿನ್ನು, make some chewing noise while eating tasty food.

ಚಪ್ಪೆ (ನಾ)– ಯಾವುದೇ ರುಚಿ ಇಲ್ಲದ, without any taste.

ಚರ್ಬಿ (ನಾ)– ಬೊಜ್ಜು, fat.

ಚರ್ಮೆ (ನಾ)– ಅಲಂಕಾರಿಕ ಕಳೆಗಿಡ, decorative weed.

ಚರಸೊತ್ತ್ (ನಾ)– ಸಾಗಿಸಲು ಸಾಧ್ಯವಾಗುವಂತಹ ಸ್ವತ್ತುಗಳು, movable property.

ಚಲ್ಲಣ (ನಾ)– ಚಡ್ಡಿ, nicker, trouser.

ಚವ್ವಿಹಣ್ಣ್ (ನಾ)– ಗೊಂಚಲು ಗೊಂಚಲಾಗಿ ಬೆಳೆಯುವ ಚಿಕ್ಕ ಕಪ್ಪು ಹಣ್ಣು.

ಚವಲ (ನಾ)– ಭೂತ ಕಟ್ಟುವವನ ಕೈಯಲ್ಲಿ ಇರುವ ಬಿಳಿ ಕೂದಲಿನಿಂದ ಮಾಡಿದ ಬೀಸಣಿಗೆ, fan made out of white hair.

ಚವುಳಿ (ನಾ)– ಕೆಂಪಿರುವೆ, red ant.

ಚಳ್ಳ್ (ನಾ.ವಿ)– ತುಂಬಾ ಸಪೂರದ, ತೆಳ್ಳಗಿನ ವ್ಯಕ್ತಿ, ನಗಣ್ಯ ವ್ಯಕ್ತಿ. a very thin person, negligible person.

ಚಳ್ಳೆ (ನಾ.ವಿ)– ತೆಳ್ಳಗೆ, ಸಪೂರ ಹಾಗೂ ಎತ್ತರ, weak and tall, ಸಣಕಲು.

ಚಾಂಡಾಲ (ನಾ.ವಿ)– ಕ್ರೂರಿ, ದುಷ್ಟ ನಿಷ್ಕರುಣಿ, cruel, wicked, merciless.

ಚಾಂಪ (ನಾ) – ತಾತ, ಅಜ್ಜ, grandfather, an elderly relative man.

ಚಾಂಬು (ಕ್ರಿ)– ಕದಿಯು, steal. ಅರಿವಿಲ್ಲದೆ ಜಾಗದಿಂದ ತೆರಳು, leave the place without the knowledge of others.

ಚಾಂತಿಕಾಯಿ (ನಾ)– ಚಾಂತಿ ಎಂಬ ಮರದ ಗಟ್ಟಿಕಾಯಿ, ಒಣಗಿದ ಈ ಕಾಯಿಯನ್ನು ಒಡೆದಾಗ ಸಿಗುವ ಬಾದಾಮಿಯಂತಹ ತಿರುಳು ತುಂಬಾ ರುಚಿಕರ.

ಚಾಕ್ (ಗು)– ಸರಿಯಾಗಿ ಬೆಳೆಯದ/ ಬಲಿಯದ, not properly grown, thin, weak. ಉದಾ: ಚಾಕ್ ಬಾಳೆಗೊನೆ.

ಚಾಕಲೆ (ಗು)– ಕ್ಷೀಣ, ಲಾಚಾರ್, weak.

ಚಾಕ್ರಿ (ಕ್ರಿ)– ಕೆಲಸ, ವೃತ್ತಿ, work, profession.

ಚಾಚ್ (ಕ್ರಿ)– ಮಲಗು, ನಿದ್ರಿಸು, sleep, ಪುಟ್ಟ ಮಕ್ಕಳಿಗೆ ಬಳಸುವ ಪದ.

ಚಾಟಿ (ಕ್ರಿ) – ಚಾವಟಿ, whip.

ಚಾಟೆಲ್ (ನಾ) – ಹೊಳೆಯಲ್ಲಿ ಹೊಯಿಲು ಇಲ್ಲದ, ನೀರು ನಿಂತಂತೆ ಕಾಣುವ ಜಾಗ. area in the river without current and looks like the river is not flowing.

ಚಾಡಿ (ಕ್ರಿ)– ಚಾಡಿಮಾತು, ಹಿಂದಿನಿಂದ ಮಾಡುವ ದೋಷಾರೋಪಣೆ, back biting. ಚಾಡಿಕೋರ– back biter.

ಚಾಣಾಕ್ಷ (ನಾ.ವಿ)– ವ್ಯವಹಾರ ಚತುರ, ಮಾತಿನ ಕೌಶಲ್ಯ ಹೊಂದಿದವ, shrewd man, far-sighted person.

ಚಾಣೆತಲೆ (ನಾ) – ಬೋಳುತಲೆ, ಕೂದಲು ಇಲ್ಲದ ತಲೆ, bald head.

ಚಾಮಿ (ನಾ) – ದೇವರು, God ಚಿಕ್ಕಮಕ್ಕಳಿಗೆ ದೇವರನ್ನು ಸ್ವಾಮಿ ಎಂದು ಉಚ್ಚರಿಸಲು ಕಷ್ಟವಾದಾಗ 'ಚಾಮಿ' ಎಂದು ಹೇಳಿಸುವುದು.

ಚಾಮೀನ್ (ನಾ)– ಹೊಳೆಗಳಲ್ಲಿ ಕಾಣಸಿಗುವ ದೊಡ್ಡ ಜಾತಿಯ ಮೀನು. A large fish found in the malnad rivers.

ಚಾರೆ (ನಾ.ವಿ)– ಇಳಿಜಾರು, slope.

ಚಾವ್‌ಡಿ (ನಾ)– ಭೂತಸ್ಥಾನ, ದೈವಸ್ಥಾನ, ಗುಡಿ ಹಿಂದೆ ಜಮಿನ್ದಾರರ, ಗುತ್ತು ಮನೆ ಐನ್‌ಮನೆಗಳಲ್ಲಿ ನ್ಯಾಯ ತೀರ್ಮಾನ ಮಾಡುವ ಸ್ಥಳ. a hall of justice in the ancient and traditional houses.

ಚಾಳಿ (ಕ್ರಿ.ವಿ)– ದುರಭ್ಯಾಸ, ಕೆಟ್ಟಚಾಳಿ, ಕೆಟ್ಟಗೀಳು, bad habit.

ಚಾಳಿ (ನಾ)– ತಾಳೆ ಮರ, palm tree.

ಚಾಳೆ (ನಾ) – ತೆಂಗಿನಮರ, coconut tree.

ಚಾಳೆಚಿರಿ (ನಾ)– ಎಳೆಯ ತೆಂಗಿನಗರಿ, ತೆಂಗಿನ ಚಿಗುರುಗರಿ, coconut frond.

ಚಾಳೆ ಹಿತ್ಲ್ (ನಾ) – ತೆಂಗಿನ ತೋಟ, coconut garden.

ಚ್ಯಾಮೆಪ್ಪ (ಸ.ನಾ) – ತಾತ, ಅಜ್ಜ, grand father, ಉಗ್ಗಪ್ಪ.

ಚ್ಯಾಮೆವ್ವ (ಸ.ನಾ) – ಅಜ್ಜಿ, ಉಗ್ಗವ್ವ, grandmother.

ಚಿಂಬ್ರ್ಝ (ಕ್ರಿ) – ಒತ್ತು, ಹಿಚುಕು, ತಿರುಚಿ ಸಾಯಿಸುವುದು,
crush, kill by churning, squeeze

ಚಿಕ್ (ನಾ.ವಿ) – ಸಿಕ್ಕುಗಟ್ಟು, ಗಂಟು ಗಂಟಾಗು, ಬಿಡಿಸಲು ಕಗ್ಗಂಟಾಗಿರುವ, difficult to solve.

ಚಿಕಪ (ನಾ)–ತಂದೆಯ ಕಿರಿಯ ಸಹೋದರ, ತಾಯಿಯ ತಂಗಿಯರ ಗಂಡಂದಿರು, uncle, younger brother of the father and the husband of mother's younger sister.

ಚಿಕವ (ಸ.ನಾ) – ಚಿಕ್ಕಮ್ಮ, ತಾಯಿಯ ತಂಗಿ, ಅಥವಾ ತಂದೆಯ ತಮ್ಮಂದಿರ ಪತ್ನಿಯರು, aunt, younger sister of mother or wife of father's younger brother.

ಚಿಕ್ಕಾಸ್ (ನಾ.ವಿ)– ತುಂಬಾ ಅಲ್ಪ ಹಣ, very minimun money,
ಉದಾ: ಜೋಬುಲಿ ಒಂದು ಚಿಕ್ಕಾಸ್ ಕೂಡ ಇಲ್ಲೆ – ಕಿಸೆಯಲ್ಲಿ ಏನೂ ಹಣ ಇಲ್ಲ.

ಚಿಕ್ಕು (ನಾ) – ಚಿಕ್ಕು ಹಣ್ಣು, sapota.

ಚಿಗಟ (ನಾ) – ಪ್ರಾಣಿಗಳ ಮೇಲಿರುವ ಹೇನು, rat flea.

ಚಿಟ್ಟ್ (ಕ್ರಿ.ವಿ)– ಸಾಕೆನಿಸು, bored, fedup. ಉದಾ: ತಲೆ ಚಿಟ್ಟ್ ಹಿಡ್ದ್ ಹೋತ್.

ಚಿಟ್ಟೆ (ನಾ.ವಿ) – ಚಿಕ್ಕ, ಪುಟ್ಟ, tiny.

ಚಿಟ್ಟೆಕ್ಕಿ (ನಾ) – ಒಂದು ಜಾತಿಯ ಚಿಕ್ಕ ಹಕ್ಕಿ, a tiny bird.

ಚಿಡ್‌ಕ್‌ಹಾಕುದು (ಕ್ರಿ) – ಮಗುವಿಗೆ ಆರೋಗ್ಯದ ದೃಷ್ಟಿಯಿಂದ ಚಿಡಿಕೆ ಹಾಕುವುದು, ಸುಟ್ಟು ಇಡುವುದು.

ಚಿತ್ತ್ (ಕ್ರಿ.ವಿ) –ಮೇಲೆ ಮೇಲೆ ಬರೆಯುವುದು ಮಸುಕಾಗು,
unclean, blurr, illegible, over writing.

ಚಿದಂಗ್ (ಕ್ರಿ.ವಿ) – ಎಡಕೈ ಬಳಕೆ, use of left hand.

ಚಿನರ್ಪು (ಕ್ರಿ)– ಕಾಲು ಚಿನರ್ಪುದು, tingling sensation.

ಚಿಪ್ಪಿ (ನಾ)– ಗೆರಟೆ, ತೆಂಗಿನಕಾಯಿಯ ಗೆರಟೆ, coconut shell.

ಚಿಪ್ಪುಳ್ಸ (ಕ್ರಿ)– ಕೈಯಲ್ಲಿ ಸಿಂಪಡಿಸು, sprinkle.

ಚಿರ್ಪು (ನಾ) – ಕಿರಾಲ್ ಬೋಗಿಮರ, opia.

ಚಿಪ್ಪೆ ಮಣೆ (ನಾ)– ಅಡಿಕೆ ರಾಶಿಮಾಡುವ ಅಥವಾ ಹರಡಲು ಬಳಸುವ ಗೋರ್ ಮಣೆ.

ಚಿಬ್ಲಿ (ನಾ) – ಹುಡುಗಿಯರು ಆಡುವ ಜನಪದ ಆಟ,
a folklore game of girls.

ಚಿಬುಳಿ (ನಾ)– ಅನ್ನ ಬಸಿಯಲು, ಬಿಸಿಬಿಸಿ ದೋಸೆ, ರೊಟ್ಟಿ ಹಾಕಲು ಬೆತ್ತ ಅಥವಾ ಬಿದಿರಿನ ಸಲಾಕೆಯಿಂದ ಮಾಡಿದ ಬಟ್ಟಲಿ ನಂತಹ ತಟ್ಟೆ, a plate made out of thin cane or bamboo bars.

ಚಿಬೇರಿ (ನಾ)– ತೊಗರಿ ಬೇಳೆ, redgram.

ಚಿಮ್‌ಟಿ (ನಾ)– ಇಕ್ಕಳ, forceps.

ಚಿಮ್ಮುಕ್ಸ್ (ಕ್ರಿ)– ಸಿಂಪಡಿಸು, sprinkle.

ಚಿರಿ (ನಾ)– ಚಿಗುರು,
bud of the leaf, tender leaf.

ಚಿಲ್ಲ್ (ನಾ)– ಚಿಕ್ಕಗುಂಡು, small bullet.

ಚಿಲ್ಕ (ನಾ)– ತಾಳ, ಬೀಗದ ಕುಣಿಕೆ, hookof the lock, latch.

ಚೀಂಕ್ರ್ (ನಾ.ವಿ)– ಬೆಳವಣಿಗೆ ಇಲ್ಲದ ಸಸ್ಯ, plant not properly grown, weak.

ಚೀಂಕ್ರ್ (ನಾ)– ಮರದ/ಬಿದಿರಿನ/ ಬೆತ್ತದ ಅಥವಾ ಇತರ ವಸ್ತುಗಳಿಂದ ತೆಗೆದ ಸಪೂರ ಹಾಗೂ ಉದ್ದನೆಯ ಭಾಗ. thin and long part removed from wood, bamboo, cane or other objects.

ಚೀಂಕ್ರ್ (ನಾ.ವಿ)– ಸಪೂರ ಇರುವ ವಸ್ತು ಅಥವಾ ವ್ಯಕ್ತಿಗಳನ್ನು ಉದಾಹರಿಸಿ ಬಳಸುವ ಪದ. ಉದಾ: ಆ ಗೂಡೆ ಚೀಂಕ್ರ್‌ನಾಂಗೆ ಉಟ್ಟ್, a term of comparison used to explain a very slim or thin, thing or person

ಚೀಂಟಿ (ಕ್ರಿ.ವಿ) – ಪೂರ್ತಿಯಾಗಿ, ಸಂಪೂರ್ಣವಾಗಿ, entire, complete.

ಚೀಂಪು (ಕ್ರಿ)– ಚೀಪು, ನೆಕ್ಕು
ಉದಾ: ಐಸ್‌ಕ್ಯಾಂಡಿ ಚೀಂಪುದು, enjoy the taste by licking.

ಚೀರ್ (ನಾ)– ತಲೆಹೇನಿನ ಮೊಟ್ಟೆ, tiny egg of the louse.

ಚೀರ್ ಕೊಟ್ಟೆ (ನಾ)– ತೋಡಿನ ಚಿಕ್ಕಮೀನು, a tiny fish living in the streams.

ಚುಂಗ್‌ಡಿ (ನಾ)– ಚಿಲ್ಲರೆ ಹಣ, coins.

ಚುರ್ಕರ (ಕ್ರಿ.ವಿ)– ಕಾಲನ್ನು ಮಡಚಿ ಶೌಚಕ್ಕೆ ಕುಳಿತುಕೊಳ್ಳುವ ಭಂಗಿಯಲ್ಲಿ ಕುಳಿತು ಕೊಳ್ಳುವುದು, ಕುಕ್ಕರಗಾಲು.

ಚುಕ್ಕಾಣಿ (ನಾ)– ದೋಣಿ ಚಲಿಸುವಂತೆ ಮಾಡಲು ಅಂಬಿಗ ಬಳಸುವ ಹುಟ್ಟು, oar, paddle.

ಚುರ್ಕ (ಕ್ರಿ.ವಿ)– ಕ್ರಿಯಾಶೀಲ, ಲವಲವಿಕೆ, ತೀಕ್ಷ್ಣ,
active, lively, sharp, quick.

ಚುಂಡಿಲಿ (ನಾ) – ಚಿಕ್ಕ ಇಲಿ,
small size rat.

ಚುಮ್ಮ (ಕ್ರಿ)– ಮಕ್ಕಳಿಗೆ ಕೊಡುವ ಮುತ್ತು, ಮುದ್ದಿಡು,
kissing the little children

ಚುಮ್ಣೆಣ್ಣೆ (ನಾ)– ಸೀಮೆಎಣ್ಣೆ,
kerosene.

ಚುರಿ (ಕ್ರಿ)– ಸಿಕ್ಕಿಸು, ತೂತುಮಾಡು, ಚುರಿದು – ತೂತು ಮಾಡು, fix, make hole, ಚುರ್ದ್ – ತುರಿದು, ಉದಾ: ಹೂವುನ ಚುರ್ದ್ ಮಾಲೆ ಮಾಡ್ಡು.

ಚುರುಂಗು (ಕ್ರಿ) – ಮುದುಡಿಹೋಗು, ತನ್ನ ಗಟ್ಟಿತನವನ್ನು ಕಳೆದುಕೊಳ್ಳುವುದು, shrink, losing its stiffness or crispness.

ಚುಳ್ಳರ ಮಾಣಿಕ (ನಾ)– ಮರಳಿನ ನೆಲದಲ್ಲಿ ಗುಂಡಿತೆಗೆದು ಒಳಗೆ ಅವಿತುಕೊಳ್ಳುವ ಕೀಟ, an insect which hides in the sandy soil.

ಚೂಗುಟ್ಟ್ (ಕ್ರಿ)– ದಾಳಿ ಮಾಡುವಂತೆ ಪ್ರಚೋದಿಸು, motivate to attack. ಉದಾ: ತೋಟಕ್ಕೆ ದನಂಗ ಬಾಕನ ನಾಯಿಗೆ ಚೂಗುಟ್ಟುದ್.

ಚೂಟ್‌ಕಳ (ನಾ)– ಸ್ಮಶಾನ, ದಹನ ಸ್ಥಳ, place of cremation, grave yard, place where dead bodies are burnt.

ಚೂಟ್‌ಮಣ್ಣ್ (ನಾ)– ನಿರುಪಯುಕ್ತ ಕಾಡು ಕಸಗಳ ಮೇಲೆ ಮಣ್ಣ್ ಹಾಕಿ ಅದನ್ನು ಸುಟ್ಟು ತಯಾರಿಸಿದ ಫಲವತ್ತಾದ ಮಣ್ಣು, fertile soil made by buring soil with waste materials.

ಚೂಟ್‌ಮಾಡ್ (ಕ್ರೀ)– ಶವವನ್ನು ದಹನ ಮಾಡುವ ಅಂತ್ಯಸಂಸ್ಕಾರ ಪ್ರಕ್ರಿಯೆ, burn the dead.

ಚೂಟಿ (ಕ್ರಿ.ವಿ)– ಚುರುಕು, ಕ್ರಿಯಾಶೀಲ, active.

ಚೂಡ (ನಾ.ವಿ)– ಮಾನಸಿಕ ಅಸ್ವಸ್ಥ, ಹುಚ್ಚ, ಮೂರ್ಖ, ಅತಿಯಾದ ಸಿಟ್ಟು, mentally sick, mad, fool, too much anger.

ಚೂನ (ನಾ)– ಚೂಪಾದ ಮರದ ಗೂಟ, wooden peg.

ತೂನಗೇಣ್ಸ್/ ಗೆಳ್ಸ್ (ನಾ) – ಚೂನದಂತೆ ಆಳಕ್ಕೆ ಇಳಿಯುವ ಗೆಣಸು, a sweet yam growing straight down the earth like a peg.

ಚೂರಿ (ನಾ) – ನೇರವಾದ ಚಿಕ್ಕ ಕತ್ತಿ, knife.

ಚೂರಿಹಣ್ಣ್ (ನಾ)– ಮಳ್ಳಿನ ಪೊದರಿನಂತಹ ಗಿಡದಲ್ಲಿ ಆಗುವ ಕಪ್ಪಗಿನ ರುಚಿಕರವಾದ ಚಿಕ್ಕ ಕಾಡುಹಣ್ಣು.

ಚೆಂಚಿ (ನಾ)– ಬಟ್ಟೆಯಿಂದ ಮಾಡಿದ ಚಿಕ್ಕ ವೀಳ್ಯದ ಚೀಲ. a small cloth bag to keep betel leaves and other chewing materials.

ಚೆಂಡು ಹೂ (ನಾ)– ಉರುಟಾದ ಹೂವು marigold flower.

ಚೆಂಬುರ್ಬ್ (ನಾ)– ಚಿಕ್ಕ ಚಿಕ್ಕ ಸೌದೆ ಕೊಳ್ಳಿ, small pieces of firewood.

ಚೆಂಬೆರ್ಕೊಡಿ (ನಾ)– ಹೊಳೆಗಳ ಬದಿಯಲ್ಲಿ ಬೆಳೆಯುವ ಪದಾರ್ಥ ಮಾಡುವ ಒಂದು ಸಸ್ಯ.

ಚಿಕ್ಕೆ (ನಾ)– ಕೆತ್ತೆ, ಮರದ ಕೆತ್ತೆ, bark of the tree.

ಚೆರ್ಗ್ (ನಾ)– ಚಿಕ್ಕ ಪುಟ್ಟ ಮೀನುಗಳು, little fishes.

ಚೆಡ್ಪೆಲ್ತಿ (ಗು) – ಸದಾ ಗೊಣಗುತ್ತಾ ಇರುವವಳು, always murmuring.

ಚೆದಿ (ಕ್ರಿ.ವಿ) – ಮೋಸ, ಕಪಟ, ಸೀಂತ್ರಿ, deceive, dupe.

ಚೆನ್ನಮಣೆ (ನಾ)– 7 ಮತ್ತು 7ರ 2ಸಾಲಿನ 14 ಗುಳಿಗಳುಳ್ಳ ಮಣೆಯಲ್ಲಿ ಮಂಜಟಿ ಕಾಯಿ ಹಾಕಿ ಆಡುವ ಜಾನಪದ ಆಟ.

ಚೆರ್ಬೆ (ನಾ)– ಕಾಲಿನ ಹಿಮ್ಮಡಿ ಸಿಪ್ಪೆ ಹೋಗುವುದು, ripping off the skin from the heel.

ಚೆರಿಗೆ (ನಾ) – ಚಿಕ್ಕಪುಟ್ಟ ಪಾತ್ರೆಗಳು, ಚೆಂಬು ಚೆರಿಗೆ, utensils of small size.

ಚೆರೆ (ನಾ)– ತರಕಾರಿ ಬಳ್ಳಿ ಹಬ್ಬಲು ಹಾಕುವ ಮರದ ಕೊಂಬೆ, branches of tree fixed for the vegetable creepers to spread.

ಚೆಲ್ಲಣ (ಕ್ರಿ.ವಿ)– ಬೈಗಳು, cursing words.

ಚೆಲ್ಲ್ (ನಾ.ವಿ)– ಬಟ್ಟೆ ಚೆಲ್ಲ್, cloth pieces, ಚೆಲ್ಲು ಚೆಲ್ಲ್ ವರ್ತನೆ– ಗಾಂಬೀರ್ಯವಿಲ್ಲದ, ಸೌಜನ್ಯತೆ ಇಲ್ಲದ, ಗೌರವನೀಡದ ಮಾತು ಮತ್ತು ವರ್ತನೆ.

ಚೆಲ್ಲುದು (ಕ್ರಿ)– ಕೈಗಳಿಂದ ಪಾತ್ರೆಯಿಂದ ಅಥವಾ ಚೀಲದಿಂದ ಹೊರಕ್ಕೆ ಬಂದು ನೆಲದಲ್ಲಿ ಬೀಳುವುದು, over flow. ಹೊರಸೂಸು.

ಚೊಂಬಟ್ಲ್ (ನಾ) – ಪಾತ್ರೆಪಗಡಿ, utensils.

ಚೊಂಬು (ನಾ)– ತಂಬಿಗೆ, ಚೆಂಬು, small pot.

ಚೊಂಟೆ (ನಾ)– ಕೈಯ ಮೂಲಕ ನೀರೆತ್ತುವ ಸಾಧನ, ಏತ, picotta.

ಚೊಕ್ಕ (ನಾ.ವಿ)– ಸ್ವಚ್ಛ, ಸುಂದರ, ಆಕರ್ಷಕ, clean, beautiful, attractive.

ಚೊಟ್ಟ (ನಾ.ವಿ) – ಕಾಲು ಸರಿ ಇಲ್ಲದವ, ಕುಂಟ, a man with crippled leg, ಚೊಟ್ಟಿ – woman with crippled leg ಕುಂಟಿ, ಚೊಟ್ಟ ಹಾಕು– ಕುಂಟುತ್ತಾ ನಡೆ.

ಚೊಡಂಕ್/ ಚುಡೊಂಕ್ (ನಾ)– ಕತ್ತಿ ಸಿಕ್ಕಿಸಲು ಸೊಂಟಕ್ಕೆ ಕಟ್ಟುವ ಕಬ್ಬಿಣದ ಕೊಕ್ಕೆ ಇರುವ ಹಗ್ಗದ ಪಟ್ಟಿ, rope belt on the waist with hook to fix sickle.

ಚೊಡ್ಚು (ಕ್ರಿ)– ಎಡವು, ತಾಗು, ಉದಾ: ಕಾಲುಚೊಡ್ಚಿ ಬೀತ್, tread, something which comes as an obstacle while walking.

ಚೊಪ್ಪು (ನಾ)– ಸಿಪ್ಪೆ, ತೊಗಟೆ, ಹೊರಪದರ ಕಾಯಿಚೊಪ್ಪು, ಅಡಿಕೆ ಚೊಪ್ಪು, rind of the nut.

ಚೊಪ್ಪುಕೊಟ್ಟೆ (ನಾ.ವಿ)– ಕಾಯಿಗೆ ಸಿಪ್ಪೆ ಅಂಟಿಕೊಳ್ಳುವುದು, ಸಿಪ್ಪೆ ತೆಗೆಯಲಾಗದ ಅಡಿಕೆ. The rind of the arcanut is sticking on the nut, even after it is dried.

ಚೊರಿ (ನಾ)– ಪ್ಯಾಕ್ ಮಾಡದಿರುವ ಹುಡಿ, unpacked powder.

ಚೊರೆ (ಕ್ರಿ.ವಿ)– ಸದಾ ಕಿರಿಕಿರಿ ಮಾಡುವ ವ್ಯಕ್ತಿ ಸದಾ ಏನಾದರೊಂದು ವಸ್ತುವನ್ನು ನಮ್ಮಿಂದ ಬಯಸುವ ವ್ಯಕ್ತಿ. a person who always demands somthing from us, person who creates nuisance.

ಚೊಲ್ಲು (ಕ್ರಿ)– ಸಿಪ್ಪೆಸುಲಿ, ಅಡಿಕೆ ಚೊಲ್ಲುದು, ತೆಂಗಿನಕಾಯಿ ಚೊಲ್ಲುದು, peel off the rind, strip off the skin.

ಚೊಳ್ಳೆ (ನಾ.ವಿ)– ಕೃಶಕಾಯದ ವ್ಯಕ್ತಿ, physically weak person.

ಚ್ಯೊಂಗಲೆ (ನಾ.ವಿ)– ದೈಹಿಕವಾಗಿ ಸೊರಗಿದ ಪ್ರಾಣಿ, physically weak animal.

ಚೋಂಕ್ರ (ನಾ.ವಿ)– ಕೊಳಕ, dirty fellow.

ಚೋಂಕ್ರು (ನಾ.ವಿ)– ಕೆಟ್ಟ ವಾಸನೆಯ ಕೊಳಕು ನೀರು. dirty water with bad smell.

ಚೋಂಕೆ (ನಾ) – ಚರ್ಮ, skin.

ಚೋಂಪು (ಕ್ರಿ) – ಚೇಪು, ನೀರು ಚೋಂಪುದು, pour out.

ಚೋಟುದ್ದ (ನಾ.ವಿ) – ಬೆರಳಿನಷ್ಟು ಉದ್ದ, as long as a finger.

ಚೋಣು (ನಾ) – ಚೇಳು, scorpion.

ಚೋಡಿ (ನಾ) – ಚಿಕ್ಕನೀರಿನ ತೊರೆ, a little stream.

ಚೋಪಾರ್ (ನಾ.ವಿ)– ಆಸ್ತಿಪಾಸ್ತಿ ಕಳೆದು ಕೊಂಡವ, ಸಂಪೂರ್ಣ ನಷ್ಟ ಅನುಭವಿಸಿದವ. total loss, had lost every thing.

ಚೋರೆ (ನಾ)– ಒಂದು ಜಾತಿಯ ಗಿಡುಗ ದಂತಹ ಪಕ್ಷಿ, a bird like that of a kite or eagle.

ಚೋಲಿ (ನಾ)– ಚರ್ಮ, ಸಿಪ್ಪೆ, skin.

ಚೋಕುಳು ಹಾಕುದು (ಕ್ರಿ)– ಸಿಗುತ್ತದೆ ಎಂದು ಬಯಸುತ್ತಾ ಕಾಯುವುದು, ಗಾಳ ಹಾಕುದು; hoping and longing for somthing, ನೋಡಿ: ನೋಕಲೆ ಹಾಕುದು, ಓಂಗುದು.

ಚೋಳು (ನಾ)– ಕೆಸರು, muddy water.

ಚೌಕಾಶಿ (ಕ್ರಿ)– ಬೆಲೆ ಇಳಿಸಲು ಅಥವಾ ಏರಿಸಲು ಮಾಡುವ ಚರ್ಚೆ, bargain.

ಚೌರಿಂಜ (ನಾ)– ಕ್ಷೌರಿಕ, barber.

ಜ

ಜಂಜಾಲಿ (ನಾ.ವಿ) – ದೃಢಕಾಯ, well built, physically strong.

ಜಂಡ್ (ನಾ.ವಿ)– ಬಸಿದು ಉಳಿದದ್ದು, waste left after filtering

ಜಂಬರ (ನಾ) – ಸಮಾರಂಭ, function, ಕೆಲಸಕಾರ್ಯ, some important work.

ಜಗಳಗಂಟ (ಗು) – ಸದಾ ಜಗಳಕ್ಕಾಗಿ ಕಾಲು ಕೆರೆದುಕೊಂಡು ನಿಲ್ಲುವವ, quarrelsome.

ಜಜ್ಜ್ (ಕ್ರಿ)– ಜಜ್ಜಿಹೋಗು, ಅಪ್ಪಚ್ಚಿಯಾಗು, ಚಚ್ಚು, crush, pound, lay on.

ಜಟ್‌ಪಟ್ (ಕ್ರಿ.ವಿ) – ಅತ್ಯಂತ ಜರೂರಾಗಿ, quickly.

ಜಟಾಪಟಿ (ಕ್ರಿ)– ಜಗಳ, ಹೊಡೆದಾಟ, ಘರ್ಷಣೆ, rift, quarrel.

ಜಡ್ಡ್ (ಕ್ರಿ)– ಕ್ರಿಯಾಶೀಲತೆ ಕಳೆದುಕೊಳ್ಳು, inactive, ಜಡ್ಡ್‌ಗಟ್ಟ್ becoming insensitive.

ಜಡ (ಕ್ರಿ.ವಿ)– ಆಲಸ್ಯ, ಸೋಮಾರಿತನ, ಮೈಗಳ್ಳ, laziness, idle, sluggish.

ಜಡಿಗುಟ್ಟಿ (ನಾ.ವಿ) – ನಿರಂತರ ಹಾಗೂ ಭಾರಿ ಉದಾ: ಜಡಿಗುಟ್ಟಿ ಮಳೆ ಹೊಡ್ತ್. ceaseless and heavy rain.

ಜಬ್ಬೆ (ನಾ)– ಹಿಂಡಿ ಉಳಿದದ್ದು, waste left after pinching or filtering.

ಜರ (ನಾ) – ಜ್ವರ, ದೇಹದ ಉಷ್ಣತೆ ಏರುವುದು, fever.

ಜರಂಗೀಲ್ (ನಾ)– ಒಂದು ಪಕ್ಷಿ, a kind of bird.

ಜರಿ (ಕ್ರಿ)– ಜರಿದು ಬೀಳು, ಗುಡ್ಡ/ಬರೆ ಜರಿದು, land slide.

ಜರಿ (ನಾ) – ನೆರಿಗೆ, ಸೀರೆಯ ಜರಿ.

ಜರಿ (ಕ್ರಿ) – ಬಯ್ಯುವುದು ನಿಂದಿಸು, abuse, curse.

ಜರಿ (ನಾ) – ಜರತಾರಿ ಸೀರೆಯ ಜರಿ, artistic lace.

ಜಲ್ದಿ (ಕ್ರಿ.ವಿ)– ಬೇಗನೆ, quick, ಅವಸರವಸರವಾಗಿ, in hurry.

ಜಲ್ಲಿಕಲ್ಲ್ (ನಾ) – ಕರಿಗಲ್ಲಿನ ಚಿಕ್ಕ ಚಿಕ್ಕ ತುಂಡುಗಳು, small granite pieces.

ಜವಣ (ನಾ)– ಯುವಕ, youth.

ಜವನಿಕೆ (ನಾ)– ಮೇಲ್ಮುಚ್ಚಿಕೆ ಸೊಪ್ಪು, ರಬ್ಬರ್ ತೋಟಗಳಲ್ಲಿ ಇತರ ಕಳೆಗಿಡಗಳು ಬರದಂತೆ ಹರಡಲು ಬಿಡುವ ಬಳ್ಳಿ, a kind of creeper.

ಜವುಗು ನೆಲ (ನಾ)– ಸದಾ ಒದ್ದೆಯಾಗಿರುವ, ತೇವಭರಿತ ನೆಲ, marshy land.

ಜಳ್ಪುಸು (ಕ್ರಿ)– ಬೀಸು, swing, swipe ಉದಾ: ಅಂವ ಕತ್ತಿ ಜಳ್ಪಿಸಿಕಂಡ್ ಬಾತ್.

ಜಾಂಗ್ಲ (ನಾ.ವಿ) – ತುಂಬಾ ಸಡಿಲವಾದ ಬಟ್ಟೆ, loose clothes.

ಜಾಡ್ಯ (ನಾ) – ಮಾನಸಿಕ ಅಂಟುರೋಗ, mentally contageous human weakness.

ಜಾಣ (ನಾ.ವಿ) – ಚುರುಕು, ಕ್ರಿಯಾಶೀಲ, ಬುದ್ಧಿವಂತ, active, clever, wise.

ಜಾತಕ (ನಾ)– ಹುಟ್ಟಿದ ಸಮಯ ಮತ್ತು ದಿನಾಂಕಕ್ಕೆ ಅನುಗುಣವಾಗಿ ಜ್ಯೋತಿಷಿಗಳು ತಯಾರಿಸುವ ಜನ್ಮಕುಂಡಲಿ, horoscope.

ಜಾತಿ (ನಾ) – ವೃತ್ತಿಗೆ ಅನುಗುಣವಾಗಿ ಪೂರ್ವಿಕರು ರೂಪಿಸಿಕೊಂಡ ಸಾಮಾಜಿಕ ವರ್ಗಿಕರಣ ವ್ಯವಸ್ಥೆ. Caste.

ಜಾತಿ (ನಾ) – ಪ್ರಬೇಧ, ತಳಿ, breed.

ಜಾರ್ಪಡಿ (ಕ್ರಿ) – ಜವಾಬ್ದಾರಿಯಿಂದ ನುಣುಚಿಕೊಳ್ಳುವುದು, ಜವಾಬ್ದಾರಿಯಿಂದ ಹಿಂದೆ ಸರಿಯುವುದು. withdrawing from responsibility.

ಜಾಮೀನ್ (ನಾ)– ಇನ್ನೊಬ್ಬರ ಪರ ಆಧಾರವಾಗಿ ನಿಲ್ಲುವುದು, ಹೊಣೆಗಾರನಾಗಿ ನಿಲ್ಲುವುದು, ಜವಾಬ್ದಾರಿಯಾಗಿ ನಿಲ್ಲುವುದು,
guarantor, co-obligant, surety, bail.

ಜಾರ್ (ಕ್ರಿ)– ಹೆಜ್ಜೆ ಜಾರುವುದು, slippery, ಕೆಟ್ಟ ದಾರಿ ಹಿಡಿಯುವುದು, take a wrong moral path.

ಜಾರ್ಸ್ (ಕ್ರಿ)– ಜಾರಿಸು, ಒಂದು ವಸ್ತುವನ್ನು ಒಂದು ಸ್ಥಳದಿಂದ ಪಕ್ಕದ ಇನ್ನೊಂದು ಜಾಗಕ್ಕೆ ಸ್ಥಳಾಂತರಿಸುವುದು, replace, make a move.

ಜಾರಂಗೇಲ್ (ನಾ)– ತುಂಬಾ ಜಾರುವ ಜಾಗ, slippery place.

ಜಾರಿಕಂಬದು (ಕ್ರಿ)– ಜವಾಬ್ದಾರಿಯಿಂದ ನುಣುಚಿಕೊಳ್ಳುವುದು,
avoid responsibility cleverly.

ಜಾಲ್‌ವಾಯಿ (ಕ್ರಿ) – ಬಟ್ಟೆಗಳನ್ನು ಅವ್ಯವಸ್ಥಿತವಾಗಿ ಧರಿಸು, wearing the dress in a haphazard manner.

ಜಾಲಮಾಲ (ನಾ) – ಮೇಲೆಕೆಳಗೆ, up and down. ಉದಾ: ಅಂವ ಪೇಟೆಲಿ ಜಾಲಮೂಲ ತಿರ್ಗಿದೆ.

ಜಾಲ್ (ನಾ) – ಅಂಗಳ,
yard outside the house.

ಜಿಂಟ್ (ಕ್ರಿ)– ಜಿವುಟು, pinch.

ಜಿದ್ದ್ (ನಾ.ವಿ)– ಛಲ, ಪಂಥಹ್ವಾನ, ಕೈಂಪೆ, challenge, rivalry.

ಜೀಕುಜ್ಜೆ (ನಾ) – ದೀವಿ ಹಲಸು,
bread fruit.

ಜೀತ (ಕ್ರಿ) – ಸಂಬಳ ಇಲ್ಲದ ದುಡಿಮೆ, toiling without wages.

ಜೀರ್‌ಕಾಯಿ (ನಾ)– ಒಳಗಡೆ ಹಾಳಾಗಲು ಆದ ತೆಂಗಿನಕಾಯಿ, a coconut about to be spoiled inside.

ಜೀರಿಗೆ (ನಾ)– ಸಂಭಾರಜೀನಸು, cumin, a spice.

ಜುಂಗು (ನಾ)– ಹೈಲು, ನೂಲು ಏಳುವುದು, thread / wool peeling off from the cloth.

ಜುಗಾರಿ (ನಾ)– ಜೂಜಾಟ, ಹಣಕ್ಕಾಗಿ ಪಂಥಕಟ್ಟಿ ಆಡುವುದು, gambling.

ಜುಮ್ಕಿ (ನಾ)– ಕಿವಿಯಲ್ಲಿ ಓಲೆಗೆ ನೇತು ಹಾಕುವ ಗೊಂಡೆಯಂತಹ ಆಭರಣ, a bell like ornament hanging in the ear, ಝುಮ್ಕಿ.

ಜುಟ್ಟು (ನಾ) – ತಲೆಯ ಉದ್ದವಾದ ಕೂದಲನ್ನು ಸುರುಟಿ ಕಟ್ಟುವುದು. ಶೆಂಡಿ, crest.

ಜುಲಾಬು (ನಾ)– ಭೇಧಿ, dysentery.

ಜೆಳ್ಳ್ (ನಾ)– ಜೊಲ್ಲು, ಎಂಜಲು, saliva.

ಜೆಳ್ಳರ್ಸುದು (ಕ್ರಿ)– ಜೊಲ್ಲು ಸುರಿಸು, shedding the saliva.

ಜೇಡಿಮಣ್ಣ್ (ನಾ) – ಮಣ್ಣಿನ ಪಾತ್ರೆ ಮಾಡಲು ಬಳಸಬಹುದಾದ ಜಿಗುಟು ಮಣ್ಣು, clay soil.

ಜೇನ್ ಗೂಡ್ (ನಾ) – ಜೇನು ಕುಟುಂಬ ಗಳು ವಾಸಿಸುವ ಜೇನು ತಯಾರಿಸುವ ಗೂಡು, beehive.

ಜೇನ್‌ಸಾಕಣೆ (ಕ್ರಿ)– ಜೇನು ಕುಟುಂಬಗಳನ್ನು ಜೇನುಪೆಟ್ಟಿಗೆಗಳಲ್ಲಿ ಸಾಕಿ ಜೇನು ಉತ್ಪಾದನಾ ಕೃಷಿ ಮಾಡುವುದು. Bee- keeping.

ಜೇನೆರಿ (ನಾ)– ಜೇನ್ನೊಣಗಳು ಜೇನು ಸಂಗ್ರಹಿಸುವ ಕೋಶ. Honeycomb.

ಜೇನ್ನೆಳ (ನಾ)– ಜೇನುನೊಣ, bee.

ಜೇನ್ನೊಣ ಗುಂಯ್‌ಗುಟ್ಟುದು (ಕ್ರಿ) – ಜೇನ್ನೊಣಗಳು ಝೇಂಕರಿಸುವುದು, buzzing or humming.

ಜೊಂಗೆ (ನಾ) – ಗೊಂಚಲು, bunch.

ಜೋಂಪುಳು (ನಾ) – ಗೊಂಚಲು, ಗೊಂಚಲಾಗಿ ಬೆಳೆಯುವ ನೆಲ್ಲಿಕಾಯಿ ಗಾತ್ರದ ಕೆಂಪನೆಯ ಕಾಡುಹಣ್ಣು.

ಜೋಡು (ನಾ) – ಚಪ್ಪಲಿ, ಪಾದರಕ್ಷೆ, chappal.

ಜೋಡು (ನಾ.ವಿ)– ಜೊತೆ, couple, ಎರಡು, two, ಉದಾ: ಜೋಡು ಹಣ್ಣ್‌ಕಾಯಿ, ಜೋಡಾಟ, ಜೋಡೆತ್ತು.

ಜೋಡುನಳಿಗೆ (ನಾ)– ಎರಡು ನಳಿಗೆಯಿರುವ ಕೋವಿ, double barrel gun.

ಜೋಡ್ಸು (ಕ್ರಿ)– ಜೋಡಿಸು, ಹೊರಿಸು, ಎಲ್ಲಾ ವಸ್ತುಗಳನ್ನು ವ್ಯವಸ್ಥೆಯಲ್ಲಿ ಕ್ರಮಬದ್ಧ ವಾಗಿ ಇರಿಸು, keep the thing in a systmatic way.

ಜೋಪಡಿ(ನಾ)–ಮುರುಕಲುಮನೆ, ಗುಡಿಸಲು cottage, worn out house.

ಜೋಬು (ನಾ)– ಜೇಬು, pocket.

ಜೋಯಿಸ(ನಾ)– ಜ್ಯೋತಿಷಿ, astrologer.

ಜೊಳ್ಳು (ನಾ.ವಿ)– ಒಳಗೆ ಬೀಜ ಇಲ್ಲದ, ಟೊಳ್ಳಾದ, shallow, with out seed.

ಝ

ಝುರಿ (ನಾ) – ಆಳವಾದ ಕಣಿವೆಯಲ್ಲಿ ಹರಿಯುವ ನೀರು/ ಜಲಪಾತ.

ಟ

ಟಕ್ಕ್ / ಠಕ್ಕ್ (ಕ್ರಿ.ವಿ)– ಮೋಸ, ವಂಚನೆ, deceit, fraud.
ಟಕ್ಕ – ಮೋಸ ಮಾಡುವವ cunning

ಟಾನಿಕ್ (ನಾ)– ಆರೋಗ್ಯವರ್ಧಕ ಔಷಧ, medicine that improves the health.

ಟೀಪಾಯಿ (ನಾ)– ಚಿಕ್ಕ ಮೇಜು, a small table, teapoy.

ಟೊಳ್ಳ್ (ನಾ.ವಿ) – ಒಳಗೆ ಬರಿದಾದ, shallow, ಜಂಭ ಕೊಚ್ಚಿಕೊಳ್ಳುವವ, ತೋರಿಕೆಗೆ ಮಾತ್ರ, ಗಟ್ಟಿತನ ಇಲ್ಲದ, ಉದಾ: ಅಂವ ಬರೇ ಟೊಳ್ಳು.

ಟೋಪನ್ (ನಾ)–ಕೃತಕ ತಲೆಕೂದಲು, wig.

ಟೊಪ್ಪಿ (ನಾ)–ತಲೆಗೆ ಹಾಕುವ ಟೊಪ್ಪಿ, cap.

ಟೊಪ್ಪಿ ಹಾಕ್ (ಕ್ರಿ)– ಮೋಸಮಾಡು, ವಂಚಿಸು, deceive, dupe, ಉದಾ: ಅಂವ ಇವಂಗೆ ಟೊಪ್ಪಿ ಹಾಕಿತ್

ಠ

ಠಾಕುಠೀಕ್ (ನಾ.ವಿ)– ಉತ್ತಮ ಪೋಷಾಕು ಧರಿಸಿದ well dressed, sophisticated.

ಠಿಕಾಣಿ ಹೂಡ್ (ಕ್ರಿ)– ದೀರ್ಘಕಾಲ ಬಂದು ಉಳಿದುಕೊಳ್ಳುವ ಅತಿಥಿ, a guest who stays for long ಉದಾ: ಅಂವ ಇಲ್ಲಿ ಠಿಕಾಣಿ ಹೂಡಿ ಸುಮಾರ್ ದಿನ ಆತ್.

ಠೇಂಕಾರ (ನಾ.ವಿ)– ಅತಿಜಂಭ, ಒಣಜಂಭ, arrogant, over pride.

ಡ

ಡಬಡಬ (ದ್ವಿ)– ಎದೆ ಡವ ಡವ ಎಂದು ಬಡಿದುಕೊಳ್ಳುವುದು, excessive heart beat due to fear or excitement.

ಡಾಬು (ನಾ)– ಚಿನ್ನದ ಅಥವಾ ಬೆಳ್ಳಿಯ ಸೊಂಟದ ಪಟ್ಟಿ, ಆಭರಣ, an ornamental belt made out of gold or silver.

ಡೊಂಕ್ (ನಾ.ವಿ)– ವಕ್ರ, ಓರೆಕೋರೆ, ಬಾಗಿರುವ, with bend, not straight, curve, ಎಡವು, tread.

ಡೊಂಕ್ ಬುದ್ಧಿ (ಗು) – ಮೋಸತನ, ಕುಟಿಲತೆ, crookedness.

ಡೋಂಗಿ ಮಾಡ್ದು (ಕ್ರಿ) – ತಮಾಷೆ ಮಾಡುವುದು, mocking.

ಡೋಂಗಿ (ಗು)– ಮಾತಿಗೆ ತಪ್ಪುವವ, not prompt.

ಡೋಸು (ನಾ)– ಮದ್ಯ, alcohol.

ಡೋಸು ಕೊಡ್ದು (ಕ್ರಿ)– ಪರೋಕ್ಷವಾಗಿ ಅಥವಾ ವ್ಯಂಗ್ಯವಾಗಿ ಹೇಳಿ ಟೀಕಿಸುವುದು ಅಥವಾ ಮುಯ್ಯಿ ತೀರಿಸುವುದು, criticize or retaliate talking, indirectly or ironically.

ತ

ತಂಗೀಸ್ (ನಾ)– ಮೀನಿಗೆ ಗಾಳ ಹಾಕಲು ಬಳಸುವ ಪಾರದರ್ಶಕ ನೈಲಾನ್ ನೂಲು, transparent nylon thread.

ತಂಗೆ (ಸ.ನಾ)– ತಂಗಿ, younger sister.

ತಂಟೆ (ಕ್ರಿ.ವಿ)– ತರಳೆ, ಜಗಳ, ಕಿರಿಕಿರಿ, ತಲೆಹರಟೆ. mischief, petty quarrel, nuisance.
ತಂಟೆಕೋರ – mischievous, quarrelsome.

ತಂದೆ (ಕ್ರಿ)– ತೆಗೆದುಕೊಂಡು ಬಂದೆ, brought it.

ತಂಬ (ಕ್ರಿ)– ತಾ, ತೆಗೆದುಕೊಂಡು ಬಾ, bring,
ತರಕು– ತರಬೇಕು have to bring.

ತಂಬಿಟ್ಟು (ನಾ)– ಹುರಿದ ಅಕ್ಕಿಹುಡಿ, ಮತ್ತು ಬಾಳೆಹಣ್ಣು ಮಿಶ್ರಿತ ಉರುಟಾದ ಉಂಡೆ. sweet, round eatable made out of the powder of roasted rice and banana.

ತಂಬಿಲ (ನಾ)– ಭೂತಗಳಿಗೆ ಎಡೆ ಇಡುವ ಆಚರಣೆ.

ತಕ್ಕ್‌ಡ್ಜಿ (ನಾ.ವಿ)– ಅತಿಯಾದ ಚಟುವಟಿಕೆಯಿಂದ ಕೂಡಿದ ಹುಡುಗಿ, overactive girl.

ತಕ (ಕ್ರಿ)– ತೆಗೆದುಕೊ, take it (ಏ.ವ),
ತಕಣಿ – ತೆಗೆದುಕೊಳ್ಳಿ (ಬ.ವ),
ತಕಣಕು – ತೆಗೆದುಕೊಳ್ಳಬೇಕು, have to take,
ತಕಣಕಡ – ತೆಗೆದುಕೊಳ್ಳ ಬೇಕಂತೆ.

ತಕ್ಕ (ನಾ.ವಿ)– ಸೂಕ್ತ, ಅರ್ಹ, suitable.

ತಕುಪುಕು (ಕ್ರಿ.ವಿ) – ಭಯ, ಕುತೂಹಲ, ನಿರೀಕ್ಷೆ, fear, curiosity, excitement, tension.

ತಗ್‌ಡ್ (ನಾ) – ತೌಡು, ಅಕ್ಕಿಯ ಮೇಲ್ಪದರಿನ ಹುಡಿ, bran chaff.

ತಗ್‌ಡ್ ಪುಡ (ನಾ)– ತೌಡು ಬಣ್ಣದ ಒಂದು ಜಾತಿಯ ಚಿಕ್ಕ ವಿಷವಿಲ್ಲದ ಹಾವು, a small poisonless snake with the colour of bran.

ತಗ್ಗ್‌ಸ್ (ಕ್ರಿ)– ತಗ್ಗಿಸು, ಎತ್ತರ ಕಡಿಮೆ ಮಾಡು, ಬಾಗಿಸು, come down, descend, decline, bend.

ತಗಡ್ (ನಾ)– ಲೋಹದ ಹಾಳೆ, metal sheet.

ತಗಾದೆ (ನಾ) – ಸಮಸ್ಯೆ, ಲೋಪ, ಟೀಕೆ, ವ್ಯಾಜ್ಯ.
problem, criticism, dispute.

ತಂಜಣೆ (ನಾ.ವಿ)– ಒಯ್ಯಾರದ ಮಾತು, ಸೇಲೆಯ ಮಾತು, ಬಿನ್ನಾಣದ ವರ್ತನೆ. pleasing, attractive lovely words.

ತರ್ಚು (ಕ್ರಿ)– ಪರಚು, ಗೀರು, scratch, ಉದಾ: ಮುಳ್ಳು ತರ್ಚುದು, ಕಲ್ಲು ತರ್ಚುದು.

ತಟಪಟ (ಕ್ರಿ)– ಹೆಚ್ಚುಕಡಿಮೆ ಆಗುವುದು, ತೊಂದರೆ ಉಂಟಾಗುವುದು, going wrong, having some problem.

ತಟ್ಟ್ (ಕ್ರಿ)– ತಟ್ಟುವುದು, ದೊಡೆದು ಮುಟ್ಟುವುದು, knock, beat.

ತಟ್ಟ್ (ನಾ)– ಸಮತಟ್ಟಾದ ಪ್ರದೇಶ, level land, ತಟ್ಟ್ ಮಾಡ್ದು – ಸಮತಟ್ಟು ಗೊಳಿಸುವುದು.

ತಟ್ಟಿ (ನಾ) – ತೆಂಗಿನ ಗರಿ/ ಬಿದಿರು/ ಓಟೆ ಯಿಂದ ಮಾಡಿದ ಚಾಪೆ, mat prepared out of palm leaf or bamboo.

ತಟ್ಟೆ (ನಾ)– ಅಡಿಕೆಮರ ಅಥವಾ ಬಿದಿರನ್ನು ಸೀಳಿ ತಯಾರಿಸುವ ಸಲಾಕೆ, thin bar made from arecanut tree or bamboo.

ತಡ (ಕ್ರಿ.ವಿ)– ಸಮಯ ದಾಟಿಬರುವುದು, ತಡವಾಗಿಬರು, coming late. ಉದಾ: ಮಂತ್ರಿಗ ಬಾಕನ ಒಂದು ಗಂಟೆ ತಡ ಆತ್.

ತಡ್ಕ (ಕ್ರಿ)– ತಡೆದುಕೊ, ಸಮಧಾನಿಸು, wait, be patient.

ತಡಿ (ನಾ.ವಿ)– ಮೈಕಟ್ಟು, ದೇಹದಾರ್ಢ್ಯತೆ, physique, physical appearance.

ತಡಿ (ಕ್ರಿ)– ತಡೆಯುವುದು, block, stop proceeding.

ತಡೆಹಿಡ್ದೊ (ಕ್ರಿ)– ತಡೆಹಿಡಿದರು, held back, ನಿಲ್ಲಿಸಿದರು, made to stay.

ತಡ್ಮೆ (ನಾ)– ಬೇಲಿಯ ಬಾಗಿಲು, the entrance of the boundary.

ತನ್ನಾಲೆ (ಕ್ರಿ)– ತನ್ನಿಂತಾನೆ, ಅದರಷ್ಟಕ್ಕೆ, ತನ್ನಷ್ಟಕ್ಕೆ, at its own, spontaneous.

ತನ್ನೆ (ಕ್ರಿ)– ತರುತ್ತೇನೆ, bringing. ತರುವೆನು– will be bringing.

ತಣ್ಸ್ (ಕ್ರಿ)– ತಣಿಸು, make cool ತಣಿದು– ತಣ್ಣಗಾಗು, cooling.

ತಣ್ಯಣ (ನಾ)– ತಂಗಳನ್ನ, ನಿನ್ನೆಯ ಅನ್ನ, rice of the previous day.

ತದುಕು (ಕ್ರಿ)– ಹೊಡೆಯು, beat.

ತಪಲೆ (ನಾ)– ತಪ್ಪಲೆ, basin.

ತಪ್ಪದೆ (ಕ್ರಿ.ವಿ)– ತಪ್ಪಿಸದೆ, with out fail. ಉದಾ: ತಪ್ಪದೆ ಬರೋಕು.

ತಪ್ಪಿಕಿಲೆ (ಕ್ರಿ)– ತಪ್ಪಲಾರದು, will not miss/ fail, ಉದಾ: ಗುರಿತಪ್ಪಿಕಿಲೆ.

ತಪ್ಪುಸು (ಕ್ರಿ)– ತಪ್ಪಿಸು, ಹಾಜರಾಗದಿರು, not to attend, ತಪ್ಪಿಸಿಕೊಂಡು ಹೋಗು, escape, avoid, ಕೆಲಸ ಆಗದಂತೆ ತಡೆ, to see not to happen, prevent, avoid.

ತಬ್ಬು (ಕ್ರಿ)– ಅಪ್ಪಿಕೊಳ್ಳು, embrace.

ತಬ್ಬುಲಿ (ನಾ)– ತಬ್ಬಲಿ, ಅನಾಥ, ತಾಯಿ ಇಲ್ಲದ ಮಗು, person without parents especially the mother.

ತಮಾಸೆ (ನಾ)– ತಮಾಷೆ, ಹಾಸ್ಯಮಯ ಸನ್ನಿವೇಶ/ ಮಾತು/ ವರ್ತನೆ, joke, mockery, comedy, enjoyable moment. ತಮಾಸೆ ಮಾಡ್ – mocking.

ತರ್‌ಡ್ (ನಾ) – ತರಡು ಬೀಜ, ವೃಷಣ testicle.

ತರ್‌ಲೆ (ನಾ.ವಿ) – ತಲೆಹರಟೆ, ಕಿರಿಕಿರಿ ಮಾಡುವವ, ಮಾನಸಿಕ ಕಿರುಕುಳ ಕೊಡುವವ, irritating person.

ತರಿ (ಕ್ರಿ)– ತರಕಾರಿ/ ಮಾಂಸವನ್ನು ಚಿಕ್ಕ ತುಂಡುಗಳನ್ನಾಗಿ ಮಾಡು. Cutting in to small pieces.

ತರಿ (ನಾ) – ಅಕ್ಕಿಯನ್ನು ಚೆನ್ನಾಗಿ ಬೇಯಿಸಿ ಕಡೆದು ಹಿಟ್ಟು ಮಾಡುವ ಬಂದಕ್ಕೆ ಸೇರಿಸುವುದು.

ತರಿ ಕುದಂಟಿ (ನಾ)– ತರಿಯಲು/ ಕಡಿದು ತುಂಡು ತುಂಡುಗಳನ್ನಾಗಿ ಮಾಡುವರೇ ಬಳಸುವ ಮರದ ಘನಾಕೃತಿಯು ತುಂಡು, a piece of wood used for cutting vegteble or meat into pieces.

ತರೇವಾರಿ (ನಾ.ವಿ)– ಬೇರೆ ಬೇರೆ ರೀತಿಯ ಬಗೆಬಗೆಯ, ವೈವಿಧ್ಯಮಯ, different variety.

ತರ್ಸು (ಕ್ರಿ)– ತರಿಸು, ತರುವಂತೆ ಮಾಡು, make him to bring.

ತಲಾಸ್ (ಕ್ರಿ)– ಹುಡುಕಿ ಹಿಡಿದು ಒದಗಿಸು, ಕಂಡುಹಿಡಿದು ವ್ಯವಸ್ಥೆ ಮಾಡು, supply after finding it out.

ತಲ್ವಾರ್ (ನಾ) – ಉದ್ದನೆಯ ಕತ್ತಿ, ಖಡ್ಗ, sword.

ತಲ್ಪು (ಕ್ರಿ)– ತಲಪು, reach. ಉದಾ: ಅಂವ ಬಂದ್ ತಲ್ಪಿಟ್ಟು – ಆತ ಬಂದು ತಲುಪಿದ್ದಾನೆ, ನಾ ಬರ್ದ ಕಾಗದ ತಲ್ಪಿಟ್ಟು – ನಾನು ಬರೆದ ಪತ್ರ ತಲುಪಿದೆ.

ತಲೆತಿರ್ಗುದು (ಕ್ರಿ)– ತಲೆಸುತ್ತುವಿಕೆ, ಬವಳಿ ಬರು, giddiness.

ತಲೆದಂಬು/ ದಿಂಬು (ನಾ) – ತಲೆದಿಂಬು, pillow.

ತಲೆಪಾಸಿ (ನಾ) – ತಲೆಗೆ ಸಂಬಂಧಿಸಿದ ಕಾಯಿಲೆ, disease relating to head.

ತಲೆಪಾಳಿ (ನಾ)– ಮರಣ ಹೊಂದಿದ ವ್ಯಕ್ತಿಯ ಉತ್ತರ ಕ್ರಿಯಾದಿ ಸಂಸ್ಕಾರ ಗಳನ್ನು ನಿರ್ವಹಿಸಲು ನಿಲ್ಲುವವ, a person (son) who performs the rituals at the time of obsequial ceremony.

ತಲೆಬರಹ (ನಾ) – ಶೀರ್ಷಿಕೆ, tittle, heading.

ತಲೆಬಿಸಿ (ಕ್ರಿ.ವಿ)– ಚಿಂತೆ, ಕೆಲಸದ ಒತ್ತಡ, worry, tension.

ತಲೆಬುರುಡೆ (ನಾ)– ತಲೆಯ ಅಸ್ಥಿಪಂಜರ, skull.

ತಲೆಬೇನೆ (ನಾ)– ತಲೆನೋವು, head ache

ತಲೆಹೋಕ (ನಾ)– ಪುಂಡ, ಘಟಿಂಗ, rowdy, rogue.

ತಳ್ಳ್ (ಕ್ರಿ)– ದೂಡು, push.

ತಳೈ (ನಾ)– ಹಾರೆ, ಪಿಕ್ಕಾಸುಗಳಿಗೆ ಹಾಕುವ ಹಿಡಿ, ನೋಡಿ: ಕಾವು, wooden handle of pickaxe or mammutty.

ತಾ (ಕ್ರಿ)– ತರು, bring.

ತಾಂಗ್ (ನಾ)– ಸೇತುವೆ/ ಪಾಲಗಳ ಬದಿಯಲ್ಲಿ ಪಾದಚಾರಿಗಳ ರಕ್ಷಣೆ ಹಾಗು ಆಧಾರಕ್ಕೆ ಕಟ್ಟುವ ತಡೆ, side stand to provide safety on both the side of a bridge.

ತಾಂಗ್ (ಕ್ರಿ) – ಬೆಂಬಲಿಸು, ಆಧಾರವಾಗಿ ನಿಲ್ಲು, ಸಹಾಯ ಮಾಡು, support help.

ತಾಂಗ್ (ಕ್ರಿ)– ತಾಗು, touch, ಉದಾ: ಅಂವ ತಾಂಗಿಕಂಡ್ ಹೋತ್. ಗಾಯವಾಗು– wounded, ತಾಂಗಿತ್ – ಗಾಯವಾಯಿತು

ತಾಂಟ್ (ಕ್ರಿ)– ತಾಗು, touch, hit with body.

ತಾಕತ್ (ನಾ.ವಿ)– ಸಾಮರ್ಥ್ಯ, capacity, ಶ್ರೀಮಂತಿಕೆ, richness.

ತಾಟಕಿ (ನಾ.ವಿ)– ತಾಟಗಿತ್ತಿ, ಗಯ್ಯಾಳಿ, shrew, fury.

ತಾತಿತ್ (ಕ್ರಿ)– ತರುತ್ತಿದ್ದಳು/ನು, would have brought, ತಾಕನ – ತರುವಾಗ, while bringing.

ತಾದು (ಕ್ರಿ)– ತರುವುದು, bringing.

ತಾಪತ್ರಯ (ಕ್ರಿ.ವಿ)– ತೊಂದರೆ, ಸಮಸ್ಯೆ, problem, difficulty.

ತಾಪುಮಾಡ್ (ಕ್ರಿ) – ಕೀಳಾಗಿ ಕಾಣು, ಕಡೆಗಣಿಸು, ಅವಮಾನ ಮಾಡು, treat with contempt, treat carelessly.

ತಾಮರೆ ತೆಗಿಯದು (ಕ್ರಿ) – ಮಗುವಿನ ತಲೆಗೆ ಮದ್ದು ಹಚ್ಚುವುದು, applying medicine to the child's head.

ತಾಯತ (ನಾ)– ಮಂತ್ರಿಸಿದ ನೂಲು, ಉರ್ಕು, ರಕ್ಷಾ ಮಂತ್ರವಿರುವ ಲೋಹದ ಸುರುಳಿ, amulet, talisman.

ತಾಯಿಬೇರ್ (ನಾ) – ತಾಯಿಬೇರು, taproot, ಮರದ ಪ್ರಮುಖ ಬೇರು, main root of the plant.

ತಾರಾಮಾರ – ಒಟ್ಟಾರೆ, ಅವ್ಯವಸ್ಥೆ, not in an organised manner, wreckless, haphazard.

ತಾಳ (ನಾ)– ಅಗಳಿ, latch, ಮರದಿಂದ ಮಾಡಿದ ಚಿಲಕ, ಅಗುಣಿ.

ತಾಳ (ನಾ.ವಿ)– ಭಜನೆ ತಾಳ, ಭಜನೆ ಹೇಳುವಾಗ ಬಳಸುವ ತಾಳ. rhythm.

ತಾಳಿ (ನಾ)– ಮಾಂಗಲ್ಯ, a chain symbolizes a married lady.

ತಾಳಿ ಮರ (ನಾ)– ತಾಳೆಮರ, palm tree.

ತಾಳಿಬೆಲ್ಲ (ನಾ)–ತಾಳೆಮರದ ಶೇಂದಿಯಿಂದ ತಯಾರಿಸಿದ ಬೆಲ್ಲ. jaggery made from palm toddy.

ತಾಳೆನೋಡು (ಕ್ರಿ) – ಹೊಂದಾಣಿಕೆ, ಹೋಲಿಸು, compare.

ತಿಂಗ (ನಾ)– ಜನವರಿ, ಫೆಬ್ರವರಿ, ಒಂದು ತಿಂಗಳು, month, one month.

ತಿಂಗಳು (ನಾ)– ಬೆಳದಿಂಗಳು, ತಿಂಗಳು ಬೊಳ್ಪು, ನಕ್ಷತ್ರ, moonlight, star.

ತಿಂಟೆ/ಚಿಂಟೆ (ನಾ)– ಜಗಲಿಗೆ ಆವರಣವಾಗಿ ಕಟ್ಟಿರುವ ಸುಮಾರು 2 ರಿಂದ 3 ಅಡಿ ಎತ್ತರದ ಗೋಡೆ, ಆಸನವಾಗಿಯೂ ಬಳಸುತ್ತಾರೆ

ತಿಂದೆ (ಕ್ರಿ) – ತಿಂದು ಆಯಿತು, ate, ತಿಂದಳೆ – ತಿಂದಿದ್ದೇನೆ, ತಿಂಬೊದು– ತಿನ್ನುವುದು, ತಿಂದಳನಾ– ತಿಂದಿದ್ದೀಯಾ?

ತಿಕ್ಕ್ (ಕ್ರಿ)– ಉಜ್ಜು, rub,

ತಿರ್ಗ್ (ಕ್ರಿ)– ತಿರುಗು, turn.

ತಿರ್ಗ್ ಮುರ್ಗ್ (ಕ್ರಿ.ವಿ)– ತಲೆಕೆಳಗಾಗು, ತಿರುಗುಮುರುಗಾಗು, total upset.

ತಿರ್ಗ್‌ಸ್ (ಕ್ರಿ.)– ತಿರುಗಿಸು, make him to turn.

ತಿರ್ಗ (ಕ್ರಿ.ವಿ)– ಪುನರಪಿ, ಮತ್ತೊಂದು ಬಾರಿ, repeat, once again.

ತಿರ್ಗಣೆ (ನಾ)– ತಿರುಗಿಸಿ ಹಾಕುವ ಮುಚ್ಚಳ, putting the lid by turning it round and round.

ತಿರ್ಗಾಸ್ (ನಾ)– ತಿರುವು, curve. ರಸ್ತೆ ತಿರುವು.

ತಿರ್ಗೆಲ್ (ಗು.ವಿ) – ಸದಾ ತಿರುಗಾಡಿ ಕೊಂಡಿರುವವ, ಅಲೆದಾಡಿ ಕೊಂಡಿರುವವ, wanderer.

ತಿಣೆ (ನಾ) – ಜಗಲಿ, verandah.

ತಿದ್ದ್ (ಕ್ರಿ) – ತಿದ್ದಿಕೊಳ್ಳು, correct, set right.

ತಿದಿ (ನಾ) – ಕಮ್ಮಾರ ಗಾಳಿಹಾಕಲು ಬಳಸುವ ಸಾಧನ, bellows.

ತಿನ್ (ಕ್ರಿ)– ತಿನ್ನು, eat.

ತಿಮರೆ (ನಾ) – ಬ್ರಾಹ್ಮಿ ಎಲೆ, ಒಂದೆಲಗ, mandukaparni centilla.

ತಿರ್‌ಂಟ್ (ಕ್ರಿ)– ತಿರುಚು, ತಿರುಗಿಸು, ತಿರುಂಟುದು, twist.

ತಿರ್ಗ್ ಬೊಗ್ಗಿ (ನಾ.ವಿ) – ಸದಾ ಮನೆಯಿಂದ ಹೊರಗಡೆ ಇದ್ದು ತಿರುಗಾಡಿ ಕೊಂಡಿರುವವ, lives by wandering from house to house.

ತಿರುಗುಬ್ಬೈ (ನಾ)– ಭೂತದ ತಲೆಯನ್ನು ಅಲಂಕರಿಸುವ ತೆಂಗಿನ ಎಳೆಗರಿಯ ಮುಕುಟ. crown of bhootam made out of coconut frond.

ತಿಳ್ದವ್ (ನಾ.ವಿ)– ವಿದ್ವಾಂಸ, ತುಂಬಾ ಓದಿ ಅಧ್ಯಯನ ಮಾಡಿದವರು, ಜ್ಞಾನಿ, ಅನುಭವಿ, scholar, well read, wise, experienced.

ತಿಳಿ (ಕ್ರಿ)– ತಿಳಿದುಕೊ, know.

ತಿಳ್ಳ (ನಾ)– ಹಣ್ಣು ಅಥವಾ ಕಾಯಿಯ ಒಳಭಾಗ, ಮರದ ಕಾಂಡದ ಗಟ್ಟಿಯಾದ ಭಾಗ, kernel, ಸಾರ, theme, value, ಮುಖ್ಯಾಂಶ.

ತಿಳ್ಸು (ಕ್ರಿ)– ವಿಷಯ ಗಮನಕ್ಕೆ ತರು, inform.

ತೀರ್ಮಾನ (ಕ್ರಿ)– ನಿರ್ಧಾರ, ನಿರ್ಣಯ, decision, resolution.

ತೀರ್ (ಕ್ರಿ)– ಮುಗಿದುಹೋಗು, become empty.

ತೀರಿಹೋಗ್ (ಕ್ರಿ) – ನಿಧನ ಹೊಂದು, expire, die.

ತೀರ್ಸು (ಕ್ರಿ) – ಮುಗಿಸು, complete, finish.

ತುಂಡುಮಾಡ್ (ಕ್ರಿ)– ತುಂಡರಿಸು, cut into pieces.

ತುಂಬುಸು (ಕ್ರಿ)– ತುಂಬಿಸು, fill in.

ತುಕ್ಕಿ (ಗು)– ಮನೆಮನೆಗೆ ತಿರುಗಾಡಿಕೊಂಡು ಅಲ್ಲಲ್ಲಿ ಕಾಲ ಕಳೆಯುವವ, person who eats food in different houses that he visits.

ತುಕ್ಕು (ನಾ) – ಕಬ್ಬಿಣ ಹಾಗೂ ಇತರ ಲೋಹಗಳಿಗೆ ಬರುವ ಕಿಟ್ಟ, rust.

ತುಗಿದು (ಕ್ರಿ) – ಒಂದು ಬದಿಯಿಂದ ಇನ್ನೊಂದು ಬದಿಗೆ ಅಥವಾ ಮಧ್ಯಕ್ಕೆ ಕೈ ಅಥವಾ ಕಾಲಿನಿಂದ ಸರಿಸುವುದು. push from one side to the other side or to the center either by hands or legs.

ತುಣ್ಣೆ (ನಾ)– ಶಿಶ್ನ, penis.

ತುಪ್ಪ ತಾದು (ನಾ)– ಮದುವೆ ಆದ ನಂತರ ವಧೂವರರು ತವರು ಮನೆಗೆ ಮೊದಲ ಬಾರಿಗೆ ಸೇರು ತುಪ್ಪ ತೆಗೆದುಕೊಂಡು ಗೃಹ ಪ್ರವೇಶ ಮಾಡುವ ಸಾಂಪ್ರದಾಯಿಕ ಕಾರ್ಯಕ್ರಮ.

ತುಮ್ಮಿ/ ಚುಮ್ಮಿ (ನಾ) – ಚಿಕ್ಕಮಕ್ಕಳ ಜನನಾಂಗ, the genital organ of little children.
ಉದಾ: ಅಂಗಿ ಹಾಕ್, ತುಮ್ಮಿ ಕಂಡದೆ.

ತುಲ್ಲು (ನಾ)– ಸ್ತ್ರೀಯರ ಜನನಾಂಗ, vagina, ಯೋನಿ.

ತುಳ್ಸಿ (ನಾ) – ತುಳಸಿ ಗಿಡ, holy basil.

ತೂಂಬು (ನಾ)– ನೀರು ಹೋಗಲು ಇರುವ ತೂಂಬು
pipe placed to flow water.

ತೂಕ (ನಾ)– ವಸ್ತುವಿನ ಭಾರ, weight.

ತೂಕಡ್ಸ್ (ಕ್ರಿ)– ನಿದ್ರೆಯಿಂದ ತಲೆ ತೂಕಡಿಸುವುದು, dozing, feeling sleepy.

ತೂಗ್ (ಕ್ರಿ)–ಭಾರ ತಿಳಿಯಲು ತೂಗುವುದು, weigh to measure, ನೇತುಹಾಕು, hang.

ತೂತು (ನಾ)– ರಂಧ್ರ, ನೋಡಿ:ಒಟ್ಟೆ, hole.

ತೂರು (ಕ್ರಿ)– ಒಳನುಗ್ಗು, ಇಕ್ಕಟ್ಟಾದ ಜಾಗ ಅಥವಾ ಜನಜಂಗುಳಿ ಮಧ್ಯೆ ಒಳಸೇರು, barge in.

ತೆಂಕ (ನಾ)– ತೆಂಕುದಿಕ್ಕು, ದಕ್ಷಿಣ ದಿಕ್ಕು, south.

ತೆಕ್ಕಟೆ (ನಾ)– ಕಾಡಿನ ಕಿರಿಕೋಳಿ, mini forest chick.

ತೆಗ್ದ್ ಹಾಕಿದಂವ (ನಾ.ವಿ)– ಕೆಟ್ಟವ್ಯಕ್ತಿ, ದುಷ್ಟ. Wicked, badman.

ತೆಗಿ (ಕ್ರಿ)– ತೆಗೆದುಕೊ, take it, ಬಾಗಿಲ್ ತೆಗಿ – ಬಾಗಿಲು ತೆರೆಯುವುದು open.

ತೆತ್ತ್ (ಕ್ರಿ)– ಮಗುವನ್ನು ಸೊಂಟದಲ್ಲಿ ಅಥವಾ ಕೈಯಲ್ಲಿ ಕೂರಿಸಿಕೊಂಡು ಕರೆದೊಯ್ಯುವುದು. Carrying the child on hand or on waist.

ತೆಲ್‌ಗ್ (ಕ್ರಿ)– ಸರಿದು ನಿಲ್ಲು, ಬದಿಗೆನಿಲ್ಲು, keep aside, allow others to go.

ತೆಳ್ಳಂಗೆ (ನಾ.ವಿ)– ಸಪೂರ, ತೆಳ್ಳಗೆ, thin slim, ತಿಳಿಯಾದ, ನೀರಿನ ಅಂಶ ಹೆಚ್ಚಾಗಿರುವ,
ಉದಾ: ಗೈಪು ಬಾರಿ ತೆಳ್ಳಂಗೆ ಆವುಟು.

ತೆಳಿ (ನಾ)– ಅನ್ನ ಬೇಯಿಸಿದ ಗಂಜಿನೀರು, ಗಂಗುಳ, rice water.

ತೇಗ್ (ನಾ)–ತೇಗು ಬರುವುದು, belching.

ತೇಮಾನ (ಕ್ರಿ.ವಿ)– ಉಪಯೋಗದಿಂದ, ಒಣಗಿ ಹೋಗುವುದರಿಂದ ಅಥವಾ ದಾಸ್ತಾನು ಇಡುವುದರಿಂದ ತೂಕದಲ್ಲಿ ಉಂಟಾಗುವ ಕೊರತೆ,
shortage of wight due to continuous use, drying and storing.

ತೇರ್ (ನಾ)– ದೇವರ ರಥ. Car/ chariot of God,
ರಥೋತ್ಸವ- carfestival,
ರಥಬೀದಿ – carstreet.

ತೇಲ್ದು (ಕ್ರಿ)– ನೀರಿನಲ್ಲಿ ತೇಲುವುದು, floating.

ತೇವ (ನಾ)– ಒದ್ದೆ, ಸದಾನೀರಿನ ಅಂಶ ಇರುವ, wet.

ತೊಂಡೆಕಾಯಿ (ನಾ)– ಚಿಕ್ಕ ತರಕಾರಿ, gherkins.

ತೊಂಬರ (ನಾ)– ಅವಿಭಕ್ತ ಕುಟುಂಬದಲ್ಲಿ ಗೃಹಿಣಿಯರೆಲ್ಲಾ ಒಟ್ಟಾಗಿ ಸೇರಿ ಅಡುಗೆ ಮಾಡುವ ಕೋಣೆ. a large kitchen of a joint family.

ತೊಟ್ಟಿ (ನಾ)– ನೀರು ತುಂಬಿಸಿಡುವ ಮರದ ತೊಟ್ಟಿ,
a big wooden basin,
ನಾಲ್ಕು ಸೂತ್ರದ ಮನೆಗಳ ಒಳಗಿನ ಚೌಕಾಕಾರದ ಅಂಗಣ. quadrangle inside the traditional house

ತೊಟ್ಲಿಗೆ ಹಾಕುದು (ಕ್ರಿ) – ಮಗು ಜನಿಸಿದ 16ನೇ ದಿನದಂದು ಮೊತ್ತಮೊದಲ ಬಾರಿಗೆ ಮಗುವನ್ನು ತೊಟ್ಟಿಲಿಗೆ ಹಾಕಿ ನಾಮಕರಣ ಮಾಡುವ ಸಮಾರಂಭ. Placing the child into the cradle for the first time and naming ceremony.

ತೊಟ್ಟು (ನಾ)– ಹಣ್ಣು ಅಥವಾ ಕಾಯಿಯನ್ನು ಕಾಂಡ ಅಥವಾ ಬಳ್ಳಿಗೆ ಸೇರಿಸುವ ಅಂಗ, leaf stalk, the part which connects the nut or fruit to the branch or the bunch or the creepers.

ತೊಟ್ಟೆ (ನಾ)– ಕಾಗದ, ಪ್ಲಾಸ್ಟಿಕ್ ಅಥವಾ ಬಟ್ಟೆಯಿಂದ ತಯಾರಿಸಿದ ಚಿಕ್ಕ ಚೀಲ, a small bag made out of plastic, paper, cloth cover, envelope.

ತೊಡ್ಸ್ (ಕ್ರಿ)– ತೊಡಿಸು, made to wear.

ತೊಣ್ಚ್ (ಕ್ರಿ)– ಗಟ್ಟಿಯಾದ ಆಹಾರ ಪದಾರ್ಥವನ್ನು ಬಾಯಿ ಒಳಗೆ ಇರಿಸಿ ಕೊಂಡು ಕಚ್ಚುತ್ತಾ ಇರುವುದು. Chewing.

ತೊಡೆ (ನಾ)– ಮೊಣಕಾಲಿನ ಮೇಲಿನ ಸೊಂಟದವರೆಗಿನ ಭಾಗ, thigh.

ತೊಡೆಸಂದ್ (ನಾ)– ತೊಡೆ ಸೊಂಟಕ್ಕೆ ಸೇರುವ ಭಾಗ,
part where the thigh joins the waist.

ತೊಡ್ಪೆ (ನಾ)– ಧಾನ್ಯಗಳನ್ನು ಸಂಸ್ಕರಿಸಲು ಬಳಸುವ ಬಿದಿರಿನ ಸಲಾಕೆಯಿಂದ ಮಾಡಿದ ಸಾಧನ, ಮೊರ, winnowing pan.

ತೊಡುವೆ (ನಾ) – ದೊಡ್ಡ ಜಾತಿಯ ನೊಣ ಗಳ ಜೇನು ಕುಟುಂಬ, family of big size bees.

ತೊಪ್ಪ್‌ಳ್ (ನಾ)– ಗರಿ, feather.

ತೊಪ್ಪೆ (ನಾ)– ಮರದ ತೊಗಟೆ, bark of the tree.

ತೊರ್ಸು (ಕ್ರಿ)– ತುರಿಸು, scratch.

ತೊಳ್ಕಂಡ್ (ಕ್ರಿ)– ತೊಳೆದುಕೊಂಡು, after washing, ಉದಾ: ಕೈಕಾಲ್ ತೊಳ್ಕಂಡ್ ಮನೆ ಒಳಗೆ ಹೋದು.

ತೊಳಿ (ಕ್ರಿ)– ತೊಳೆಯುವುದು, wash, ಉದಾ: ಮುಖ ತೊಳಿದು.

ತೊಳ್ಸ್ (ಕ್ರಿ)– ಹೊಟ್ಟೆ ತೊಳ್ಸುದು, ವಾಂತಿ ಬರುವಂತಾಗು, vomiting sensation due to stomach upset, ತೊಳೆಸು, get washed.

ತೊಳ್ಸಿನಹಿಟ್ಟು (ನಾ)–ತುಳಸಿ ಹಾಕಿದ ತಂಬಿಟ್ಟು,

ತೋಟೆ (ನಾ)– ಕೋವಿ ತೋಟಾ, cartridge.

ತೋಟೆ ಕೋವಿ (ನಾ) – ತೋಟೆ ಇಟ್ಟು ಸಿಡಿಸುವ ಕೋವಿ, breach loading gun.

ತೋಡ್ಸ್ (ಕ್ರಿ)– ಮಣ್ಣನ್ನು ಅಗೆದು ತೋಡು ವುದು. ಕೆರೆತೋಡ್ಸ್, ಕಡ್ಂಗ ತೋಡ್ಸ್, dig a pond, dig a canal.

ತೋರ್ತ್ (ನಾ)– ಬೈರಾಸ್, bath towel, ಮುಜುಗರ ಅನುಭವಿಸುವುದು, feel embarrassed.

ತೋರ್ಸ್ (ಕ್ರಿ)– ತೋರಿಸು, show.

ತೋರ (ನಾ.ವಿ)– ದಪ್ಪನೆಯ, fat, heavy.

ತೋರಣ (ನಾ)–ಬಣ್ಣದ ಕಾಗದ, ವಿದ್ಯುದ್ದೀಪ ಗಳಿಂದ, ಬಾಳೆ, ಮಾವಿನ ಎಲೆಗಳಿಂದ, ಬಣ್ಣದ ಗಿಡಗಳಿಂದ ಅಲಂಕರಿಸುವುದು, decorate with festoons and buntings.

ತೋರ್ಬೆರಳ್ (ನಾ) – ತೋರಿಸುವ ಬೆರಳು, point finger.

ತೋಳೆ (ನಾ)– ಸೋಳೆ, ಹಲಸಿನ ಸೋಳೆ, ಮುಸುಂಬಿ ಸೋಳೆ, loaves or slice of fruits.

ತೌಡು (ನಾ)– ನೋಡಿ: ತಗ್‌ಡ್, bran.

ತೌರು (ನಾ)– ತವರು. ತಾಯಿಗೆ ತನ್ನ ತಾಯಿಯ ಮನೆ. ಮಕ್ಕಳಿಗೆ ಮಾನ್ಮನೆ.

ಥ

ಥಟ್ಟನೆ (ಕ್ರಿ.ವಿ)– ಒಮ್ಮಿದೊಮ್ಮಲೆ, ತಕ್ಷಣ, at once, immediately.

ಥಾಡಿ (ನಾ)– ಗಡ್ಡ, beard.

ಥೇಟ್ (ಕ್ರಿ.ವಿ)– ನಿಸ್ಸಂಶಯವಾಗಿ, ಅದರಂತೆ, no doubt, similar. ಉದಾ: ಅಂವ ನೋಡಿಕೆ ಥೇಟ್ ಅವನ ಅಪ್ಪನಾಂಗೆ.

ದ

ದಂ ಕಟ್ಟ್ (ಕ್ರಿ) – ಉಸಿರು ಕಟ್ಟು, ಉಸಿರುಕಟ್ಟಿ ಶಕ್ತಿ ಹಾಕು, ದಂ ಕಟ್ಟಿ ನೀರಿನಲ್ಲಿ ಮುಳುಗು, stop breathing temporarily.

ದಂಗಾಗ್ (ಕ್ರಿ)– ಬೆರಗಾಗು, ಅಚ್ಚರಿಪಡು, surprised, astonished.

ದಂಟ್ (ನಾ)– ಸೊಪ್ಪುತರಕಾರಿಯ ಕಾಂಡ, ಬಸಳೆ ದಂಟ್, stalk, branch of leafy vegetable.

ದಂಡ್ (ನಾ)– ಉದ್ದನೆಯ ಮರದ ತೋಳು, long wooden pole.

ದಂಡ್ (ನಾ)– ತಿರುಳು, ಬಾಳೆದಂಡ್.

ದಂಡ್ (ನಾ)– ತುಕಡಿ, ಸೇನೆ, army, ಸಸ್ಯ ಮತ್ತು ಮರಗಳ ಮಧ್ಯದ ತಿರುಳು, ಬಾಳೆದಂಡು.

ದಂಡಪಿಂಡ (ನಾ.ವಿ)– ನಿರುಪಯೋಗಿಗಳು, ನಿಷ್ಪ್ರಯೋಜಕರು, useless and hopeless people.

ದಂಬೆ (ನಾ)– ಬಿದಿರು, ಅಡಿಕೆ, ಬೈನೆ ಮರ ದಿಂದ ನೀರು ಹರಿಸಲು ತಯಾರು ಮಾಡುವ ಅರ್ಧ ಚಂದ್ರಾಕೃತಿಯ ಕೊಳವೆ.

ದಂಬೆ ಹಂಚ್ (ನಾ)– ಹಂಚಿನಿಂದ ಮಾಡಿದ ದಂಬೆ, made out of tiles.

ದಕ್ಕ್‌ಸ್ (ಕ್ರಿ)– ದಕ್ಕುವಂತೆ/ ದೊರಕುವಂತೆ/ ಸಿಗುವಂತೆ ಮಾಡು, succeed to get.

ದಗ್‌ಲ್ಬಾಜಿ (ಗು) – ಮೋಸಗಾರ, ಕುತಂತ್ರಿ, ಕಪಟಿ, cunning, deceit, dishonest.

ದರ್ಗ್ (ನಾ) – ತರಗೆಲೆ, dry leaves.

ದರ್ಗ್ ಹಕ್ಕಿ (ನಾ)– ತರಗೆಲೆಗಳಲ್ಲಿ ವಾಸಿಸುವ ಚಿಕ್ಕ ಹಕ್ಕಿ, a small bird living in the dry leaves.

ದರ್ಗ್ ಹುಲಿ (ನಾ)– ಚಿಕ್ಕ ಜಾತಿಯ ಚಿರತೆ, leopard of small size which climbs the tree easily.

ದಗ್‌ಲ್ಬಾಜಿ (ನಾ.ವಿ)– ಡೋಂಗಿ, ಮೋಸಗಾರ, ಕಪಟಿ, cheat, cunning.

ದಗಡೆ / ದಗಣೆ (ನಾ.ವಿ)– ಏನೂ ಕೆಲಸ ಮಾಡದೆ ದೇಹ ಬೆಳೆಸುವ ಸೋಮಾರಿ ಹೆಣ್ಣು ಮಕ್ಕಳು (ಬೈಗುಳ ಪದ)

ದಟ್ಟಿ (ನಾ) – ಸೊಂಟಪಟ್ಟಿ, waist belt.

ದಡ್ಡ್ (ನಾ)– ಒಳಗೆ ಅರ್ಧಂಬರ್ಧ ಅಕ್ಕಿ ಇರುವ ಭತ್ತ, a paddy which is partially filld with rice inside.

ದಡ್ಡ್ ಗಟ್ಟುದು (ಕ್ರಿ)– ದೇಹದ ಒಂದು ಭಾಗವನ್ನು ನಿರಂತರ ದುಡಿಮೆಗೆ ಒಳಪಡಿಸಿದಾಗ ಆ ಭಾಗ ಗಟ್ಟಿಯಾಗಿ ಹೋಗುವುದು, ಉದಾ: ಕೈ ದಡ್ಡ್ ಕಟ್ಟುವುದು, callus.

ದಡರ್ (ನಾ)– ದಡಾರ, ದೇಹದಲ್ಲಿ ಚರ್ಮ ಅಲ್ಲಲ್ಲಿ ದಪ್ಪ ಆಗುವುದು, measles.

ದಡ್ಡ/ ದಡ್ಡಿ (ನಾ)– ಬುದ್ಧಿಶಕ್ತಿ ಕಡಿಮೆ ಇರುವವ, ಚುರುಕು ಇಲ್ಲದ, dull, not wise, not sharp, not intelligent.

ದಡಿಯ (ನಾ.ವಿ)– ದಪ್ಪನೆಯ ವ್ಯಕ್ತಿ, fat and sturdy man.

ದಡೆ (ನಾ)– ಮಾಂಸವನ್ನು ಅಳೆಯುವ ಮಾನ. 1ದಡೆ = 2.5ಕೆ.ಜಿ

ದಡ್ಡೆ (ನಾ)– ಹೆಣ್ಣು ಹಂದಿ, female pig, pigling.

ದಣಿದು (ಕ್ರಿ)– ಆಯಾಸಗೊಳ್ಳುವುದು, getting tired, fatigue. ದಣ್ದಿದ್ದೆ – ಆಯಾಸಗೊಂಡಿದ್ದೆ, ದಣಿದುಹೋಗಿದ್ದೆ. completly tired.

ದತ್ತು ಮಂಙ (ನಾ)– ದತ್ತು ಪುತ್ರ, adopted son.

ದನ (ನಾ)– ದನಗಳು– ಹಸು, ಎತ್ತು, ಕರು (common noun).

ದನ ಕರಿದು (ಕ್ರಿ)– ಅಂಬಾ, mooing, lowing.

ದನ ಮೇಪತ (ನಾ) – ದನ ಮೇಯಿಸುವವ, cowherd.

ದನಿ (ನಾ)– ಧ್ವನಿ, ಸ್ವರ, voice.

ದರ್ಪುಣ (ಕ್ರಿ)– ನಡುಗು, tremble, shiver, ಉದಾ: ಅಂವ ಹೆದ್ರಿ ದರ್ಪುತ್ತಿತ್ತ್, ಚಳಿ ಹಿಡ್ದ್ ದರ್ಪುದು, ದರ್ಪೆಲ – ಸದಾ ನಡುಗುತ್ತಾ ಇರುವವ, one who trembles.

ದಬ್ಬ್ರ್‌ದಸ್ತ್ (ಕ್ರಿ.ವಿ) – ಜೋರು, ಸರ್ವಾಧಿಕಾರಿ ಮನೋಭಾವ, harrassment, despotic behaviour.

ದಬ್ಬಣ (ನಾ)– ಗೋಣಿಚೀಲ ಅಥವಾ ಇತರ ದಪ್ಪನೆಯ ವಸ್ತುಗಳ ಬಾಯಿ ಹೊಲಿಯಲು ಬಳಸುವ ದಪ್ಪನೆಯ ಸೂಜಿ. bodkin.

ದಬ್ಬಟೆ (ನಾ)– ದಪ್ಪನೆಯ ಹೆಂಗಸು, stoutlady.

ದಬಾರ್ (ಕ್ರಿ)– ಕಾರುಬಾರು, ವ್ಯವಹಾರ, affairs.

ದಬ್ಲಿ (ನಾ.ವಿ)– ದಪ್ಪನೆಯ ಹೆಂಗಸು, fat lady.

ದಬ್ಬು (ಕ್ರಿ)– ತಳ್ಳು, ಹೊರದೂಡು, push, push him out.

ದಬ್ಬೂಸ (ನಾ.ವಿ)– ಚುರುಕಿಲ್ಲದ ದಪ್ಪನೆಯ ವ್ಯಕ್ತಿ, fat and inactive man.

ದಬ್ಬೆ (ನಾ.ವಿ)– ಒಡೆದುಹೋದ, ತೂತಾದ, ದಬ್ಬೆ ಪಾತ್ರೆ, broken.

ದಮ್ಮಯ್ಯ (ಅವ್ಯಯ)– ಅತ್ಯಂತ ವಿನಮ್ರ ವಾಗಿ ಬೇಡಿಕೊಳ್ಳುವಾಗ ಅಥವಾ ವಿನಂತಿಸಿ ಕೊಳ್ಳುವಾಗ ಬಳಸುವ ಪದ, ಉದಾ: ದಮ್ಮಯ್ಯ, ಇದೊಂದು ಉಪಕಾರ ಮಾಡಕು.

ದಮ್ಮು (ಕ್ರಿ.ವಿ)– ಉಸಿರು, breath, ಉದಾ: ಚೊಂಬೆಲಿ ಆ ಕೆರೆನ ನೀರ್‌ನ ಒಂದೇ ದಮ್ಮಿಗೆ ಖಾಲಿ ಮಾಡ್ತ್.

ದರಿದ್ರ (ನಾ.ವಿ)– ಬಡವ, poor.

ದಲ್ಲಾಳಿ (ನಾ)– ಹಣಕ್ಕಾಗಿ ಎರಡು ತಂಡಗಳ ಮಧ್ಯೆ ವ್ಯಾಪಾರ, ವಹಿವಾಟು ಕುದುರಿಸುವವ, broker.

ದವ್‌ಡೆ (ನಾ)– ಒಸಡು, ದಂತಪಂಕ್ತಿಗಳಿರುವ ಎಲುಬು, ದಂತಿ, ಮೇಲ್‌ದವಡೆ– upper jaw, ಕೆಳದವಡೆ – lower jaw.

ದರ್ಶನ (ಕ್ರಿ.ವಿ)– ದೇವರ ವಿಗ್ರಹ ವೀಕ್ಷಣೆ, ವಿಗ್ರಹದರ್ಶನ, ಉದಾ: ಸ್ವಾಮೀಜಿಗಳ ದರ್ಶನ ಆತ್ – ಸ್ವಾಮೀಜಿಗಳ ಭೇಟಿ ಆದೆವು, visit, see, look at, glimpse.

ದರ್ಶನ (ನಾ) – ದೇವರು ಮೈಮೇಲೆ ಬರುವುದು.

ದಸ್ಕತ್ (ನಾ) – ಸಹಿ, signature.

ದಳಿ (ನಾ) – ವಿಶಾಲವಾದ ಕಿಟಕಿ, large window.

ದಳಿಯು (ನಾ) – ಸಾಂಪ್ರದಾಯಿಕ ಕಾರ್ಯಕ್ರಮಗಳಲ್ಲಿ ಮಡಿವಾಳ ಬಳಸುವ ಸ್ವಚ್ಛವಾದ ಬಿಳಿ ಬಟ್ಟೆ. the white clean clothes used by the washer man on the occasion of the customery rituals.

ದಳೆ (ನಾ)– ಮರ ಹತ್ತಲು ಬಳಸುವ ಹಗ್ಗದ ಉರುಟಾದ ಪಟ್ಟಿ, a round rope pattern used to climb the trees.

ದಾಟ್ (ಕ್ರಿ) – ಇನ್ನೊಂದು ಬದಿಗೆ ಸಾಗು, cross to the other side. ಉದಾ: ಹಳ್ಳದಾಟ್; ಕಡಂಗದಾಟ್; ಅಂವ ಹಳ್ಳದಾಟಿಬಾತ್.

ದಾಡಿ (ನಾ.ವಿ)– ತೊಂದರೆ, ಕಷ್ಟ, problem, difficulty. ಉದಾ: ಆ ಕೆಲ್ಸ ಮಾಡಿಕೆ ಅಂವಂಗೇನ್ ದಾಡಿ, ನಿಂಗೇನ್ ದಾಡಿ.

ದಾಟಿ (ಕ್ರಿ.ವಿ)– ಕ್ರಮ, ಶೈಲಿ, way of expression. ಉದಾ: ಅಂವ ಹೇಳುವ ದಾಟಿ ಬಾರಿ ಲ್ಯಾಕಿತ್ತ್.

ದಾಪುಗಾಲ್ (ಕ್ರಿ.ವಿ)– ಬಿರುಸಿನ, ದೀರ್ಘ ಹೆಜ್ಜೆಯ ನಡಿಗೆ, pace, stride.

ದಾರಂದ (ನಾ)– ಬಾಗಿಲಿನ ಚೌಕಟ್ಟು, outerbeam of the door.

ದಾರಿಕರೆ (ನಾ)– ಹಾದಿಬದಿ, ದಾರಿಬದಿಯಲ್ಲಿ, by the side of the road.

ದಾರಿನೋಡ್ (ಕ್ರಿ)– ಕಾಯು, ನಿರೀಕ್ಷಿಸು, wait, anticipate.

ದಾರಿಹೋಕ (ನಾ)– ಪಾದಚಾರಿ, ದಾರಿಯಲ್ಲಿ ನಡೆದುಹೋಗುವ ಅಪರಿಚಿತ ವ್ಯಕ್ತಿ, pedestrian, way farer.

ದಾಲ್ಚೀನಿ (ನಾ) – ಸಂಭಾರ ಜೀನಸಿ, cinnaman. ದಾಲಚಿನ್ನಿ ಚೆಕ್ಕೆ.

ದಾಸವಾಳ (ನಾ) – ದಾಸವಾಳ ಹೂವು, hibiscus.

ದಾಸ್ಮೆ (ನಾ)– ಸಾಸಿವೆ, mustard.

ದ್ಯಾವತೆ (ನಾ)– ಮನೆ ಪಾಷಾಣ ಮೂರ್ತಿ ದೈವ–ಸ್ತ್ರೀ ಶಕ್ತಿಯ ಆರಾಧನೆಯ ರೂಪ.

ದಿಕ್ಕ (ಸ.ನಾ)– ಹರಿಜನ, ಪರಿಶಿಷ್ಠ ಜಾತಿ, ಹಿಂದುಳಿದ ಜನಾಂಗ, Harijana, scheduled caste people, socially and economically, backward people.

ದಿಣ್ಣೆ (ನಾ)– ದಿಬ್ಬ, ಎತ್ತರದ ಜಾಗ, high place, mini hill.

ದಿನ (ನಾ)– ದಿವಸ, a day - 24 hours.

ದಿನ್ನ (ನಾ)– ತೂಕ, ಭಾರ, weight.

ದಿನಾ (ಕ್ರಿ.ವಿ)– ಪ್ರತೀದಿನ, everyday.

ದಿನೋಳು (ಕ್ರಿ.ವಿ)– ದಿನಾಲು, ಪ್ರತೀದಿನ, each and every day.

ದಿಬ್ಬಣ (ನಾ)– ಮದುವೆ ಮೆರವಣಿಗೆ, marriage procession.

ದುಂಡು (ನಾ)– ಮುಖ, face, ಮೋರೆ, ಮುಸುಂಡು.

ದುಂಡಾದ (ನಾ.ವಿ)– ಉರುಟಾದ, round, ದುಂಡುಮುಖ– ಉರುಟಾದ ಮುಖ, round face.

ದುಕ್ಕ (ನಾ)–ಬೇಸರ, ದುಃಖ, sorrow, grief

ದುಕ್ಕುಡ್ಸು (ಕ್ರಿ)– ಬಿಕ್ಕಳಿಸು, sob, ಉದಾ: ದುಕ್ಕುಡ್ಸಿ ದುಕ್ಕುಡ್ಸಿ ಮರ್ದುದು.

ದುಡಿ (ಕ್ರಿ)– ಕಷ್ಟಪಟ್ಟು ಕೆಲಸ ಮಾಡು, work hard, ದುಡಿಮೆ – ಶ್ರಮ ಪಟ್ಟು ಮಾಡುವ ಕೆಲಸ, hard work, ದುಡಿಮೆಗಾರ – ಉತ್ತಮ ಕೆಲಸಗಾರ, ಶ್ರಮಜೀವಿ, one who toils hard.

ದುಡಿ (ನಾ)– ಹರಿಜನರು ತಮ್ಮ ಜಾನಪದ ನೃತ್ಯಕ್ಕೆ ಬಳಸುವ ಡೋಲು, a drum used by the Harijans during their folklore dance.

ದುಡ್ಡು (ನಾ)– ಹಣ, money.

ದುರುಗುಟ್ಟ್ (ಕ್ರಿ.ವಿ)– ಸಿಟ್ಟಿನಿಂದ ನೋಡು, stare with anger.
ನೋಡಿ: ಕೆಕ್ಕರಿಸಿ ನೋಡು.

ದೂಂಗು (ಕ್ರಿ)– ನಿತ್ರಾಣ/ ನಿಶ್ಯಕ್ತಿಯಿಂದಾಗಿ ತೂಗುವುದು, oscilate due to weakness.

ದೂಂಗೆಲ (ನಾ.ವಿ)– ಸದಾ ನಿಶ್ಯಕ್ತಿಯಿಂದ ಬಳಲುವವ, inactive person who suffers from weakness.
ಉದಾ: ಅಂವ ಒಬ್ಬ ದೂಂಗೆಲ.

ದೂಂಚಿ (ನಾ.ವಿ)– ತುದಿಚೂಪಾದ, sharp point.

ದೂಡ್ (ಕ್ರಿ)– ತಳ್ಳು, push.

ದೂಪೆ (ನಾ)– ಮಣ್ಣಿನಿಂದ ಮಾಡಿದ ಕಚ್ಚಾ ಸಮಾಧಿ. raw grave made of mud.

ದೂಮ (ನಾ)– ಬೋಳ, ಪೆದ್ದ, ಬೋಧಾಳ, unwise, inactive.

ದೂರು (ನಾ)– ಆರೋಪ, accuse. ದೂರುದು – ಆರೋಪಿಸು, ದ್ವೇಷದ ಮಾತು, ಹಿಂದಿನಿಂದ ಬಯ್ಯುವುದು, ಹಿಂದಿನಿಂದ ಟೀಕಿಸುವುದು.

ದೂಳು (ನಾ)– ಧೂಳು, dust, muddy powder in the atmosphere.

ದೂರ (ಕ್ರಿ.ವಿ)– ದೂರದ ಜಾಗ, ದೂರ ದಲ್ಲಿರುವ ಸ್ಥಳ, far off place, distance.

ದೂರ (ಪ್ರ)– ದೂರ? ಎಲ್ಲಿಗೆ? ಎಲ್ಲಿಗೆ ಹೊರಟಿದ್ದು? where are you going?

ದೆವ್ವ (ನಾ)– ದೈವ, ಭೂತ, daivam, divine deity.

ದೆಸೆ (ನಾ.ವಿ)– ಅದೃಷ್ಟ, ವಿಧಿ, luck, fate.

ದೇವದಾರ್ (ನಾ)– ದೇವದಾರ್ ಮರ, Cedar tree, Deodar tree.

ದೇವರಬಲಿ (ನಾ)– ಜಾತ್ರೋತ್ಸವದಲ್ಲಿ ದೇವರ ವಿಗ್ರಹವನ್ನು ಪುರೋಹಿತರು ತಲೆಯಲ್ಲಿ ಹೊತ್ತು ದೇವಳದ ಒಳಾಂಗಣದಲ್ಲಿ ಸುತ್ತು ಬರುವುದು.

ದೇವ್ರು (ನಾ)– ದೇವರು, ದೇವತೆಗಳು, God and Goddesses.

ದೈ (ನಾ)– ಗಿಡ, plant, sappling.

ದೊಂಡೆ (ನಾ)– ಗಂಟಲು, throat.

ದೊಂಡೆಪಸೆ (ನಾ) – ಗಂಟಲಿನಲ್ಲಿರುವ ದ್ರವಾಂಶ,
wet surface of the throat.

ದೊಂದಿ (ನಾ)– ಬೆಂಕಿಯ ಸೂಟೆ, torch.

ದೊಡ್ಡಸ್ತಿಕೆ (ಗು)– ದೊಡ್ಡ ವ್ಯಕ್ತಿಗಳಂತೆ ವರ್ತಿಸುವುದು,
showing highness.

ದೊಡ್ಡೊಳಗೆ (ನಾ) – ದೊಡ್ಡ ಮನೆಯ ಮಧ್ಯದ ವಿಶಾಲವಾದ ಕೋಣೆ,
a large room in the middle of the big house.

ದೊಣ್ಣೆ (ನಾ)– ಮರದ ದಪ್ಪನೆಯ ಕೋಲು,
club, cudgel.

ದೊರೆ (ನಾ)– ಅರಸ, ರಾಜ, king
ಹಿಂದೆ ನಮ್ಮೂರಿನ ಜಮೀನ್ದಾರರಾಗಿದ್ದ ಆಂಗ್ಲರನ್ನು ಕೂಡಾ ದೊರೆಗಳೆಂದು ಕರೆಯುತ್ತಿದ್ದರು.

ದೊಳ್ಳ (ನಾ.ವಿ)– ದೊಡ್ಡ ಹೊಟ್ಟೆಯವ,
man with big belly.
ದೊಳ್ಳಿ – ದೊಡ್ಡ ಹೊಟ್ಟೆಯವಳು.

ದೊಳ್ಳೊಟ್ಟೆ (ನಾ)– ದೊಡ್ಡದಾದ ಹೊಟ್ಟೆ,
big belly.

ದೋಂಟ (ನಾ.ವಿ)– ಸಪೂರ ಹಾಗೂ ಎತ್ತರದ ವ್ಯಕ್ತಿ, tall and thin person.

ದೋಂಟಿ (ನಾ)– ಗಳೆ, ಉದ್ದನೆಯ ಮರದ ಅಥವಾ ಬಿದಿರಿನ ಕೋಲು, a long wooden or bamboo pole.

ದೋಂಬ್ರು (ನಾ)– ಟೊಳ್ಳಾದ ಭಾಗ,
shallow place, hollow place.

ದೋಗಣೆ (ಕ್ರಿ)– ನಯವಾದ ಮಾತಿನಿಂದ ಮುಖಸ್ತುತಿ ಮಾಡು, ಒಯ್ಯಾರ,
flattering with polite and rosy words.

ದೋಸ್ತಿ (ನಾ)– ಗೆಳೆಯ, ಮಿತ್ರ, ಆತ್ಮೀಯ,
friend, intimate person.

ದೋಳ (ನಾ)– ಜೋಳ. Maize.

ದೌಲತ್ (ಕ್ರಿ.ವಿ)– ದರ್ಬಾರ್, ಅತಿರೇಕದ ನಡವಳಿಕೆ, ಒಣಜಂಭ,
superiority complex,
seppressing attitude.

ಧ

ಧಡಕ್ (ಕ್ರಿ.ವಿ)– ತಕ್ಷಣ, ಒಮ್ಮಿಂದೊಮ್ಮೆಲೆ,
sudden.

ಧನಿ(ನಾ)–ಹಿಂದೆ ಜಮೀನ್ದಾರರಾಗಿದ್ದವರು, ಭೂಮಾಲಿಕರಾಗಿದ್ದವರು,
land owner, building owner,
ಧನಿಕ– ಧನಿಯವರು,
ಧನಿಗಳೆ– ಧನಿಯವರೇ.

ಧರ್ಮದೈವ (ನಾ)– ರುದ್ರಚಾಮುಂಡಿ ಎಂಬ ದೈವ, ಹೆಚ್ಚಿನ ಕುಟುಂಬಗಳ ಧರ್ಮ ದೈವವಾಗಿ ಆಚರಿಸಲ್ಪಡುತ್ತದೆ.

ಧಾರಾಳಿ (ನಾ.ವಿ)– ಉದಾರಿ, ಯಥೇಚ್ಛ ವಾಗಿ ದಾನ ಧರ್ಮ ಮಾಡುವವ,
very generous man, donor.

ಧಾರೆಎರಿ (ಕ್ರಿ)– ಹೆಣ್ಣು ಮಕ್ಕಳನ್ನು ಮದುವೆ ಸಮಾರಂಭದಲ್ಲಿ ಸುಮುಹೂರ್ತದಲ್ಲಿ ವಧುವಿನ ತಂದೆ ಧಾರೆ ಎರೆದು ಮದುವೆ ಮಾಡಿಕೊಡುವುದು.

ಧೂಪ (ನಾ)– ಪರಿಮಳಯುಕ್ತ ಸುವಾಸನಾ ದ್ರವ್ಯ, ಧೂಪದ ಮರದಿಂದ ಇದನ್ನು ಪಡೆಯಲಾಗುತ್ತದೆ, ಈ ದ್ರವ್ಯವನ್ನು ಕೆಂಡಕ್ಕೆ ಹಾಕಿದಾಗ ಪರಿಮಳಯುಕ್ತ ಹೊಗೆ ಏಳುತ್ತದೆ. myrrh, incence

ನ

ನಂಗೆ (ಸ.ವಾ) – ನನಗೆ, for me, to me

ನಂಚಿಕಂಬುದು (ಕ್ರಿ) – ರುಚಿಗಾಗಿ ಊಟದೊಂದಿಗೆ ಬಳಸುವ ಆಹಾರ ವಸ್ತು / ಪದಾರ್ಥ, side dish

ನಂಜ್ (ನಾ.ವಿ)–ಅಸೂಯೆ, ಕೇಡು, ದ್ವೇಷ, jealous, envy, hatredness

ನಂಜಿಲ (ಗು)–ಅಸೂಯೆ ಹೊಂದಿದ ವ್ಯಕ್ತಿ, jealousy man

ನಂಜಿಲ್ತಿ (ಗು)– ಅಸೂಯೆ ಹೊಂದಿದ ಮಹಿಳೆ, jealousy lady.

ನಂದ್ (ಸ.ನಾ)–ನನ್ನದು, mine

ನಂಪುಸ್ (ಕ್ರಿ)–ಆಶೆ ಹುಟ್ಟಿಸು, make him greedy, attracting by showing some thing

ನಂಬು (ಕ್ರಿ)–ನಂಬಿಗೆ ಇರಿಸು, ವಿಶ್ವಾಸವಿರಿಸು, ನೆಚ್ಚಿಕೊಳ್ಳು, believe, trust

ನಕ್ಲ್ (ಕ್ರಿ) – copying, ನೋಡಿ ಬರೆಯುವುದು, malpractice, ಉದಾ: ಪರೀಕ್ಷೆಲಿ ನಕ್ಲ್ ಮಾಡುದು,

ನರ್ಕ್ (ನಾ)–ಅತ್ಯಂತ ನೋವು, ಕಷ್ಟದ, ಸಂಕಷ್ಟದ ಪರಿಸ್ಥಿತಿ, painful, difficult and pitiable situation

ನರ್ಕುದು (ಕ್ರಿ) – ಖಾಯಿಲೆಯಾದಾಗ ಹೊರಡಿಸುವ ಸಂಕಟದ ಸ್ವರ, ಮುಲುಕು ಹಾಕು, sound produced while in acute ill-health

ನಗ್ಗ್(ಕ್ರಿ) – ಜಜ್ಜಿಹೋಗು, ಒಟ್ಟಿಹೋಗು, ನಗ್ಗಿಹೋಗು, damaged, shrinking, ಉದಾ : ಕಾರ್ ಮರಕ್ಕೆ ಹೊಡ್ದರ್ಲಿ ಅದರ ಬಾನೆಟ್ ಪೂರ್ತಿ ನಗ್ಗಿ ಹೋವುಟು

ನಟ್ಟ ಇರ್ಲ್ (ನಾ)–ಸರಿರಾತ್ರಿ, ನಡುರಾತ್ರಿ dark night, midnight

ನಡಾವಳಿ (ನಾ)– ದೇವರಿಗೆ/ ಭೂತಕ್ಕೆ ಆರಾಧನೆ ಮಾಡುವ ವಿಶೇಷ ಸಂದರ್ಭ, special occasion of giving offering to God/ daivam.

ನಡಿರ್ಲ್ (ನಾ)–ಮಧ್ಯರಾತ್ರಿ, ನಡು ಇರುಳು, mid night

ನಡುಬೆರಳ್ (ನಾ) – ಮಧ್ಯದ ಬೆರಳು, middle finger

ನಡೆ (ನಾ) – ದನಗಳ ಲೆಕ್ಕ
10 ನಡೆ = 10 ದನಗಳು

ನರ್ತುಟು (ಕ್ರಿ)–ಕೂದಲು ಬಿಳಿಯಾಗಿದೆ, hair has become white.

ನರ್ತೆ (ನಾ) – ಭತ್ತದ ಗದ್ದೆಯ ನೀರಿನಲ್ಲಿ ಕಂಡುಬರುವ ಮರುವಾಯಿ, oyster found in the paddy fields

ನದ್‌ರ್ (ನಾ.ವಿ) – ಯಾವುದಕ್ಕೂ ಸ್ಪಂದಿಸದವ, ನಿರಾಸಕ್ತ, person who doesn't respond to anything, not intrested

ನಪ್ಪರೆ (ಗು) – ಜಿಪುಣ, ಆಸೆಬುರುಕ, ಕೊರ್ಸಂಡಿ, greedy, stingy

ನರಂಬು (ನಾ) –ರಕ್ತನಾಳ, nerve

ನರೆ (ನಾ) – ಕಾಡಿನಲ್ಲಿ ಬೆಳೆಯುವ ಬೇಯಿಸಿ ತಿನ್ನಬಹುದಾದ ಗಡ್ಡೆ, an edible bulbous found in the forest, country yam

ನಲ್‌ಕೆ (ಕ್ರಿ) – ನಲಿಕೆ, ಕುಣಿತ, ನರ್ತನ, dance with joy

ನರ್ವಿಷ (ನಾ) – ಹಾವು ಕಡಿತದ ಚಿಕಿತ್ಸೆಯಲ್ಲಿಬಳಸುವ ಔಷಧೀಯ ಸಸ್ಯ. medicated plant used in the treatment of snake bite

ನವುಕೆ (ನಾ) – ಬಸವನ ಹುಳ, snail

ನರ್ವೊಳು (ನಾ)– ಅಂಟುವಾಳ, soapnut

ನಷ್ಟ (ಕ್ರಿ.ವಿ) – ಹಾಕಿದ ಬಂಡವಾಳ ಪುನಃ ಬಾರದಿರುವುದು ಲಾಭ ಆಗದಿರುವುದು, loss

ನಳ್ಳ್ (ನಾ) – ನಾಯಿಯ ಮೇಲೆ ಕುಳಿತು ಕೊಳ್ಳುವ ನೊಣ, a fly found on the body of the dogs, ಪದೇ ಪದೇ ನಮ್ಮ ಬಳಿ ಬಂದು ಉಪದ್ರ ಕೊಡುವವ / ಕಿರಿಕಿರಿ ಮಾಡುವವ.

ನಳ್ಳಿ (ನಾ) – ಮಿಡಿ, ಆಗತಾನೆ ರೂಪುಗೊಂಡ ಕಾಯಿ, ಅಡಿಕೆನಳ್ಳಿ, very very tender nut

ನಾ (ಸ.ನಾ) – ನಾನು, I

ನಾಕ್ (ನಾ) – ನಾಲ್ಕು, four

ನಾರ್ಕಣೆ (ನಾ) – ಒಂದು ಜಾತಿಯ ಸಸ್ಯ, ಇದರ ತೊಗಟೆಯಿಂದ ಹಗ್ಗ ತಯಾರಿಸುತ್ತಾರೆ.
rope made from the bark of this plant,
ನೀರುಕಂದಡಿ ಹಾವು,
water viper snake

ನಾಗಬನ (ನಾ) –ಸರ್ಪಗಳ ವಾಸಕ್ಕಾಗಿ ಕಾದಿರಿಸಿದ ಕಾಡು ತುಂಬಿದ ಪವಿತ್ರ ಜಾಗ,
holy place reserved for the dwelling of serpents.

ನಾಚಿಕೆ ಇಲ್ಲದಂವ (ನಾ) – ಚೆಲ್ಲು ಚೆಲ್ಲಾಗಿ ವರ್ತಿಸುವವ, ಏನೇನು ನಾಚಿಕೆ ಇಲ್ಲದವ, ಗಾಂಭೀರ್ಯ ಇಲ್ಲದವ, shameless person, person without shy nature.

ನಾಚಿಕೆಮುಳ್ಳು (ನಾ) – ಮುಟ್ಟಿದರೆ ಮುನಿ ಕಳೆಗಿಡ, touch me not- weed

ನಾಚಿಕೆಗೇಡ್ (ನಾ.ವಿ)–ಅವಮಾನದ ಕೆಲಸ, disgraceful deed

ನಾಜೂಕು (ನಾ.ವಿ)–ಒಪ್ಪ, ಓರಣ, ಅಚ್ಚುಕಟ್ಟು, nice, attractive, without any blemish
ಉದಾ: ಕೆಲ್ಸ ಬಾರಿ ನಾಜೂಕಾವುಟು.

ನಾಟಕ (ನಾ) – ನಟನೆ, ಕೃತಕ ವರ್ತನೆ, drama, artificial action, pretend
ಉದಾ : ಅಂವ ಒಳ್ಳ ನಾಟಕ ಮಾಡಿ ಇವರ ಮಂಗ ಮಾಡ್ತ್

ನಾಟಿ (ಕ್ರಿ) – ಗದ್ದೆ ಬೇಸಾಯ, ನೇಜಿ ನೆಡುವುದು, ನಾಟಿ ಕೆಲಸ, paddy cultivation, planting of paddy seedlings

ನಾಟಿಮೊದ್ದು (ನಾ) – ಬೇರು, ಮೂಲಿಕೆ, ಗಿಡಗಳಿಂದ ತಯಾರಿಸಿದ ದೇಸಿ ಔಷಧ, local medicine made out of roots, herbs and plants

ನಾಟೆಗೆಳ್ಸ್ (ನಾ) – ಪಾತಿ ಮಾಡಿ ಬೆಳೆಸುವ ಬಳ್ಳಿ ಗೆಣಸು. A kind of edible yam

ನಾಡ್ (ನಾ) – ಹಳ್ಳಿ, ಗ್ರಾಮೀಣ ಪ್ರದೇಶ, rural place

ನಾಡ್ದ್ (ನಾ) –ಎರಡು ದಿನಗಳ ನಂತರ, ನಾಳೆಯ ನಾಳೆ, day after tomorrow

ನಾಡಿ (ನಾ) – ರಕ್ತನಾಳ, blood vessel ವರ್ತನೆ, temperament, behaviour.

ನಾಣೆಹೋದು (ಕ್ರಿ) – ಮೆತ್ತನೆಯಾಗು, losing its crispness / stiffness

ನಾಣೆಲ್‌ಕಾಯಿ (ನಾ) – ಹೊಳೆಯ ಬದಿಯಲ್ಲಿ ಬೆಳೆಯುವ ನಾಣೆಲ್‌ಮರದ ಕಾಯಿ.

ನಾತ (ನಾ)–ವಾಸನೆ, bad smell

ನಾಮಾಸ್ (ಕ್ರಿ.ವಿ)–ಸಂಕೋಚ, hesitation

ನಾಯಿ ಗಂಟ್ ಹಾಕಂಬುದು (ಕ್ರಿ) –ನಾಯಿಗಳ ಲೈಂಗಿಕ ಕ್ರಿಯೆ, intercourse of the dogs

ನಾಯಿಗೂಡ್ (ನಾ) – ನಾಯಿಗಳಿಗಾಗಿ ನಿರ್ಮಿಸಿದ ಪುಟ್ಟ ಕೊಠಡಿ, kennel

ನಾಯಿ ಬೊಗುಳ್ದ್ (ಕ್ರಿ) – ನಾಯಿಗಳು ಕೂಗುವುದು, barking of the dogs

ನಾಯಿ ಸೊಡಂಕ್ (ನಾ) – ತುರಿಕೆ ಉಂಟು ಮಾಡುವ ಸಸ್ಯದ ಬೀಜ, a nut which causes skin irritation.

ನಾರ್ (ನಾ) – ತೆಂಗಿನ ನಾರು, ತೆಂಗಿನ ಕಾಯಿಯ ಸಿಪ್ಪೆಯಲ್ಲಿ ತಯಾರಿಸುವ ನಾರು. fibre, coir, ಯಾವುದಕ್ಕೂ ಒಪ್ಪದವ. a person who disagrees for everything

ನಾಲ್‌ಕೆ (ನಾ) – ನಾಲಿಗೆ, tongue

ನಾವ್‌ಗೆ (ಸ.ನಾ) – ನಮಗೆ, for us

ನಾಳಿ (ನಾ) –ಕುತ್ತಿಗೆ, neck, ನಳಿಕೆ, ಆಲಿಕೆ, funnel

ನಾಳೆ (ನಾ)– ಮುಂದಿನ ದಿನ, tomorrow

ನಿಂಗೆ (ಸ.ನಾ) –ನಿನಗೆ, to you, for you

ನಿಂದ್ (ಸ.ನಾ) – ನಿನ್ನದು, yours

ನಿಂಬುಳಿ (ನಾ) – ನಿಂಬೆಹುಳಿ, lemon

ನಿಗರ್ದು (ಕ್ರಿ) – ನೆಲದಲ್ಲಿ ಜಾರಿಕೊಂಡೇ ಮುಂದೆ ಸರಿಯುವುದು, moving on the floor in a lying position

ನಿಗರ್ (ಕ್ರಿ)– ನೆಲದ ಮೇಲೆ ಜಾರುತ್ತಾ ಸಾಗು, crawl on the floor.

ನಿಗಾ (ಕ್ರಿ)–ಗಮನನೀಡು, ಎಚ್ಚರಿಕೆ ವಹಿಸು, attention, take care

ನಿಡ್ಕಣೆ (ನಾ)–ಹೊಳೆಗಳಲ್ಲಿ ಕಂಡುಬರುವ ಸುಮಾರು 6" ಉದ್ದದ ಮೀನು. a kind of fish alout 6" long found in the rivers

ತ್ತ್ಕ (ಕ್ರಿ) – ನಿಂತುಕೊ, stand up, ಸ್ವಲ್ಪ ಕಾಯಿ, wait, ತಾಳ್ಮೆ ವಹಿಸು, be patient

ತ್ರಾಣ (ನಾ.ವಿ) –ಕ್ಷೀಣ, ಲಾಚಾರು, weak

ತ್ತುಟು (ಕ್ರಿ)–ನಿಂತಿದೆ, ನಿಂತುಹೋಗಿದೆ. Stopped, goes stagnant.

ನ್ನ (ಸ.ನಾ)– ನಿನ್ನ, ನಿನ್ನದು, your, yours.

ದ್ದೆ (ಕ್ರಿ)– ನಿದ್ರೆ ಮಾಡು, deep sleep.

ನ್ನೆ (ನಾ)–ಹಿಂದಿನ ದಿನ, ಕಳೆದುಹೋದ ದಿನ previous day, yesterday

ರ್ಷು(ನಾ)–ಕೆಂಡದ ರಾಶಿ ನೋಡಿ : ಮೇಲೇರಿ

ಮುರ್ದು (ಕ್ರಿ.ವಿ)–ಸಿಟ್ಟಿನಿಂದ ಮುಂದೆ ಬರು, ಹೊಡೆಯಲು ಬರುವಂತೆ ಬರು, come forward with anger
ಉ: ಅಂವ ನಿಮುರಿಕಂಡ್ ಬಾತ್

ರಾಸೆ (ಕ್ರಿ.ವಿ)–ಭರವಸೆ ಕಳೆದುಕೊಳ್ಳುವುದು, hopelessness, disappointment

ರೀಕ್ಷೆ(ಕ್ರಿ)–ಆಶಾವಾದ, expectation, hope, anticipate, ನಿರೀಕ್ಷಿಸು

ೀರೊಳ್ಳೆ (ನಾ) –ನೀರಿನಲ್ಲಿರುವ ವಿಷವಿಲ್ಲದ ಚಿಕ್ಕ ಹಾವು, water snake

ಲ್ಕ್ (ಕ್ರಿ) –ಎಟಕು, reach
ಇಣುಕು, peep

ಲ್ಗ್ (ಕ್ರಿ)–ನಿದ್ರೆಮಾಡು, go to sleep

ನಿಲ್ಲ್ (ಕ್ರಿ) –ನಿಂತುಕೊ stand up, ಸ್ವಲ್ಪ ಕಾಯು, wait ಮುಂದುವರಿಸಬೇಡ, don't continue

ನಿಲ್ಸ್ (ಕ್ರಿ) – ನಿಲ್ಲಿಸು, make him to stop don't continue
ನಿಲ್ಸಿಟು – ನಿಲ್ಲಿಸಿದ್ದಾನೆ

ನಿಲುವು (ನಾ) – ಅಭಿಪ್ರಾಯ, ಅನಿಸಿಕೆ Opinion, stand

ನಿಶ್ಚಯ (ಕ್ರಿ) – ಖಂಡಿತವಾಗಿಯೂ ಧೃಢವಾಗಿಯೂ, definite, sure

ನಿಶ್ಚಯ (ನಾ) – ವೀಳ್ಯಶಾಸ್ತ್ರ, Wedding engagement

ನೀ (ಸ.ನಾ) – ನೀನು, You

ನೀಂಡ್ (ಕ್ರಿ) – ಚಾಚು, ನೀಂಡಿ–ಚಾಚಿ, ಕಾಲು ನೀಡಿ, ಕಾಲು ಚಾಚಿ, rest the leg leisurely

ನೀಂಬು (ಕ್ರಿ)–ಉಜ್ಜು, ತಿಕ್ಕು, ಮಾಲೀಸು, rub

ನೀಕ (ನಾ) – ಮಣ್ಣಿನ ತಟ್ಟು, levelling the land

ನೀಚ (ನಾ.ವಿ.) – ಕೀಳ್ಮಟ್ಟದವ, a person with mean mentality

ನೀರ್ (ನಾ)–ನೀರು, ಜಲ, water

ನೀರ್ ಆವಿಆದು (ಕ್ರಿ)–ಬಿಸಿಲಿನಿಂದ ನೀರು ಆವಿಯಾಗಿ ವಾತಾವರಣ ಸೇರುವುದು evaporation of water

ನೀರ್ ಉಮ್ಮಣಿ (ನಾ) – ಮಳೆಗಾಲದಲ್ಲಿ ರೂಪುಗೊಳ್ಳುವ ಚಿಕ್ಕ ನುಸಿ, a tiny, mosquito that exists in the rainy season

ನೀರ್ಕಣಿ (ನಾ) – ತೋಟ ಅಥವಾ ಗದ್ದೆ ಗಳಲ್ಲಿ ನೀರು ಇಳಿದು ಹೋಗಲು ಮಾಡುವ ಖಾಯಂ ಆದ ಚರಂಡಿ, premanent gutter for the excess water to flow down

ನೀರ್ ದೋಸೆ (ನಾ) – ತೆಳ್ಳಗಿನ ದೋಸೆ, thin dosa

ನೀರ್‌ನಾಯಿ (ನಾ) – ಹೊಳೆಗಳಲ್ಲಿ ವಾಸಿಸುವ ನಾಯಿಯಂತಹ ಉಭಯ ವಾಸಿ ಪ್ರಾಣಿ a dog like animal living in the river, amphibian, beaver

ನೀರ್ ನೆಳಲ್ (ನಾ)–ಉತ್ತರಕ್ರಿಯೆಯ ಮುನ್ನಾ ದಿನದ ಕಾರ್ಯಕ್ರಮ, rituals on the previous night of the obsequial ceremony

ನೀರ್ ಮದುವೆ (ನಾ) – ಮದುವೆ ಸಮಾರಂಭದ ಕೊನೆಯಲ್ಲಿ ನಡೆಯುವ ಸಾಂಪ್ರದಾಯಿಕ ಕಾರ್ಯಕ್ರಮ a customary ritual at the end of the marriage festival

ನೀರ್ ಸೋಂತೆ (ನಾ) – ನೀರು ಸೌತೆ, ಮುಳ್ಳು ಸೌತೆ water cucumber

ನೀರಡಿ (ನಾ) – ಸ್ನಾನದ ಕೋಣೆ, ಬಚ್ಚಲು ಮನೆ bathroom, bathing shed

ನೀರಡಿ ಕೊಟೆಗೆ (ನಾ) – ಪ್ರತ್ಯೇಕವಾಗಿ ಇರುವ ಬಚ್ಚಲು ಮನೆ bathroom in a separate building

ನೀರುಳ್ಳಿ ಬಜೆ (ನಾ) – ನೀರುಳ್ಳಿಯಿಂದ ತಯಾರಿಸಿದ ಬಜ್ಜಿ, bajji prepared out of onion slices

ನುಂಗ್ (ಕ್ರಿ)–ನುಂಗು, swallow

ನುಚ್ಚಿ (ನಾ)–ಅಕ್ಕಿಯನ್ನು ಸಂಸ್ಕರಿಸುವಾಗ ದೊರೆಯುವ ಕಡಿಅಕ್ಕಿ small piece of rice that remains while processing the rice

ನುಣ್ಚಿ ಕಂಡತ್ (ಕ್ರಿ)– ತಪ್ಪಿಸಿಕೊಳ್ಳು, escape, evade

ನುಣ್ಚು (ಕ್ರಿ)– ಆಹಾರವನ್ನು ಒತ್ತಿ/ ಹಿಚುಕಿ ಮೆತ್ತಗೆಮಾಡುವುದು, make the food soft by pressing it.

ನುಣ್ಪು (ನಾ.ವಿ) – ನಯವಾದ, smooth, glossy

ನುಳ್ಳ್ (ಕ್ರಿ) – ಜಿವುಟು, pinch

ನೂಕ್ (ಕ್ರಿ) – ದೂಡು, ತಳ್ಳು, push

ನೂಕೋಲ್ (ನಾ) – ನವಿಲುಕೋಸು, knolknol

ನೆಂಟ (ನಾ) – ಬಂಧು, relative

ನೆಂಪು (ನಾ) – ನೆನಪು, memory, reminisence

ನೆಕ್ಕ್ (ನಾ) – ನೆಕ್ಕು, lick

ನೆಕ್ಕರ್ತೆ (ನಾ) –ತೇವಾಂಶವಿರುವ ಜಾಗದಲ್ಲಿ ಬೆಳೆಯುವ ಪಶುಗಳ ಆಹಾರ ಸಸ್ಯ, A fodder plant that grows in a wet land, ಔಷಧೀಯ ಸಸ್ಯ

ನೆಕ್ಕರೆ (ನಾ) – ಮಾವಿನ ಒಂದು ತಳಿ, a kind of mango

ನೆಕ್ಕಿ ಸೊಪ್ಪು (ನಾ) – ಬೆಂಕಿಗೆ ಈ ಸೊಪ್ಪು ಹಾಕಿ ಹೊಗೆ ಎಬ್ಬಿಸಿದರೆ ಕೋಳಿ ಹೇನು ನಿವಾರಣೆಯಾಗುತ್ತದೆ.

ನೆರ್ಕೆ (ನಾ)–ಗೋಡೆಯ ಬದಲು ಕಟ್ಟುವ ಬಿದಿರಿನ ಚದ್ದಲೆ bifurcation made out of bamboo mat

ನೆಗಡಿ (ನಾ) – ಸಿಂಬಳ, snivel

ನೆಗಾಡ್ (ಕ್ರಿ) – ನಗುವುದು, laugh

ನೆಟ್ಟಿಕಾಯಿ (ನಾ) – ತರಕಾರಿ, ಕಾಯಿಪಲ್ಯೆ, vegetable

ನೆಟ್ಟಿಕಳ (ನಾ) – ತರಕಾರಿ ಬೆಳೆಯುವ ಪ್ರದೇಶ, vegetable field

ನೆಟ್ಟೆ (ನಾ) – ಕೈ ಬೆರಳ ಸಂದುಗಳನ್ನು ಬಗ್ಗಿಸಿದಾಗ ಉಂಟಾಗುವ ಶಬ್ಧ, breaking knuckle

ನೆಡ್ (ಕ್ರಿ) – ಗಿಡ ನೆಡುವುದು, plant, ನೆಟ್ಟೆ – ನೆಟ್ಟು ಆಯಿತು, planted.

ನೆಣೆ (ನಾ)–ಆರತಿಯ/ದೀಪದ ಬತ್ತಿ

ನೆತ್ರ್ (ನಾ) – ರಕ್ತ, blood

ನೆನ್ಸ್ (ಕ್ರಿ) – ನೆನಪು ಮಾಡಿಕೊಳ್ಳು, remember, recapitulate

ನೆತ್ತಿ (ನಾ) – ತಲೆಯ ಮೇಲ್ಭಾಗ, top of the head, crown

ನೆರಿ ಆಡ್ಸುದು (ಕ್ರಿ) – ಷೋಕಿಮಾಡು, ಸೇಲೆ ಮಾಡು, ರೈಸುದು, showy, fashionable

ನೆರಿಕೊಂಬು (ನಾ) – ಔಷಧೀಯ ಸಸ್ಯ, ಇದರ ಹೂವನ್ನು ದೀಪಾವಳಿಯಲ್ಲಿ ಬಲೀಂದ್ರನಿಗೆ ಕರ್ಣಾಭರಣವಾಗಿ ಬಳಸುತ್ತಾರೆ.

ನೆರಿದು (ಕ್ರಿ) – ಋತುಮತಿಯಾಗು, puberty, ನೆರ್ದಮೊದುವೆ – ಋತು ಶಾಂತಿ ಲಗ್ನ

ನೆಲಂತಸ್ತ್ (ನಾ) – ನೆಲಮಟ್ಟದ ಅಂತಸ್ತು, ground floor

ನೆಲ್ಲಿಕಾಯಿ (ನಾ) – ನೆಲ್ಲಿಕಾಯಿ, gooseberry

ನೆಲ್ಲಿಪೊಡಿ (ನಾ) – ಬಾವಿಯ ತಳದಲ್ಲಿ, ಬದಿಗೆ ಕಲ್ಲು ಕಟ್ಟುವ ಮೊದಲು ವೃತ್ತಾಕಾರವಾಗಿ ಇರಿಸುವ ಮರದ ಪಟ್ಟಿ

ನೆಲು (ನಾ)–ಹಾಲು/ಮಜ್ಜಿಗೆ ಪಾತ್ರೆ ನೇತು ಹಾಕುವ ಹಗ್ಗದಿಂದ ಮಾಡಿದ ಸಾಧನ rope hanger to hang milk or butter milk pot

ನೆಲೆ (ನಾ)– ಖಾಯಂ ವಾಸ್ತವ್ಯದ ಸ್ಥಳ, ವಾಸಸ್ಥಳ, place of permanent residence.

ನೆವನ (ನಾ) – ನೆಪ, ಕಾರಣ, reason

ನೆಸೆ (ನಾ) – ನಶ್ಯ, snuff

ನೆಳ (ನಾ) – ನೊಣ fly

ನೇಕೆ (ನಾ) – ಬಟ್ಟೆ ಹಾಕಲು ಕಟ್ಟುವ ಬಳ್ಳಿ, rope tied horizontally to put clothes

ನೇಚ್ (ಕ್ರಿ)–ಎತ್ತು lift

ನೇಜಿ (ನಾ)–ಎಳೆಯ ಭತ್ತದ ಪೈರು, tender paddy plant

ನೇಣ್ (ನಾ)–ಹುರಿಹಗ್ಗ, rope made of coir

ನೇಮ (ನಾ)–ದೈವಾರಾಧನಾ ಉತ್ಸವ Celebrations of worship of divine dieties (daivam)

ನೇಲ್ (ಕ್ರಿ) – ನೇತಾಡು, hang, ನೇಲ್ಸ್ – ನೇತಾಡಿಸು

ನೇವಳ (ನಾ) – ಬೆಳ್ಳಿಯ ಅಥವಾ ಚಿನ್ನದ ಉಡಿದಾರ, waist, G-string

ನೈಪಿಜಿನ್ (ನಾ)–ಚಿಕ್ಕ ಇರುವೆ, tiny ant

ನೈಬಲೆ (ನಾ)– ಪ್ರಾಣಿಗಳ ಮಾಂಸದಲ್ಲಿ ಕಂಡುಬರುವ ಕೊಬ್ಬು, fat found in the meat of the animals

ನೈಯಪ್ಪ (ನಾ) –ಎಣ್ಣೆ ಅಥವಾ ತುಪ್ಪದಲ್ಲಿ ಕಾಯಿಸಿದ ಹಿಟ್ಟು, an eatable roasted in oil or ghee

ನೊಕ್ಕುಳು (ನಾ) – ಎರೆಹುಳ, earth worm

ನೊರ್ಗುಳಿ (ನಾ) – ಭತ್ತ ಕುಟ್ಟಲು ಬಳಸುವ ಕಲ್ಲಿನ ಗುಂಡಿ a stone pit used to beat paddy and make rice.

ನೊಂಜ (ನಾ)–ನೊಗ, yoke

ನೊಣ್ಬ (ನಾ.ವಿ) – ನುಣುಚಿಕೊಳ್ಳುವವ, escapist

ನೊಣೆ (ಕ್ರಿ.ವಿ) – ಪೂಸಿ ಮಾತು, ನೊಣೆ ಮಾಡು polite and flattering words or behaviour

ನೋಕಟೆಕಾಯಿ (ನಾ)–ಬೇಯಿಸಿ ಹುರಿದು ತಿನ್ನುವ ಕಾಡಿನ ಒಂದು ಬಗೆಯ ಕಾಯಿ

ನೋಕಲೆ ಹಾಕುದು (ಕ್ರಿ) – ಆಸೆಯಿಂದ ಬಯಸುತ್ತಾ ನೋಡು, look at something, longing for

ನೋಡ್ (ಕ್ರಿ) – ನೋಡು see, lookat, observe

ನೋಡ್‌ಕನ (ಕ್ರಿ)–ನೋಡುವಾಗ, while looking at

ನೋಳಿ (ನಾ) – ಲೋಳೆ, ಅಂಟಾದ ದ್ರವ ಪದಾರ್ಥ, jelly like substance

ನೋಳೆ (ನಾ) – ಲೋಳೆ, yolk

ಪ

ಪಂಕ್ತಿ (ನಾ)– ಊಟಕ್ಕೆ ಕುಳಿತುಕೊಳ್ಳುವ ಸಾಲು, a line of people seated in the dinning hall.

ಪಂಚೋಳಿ (ನಾ) – ಒಂದು ಜಾತಿಯ ವೀಳ್ಯದೆಲೆ, a kind of betel leaf.

ಪಂಜಿಕುರ್ಚಿ (ನಾ)– ಒಂದು ಜಾತಿಯ ಅಗಲವಾದ ಗಿಡ್ಡ ಜಾತಿಯ ಹೊಳೆ ಮೀನು,
a short and flat fish living in the river.

ಪಂಡ್ (ನಾ)– ಹಿಂದಿನ ಕಾಲ, long back, so many years back.

ಪಕ್ಕಲಿ (ನಾ)– ಹತ್ತಿರದಲ್ಲಿ, ಪಕ್ಕದಲ್ಲಿ, near by, close to us.

ಪಕ್ಕಾಸ್ (ನಾ)– ಮಾಡ್ ನಿಲ್ಲಲು ಆಧಾರ ವಾಗಿರುವ ಮರದ ಕಂಬಿ, rafter.

ಪಕೋರ್ಳಿ (ನಾ.ವಿ)– ದಿಕ್ಕಿಲ್ಲದವ, ಆಸರೆ ಇಲ್ಲದವ, orphan, a person who has no care takers, no supporters.

ಪಗಾರ (ನಾ)– ಬದಲು, instead of.

ಪಚ್ಚಡಿ (ನಾ)– ಸಾಸಿವೆ ಹಾಕಿ ಮಾಡಿದ ನೀರು ಸೌತೆಕಾಯಿಯ ಗೊಜ್ಜು,
a dish made out of cucumber using mustard.

ಪಚಾರ (ನಾ)– ಧಾರಮುಹೂರ್ತದ ನಂತರ ವಧು ವರರಿಗೆ ಶುಭ ಕೋರಲು ಏರ್ಪಡಿಸುವ ಕಾರ್ಯಕ್ರಮ, ಅರತಕ್ಷತೆ, ಶೇಷೋಪಚಾರ,
marriage reception.

ಪರ್ಚ್ (ಕ್ರಿ)– ಸದಾ ಪಿರಿಪಿರಿ ಹೇಳುತ್ತಾ ಇರುವುದು, scolding or cursing all the time.
ಪರ್ಚೆಲ – ಸದಾ ಪರ್ಚುವವ.

ಪಚ್ಚೆ (ನಾ)– ಹಸಿರು ಬಣ್ಣ, green.

ಪಟ್ಲಕಾಯಿ (ನಾ)– ಪಡುವಲಕಾಯಿ, snake gourd.

ಪಟ್ಟಾಂಗ (ಕ್ರಿ.ವಿ)– ಹರಟೆಹೊಡಿ, chatting.

ಪಟ್ಟಿ (ನಾ) – ವಸ್ತುಗಳ ಒಂದು ಯಾದಿ, list, ಕ್ರಮಪ್ರಕಾರವಾಗಿ ಬರೆದ ವಿವರ.

ಪಟ್ಟಿಟು (ಕ್ರಿ) – ಮುಟ್ಟಿದೆ, ಪರಿಣಾಮ ಬೀರಿದೆ, had its effect.

ಪಟ್ವಿಂಗ (ಕ್ರಿ.ವಿ)– ಪೋಕ್ರಿ, ಗಲಭೆಕೋರ, ಬೇಜವಾಬ್ದಾರಿ, rascal.

ಪಟ್ಟೆ (ನಾ) – ಭೂ ಮಾಲಕತ್ವದ ದಾಖಲೆ, records relating to land ownership title.

ಪಟ್ಟ್ ಹಿಡ್ಡ್ (ಕ್ರಿ.ವಿ)–ಹಟಹಿಡಿದು, ಬದ್ಧತೆಯಿಂದ, with all commitment.

ಪಟ್ಟೆ ನೂಲ್ (ನಾ)– ಬಿಳಿ/ ಕೆಂಪು/ ಕಪ್ಪು ಬಣ್ಣದ ದಪ್ಪನೆಯ ನೂಲಿನ ಉಡಿದಾರ, G - string, waist - string.

ಪಟೇಲ (ನಾ)– 60ರ ದಶಕಗಳ ಹಿಂದೆ ಊರಿನ ಪಂಚರಾಗಿ, ಜನನ, ಮರಣ ಗಳ ನೋಂದಣಾಧಿಕಾರಿಯಾಗಿ, ಗ್ರಾಮದ ನ್ಯಾಯ ತೀರ್ಮಾನಗಳ ಮುಖ್ಯಸ್ಥರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಗ್ರಾಮ ಮಟ್ಟದ ಅಧಿಕಾರಿ.

ಪಟೋರ (ನಾ)– ಸುಲಿದ ಅಡಿಕೆಯ ಒಂದು ವರ್ಗ, a kind of dry arecanut.

ಪಡ (ನಾ)– ಹೊಳೆಗಳ ಬದಿಯಲ್ಲಿ ಗುಂಪು ಗುಂಪಾಗಿ ಬೆಳೆಯುವ ಒಂದು ಜಾತಿಯ ಚಿಕ್ಕ ಮರಗಳು. a kind of trees growing in herds on the banks of the rivers.

ಪಡ (ನಾ)– ಬಾಳೆಗೊನೆಯಲ್ಲಿನ ಎರಡು ಸಾಲು ಕಾಯಿಗಳ ಗೊಂಚಲು.

ಪಡ್ಕ (ಕ್ರಿ)– ಪಡೆದುಕೊಳ್ಳು, get, find.

ಪಡ್ಚ (ಕ್ರಿ)– ಸತ್ತು ಹೋಗು, died, expire.

ಪಡ್ಪಂದ (ನಾ)– ಪಡುದಿಕ್ಕಿನಿಂದ, from the west.
ಉದಾ: ಅಂವ ಪಡ್ಪಂದ ಬಂದವ.

ಪಡಿ (ನಾ)– ಬಿದಿರಿನ ಅಥವಾ ಅಡಿಕೆ ಮರದ ಸಲಾಕೆಗೆ ಕಾಡುಬಳ್ಳಿ ಸುತ್ತಿ ಮಾಡುವ ಬಾಗಿಲು ಅಥವಾ ತೆನೆ ಹೊಡೆಯಲು ಬಳಸುವ ಮಂಚ (ಪಡಿ).

ಪಡು (ನಾ)– ಪಶ್ಚಿಮ ದಿಕ್ಕು, west.

ಪಡ್ಪು (ನಾ)– ಹುಲ್ಲುಗಾವಲು, ಬಯಲು ಪ್ರದೇಶ, ಹುಲ್ಲು ಪಡ್ಪು,
meadow, grassland.

ಪಣೋಳು / ಸಣ್ಣೋಳು (ನಾ) – ನೇಗಿಲು ತುದಿಗೆ ಸಿಕ್ಕಿಸುವ ಕಬ್ಬಿಣದ ಚೂಪಾದ ಸಾಧನ. The plough.

ಪತ್ತ (ಕ್ರಿ)– ತೇಪೆ, patch, ಉದಾ: ಹರ್ದ ಬಟ್ಟೆಗೆ ಪತ್ತ ಹಾಕುದು.

ಪತ್ತಾಯ (ನಾ)– ಭತ್ತ ತುಂಬಿಸಿಡುವ ದೊಡ್ಡ ಗಾತ್ರದ ಮರದ ಪೆಟ್ಟಿಗೆ, a big box used as container to store paddy.

ಪತ್ತಾಯ್‌ಪತ್ತ್ (ಕ್ರಿ.ವಿ)– ಪರೋಕ್ಷವಾಗಿ, ಸುತ್ತು ಸುತ್ತು ಬಂದು, indirectly.

ಪತ್ರೋಡೆ (ನಾ)– ಕೆಸುವಿನ ಎಲೆಯಲ್ಲಿ ಮಾಡುವ ಪದಾರ್ಥ, dish made out of colocasia leaves.

ಪದ್‌ಂಜಿ (ನಾ) – ಹೆಸರು ಕಾಳು, green gram.

ಪದ್‌ನ್ (ಕ್ರಿ)– ನೆನೆಹಾಕು, make wet, made to soak.

ಪದ್ರಾಡ್ (ಕ್ರಿ) – ಹೇಳದೆ ಓಡಿಹೋಗು, ತಪ್ಪಿಸಿಕೊಳ್ಳು, escape, run away with out information.

ಪನ್ನೀರ್ (ನಾ)– ಸುವಾಸನಾಭರಿತ ನೀರು, scented water, rose water.

ಪಪ್ಪಡ (ನಾ)– ಊಟದ ಜೊತೆ ಬಳಸುವ ತೆಳ್ಳಗಿನ ಹಪ್ಪಳ, salty muffins used for meals.

ಪರ್ಮಳ (ನಾ)– ಪರಿಮಳ, sweet/ scented smell.

ಪರ್‌ಂಕ್ (ಕ್ರಿ)– ಉಗುರಿನಿಂದ ಪರಚುವುದು, scratch with nails,
ಉದಾ: ಕೊತ್ತಿ ಪರ್‌ಂಕ್‌ದು.

ಪರ್‌ಂಗಿ(ನಾ) – ಚರ್ಮರೋಗ, skin decease.

ಪರ್‌ಂಗಿ (ನಾ)– ಅನನಾಸು ಹಣ್ಣು, pineapple.

ಪರ್‌ಡ್ (ಕ್ರಿ)– ಉಗುರಿನಿಂದ ನೆಲವನ್ನು ಅಥವಾ ಮಣ್ಣನ್ನು ಕೆರೆಯುವುದು, ತಡಕಾಡುವುದು, scratch by nails, finding it difficult to hold on,
ಉದಾ: ಅಂವ ಚೆಂಡ್ ಹಿಡಿಯಕೆ ಪರ್ಡಿದೆ.

ಪರಿಕಟೆ (ನಾ.ವಿ)– ಹರಿದ ಬಟ್ಟೆ, ಚಿಂದಿಬಟ್ಟೆ, torn clothes, ragged clothes.

ಪಲ್ಟಿ (ಕ್ರಿ)– ಉರುಳಿ ಬೀಳು, fall down suddenly. ಲಾಗ, ವಿಫಲ, failure.

ಪಲ್ಲಿಗುದ್ದು (ನಾ)– ಹಳ್ಳಿಯಲ್ಲಿ ನೀರಿನಲ್ಲಿ ಹುಡುಗರು ಆಡುವ ಜನಪದ ಆಟ, a folklore game played by the boys.

ಪಲ್ಲೆಕಾಯಿ/ ಬಟ್ಟಕಾಯಿ (ನಾ)– ಕೋಳಿಯ ಜೀರ್ಣಾಂಗ, gizzard.

ಪಲ್ಲೋಡಿ (ನಾ)– ಔಷಧೀಯ ಗುಣ ಇರುವ ಎಲ್ಲಾ ಜಾತಿಯ ಸಸ್ಯಗಳ ಚಿಗುರನ್ನು ಬೇಯಿಸಿ ತಯಾರಿಸಿದ ಕಸಾಯ. a medicated decoction prepared out of the tender leaves.

ಪಶ್ಚಾತ್ತಾಪ (ಕ್ರಿ)– ತಪ್ಪಿನ ಅರಿವಾಗಿ ಬೇಸರ ಪಟ್ಟುಕೊಳ್ಳುವುದು, repentance, feeling sorry.

ಪಸ್‌ಲ್ (ನಾ)– ಬೆಳೆ, ಉತ್ಪನ್ನ, crop.

ಪಸೆ (ನಾ)– ತೇವಾಂಶ, wetness, water contents.

ಪಳ್ಳ (ನಾ)– ಚಿಕ್ಕ ಚಿಕ್ಕ ನೀರಿನ ಗುಂಡಿಗಳು.

ಪಳ್ಳಬೀಳ್ದು (ಕ್ರಿ)– ಎಮ್ಮೆ, ಹಂದಿಯಂತಹ ಪ್ರಾಣಿಗಳು ಚಿಕ್ಕ ಪುಟ್ಟ ನೀರಿನ ಗುಂಡಿಗಳಲ್ಲಿ ಮಲಗಿಕೊಳ್ಳುವುದು. animals like buffeloes and pigs lie in the small water pits.

ಪಳ್ಳಿ (ನಾ) – ಮಸೀದಿ, mosque, ಮುಸ್ಲಿಮರ ಪೂಜಾ ಸ್ಥಳ.

ಪಳ್ಮೆ (ನಾ)– ಪಟ್ಟಾಂಗ ಹೊಡಿ, ಆಕರ್ಷಕ ಮಾತು, ಘಟನೆಯ ಬಗ್ಗೆ ಮೌಖಿಕ ವರದಿ.

ಪಕ್ಷವಾತ (ನಾ) – ಪಾರ್ಶ್ವವಾಯು, ಲಕ್ವ, paralysis.

ಪ್ರತಿಫಲ (ನಾ)– ಮಾಡಿದ ಕೆಲಸ ಅಥವಾ ಸೇವೆಗೆ ದೊರೆಯುವ ಉಡುಗೊರೆ, raward, returns.

ಪ್ರಮಾಣ ಮಾಡ್ದು (ಕ್ರಿ)– ದೇವ/ ದೈವಸ್ಥಾನಗಳಲ್ಲಿ ದೇವರ ಮುಂದೆ ಪ್ರಮಾಣ ಮಾಡಿ ತಮ್ಮ ಪ್ರಾಮಾಣಿಕತನವನ್ನು ಘೋಷಿಸಿಕೊಳ್ಳುವುದು, ತೀರ್ಮಾನವನ್ನು ದೇವರಿಗೆ ಒಪ್ಪಿಸುವುದು, swear in front of God.

ಪ್ರಸಾದ (ನಾ)– ದೇವರ ಪ್ರಸಾದ, ನೈವೇದ್ಯ, ಪಂಚಕಜ್ಜಾಯ, ಕುಂಕುಮ/ಗಂಧ ಪ್ರಸಾದ.

ಪಾಂಜ (ನಾ)–ಹಾರು ಅಳಿಲು, pole cat.

ಪಾಂಡಿ (ನಾ)– ಮಾವಿನ ಹಣ್ಣಿನ ಒಂದು ಪ್ರಬೇಧ, a kind of mango.

ಪಾಂದ (ನಾ)– ತೆಂಗಿನ ಮರದ ಹಿಂಗಾರದ ಮುಚ್ಚಿಕೆ.

ಪಾಂಬು (ಕ್ರಿ)– ತೇಲು, float.

ಪಾಚೋಳಿ (ನಾ)– ತೋಡಿನಲ್ಲಿರುವ ಚಿಕ್ಕ ಮೀನು, a small fish living in the streams.

ಪಾಡ್ (ಕ್ರಿ)– ಕಷ್ಟ, ಬವಣೆ, ಪರಿಸ್ಥಿತಿ, ನಾಯಿಪಾಡ್– ನಿರ್ಗತಿಕ ಪರಿಸ್ಥಿತಿ, situation, condition.

ಪಾತೆ (ನಾ)– ಪತಂಗ, ಚಿಟ್ಟೆ, butterfly.

ಪಾದ (ನಾ)– ಕಾಲಿನ ತಳಭಾಗ, foot.

ಪಾನಕ (ನಾ)– ಬೆಲ್ಲ, ಕರಿಮೆಣಸು, ನೀರುಳ್ಳಿ, ಏಲಕ್ಕಿ ಹಾಕಿ ತಯಾರಿಸಿದ ರುಚಿಕರ ಪೇಯ,
juice prepared out of jaggery, pepper, onion and cardamom.

ಪಾಪ (ನಾ.ವಿ)– ಸೌಮ್ಯ ಸ್ವಭಾವದ,
mild by nature.

ಪಾಪ (ಕ್ರಿ)– ಪಾತಕ ಕೆಲಸ,
sin, criminal deed.

ಪಾಪಿ (ನಾ.ವಿ) – ಕೆಟ್ಟ, ಅನೈತಿಕ, ಕ್ರಿಮಿನಲ್ ಅಪರಾಧ ಮಾಡಿದವ, ಪಾಪ ಮಾಡಿದವ, sinner.

ಪಾಪಿಟ್ಟ್ (ನಾ)– ಕಡಿಯಕ್ಕಿ, ಬೆಲ್ಲ ಅಥವಾ ಸಕ್ಕರೆ, ತೆಂಗಿನ ತುರಿ ಹಾಕಿ ಹಬೆಯಲ್ಲಿ ಬೇಯಿಸಿ ತಯಾರಿಸಿದ ಹಿಟ್ಟು.

ಪಾಯ (ನಾ)– ಅಡಿಪಾಯ, ಪಾಯ, ಪಂಚಾಂಗ, foundation.

ಪಾಯ್ಸ (ನಾ)– ಹಾಲು, ಸಕ್ಕರೆ ಅಥವಾ ಬೆಲ್ಲ, ಹಣ್ಣು, ಬೇಳೆ ಇತ್ಯಾದಿ ರುಚಿಕರ ವಸ್ತುಗಳನ್ನು ಹಾಕಿ ತಯಾರಿಸಿದ ದ್ರವ ರೂಪದ ಆಹಾರ, ಪರಮಾನ್ನ.

ಪಾರ (ಕ್ರಿ)– ಕಾವಲು, ಕಾವಲು ಕಾಯುವುದು, security, watch, guard.

ಪ್ರಾರಬ್ಧ (ಕ್ರಿ.ವಿ)– ಕರ್ಮ, ವಿಧಿ, fate.

ಪಾರೆಕಲ್ಲ್ (ನಾ)– ಹಾಸುಪಾದೆ,
vast and flat rock.

ಪಾಲ್ (ನಾ)– ಆಸ್ತಿಯಭಾಗ, ಪಾಲು,
share of the property.

ಪಾಲ (ನಾ) – ಕಚ್ಚಾ ಸೇತುವೆ,
little raw bridge.

ಪಾಲೆಪ್ಪುಳು (ನಾ)– ಹೊಳೆಯಲ್ಲಿ ವಾಸಿಸುವ ಆಮೆಯಂತಹ ದೊಡ್ಡ ಪ್ರಾಣಿ.
an animal like tortoise living in the river, weighs of about 40kg to 60 kg.

ಪಾವ್‌ಲಿ (ನಾ) – ನಾಣ್ಯ, coin.

ಪಾವ್‌ಲಿ (ನಾ)– ಕಾಡುಪ್ರಾಣಿ, ದನಗಳು ಕಾಡಿನ ತೊರೆಗಳಲ್ಲಿ ನೀರು ಕುಡಿಯುವಾಗ ಮೂಗಿನ ಮುಖಾಂತರ ದೇಹ ಪ್ರವೇಶಿಸುವ ಒಂದು ಜಾತಿಯ ಜಂತು. ಒಂದು ವಿಧದ ಜಿಗಣೆ, ಇಂಬಳ,
a creature like leach that enters the body of the animals through nose while drinking water from the forest streams.

ಪಾವು (ನಾ)– ಅಳತೆಯ ಸಾಧನ,
4 ಪಾವು = 1 ಸೇರು.

ಪಾಷಾಣಮೂರ್ತಿ/ ಕಲ್ಲುರ್ಟಿ (ನಾ) – ಆದಿಶಕ್ತಿ, ದೇವಿಯ ಅಂಶವಿರುವ ಸ್ತ್ರೀದೈವ ಎಂಬ ನಂಬುಗೆಯಿಂದ ಆರಾಧನೆಗೆ ಒಳಪಡುವ ದೈವ.

ಪಿಂಜಾಣಿ (ನಾ) – ಪದಾರ್ಥ ಹಾಕಲು ಬಟ್ಟಲಿನ ಜತೆ ಬಳಸುವ ಚಿಕ್ಕ ತಟ್ಟೆ,
a small plate to put side dish along with main plate.

ಪಿಂಜಾರಿ (ನಾ.ವಿ) – ಆಸೆಬುರುಕ, ಜಿಪುಣ,
greedy, stingy.

ಪಿಂಡಿ (ನಾ) – ತೆಪ್ಪ, ಬಿದಿರನ್ನು ಹೆಣೆದು ಮಾಡುವ ತೆಪ್ಪ,
raft made of bamboo poles.

ಪಿಕ್‌ಲಾಟ (ಕ್ರಿ.ವಿ)– ತುಂಟಾಟ, mischievousness.

ಪಿರ್ಕಿ (ಗು)– ಸದಾ ಕಿರಿಕಿರಿ ಮಾಡುತ್ತಾ ಏನಾದರೂ ಮಾತನಾಡುತ್ತಾ ಇರುವವ, over talkative, disturbing.

ಪಿಚ್ಚೆ (ಕ್ರಿ.ವಿ)– ಧೈರ್ಯ, courage.

ಪಿಚ್ಚೆ (ನಾ)– ಪ್ರಾಣಿಗಳ ತರಡು ಬೀಜ, testicle of the animals.

ಪಿಚ್ಚೆ ತೆಗಿದು (ಕ್ರಿ)– ಗಾಡಿ ಎತ್ತುಗಳ ಲೈಂಗಿಕ ಹುಮ್ಮಸ್ಸು ಕಡಿಮೆ ಮಾಡಲು ಹಾಗೂ ಗಂಡು ಹಂದಿಗಳ ಬೆಳವಣಿಗೆ ಹೆಚ್ಚಿಸಲು ಅವುಗಳ ತರಡು ಬೀಜವನ್ನು ನಿಷ್ಕ್ರೀಯ ಗೊಳಿಸುತ್ತಾರೆ.
making the oxen and the male pigs impotent, eunuch.

ಪಿಜಿನ್ (ನಾ) – ಇರುವೆ, ant.

ಪಿಟ್ಟರ್ (ನಾ) – ಯಂತ್ರದ ಕೆಲಸಗಾರ, mechanic.

ಪಿಟ್ಟಾಸಿ (ನಾ.ವಿ)– ಆಸೆಬುರುಕ, ಜಿಪುಣ, ಪ್ರತಿ ತುಂಡಿಗೂ ಆಸೆಪಡುವವ, ಕೊರ್ಸಂಡಿ, stingy, greedy.

ಪಿಟ್ಟೆ (ನಾ) – ಚೂರು, ತುಂಡು, ಚಿಕ್ಕ ಗಾತ್ರದ,
round piece of small size excreta of goats and sheep

ಪಿಣ್ಚ್ (ಕ್ರಿ)– ಹಿಸುಕು,
ಒತ್ತಿ ಒತ್ತಿ ಹದಗೊಳಿಸು, ಹಿಚುಕು, ಹಿಚುಕಿ ಹಿಚುಕಿ ಪುಡಿ ಮಾಡು.
ಉದಾ: ಸಣ್ಣಮಕ್ಕಳಿಗೆ ಪಿಣ್ಚಿ ಪಿಣ್ಚಿ ಅನ್ನ ಕೊಡ್ದು.

ಪಿತ್ತ (ನಾ) – ಪಿತ್ತಕಾಯಿಲೆ– ಕಾಮಾಲೆ ರೋಗ, jaundice, ಪಿತ್ತ–ಅಹಂ, ಜಂಭ, ಉದಾ: ಅವನ ಪಿತ್ತ ನೆತ್ತಿಗೇರಿತು, ಅವನ ಪಿತ್ತ ಹಂಞ ಇಳ್ಳೊಕು.

ಪಿತ್ತಾಳೆ (ನಾ.ವಿ)– ಚಾಡಿ ಮಾತು ಕೇಳುವವ, one who listens the back biting.

ಪಿತ್ರಾರ್ಜಿತ (ನಾ)– ವಂಶ ಪಾರಂಪರ್ಯ ವಾಗಿ ಬಂದಂತಹ,
ancestral, inheritance.

ಪಿರ್ಯಾದಿ (ಕ್ರಿ.ವಿ)– ಅಧಿಕೃತವಾಗಿ ನೀಡುವ ದೂರು, official complaint.

ಪಿರಿಕಾಯ್ಸ್ (ಕ್ರಿ)– ಪ್ರಚೋದಿಸು, ಸಿದ್ಧ ಗೊಳಿಸು, ಉಬ್ಬಿಸು,
motivate, encourage, make ready.
ಉದಾ: ಅಂವ ಓಟಿಗೆ ನಿಲ್ಲೊಕುಂತಾದರೆ ನಾವೆಲ್ಲ ಸೇರಿ ಅವನ ಪಿರಿಕಾಯ್ಸಿದೊ.

ಪಿರಿದು (ಕ್ರಿ)– ತಲೆಗೆ ಏರಿದ ಅಮಲು ಇಳಿಯುವುದು, decreasing of intoxication, ಭೂತ ಪಿರಿದು, the kolam of bhootha coming to an end.

ಪಿರಿಪಿರಿ (ಕ್ರಿ)– ಮಾತಿನ ಮೂಲಕ ಕಿರಿಕಿರಿ ಮಾಡುವುದು,
causing nuisance orally.

ಪಿಲಿಚಾಮುಂಡಿ (ನಾ) – ಆದಿಶಕ್ತಿ/ ದೇವಿರೂಪಿಣಿ ಎಂದು ಆರಾಧಿಸಲ್ಪಡುವ ಧರ್ಮದೈವದ ಉಗ್ರರೂಪ.

ಪಿಸ್‌ಂಡ (ನಾ.ವಿ) – ಮುಂಗೋಪಿ, ಕೋಪಿಷ್ಠ, short tempered man. always in angry mood.

ಪಿಸುಗುಟ್ಟ್ (ಕ್ರಿ)– ಸಣ್ಣ ಸ್ವರದಲ್ಲಿ ಹತ್ತಿರದಿಂದ ಹೇಳು, whisper.

ಪಿಳ್ಳಿ (ಸ.ನಾ)– ಮೊಮ್ಮಗು, grand child, ಪಿಳ್ಳಿಕ–ಮೊಮ್ಮಕ್ಕಳು, grand children.

ಪಿಳ್ಳೆ (ನಾ)– ಹಕ್ಕಿಮರಿಗಳು, fledglings.

ಪೀಂಕ್ಸ್ (ಕ್ರಿ)– ಕಟ್ಟವನ್ನು ಸಡಿಲಗೊಳಿಸುವುದು, ಉರುಳು ಅಥವಾ ಹಿಡಿತದಿಂದ ಜಾರಿಸು ಉದಾ: ಕಟ್ಟ ಪೀಂಕ್ಸಿ ಓಡಿಹೋತ್ – ಕಟ್ಟವನ್ನು ಸಡಿಲಗೊಳಿಸಿ ಓಡಿಹೋಯಿತು, escape by loosening the knot / grip.

ಪೀಟ್ರೋಲ್ (ನಾ) – ಅಡಿಕೋಲು, foot ruler.

ಪೀಡೆ (ನಾ)– ತೊಂದರೆ, ಹಿಂಸೆ, ಉಪದ್ರ, ಪಿಶಾಚಿ, troublesome, disturb, violent, devil, ಪೀಡ್ಸ್– ತೊಂದರೆ ಕೊಡು ಹಿಂಸೆನೀಡು,· ಉಪದ್ರ ಮಾಡು.

ಪೀನಾರಿ (ನಾ.ವಿ) – ತುಂಬಾ ಜಿಪುಣ, ಆಹಾರಕ್ಕಾಗಿ ಆಸೆಪಡುವವ, too stingy and greedy, desire and longing for food.

ಪ್ರೀತ್ಸ್ (ಕ್ರಿ)– ಪ್ರೀತಿಸು, make love.

ಪುಂಡ (ನಾ)– ತುಂಟ, ಪುಂಡಾಟಿಕೆ ಮಾಡುವವ, mischievous.

ಪುಂಡಿ (ನಾ)– ಹಬೆಯಲ್ಲಿ ಬೇಯಿಸುವ ಉರುಟಾದ ಹಿಟ್ಟು, ಕಡುಬು.

ಪುಂಡಿ ಬಿತ್ತ್ (ನಾ) – ಭತ್ತ ಬಿತ್ತನೆ ಬೇಸಾಯದ ಒಂದು ಪದ್ಧತಿ, sowing of seeds, a method of cultivation.

ಪುಕ್ಕ (ನಾ.ವಿ)– ಭಯಪಡುವವ, ಪುಕ್ಕಲು ಸ್ವಭಾವದವ,
always afraid of, person with less courage.

ಪುಕ್ಸಟೆ (ಕ್ರಿ.ವಿ)– ಉಚಿತವಾಗಿ, ಧರ್ಮಾರ್ಥ, ಪುಕ್ಕಟೆ,
free, without any price.

ಪುಕಾರ್ (ನಾ)– ದೂರು, complaint.

ಪುಕುಳಿ (ನಾ)– ಕುಂಡೆ, buttock.

ಪುಜ್ಜ (ಕ್ರಿ)– ಹೆದರಿ ಓಡಿಹೋಗು, ಹೇಳದೆ ಓಡಿಹೋಗು,
run away with fear, escape without information.
(ಪಣಾಂತೆ ಪದ್ರಾಡ್)

ಪುಡೆ (ನಾ)– ಬದಿ, ಆ ಪುಡೆ– ಆಚೆ ಬದಿ, ಈ ಪುಡೆ– ಈಚೆ ಬದಿ. side, this side, that side.

ಪುಣರ್ (ನಾ) – ಕೋಲಿನಲ್ಲಿ ಹೊಡೆದಾಗ ಉಂಟಾಗುವ ಗಾಯ, causing wound mark while beating in a cane. ದೇಹದಲ್ಲಿ ನರಗಳು ಎದ್ದು ಕಾಣುವುದು.

ಪುಣ್ಯ (ನಾ)– ಉತ್ತಮ ಕಾರ್ಯಗಳನ್ನು ಮಾಡಿದಾಗ ಗಳಿಸಿಕೊಳ್ಳುವ ಜನರ ಒಳ್ಳೆಯ ಭಾವನೆ ಹಾಗೂ ಅಭಿಪ್ರಾಯಗಳು,
merit earned by good deeds.

ಪುಣ್ಯಾರ್ಚನೆ (ನಾ)– ದೇವರ ತೀರ್ಥ,
holy water prepared by the priest of the temple on the occasion of the pooja.

ಪುಣಿ (ನಾ) – ಗದ್ದೆಯ ಬದಿಯ ದಿಡ್ಡು, ಏರಿ, ಗದ್ದೆಪುಣಿ, ridge or bund formed on the edge of all the sides of the paddy field.

ಪುಣಿಲ್ (ನಾ)– ಗಟ್ಟಿಯಾದ ಮರ, ಇದನ್ನು ಬಾವಿಯ ತಳದಲ್ಲಿ ಇರಿಸುವ ನೆಲ್ಲಿಪಡಿ ಮಾಡಲು ಬಳಸುತ್ತಾರೆ, ನೋಡಿ : ನೆಲ್ಲಿಪಡಿ.

ಪುತ್ತ (ಸ.ನಾ)– ಚಿಕ್ಕ ಮಕ್ಕಳನ್ನು ಮುದ್ದಿನಿಂದ ಸಂಬೋಧಿಸುವ ಪದ, an affectionate word used to call the little children.

ಪುದ (ನಾ) – ಕಾಡುಪಾರಿವಾಳ, pigeon.

ಪುದಿನ (ನಾ) – ಪದಾರ್ಥಗಳಿಗೆ ಬಳಸುವ ಸಂಭಾರ ಸಸ್ಯ, mint.

ಪುನರ್ಪುಳಿ (ನಾ) – ಬಿರಿಂಡ ಹಣ್ಣು, kokum.

ಪುರ್ಬು (ನಾ)– ಕ್ರೈಸ್ತ ಗಂಡಸು, male christian, ಪುರ್ಬುತಿ– ಕ್ರೈಸ್ತ ಹೆಂಗಸು, christian lady. ಬಾಯಮ್ಮ.

ಪುರಕೆ (ನಾ) – ರವಿಕೆ, blouse.

ಪುರಾವೆ (ನಾ) – ಸಾಕ್ಷಿ, ಆಧಾರ, witness, proof.

ಪುರುಸೊತ್ತು (ಕ್ರಿ) – ವಿರಾಮ, ಸಮಯಾವಕಾಶ, liesure, free time.

ಪುಲೆಜಿ (ನಾ) – ಮೀನಿನ ದೇಹದಲ್ಲಿ ಕಂಡುಬರುವ ಚಿಪ್ಪು, scales.

ಪುಲ್ಲಿ (ನಾ.ವಿ) – ಚುಕ್ಕಿ, dots.

ಪುಲ್ಲಿ ಪುತ್ರ (ನಾ) – ಬಣ್ಣ ಬಣ್ಣದ ಪುಲ್ಲಿಗಳಿರುವ ವಿಷಯುಕ್ತ ಹಾವು, a multi-coloured dotted poisonous snake.

ಪುಸ್‌ಲಾಯಿಸ್ (ಕ್ರಿ) – ಪ್ರೇರೇಪಿಸು, ಪ್ರೋತ್ಸಾಹಿಸು, motivate, encourage.

ಪುಳಿಕಟೆ (ನಾ)– ಹುಣಿಸೆಬೀಜ, tamarind nut.

ಪುಳಿಯಾಡ್ಡಿ (ನಾ.ವಿ) – ಜಾರಿಣಿ, ಸೂಳೆ, prostitute.

ಪುಳುಕು (ನಾ) – ಕಣ್ಣಿನಲ್ಲಿ ಬರುವ ಕಲ್ಮಶ, the dirt coming out from the eyes.

ಪೂಂಗೊಟ್ಟು (ನಾ)– ಅಗಲ ಕಿರಿದಾದ ಹಾರೆ, mammutty with less width.

ಪೂಂಬೆ (ನಾ)– ಬಾಳೆ ಹೂ, flower of the plantain.

ಪೂಕರೆ ಮಜಲು (ನಾ)– ಕಂಬಳದ ಗದ್ದೆ, paddy field in which buffalo race is held.

ಪೂಕೊಳೆ (ನಾ)– ಭೂತಕೋಲದ ಸಂದರ್ಭದಲ್ಲಿ ಗದ್ದೆಯಲ್ಲಿ ಎಳೆಯುವ ಬಿದಿರಿನಿಂದ ತಯಾರಿಸಿದ ರಥದಂತ ಆಕೃತಿ.

ಪೂಜಾರಿ (ನಾ) – ನಡಾವಳಿ, ನೇಮ, ಜಾತ್ರೆ ಸಂದರ್ಭಗಳಲ್ಲಿ ಕುಟುಂಬದ/ಊರಿನವರ ಪರವಾಗಿ ಮುಂದಾಗಿ ನಿಂತು ಕಾರ್ಯಕ್ರಮ ನಡೆಸಿಕೊಡುವವ, moderator.

ಪೂಜಿ (ಕ್ರಿ)– ಪೂರ್ತಿಯಾಗಿ, ಸಂಪೂರ್ಣ ವಾಗಿ, ಮನಾರವಾಗಿ,
completely, entire, clearly.

ಪೂಜು (ಕ್ರಿ) – ಲೇಪಿಸು, ಹಚ್ಚು,
smear, apply.

ಪೂಜೆ (ಕ್ರಿ)– ದೇವರನ್ನು ಆರಾಧಿಸುವುದು– ಬೇರೆ ಬೇರೆ ಸಂದರ್ಭಗಳಲ್ಲಿ ವೈವಿಧ್ಯಮಯ ರೀತಿಯಲ್ಲಿ ದೇವರನ್ನು ಪೂಜಿಸಲಾಗುತ್ತದೆ, praying worshiping.

ಪೂರ್ತಿ (ಕ್ರಿ.ವಿ)– ಸಂಪೂರ್ಣ, ಎಲ್ಲವನ್ನು, ಮುಗಿಸು,
complete, total, entire.

ಪೂರ (ಕ್ರಿ.ವಿ) – ಎಲ್ಲಾ, ಸಂಪೂರ್ಣ, ಪೂರ್ತಿ,
all, complete, entire.
ಉದಾ: ಪೂರ ಕೆಲಸ ಮಾಡ್ಯಳೆ.

ಪೂವಚ್ಚಿ (ನಾ)– ಬಸವನ ಹುಳ, snail.

ಪೂವೆ (ನಾ)– ಹುಣ್ಣಿಮೆಯ ಮೊದಲ ದಿನ, previous day of the full moon day.

ಪೂಸಿಮಾಡ್ (ಕ್ರಿ) – ಹೊಗಳುವುದು, ಮುಖಸ್ತುತಿ ಮಾಡುವುದು,
praise, flatter.

ಪೆರ್ಚ (ನಾ.ವಿ)– ನಾಚಿಕೆ ಸ್ವಭಾವ, ಬೆರೆಯುವ ಸ್ವಭಾವ ಇಲ್ಲದ, ರೂಢಿ ಯಿಲ್ಲದ,ಚಡಪಡಿಸು,
not accustomed,
shy by nature.

ಪೆಟ್ಟ್‌ಕಮ್ಮಿ (ನಾ.ವಿ)– ಮನೋರೋಗಿ,
mentally disturbed person.

ಪೆದಂಬು (ಕ್ರಿ.ವಿ)– ಉಲ್ಟಾಮಾತಾಡು, ಅಧಿಕಪ್ರಸಂಗಿ, impudent,
talk negatively,
opposite or insensibly.

ಪೆದ್ದ (ನಾ.ವಿ)– ದಡ್ಡ,
dull, not active.

ಪೆದ್ದೋಳ್ತಿ (ನಾ)– ಬಾಣಂತಿ, ಬಾಣಂತನ, post delivery period of the pregnant woman.

ಪೇರ್ಲಕಾಯಿ (ನಾ)– ಪೇರಳೆಕಾಯಿ, ಸೀಬೆಕಾಯಿ, guava fruit.

ಪೈಂಗುತ್ತಿ (ನಾ)– ಮಲೆಯಾಳಿ ಬಿಲ್ಲವರು (ತೀಯರು) ಪರಶಿನಕಡವು ಮುತ್ತಪ್ಪ ದೇವರನ್ನು ಆರಾಧಿಸುವರೇ ಮಾಡುವ ಪೂಜೆ.

ಪೈಸೆ (ನಾ)– ಹಣ, ನಗದು,
money, cash.

ಪೊಂದು (ಕ್ರಿ)– ನಿಧಾನವಾಗಿ ಕೆಲಸಮಾಡು,
work slowly.

ಪೊಂಗರೆ (ನಾ)– ನೆರಳಿಗಾಗಿ ಕಾಫಿ ತೋಟ ಗಳಲ್ಲಿ ನೆಡುವ ಮೆತ್ತಗಿನ ಚಿಕ್ಕ ಮರ/ ಕರಿಮೆಣಸು ಬಳ್ಳಿ ಹಬ್ಬಲು ಇದನ್ನು ನೆಡುತ್ತಾರೆ,
soft tree planted in the coffee plantations for shade, also used as support for pepper creeper.

ಪೊಕ್ಕ್‌ಸ್ (ಕ್ರಿ)– ಮೇಲಕ್ಕೆ ಎತ್ತು,
lift, ಕದಿ, steal.

ಪೊಕ್ಕುಳ (ಕ್ರಿ)– ಉಬ್ಬಿಬರು, ಗುಳ್ಳೆಬರು

ೊಕ್ಕುಳ ರೊಟ್ಟಿ (ನಾ)– ಅಕ್ಕಿ ಹುಡಿಯಿಂದ ತಯಾರಿಸುವ ಉಬ್ಬಿಬರುವ ರೊಟ್ಟಿ.

ೊಗರ್ (ನಾ.ವಿ)– ಪೋರ್ಸು, ಅತೀ ಉತ್ಸಾಹ, ಉಮೇದು, over interest, showy.

ೊಜ್ಜಿ (ನಾ)– ಚಟ್ನಿ, ಖಾರವಾದ ವ್ಯಂಜನ, a side dish made from chilly and coconut.

ೊಟ್ಟ (ನಾ.ವಿ)– ಕಿವುಡ, deaf.

ೊಟ್ಟದೈವ (ನಾ) – ಶಿವನ ಅಂಶ ಹೊಂದಿರುವ ಪುರುಷ ದೈವ, ಆಸ್ತಿಪಾಸ್ತಿ ರಕ್ಷಣೆಗಾಗಿ ಆರಾಧಿಸಲ್ಪಡುವ ದೈವ, a diety worshipped for the sake of security of properties.

ೊಟ್ಟು (ನಾ.ವಿ)– ಟೊಳ್ಳು, hollow, husk.

ೊಡ್‌ಪೋಸಿ (ನಾ.ವಿ)– ಚಾಲಾಕಿಲ್ಲದ ವ್ಯಕ್ತಿ, ಹೆಡ್ಡ, ಕೆಲಸಕ್ಕೆ ಬಾರದವ, useless fellow.

ೊಡಿ (ನಾ)– ಪುಡಿ, powder.

ೊಡುಂಬು (ಕ್ರಿ.ವಿ)– ಅರ್ಥಹೀನ ಮಾತು, ಪೊಡುಂಬ – ಅರ್ಥಹೀನವಾಗಿ ಮಾತನಾಡುವವ, ಮುಟ್ಠಾಳ.

ೊದ್ಕೆ (ನಾ)– ಬಾಳೆಎಲೆಯಲ್ಲಿ ಕಟ್ಟಿ ಕೆಂಡದೊಳಗಿಟ್ಟು ಬೇಯಿಸಿದ ಪದಾರ್ಥ, a dish packed in the plantain leaf and baked by keeping it inside the ember.

ಪೊನ್ನಂಬರ (ಕ್ರಿ) – ಕೊಂಡಾಟ ಮಾಡುವುದು, ಅತಿಯಾಗಿ ಮುದ್ದು ಮಾಡುವುದು, showing too much love and affection.

ಪೊಯ್ಯ (ನಾ)– ಮರಳು, sand.

ಪೊಯ್ಯಕುಜ್ಜೆ (ನಾ) – ಹೊಳೆಯ ತಳದಲಿ ಮರಳು ಇರುವಲ್ಲಿ ವಾಸಿಸುವ ಸುಮಾರು ಒಂದು ಅಡಿ ಉದ್ದದ ಮೀನು. a kind of fish living on the sand in the river water.

ಪೊಲಿ (ನಾ)– ಭತ್ತದ ಕಣಜ, ಬೈಹುಲ್ಲಿನ ನೇಣಿನಿಂದ ಸುತ್ತಿ ಮಾಡುವ ಕಣಜ.

ಪೊಲ್ಲಿ (ನಾ)– ಹಲ್ಲಿ, lizard.

ಪೊರ್ಲು (ನಾ.ವಿ)– ಸುಂದರ, ಚಂದ, beautiful, charming.

ಪೊರ್ಲು ಪೊಲ್ಲಿಗೆ (ನಾ.ವಿ)– ಅಂದ ಚೆಂದ, beauty, charm.

ಪೊಲ್ಸು (ಕ್ರಿ.ವಿ)– ಶುಭ ಲಕ್ಷಣ, ಅದೃಷ್ಟ, lucky.

ಪೊವ್ವ (ನಾ.ವಿ)– ಸುಂದರ, ಚಂದ, beautiful (ಮಕ್ಕಳ ಭಾಷೆ)

ಪೊಳಿ (ಕ್ರಿ)– ಪೆಟ್ಟು, ಹೊಡೆತ, beat thrash.

ಪೊಳಿಮಣೆ (ನಾ)– ನೆಲವನ್ನು ಗುದ್ದಿ ಸಮತಟ್ಟು ಮಾಡುಲು ಬಳಸುವ ಮರದ ಮಣೆ, a wooden hammer used to level the land beating by it.

ಪೋಂತು (ಕ್ರಿ)– ಪ್ರೀತಿಯಿಂದ, ಮುದ್ದಿನಿಂದ, ಸಮಾಧಾನದಿಂದ ಪ್ರೇರೇಪಿಸು. motivate or encourage by love and affection.

ಪೋಕ್ರಿ (ನಾ.ವಿ)– ತುಂಬಾ ತುಂಟ, ಕೆಟ್ಟ ವರ್ತನೆಯ ಹುಡುಗ.
mischiveous boy with bad behaviour, scoundrel.

ಪೋಟು (ಕ್ರಿ)– ಸಂಭೋಗ, inter course.

ಪೋಡಿ (ನಾ)– ಗೆಣಸು, ಆಲುಗಡ್ಡೆ, ಬಾಳೆಹಣ್ಣು ಮುಂತಾದವುಗಳಿಂದ ಎಣ್ಣೆಯಲ್ಲಿ ಕರಿದು ತಯಾರಿಸಿದ ತಿಂಡಿ, ಬಜ್ಜಿ.

ಪೋರ್ತ (ಕ್ರಿ)– ಪೈಪೋಟಿ, competition.

ಪೋಯಿ (ಕ್ರಿ)– ಹೋಗುವ, let's go.
ಪೋಯಾ? – ಹೋಗುವನಾ?

ಪೋಯತ (ಕ್ರಿ.ವಿ)– ಅವಿವೇಕದ ಕೆಲಸ, fancy act, stupid act.

ಪೋಲಿ (ನಾ.ವಿ)– ಕೆಟ್ಟ ಕೆಲಸ, ದುಷ್ಕೃತ್ಯ ಮಾಡುವ, ಕೆಟ್ಟಮಾತು ಆಡುವ ಹುಡುಗ, ಪೋಕರಿ, ಉಡಾಳ, scamp.

ಪೋಷಾಕ್ (ನಾ)– ಬಟ್ಟೆಬರೆ, ಧಿರಿಸು, dress.

ಪೋರ್ಸ್ (ನಾ.ವಿ)– ಬಡಾಯಿ, ಅಹಂ, ರೈಸುವುದು, ತನ್ನನ್ನು ತಾನೇ ಹೊಗಳಿಕೊಳ್ಳುವುದು, ಶೌರ್ಯ, pride, self boasting, superiority.

ಪೌರು (ಕ್ರಿ.ವಿ)– ಶೌರ್ಯ, ದರ್ಪ, ಹೆಮ್ಮೆ, pride, heroism, daringness.

ಬ

ಬಂಗ/ ಬಂಜ (ಕ್ರಿ.ವಿ)– ಕಷ್ಟ, ಪ್ರಾಸದಾಯಕ, very difficult, tedious.

ಬಂಗುಡೆ (ನಾ)– ಒಂದು ಜಾತಿಯ ಸಮುದ್ರ ಮೀನು,
mackerel

ಬಂಡಸಾಲೆ (ನಾ)– ದಿನಸಿಅಂಗಡಿ, groceryshop.

ಬಂದ್‌ತಲ್ಪು (ಕ್ರಿ)– ಆಗಮಿಸು, arrive.

ಬಂದ (ನಾ)– ಅಕ್ಕಿಯ ತಿಂಡಿ(ದೋಸೆ, ಇಡ್ಲಿ ಇತ್ಯಾದಿ)ಮಾಡಲು ತಯಾರಿಸಿದ ದ್ರವ ಹಿಟ್ಟು, wet flour.

ಬಂದ (ಕ್ರಿ)– ಬಂದನು, he came.
ಬಂದನೆ (ಕ್ರಿ)– ಬರುತ್ತೇನೆ, coming,
ಬಂದನಾ (ಕ್ರಿ)– ಬಂದಿದ್ದೀಯಾ?
Have you come?

ಬಂದನಾರ್ (ನಾ)– ಒಂದು ಜಾತಿಯ ಕಸಾಯದ ಬಳ್ಳಿ.
a medicated creeper.

ಬಂದರೆನಾ (ಪ್ರ)– ಬರುತ್ತೀರಾ?
Are you coming? (ಬ.ವ).

ಬಂದಿಯನಾ? (ಪ್ರ)– ಬರುತ್ತಿಯ? (ಏ.ವ)
ಬಂದಿಗಾ?

ಬಂರ್ಬಿ (ಕ್ರಿ.ವಿ)– ಎರಡು ಕೈಗಳಲ್ಲಿ ಎಷ್ಟು ಸಂಗ್ರಹಿಸಲು ಸಾಧ್ಯವೋ ಅಷ್ಟು, collecting maximum in both hands.

ಬಂಬುಚ್ಚಿ (ನಾ)– ತರಕಾರಿ/ ತೆನೆಗಳನ್ನು ನಾಶಪಡಿಸುವ ಕೀಟ,
an insect which spoils the crop and vegetables.

ಬಕ್ತಲೆ (ನಾ)– ಬೈತಲೆ, ತಲೆ ಬಾಚುವಾಗ ಕೂದಲನ್ನು ಇಬ್ಭಾಗಿಸುವ ಗೆರೆ,
line parting the hair on the head while combing.

ಬರ್ಕತ್ (ಕ್ರಿ.ವಿ)– ಉದ್ಧಾರ, ಅಭ್ಯುದಯ, ಪ್ರಗತಿ, improvement, prosperity, progress,
ಉದಾ: ಅಂವ ಬರ್ಕತ್ ಆದುಲೆ.

ಬಚ್ಚಂಗಾಯಿ (ನಾ)– ಕಲ್ಲಂಗಡಿ,
watermelon.

ಬಚ್ಚಾವ್ (ಕ್ರಿ)– ಪಾರಾಗು, ಸುರಕ್ಷಿತ,
save, survive.

ಬರ್ಜಿ (ನಾ)– ಕೋಳಿಗಳನ್ನು ಮುಚ್ಚಿಡುವ ದೊಡ್ಡ ಕುಕ್ಕೆ, ನೋಡಿ; ಕೂಂಟಗೆ. a big basket to keep the chicks.

ಬಜೆ (ನಾ)– ಔಷದೀಯ ಬೇರು,
Acorus root.

ಬಜೆಂಟಿ (ನಾ) – ಒಣಗಿದ ಸೆಗಣಿ,
dry cowdung.

ಬಟ್ಲ್ (ನಾ)– ಊಟದ ತಟ್ಟೆ,
plate used for meals.

ಬಟಾಟೆ (ನಾ)– ಆಲೂಗಡ್ಡೆ, potato.

ಬಟ್ಟೆ ಜಾರ್ದ್ (ಕ್ರಿ) – ಸೊಂಟದ ಕೀಲು ನೋವು,
ache due to spine trouble.

ಬಡ್ ರೊಟ್ಟಿ (ನಾ)– ಬಳಪದ ಕಲ್ಲಿನ ಕಾವಲಿಯಲ್ಲಿ ಮಾಡಿದ ಅಕ್ಕಿಯ ರೊಟ್ಟಿ.
rice roti roasted on the balapa stone pan.

ಬಡ್ಡ್‌ಗಟ್ಟ್ (ಕ್ರಿ)– ನಿರಂತರ ದೈಹಿಕ ಕೆಲಸ ಕಾರ್ಯಗಳಿಂದ ಹಸ್ತ ಮತ್ತು ಪಾದದ ಅಡಿಮೈ ಗಟ್ಟಿಯಾಗುವುದು.
harderning of the surface of the palm or foot due to hard work.

ಬಡ್ಡ್ ಶರೀರ (ನಾ)– ಕ್ರಿಯಾಶೀಲತೆ/ ಚುರುಕಿಲ್ಲದ ದೇಹ, inactive body.

ಬಡ್ಸ್ (ಕ್ರಿ)– ಬಡಿಸು, serve.

ಬಡಗ (ನಾ)– ಉತ್ತರದಿಕ್ಕು, north.

ಬಡಾಯಿ (ನಾ.ವಿ)– ಒಣಜಂಭ, ಅಹಂ,
ego.

ಬಡ್ಚಿಲ್ (ನಾ)– ಗದ್ದೆಗಳ ಬದಿಯಲ್ಲಿ ನೀರು ಇಳಿದು ಹೋಗಲು ಮಾಡುವ ಕಣಿ,
gutter made round the paddy field for the water to flowdown during the time of harvest.

ಬಡ್ಡು (ನಾ.ವಿ)– ಹರಿತವಿಲ್ಲದ,
blunt, not sharp.

ಬಡ್ಡುಳಿ (ನಾ)– ಹೇರುಳಿ.

ಬಣಲೆ (ನಾ)– ಬಾಣಲೆ, ಎಣ್ಣೆಯಲ್ಲಿ ಕರಿಯುವ ತಿಂಡಿಗಳನ್ನು ಕಾಯಿಸುವ ಪಾತ್ರೆ,
frying vessel.

ಬಣ್ಣಂಗಾಯಿ (ನಾ)– ಅರೆಬಲಿತ ತೆಂಗಿನ ಕಾಯಿ, semi dried coconut.

ಬಣ್ಣಬಂಗಾರ (ನಾ)– ವಧುವಿನ ಶೃಂಗಾರಕ್ಕಾಗಿ ವರನ ಕಡೆಯವರು ನೀಡುವ ಬಟ್ಟೆ, ಆಭರಣ, ಹೂವು, ಇತ್ಯಾದಿ ಅಲಂಕಾರಿಕ ಹಾಗೂ ಸಾಂಪ್ರದಾಯಿಕ ವಸ್ತುಗಳು.

ಬಣ್ಪು (ನಾ)– ಮತ್ತಿಮರ, a kind of hardwood of high quality.

ಬದ್ಂಬಟೆ (ಗು)– ದಪ್ಪನೆಯ ಚುರುಕಿಲ್ಲದ ವ್ಯಕ್ತಿ, stout, fat and inactive boy.

ಬದಲ್ಸ್ (ಕ್ರಿ)– ಬದಲಾಯಿಸು, change, exchange.

ಬದನೆಕಾಯಿ (ನಾ)– ಬದನೆಕಾಯಿ ಎಂಬ ತರಕಾರಿ, brinjal.

ಬರ್ದಣೆ (ಕ್ರಿ)– ಬರಯುತ್ತೇನೆ, I write.

ಬನ್ನೆ (ಕ್ರಿ)– ಬರುತ್ತೇನೆ, I come, ಮನೆಯಿಂದ ಹೊರಡುವಾಗ 'ನಾಬನ್ನೆ' ಎಂದು ಹೇಳಿ ಹೊರಡುತ್ತಾರೆ.

ಬರ್ಮ್ಮ (ನಾ.ವಿ)–ಠೀವಿ, ಗತ್ತು, ಗಾಂಭೀರ್ಯ, dignity, decorum.

ಬಯಕೆ ಮದುವೆ (ನಾ)– ಸೀಮಂತ, ಬಸುರಿ ಗೃಹಿಣಿಗೆ ಮಾಡುವ ಸಂಮಾನ, baby shower.

ಬರಕಾ? (ಪ್ರ)– ಬರಲಾ? ಬರಬಹುದಾ? shall I come?

ಬರಾಬರಿ (ಕ್ರಿ.ವಿ)– ತುಂಬಾ, ಬೇಕಾದಷ್ಟು, a lot of, what all we want.

ಬರಿ (ಕ್ರಿ)– ಬರಿಯುವುದು, write, ಬರಿದು, ಬರೆದು.

ಬರೀ (ನಾ.ವಿ)– ಅಷ್ಟುಮಾತ್ರ, ಕೇವಲ, only that much. ಉದಾ: ನಾವ್‌ಗೆ ಬಲೆಗೆ ಸಿಕ್ಕಿದ್ ಬರೀ ಕಲ್ಲ್ ಮುಳ್ಳ ಮಾತ್ರ.

ಬರಿಕ (ನಾ)– ಕಾಡುಕುರಿ, wild sheep.

ಬರೆ (ನಾ)– ಇಳಿಜಾರು ಪ್ರದೇಶವನ್ನು ಸಮತಟ್ಟು ಮಾಡಿದಾಗ ಮೇಲ್ಭಾಗದಲ್ಲಿ ಸಿಗುವ ಮಣ್ಣಿನ ದರಿ/ ಬರೆ.

ಬರೆಂಗೋಲು (ನಾ)– ಬಿಸಿಯಾದ ಕೋಲು, hot stick.

ಬರೆಹಾಕುದು (ಕ್ರಿ)– ಕಾದ ಕಬ್ಬಿಣದಿಂದ ಮೈ ಮೇಲೆ ಗೆರೆಹಾಕುವ ಶಿಕ್ಷೆ, branding. ವಿಷು ಸಂಕ್ರಮಣ ದಿವಸ ಉಳುಮೆ ಮಾಡುವುದರ ಮೂಲಕ ಭೂಮಿಗೆ ಬರೆ ಹಾಕುವುದು.

ಬಲ್ಲಾಳ್‌ರ್ (ನಾ)– ಹಿಂದೆ ಜೈನರಸರು ದ.ಕ. ಜಿಲ್ಲೆಯನ್ನು ಆಳುತ್ತಿದ್ದಾಗ ಜೈನ ಜಮೀನ್ದಾರರನ್ನು 'ಬಲ್ಲಾಳರು' ಎಂದು ಸಂಬೋಧಿಸುತ್ತಿದ್ದರು,
when D.K district was ruled by Jain kings, the Jain land lords were addressed as 'Ballals'.

ಬಲೆ (ನಾ)– ನೂಲು ಅಥವಾ ತಂಗೀಸ್‌ನಿಂದ ತಯಾರಿಸಿದ ಬಲೆ,
net made of thread or fibre.

ಬಲ್ಮೆ (ನಾ) – ದಿಕ್ಸೂಚಿ, compass.

ಬಲ್ಮೆ (ನಾ) – ಭವಿಷ್ಯ ಹೇಳು, forecasting the future

ಬಲ್ಲೆ (ನಾ) – ದೊಡ್ಡದಾದ ಪೊದೆಗಳ ವಿಶಾಲವಾದ ಒಂದು ಗುಚ್ಛ ಅಥವಾ ಹಿಂಡಿಲು, ಉದಾ: ಚೆಂಡೆ ಬಲ್ಲೆ,
a herd of bushes or hedges.

ಬಸ (ನಾ)– ದೈಹಿಕ ಶಕ್ತಿ, energy, stamina, ಉದಾ: ಅಂವಂಗೆ ಬಸನೇ ಇಲ್ಲೆ.

ಬಸಲೆ (ನಾ) – ಬಳ್ಳಿ ರೂಪದ ಸೊಪ್ಪು ತರಕಾರಿ, spinach.

ಬಳಿ (ನಾ)– ಗೋತ್ರ, ಗೌಡ ಜನಾಂಗದವರಲ್ಲಿ 18 ಗೋತ್ರಗಳಿವೆ.

ಬಳಿವಾಡ (ನಾ) – ದೇವರಿಗೆ ಅರ್ಪಿಸುವ ಅಕ್ಕಿ ಮತ್ತು ತೆಂಗಿನಕಾಯಿ.

ಬಾ (ಕ್ರಿ)– 'ಬಾ' ಎಂದು ಕರೆಯುವುದು, come.

ಬಾಕನ (ಕ್ರಿ)– ಬರುವಾಗ, while coming.

ಬಾಕಿ (ನಾ)– ಉಳಿಕೆ, balance.

ಬಾಕಿಲೆ (ಕ್ರಿ)– ಬರಲಾರ, ಬರಲಾರದು, ಬರಲಾರರು.
may not come.
ಬಾದುಲೆ– ಬರುವುದಿಲ್ಲ,
will not come.

ಬಾಕೇಲೆ (ಕ್ರಿ) – ಖಂಡಿತಾ ಬರಲಾರರು, will never come.

ಬಾಗ್ (ಕ್ರಿ) – ಬಸಿಯುವುದು, pour
ಉದಾ : ಗಂಜಿ ಬಾಗುದು

ಬಾಗಿಲು ತಡಿದು (ಕ್ರಿ)– ಮದುವೆ ಕಳೆದು ತುಪ್ಪ ತರುವ ಸಂದರ್ಭದಲ್ಲಿ ವಧು ವರರು ಮನೆಗೆ ಪ್ರವೇಶಿಸುವಾಗ ಅತ್ತಿಗೆ, ನಾದಿನಿಯರು ಅವರನ್ನು ಬಾಗಿಲಲ್ಲಿ ತಡೆದು ನಿಲ್ಲಿಸುವ ಸಾಂಪ್ರದಾಯಿಕ ಕಾರ್ಯಕ್ರಮ.

ಬಾಚ್ (ಕ್ರಿ)– ಎರಡೂ ಕೈಗಳಿಂದ ಸಂಗ್ರಹಿಸು, collect through both the hands.

ಬಾಚ್ (ಕ್ರಿ) – ಕೂದಲು ಬಾಚು, comb the hair.

ಬಾಡ್ (ಕ್ರಿ) – ಬಾಡಿಹೋಗು, ಮುದುಡು, fade.

ಬಾಣೆ (ನಾ)– ದನ ಮೇಯಿಸುವ ಮನೆ ಪಕ್ಕದ ಹುಲ್ಲುಗಾವಲು, grassy land nearby the house.

ಬಾತ್ (ಕ್ರಿ)– ಬಂದ, ಬಂತು, came, ತಲುಪಿತು, reached.
ಬಾತಿತ್ತ್– ಬರುತ್ತಿದ್ದ,
ಬಾವೊ– ಬರಬಹುದು, ಬರುತ್ತಾರೆ,
ಬಾದು– ಬಂದಾನು/ಳು.

ಬಾತ್‌ಕೋಳಿ (ನಾ)–ಬಾತುಕೋಳಿ, goose.

ಬಾತ್‌ಲೆ (ಕ್ರಿ)– ಬರಲಿಲ್ಲ, not yet come, ತಲುಪಲಿಲ್ಲ, not reached.

ಬಾದುಲೆ (ಕ್ರಿ)– ಬರುವುದಿಲ್ಲ, will not be coming.

ಬಾಧೆ (ಕ್ರಿ)– ತೊಂದರೆ, ಕಿರುಕುಳ, ಉಪಟಳ, disturb, problem, nuisance.

ಬಾನ (ನಾ)– ಆಕಾಶ, sky.

ಬಾನ ಎಸ್ಂಡ್ (ನಾ)– ಮಳೆಗಾಲದ ದಿನಗಳಲ್ಲಿ ಕಂಡುಬರುವ ಕೆಂಪು ಬಣ್ಣದ ಏಡಿ, rain crabs.

ಬಾನ ಚೋರೆ (ನಾ)– ಆಕಾಶದಲ್ಲಿ ಬಹಳ ಎತ್ತರದಲ್ಲಿ ಹಾರುವ ಚಿಕ್ಕ ಗಿಡುಗ, little kite which flies at a very high altitude in the sky.

ಬ್ಯಾಪರ (ನಾ)– ಮತ್ತು ಬರಿಸುವ ವಿಷಯುಕ್ತ ಕಾಯಿ, ಕಡು ಹಾಕಲು ಬಳಸುವ ಕಾಯಿ, intoxicating poisonous nut. ನೋಡಿ: ಕಡು.

ಬಾಪು (ನಾ.ವಿ)– ಬಾವು, swelling.

ಬಾಬೆ (ನಾ)– ಮಗು, ಕೂಸು, child.

ಬಾಮಿ (ನಾ)– ಬಾವಿ, open well.

ಬಾಯಮ್ಮ (ನಾ)– ಕ್ರೈಸ್ತಮಹಿಳೆ, christian lady.

ಬಾಯ್ದಾಳಿ (ಗು)– ಸದಾ ಬೈದುಕೊಂಡಿರುವ, cursing all the time.

ಬಾರ್‌ಪಾತೆ (ನಾ) – ರಾತ್ರಿಯ ವಿದ್ಯುತ್ ಬೆಳಕಿಗೆ ಬರುವ ಚಿಕ್ಕ ಕೀಟ.

ಬಾರ್ಸ್ (ಕ್ರಿ)– ಹೊಡಿ, beat. ಉದಾ: ಚೆಂಡೆ ಬಾರ್ಸ್.

ಬಾರಣೆ (ಕ್ರಿ)– ಭೂತಕ್ಕೆ ಬಳಸುವ ಆಹಾರ, food served to bhootha.

ಬಾವ್‌ಲಿ (ನಾ) – ಬಾವಲಿ, bat.

ಬಾಸ್ (ನಾ)– ಬಿದಿರು ಅಥವಾ ಓಟೆಯ ತೆಳ್ಳಗಿನ ಸಲಾಕೆ. thin bar of bamboo.

ಬಾಸೆ (ನಾ)– ಸಂಸ್ಕೃತಿ, ಸಂಸ್ಕಾರ, culture, etiquacy. ಉದಾ: ಅವಂಗೆ ಬಾಸೆ ಇಲ್ಲೆ – ಆತನಿಗೆ ಸಂಸ್ಕಾರ ಇಲ್ಲ.

ಬಾಳ್ (ನಾ)– ಗರಗಸ, saw.

ಬಾಳ್ (ಕ್ರಿ)– ಬದುಕು, live, life.

ಬಾಳ್‌ಕತ್ತಿ (ನಾ)– ಉದ್ದನೆಯ ಕತ್ತಿ, long sword.

ಬಾಳ್‌ಲೆ (ನಾ) – ಬಾಳೆಯ ಎಲೆ, plantain leaf.

ಬಾಳ್ತರ (ನಾ)– ಬಾಳ್ವಿಕೆ, life span, useful existence.

ಬಾಳೆ (ನಾ)– ಬಾಳೆ, ಬಾಳೆ ತೋಟ, banana or plantain plant.

ಬಾಳೆಕಾಯಿ (ನಾ) – ಬಾಳೆಕಾಯಿ, ಪದಾರ್ಥಕ್ಕೆ ಬಳಸುತ್ತಾರೆ, unripened banana.

ಬಾಳೆ ಚಾಂಬಾರ್ (ನಾ)– ಬಾಳೆಯ ಒಣಗಿದ ಎಲೆ, dry plantain leaves.

ಬಾಳೆ ಮೀನ್ (ನಾ) – ಹೊಳೆಗಳಲ್ಲಿ ವಾಸಿಸುವ ಸುಮಾರು ಒಂದು ಅಡಿ ಉದ್ದದ ಚಪ್ಪಟೆಯಾದ ಮೀನು, a kind of flat fish living in the malnad rivers, ponds and lakes.

ಬಾಳೆಹಣ್ಣ್ (ನಾ)– ಬಾಳೆಹಣ್ಣು, banana, plantain.

ಬಿಂಗಾರ (ನಾ)– ಅಡಿಕೆಮರದ ಎಳೆಯ ಮಿಡಿಗಳಿರುವ ಹೂವು. ಹಿಂಗಾರ, arecanut flower.

ಬಿಂಗ್ರಿ (ಗು)– ತಲೆಹರಟೆ, ಕಿರಿಕಿರಿ ಮನುಷ್ಯ, ಸೌಜನ್ಯತೆ ಇಲ್ಲದವ, uisance, man without etiquacy.

ಬಿಕ್‌ನಾಸಿ (ನಾ.ವಿ)– ದರಿದ್ರ, a man with full of poverty.

ಬಿಗಿ (ಕ್ರಿ)– ಬಾರಿಸು, ಹೊಡೆಯು, ಉದಾ: ಅವಂಗೆ ನಾಲ್ಕು ಬಿಗಿ. beat, thrash.

ಬಿಗಿ (ಕ್ರಿ.ವಿ)– ಕಟ್ಟುನಿಟ್ಟಿನ ಶಿಸ್ತುಬದ್ಧ, rigid strict.

ಬಿಗಿದು (ಕ್ರಿ)– ಗಟ್ಟಿಯಾಗಿ, ಸಡಿಲವಾಗದ ಹಾಗೆ ಕಟ್ಟು, tying tightly.

ಬಿಗಿಪಟ್ಟ್ (ನಾ) – ದೃಢನಿರ್ಧಾರ, very firm decision.

ಬಿಟ್ಟ (ನಾ)– ಮಾಡಿನ ಫಕ್ಕಾಸುಗಳನ್ನು ಜೋಡಿಸಲು ಗೋಡೆಯ ಮೇಲೆ ಇರಿಸುವ ಮರದ ದಿಮ್ಮಿ, wall plate to fix rafters of the roof.

ಬಿಟ್ಟಿ (ಕ್ರಿ)– ಪುಕ್ಕಟೆ ಕೆಲಸ, ಸ್ವಯಂಸೇವೆ, voluntary service.

ಬಿಟ್ಟಿ (ಕ್ರಿ.ವಿ) – ನಿಯತ್ತಿನಿಂದ ಕೆಲಸ ಮಾಡದಿರುವುದು, no dedication in the work.

ಬಿಡಾರ (ನಾ)– ತಾತ್ಕಾಲಿಕವಾಗಿ ತಂಗುವ ಸ್ಥಳ, temporary residence.

ಬಿಡು (ನಾ)– ಬಿಡುವು, free time.

ಬಿಡಿಹೋದು/ ಬಿಡ್ದ್‌ಹೋದು (ಕ್ರಿ) – ಸಾಕು ಸಾಕೆನಿಸು, fedup, ಬಿಡ್ಜೆಲ್ – ಬಿಡಿ ಹೋಗುವಿಕೆ.

ಬಿತ್ತ್ (ನಾ)– ಬಿತ್ತನೆ ಮಾಡುವ ಬೀಜ, sowing seeds.

ಬಿತ್ತ್ (ಕ್ರಿ)– ಬಿತ್ತನೆಮಾಡು, sowing.

ಬಿನ್ನೆ (ನಾ)– ವಿನಂತಿ, ಬಿನ್ನಹ, ದೇವರು, ಭೂತದೊಡನೆ ಬಿನ್ನೆ ಮಾಡಿಕೊಳ್ಳುವುದು, appeal with God.

ಬಿಲ್ಲ್ (ನಾ)– ಬಿದಿರಿನ ತಟ್ಟೆಯಿಂದ ಮಾಡಿದ ಬಿಲ್ಲು, bow.

ಬಿಲ್ವಪತ್ರೆ (ನಾ) – ಪವಿತ್ರವಾದ ಮರ, ಇದರ ತೊಗಟೆಯನ್ನು ದೇವರ ಪೂಜೆಗೆ ಬಳಸುತ್ತಾರೆ, Bael tree.

ಬಿಸ್‌ಲ (ನಾ)– ಒಂದು ಜಾತಿಯ ಚಿಕ್ಕ ವಿಷವಿಲ್ಲದ ಹಾವು, a small poisonless snake.

ಬಿರ್ಸ (ನಾ) – ಚತುರ, ಚಾಲು, ಜಾಣ, ಕುಶಲ, active, wise.

ಬಿಸುಕಣಿ (ನಾ)– ವಿಷುಕಣಿ, ಸೌರಮಾನ ಯುಗಾದಿ, ಬೇಸಾಯ ಮಾಡುವ ಗದ್ದೆಯಲ್ಲಿ ಉಳುಮೆ ಮೂಲಕ ಬರೆ ಎಳೆಯುವುದು.

ಬಿಸುರ್ಪು (ನಾ)– ದೇಹದ ತುಂಬೆಲ್ಲಾ ಚಿಕ್ಕ ಚಿಕ್ಕ ಹುಣ್ಣು ಏಳುವುದು.

ಬಿಳ್ಗಿಲ್ (ನಾ)– ಬೈಹುಲ್ಲು, paddy straw.

ಬೀಂಬುಳಿ (ನಾ)– ಮರ ತೊಂಡೆ, ಪದಾರ್ಥ ಮಾಡಲು, ಉಪ್ಪಿನಕಾಯಿ ಹಾಕಲು ಬಳಸುತ್ತಾರೆ.

ಬೀಜದ ಕೊಚ್ಚಿ (ನಾ)– ಗೇರು ಮರಗಳ ತೋಟ, cashew plantation.

ಬೀಟ್ (ಕ್ರಿ)– ಮರುಪಾವತಿಸು, ಹಿಂದಿರುಗಿಸು, ಸಾಲ ಬೀಟುವುದು, repay, settle.

ಬೀಡ (ನಾ)– ವೀಳ್ಯದೆಲೆ+ ಅಡಿಕೆಹೋಳು+ ಸುಣ್ಣ ಸೇರಿಸಿ ತಯಾರುಮಾಡಿಟ್ಟ ವೀಳ್ಯ. betel ready for chewing.

ಬೀಡು (ನಾ)– ತಾತ್ಕಾಲಿಕವಾಗಿ ತಂಗುವ ಸ್ಥಳ, temporary residence.

ಬೀಣೆಬೊಳ್ಳಿ (ನಾ)– ಮರಕ್ಕೆ ಅಂಟಿಕೊಂಡು ಬೆಳೆಯುವ ಗಟ್ಟಿಯಾದ ಬಳ್ಳಿ. ತಾತ್ಕಾಲಿಕ ಮಾಡು ಕಟ್ಟಲು ಬಳಸುತ್ತಾರೆ. Strong creeper that grows clinging some trees.

ಬೀರ್‌ಕಿಚ್ಚಿ (ನಾ)– ಕಾಡ್ಗಿಚ್ಚು, wild fire.

ಬೀಲ (ನಾ)– ಬಾಲ, tail.

ಬೀಸ್‌ಕತ್ತಿ (ನಾ)– ಚೂರಿ, knife.

ಬೀಸ್‌ಕಲ್ಲ್ (ನಾ)– ಧಾನ್ಯ ಹುಡಿಮಾಡಲು ಬಳಸುವ ಬೀಸುವ ಕಲ್ಲು. mili stone.

ಬೀಸರ (ಕ್ರಿ.ವಿ)– ದೈಹಿಕ ಸಮತೋಲನ ಇಲ್ಲದಿರುವುದು, ತೂಗಾಡು, ಹೊಯ್ದಾಡು. oscillate.

ಬೀಳ್ (ಕ್ರಿ)– ಬೀಳು, fall.

ಬೀತ್ (ಕ್ರಿ)– ಬಿತ್ತು, ಬಿದ್ದು ಆಯಿತು, fell.

ಬುಂಕು/ ಬುಕ್ಕು (ಕ್ರಿ)– ಉಸಿರುಕಟ್ಟಿ, ಶಕ್ತಿಹಾಕಿ ಮಲವಿಸರ್ಜನೆ ಮಾಡುವುದು. force used for the expulsion of excreta.

ಬುಕ್ಕಿ ಮಾತಾಡ್ (ಕ್ರಿ)– ಉಗ್ಗು ಮಾತಾಡು, stammering.

ಬುಗುರಿ (ನಾ)– ವೇಗವಾಗಿ ತಿರುಗುವ ಆಟಿಕೆ, whirling toy.

ಬುಗ್ಗೆ (ನಾ)– ಬೆಲೂನು, baloon.

ಬುಡ್ (ಕ್ರಿ)– ಬಿಟ್ಟುಬಿಡು, ತ್ಯಜಿಸು, leave, release.

ಬುಡ್ಸು (ಕ್ರಿ)– ಬಿಡಿಸು, make him to leave, help him to get released.

ಬುರ್ನಾಸು (ನಾ.ವಿ) – ಅಪ್ರಯೋಜಕ, useless.

ಬುತ್ತಿ (ನಾ)– ಕಟ್ಟಿಕೊಂಡು ಹೋಗುವ ಊಟ, ಅದಕ್ಕೆ ಬಳಸುವ ಪಾತ್ರೆ. tiffin carrier.

ಬುದ್ಧಿ (ನಾ)– ತಿಳಿಯುವ ಶಕ್ತಿ, ಯೋಚನಾ ಶಕ್ತಿ, ವಿವೇಕ. Intelligence, rationality, wisdom.

ಬೂಚು (ನಾ)– ಮುಚ್ಚಳ, ಬಿರಡೆ, cap of the bottle.

ಬೂತಾಯಿ (ನಾ)– ಚಿಕ್ಕ ಸಮುದ್ರ ಮೀನು, sardins.

ಬೂದಿಮುಚ್ಚುದು (ಕ್ರಿ)– ಶವವನ್ನು ದಹನ ಮಾಡಿದ ಮೂರನೇ ದಿನ ಆ ಬೂದಿಯನ್ನು ಗುಂಡಿಯೊಳಗೆ ಹಾಕಿ ಕಬ್ಬಾ ಸಮಾಧಿ (ಧೂಪೆ) ನಿರ್ಮಿಸುವುದು. ಮೂರರ ಶುದ್ಧ, 3rd day's ritual after death.

ಬೂದು (ನಾ)– ಬೂದಿಯ ಬಣ್ಣ, gray.

ಬೂರುಗ ಮರ (ನಾ)– ಹತ್ತಿಮರ, silk cotton tree.

ಬೂಸು (ನಾ.ವಿ)– ಚುರುಕು ಇಲ್ಲದ, not active. ಬೂಸ– ಚುರುಕು ಇಲ್ಲದವ.

ಬೆಂಡ್ (ನಾ)– ತಿರುಳು, pilth. ಬೊಂಡು, ಬೀಜದ ಬೆಂಡ್, kernel.

ಬೆಂಡ (ನಾ)– ಸಿಯಾಳ, tender coconut.

ಬೆಂಡ್ ಕುಕ್ಕೆ (ನಾ)– ಬೆತ್ತ ಅಥವಾ ಬಿದಿರಿನ ಸಲಾಕೆಯಿಂದ ಮಾಡಿದ ಘನಾಕೃತಿಯ ಕುಕ್ಕೆ/ ಬುಟ್ಟಿ, cubic shaped basket made from cane or bamboo strips.

ಬೆಂಡೆಕಾಯಿ (ನಾ) – ತರಕಾರಿ, ladys finger.

ಬೆಕ್ಕು (ನಾ)– ಕಬ್ಬೆಕ್ಕು, wild cat.

ಬೆಚ್ಚಂಗೆ (ನಾ)– ಸಾಕಷ್ಟು ಉಷ್ಣತೆಯಿಂದ ಕೂಡಿದ, warm.

ಬೆರ್ಚಪ್ಪ (ನಾ)– ದೃಷ್ಟಿ ಸೋಕದಂತೆ ಅಥವಾ ತೆನೆಗಳನ್ನು ಹಕ್ಕಿ ಕಾಡು ಪ್ರಾಣಿಗಳಿಂದ ರಕ್ಷಿಸಲು ಹೊಲಗದ್ದೆಗಳಲ್ಲಿ ನಿಲ್ಲಿಸುವ ಬೃಹತ್ ಗಾತ್ರದ ಮಾನವ ಪ್ರತಿಕೃತಿ. huge effigy.

ಬೆಟ್ಟ್ (ನಾ)– ನೀರಾಶ್ರಯವಿಲ್ಲದ ಜಾಗ, place without water facility. dry land.

ಬೆಟ್ಟೆ (ನಾ.ವಿ) – ಲೈಂಗಿಕ ಸಂಬಂಧಿ ಮಾತುಗಳು,
dialogues related to sex.

ಬೆಡಿ (ನಾ) – ಕೋವಿ, gun,
ಕೇಪುನ ಬೆಡಿ, ತೋಟೆ ಬೆಡಿ.

ಬೆಣ್ಣೆ (ನಾ)– ಮೊಸರು ಕಡೆದಾಗ ಬರುವ ಹಾಲಿನ ಕೊಬ್ಬು, butter, ಬೆಣ್ಣೆ ದೋಸೆ– ಬೆಣ್ಣೆ ಹಾಕಿ ಕಾಯಿಸಿದ ದೋಸೆ, ಬೆಣ್ಣೆ ರೊಟ್ಟಿ – butter nan.

ಬೆಣ್ಣೆ ಕರ್ತೆ (ನಾ) – ಈ ಸಸ್ಯದ ಎಲೆಯ ಕಸಾಯವನ್ನು ಸ್ನಾನ ಮಾಡುವಾಗ ತಲೆಗೆ ಹಾಕಿಕೊಳ್ಳುತ್ತಾರೆ.

ಬೆಣ್ತೆಕ್ಕಿ (ನಾ)– ಬೆಳ್ತಿಗೆ ಅಕ್ಕಿ, raw rice.

ಬೆತ್ತಸುರುಳಿ (ನಾ)– ಪಾಷಾಣಮೂರ್ತಿ ದೈವದ ಆಯುಧ.

ಬೆದ್ಕ್ (ಕ್ರಿ)– ಕೆದಕು,
stir up. dig up, take up.

ಬೆದ್ರ್ (ನಾ)– ಬಿದಿರು, bamboo.

ಬೆದ್ರ್ ಹಿಂಡ್ಲ್ (ನಾ)– ಬಿದಿರಿನ ಮೆಳೆ, bamboo thickets.
ಬಿದಿರಿನ ಹಿಂಡಿಲು.

ಬೆಂದದೆ (ಕ್ರಿ)– ಬೇಯುತ್ತದೆ,
baking, boiling, roasting.

ಬೆದೆ (ನಾ)–ಪ್ರಾಣಿಗಳ ಕಾಮೋತ್ತೇಜಕ ಸ್ಥಿತಿ, sexual excitement, coming to heat.
ಉದಾ: ಹಸು ಬೆದೆಗೆ ಬಂದುಟು.

ಬೆನ್ನ್ ಮೆಟ್ಟ್ (ಕ್ರಿ)– ಕೋಳಿಗಳ ಲೈಂಗಿಕ ಕ್ರಿಯೆ, intercourse of the fowls.

ಬೆಪ್ಪ (ನಾ.ವಿ)– ದಡ್ಡ, dull.

ಬೆರ್ಕೆ (ನಾ.ವಿ)– ಮಿಶ್ರಣ, mixture.
ಬೆರ್ಸುದು – ಮಿಶ್ರ ಮಾಡುವುದು, mixing.

ಬೆರಿ (ನಾ.ವಿ)– ಬರೇ, ಕೇವಲ, only.

ಬೆರ್ಲ್ (ನಾ)– ಬೆರಳು, finger.

ಬೆರ್ಸ್ (ಕ್ರಿ)– ಬೆನ್ನಟ್ಟು, chase.

ಬೆಸಗೆ (ನಾ) – ಒಲೆಯ ಮೇಲ್ಭಾಗದ ಅಟ್ಟಣಿಗೆ, rack over the hearth.

ಬೆಳ್ಂದಿರಿ (ನಾ)– ನಂದಿಮರ, nandi tree.

ಬೆಳ್ದ್ (ನಾ)– ಬಿಳಿಬಣ್ಣದ್ದು, whitish, ಬೆಳೆದ – grownup.

ಬೆಳ್ಳಚ್ಚಿ (ನಾ.ವಿ)– ಬಿಳಿ ಬಣ್ಣದ ದನ, white coloured cow.

ಬೆಳ್ಸ್ (ಕ್ರಿ)– ಬೆಳೆಸು, to grow, to tend.

ಬೆಳ್ದದ್ (ನಾ.ವಿ)– ಬೆಳೆದ, ಬಲಿತ, grown enough.

ಬೆಳ್ಚಲ್ (ಕ್ರಿ+ಕ್ರಿ.ವಿ)– ಲೈಂಗಿಕ ಸಂಬಂಧ ವರ್ತನೆ/ ಮಾತು, sexual oriented behaviour/ dialogues, ವಯಸ್ಕರು ಮಾತನಾಡಿದಂತೆ ಮಾತನಾಡುವುದು, speak like elderly people

ಬೆಳ್ಳಂಗೆ (ನಾ.ವಿ)– ಬಿಳಿಯಾದ, whitish.

ಬೆಳ್ಜಾರ್ (ನಾ)– ಮುಂಜಾವು, dawn, 4 a.m to 6a.m.

ಬೆಳೆ (ನಾ)– ಫಸಲು, ಪೈರು, ಬೆಳೆಯ ತಳಿಗಳು, crop.

ಬೆಳ್ಳೆ (ನಾ.ವಿ)– ಬಿಳಿ ಬಣ್ಣದ ಕೋಳಿ, white cock, ಮರದ ದಿಮ್ಮಿಯ ಹೊರ ಆವರಣ, the outer cover of the log.

ಬೇಕಟೆ (ನಾ)– ಹೊಳೆಯುವ ಹಾಳೆಗಳು, glittering foils.

ಬೇಕಾದವು (ಸ.ನಾ) – ನೆಂಟರಿಷ್ಟರು, relatives.

ಬೇಕಾಬಿಟ್ಟೆ (ಕ್ರಿ.ವಿ) – ಗೊತ್ತು ಗುರಿ ಇಲ್ಲದ, ನಿಯತ್ತು ಇಲ್ಲದ, ಶಿಸ್ತು ಬದ್ಧವಲ್ಲದ, ಬದ್ಧತೆ ಇಲ್ಲದ, wreckless, unorganized, irresponsible.

ಬೇಂಗದ ಕೆತ್ತೆ (ನಾ)–ಕಷಾಯ ಕೆಂಪು ಬಣ್ಣ ಬರಲು ಹಾಕುವ ಬೇಂಗದ ಮರದ ತೊಗಟೆ.

ಬೇಜಾರ್ (ನಾ)– ಬೇಸರ, ದುಃಖ, sorrow, grief, sad.

ಬೇಟೆ (ಕ್ರಿ)– ಶಿಕಾರಿ, hunting.

ಬೇಟೆಮಾಸ (ನಾ) – ಬೇಟೆಯಾಡಿದ ಪ್ರಾಣಿಗಳ ಮಾಂಸ, game meat.

ಬೇಡ್ (ಕ್ರಿ)– ಬೇಡಿಕೊಳ್ಳು, beg.

ಬೇತ್ (ಕ್ರಿ)– ಬೆಂದಿದೆ, cooked, baked.

ಬೇನೆ (ನಾ)– ನೋವು, ache, pain.

ಬೇನೆ ಮಾಡ್ (ಕ್ರಿ)– ನೋವು ಕೊಡು, hurt, cause pain.

ಬೇರ್ (ನಾ)– ಮರದ ಬೇರು, root.

ಬೇಲಿ (ನಾ)– ಆವರಣ, ತಡೆಗೋಡೆ, fence, boundary.

ಬೇವರ್ಸಿ (ನಾ.ವಿ) – ಅನಾಥ, ತಬ್ಬಲಿ, ದಿಕ್ಕಿಲ್ಲದವ, orphan.

ಬೇವು (ನಾ)– ಔಷಧೀಯ ಸಸ್ಯ, margosa. ಕಹಿಬೇವು– ಔಷಧೀಯ ಸಸ್ಯ, ಕರಿಬೇವು – ಪದಾರ್ಥಗಳಿಗೆ ಒಗ್ಗರಣೆ ಹಾಕಲು ಬಳಸುತ್ತಾರೆ.

ಬೇಸ್ (ಕ್ರಿ)– ಬೇಯಿಸು, bake, cook.

ಬೈನಾಟಿ (ನಾ)– ಮಲೆಯಾಳಿ (ತೀಯರು) ಬಿಲ್ಲವ ಜನಾಂಗದವರ ಆರಾಧ್ಯ ದೈವ.

ಬೈಪಣೆ (ನಾ)– ದನದ ಹಟ್ಟಿಗಳಲ್ಲಿ ಪಶು ಆಹಾರ ಹಾಕಲು ನಿರ್ಮಿಸಿದ ಎತ್ತರದ ಜಾಗ, platform to put fodder to feed the cows in the cowshed.

ಬೈಲ್ (ನಾ) – ಬಯಲು, ಗದ್ದೆಬಯಲು, paddy field.

ಬೈಹುಲ್ಲ್ (ನಾ)– ಭತ್ತದ ತೆನೆಯ ಹುಲ್ಲು, rice straw.

ಬೊಂಡಿ (ನಾ)– ಕುಂಡೆ, ತಿಕ, buttock.

ಬೊಕ್ಕ (ನಾ.ವಿ)– ಹಲ್ಲು ಇಲ್ಲದವ, man without teeth, ಬೊಕ್ಕಬಾಯಿ, ಬೊಕ್ಕಿ – (ಸ್ತ್ರೀಲಿಂಗ).

ಬೊಕ್ಕತಲೆ (ನಾ)– ಚಾಣೆ ತಲೆ, ಬೋಳು ತಲೆ, bald head.

ಬೊಕ್ಕೆ (ನಾ)– ಹುಣ್ಣು, ಬಾಪು, boil.

ಬೊಕ್ಕೆ (ನಾ.ವಿ)– ಹಲಸಿನ ಹಣ್ಣಿನ ಒಂದು ತಳಿ, a kind of jackfruit.

ಬೊಗ್ಗ್ಸ್ (ಕ್ರಿ)– ಬಾಗಿಸು, bend.

ಬೊಗಳೆ (ಕ್ರಿ.ವಿ)– ಸುಳ್ಳು ಹೇಳು, ಬಡಾಯಿ ಕೊಚ್ಚು, bluffing.

ಬೊಗ್ಗ (ನಾ)– ಗಂಡುನಾಯಿ, male dog.

ಬೊಗ್ಗಿ (ನಾ)– ಹೆಣ್ಣು ನಾಯಿ, bitch.

ಬೊಗ್ಳ್ (ಕ್ರಿ)– ಬೊಗಳು, bark.

ಬೊಗ್ಗು (ಕ್ರಿ)– ಬಗ್ಗುವುದು, ಬಾಗುವುದು, bend. ಬೊಗ್ಯಂಡ್– ಬಾಗಿಕೊಂಡು, ಉದಾ: ಅಂವ ಬೊಗ್ಗಿ ನಮಸ್ಕಾರ ಮಾಡ್ತ್.

ಬೊಚ್ಚಲ್ (ನಾ)– ಆಯಾಸ, tiresome, fatigue.

ಬೊಜ್ಜ (ನಾ) – ತಿಥಿ, ಉತ್ತರಕ್ರಿಯೆ, obsequial ceremony.

ಬೊಟ್ಟ (ನಾ) – ಹರಿಜನ ಕೇರಿ, colony of Harijans.

ಬೊಟ್ಟು (ನಾ)– ತಿಲಕ, ಸಿಂಧೂರ, bindi.

ಬೊಟ್ಟು (ಕ್ರಿ)– ಮೇಲಿನಿಂದ ಹೊಡೆಯು, hammer from the top. ಕುಟ್ಟಿ ನೋಡುವುದು.

ಬೊಡ್ಡ (ನಾ.ವಿ)– ದೊಡ್ಡ ದೇಹದವ, a fat and stout man, ಬೊಡ್ಡಿ (ಸ್ತ್ರೀಲಿಂಗ).

ಬೊಡಿ (ಕ್ರಿ)– ಹೊಡಿ, beat.

ಬೊಡ್ಡ್ (ನಾ)– ಬಡ್ಡು, ಹರಿತವಿಲ್ಲದ, not sharp, blunt, ದಪ್ಪನೆಯ ದೇಹ, heavy body.

ಬೊಡ್ಗೆ (ನಾ)– ಬಡಿಗೆ, ದೊಣ್ಣೆ, heavy stick.

ಬೊತ್ತ್ (ಕ್ರಿ.ವಿ)– ಸಾಧ್ಯವಿಲ್ಲ, not possible, can't.

ಬೊದುಲ್ದು (ಕ್ರಿ)– ಪದುನುವುದು, ನೆನೆಯುವುದು, soaking in water.

ಬೊದ್ದ (ನಾ.ವಿ)– ಬೋಧಾಳ, less intelligent, not wise.

ಬೊದ್ಕು (ಕ್ರಿ)– ಬದುಕು, ವಾಸಿಸು, live.

ಬೊದ್ಕು (ನಾ)– ಬದುಕಲು ಬೇಕಾಗುವ ಸ್ಥಿರ ಸೊತ್ತು, property.
ಉದಾ: ಅಂವ ಬೇಕಾದಷ್ಟು ಬೊದ್ಕು ಮಾಡಿಟು.

ಬೊದ್ದೆ (ನಾ)– ಸ್ತ್ರೀಜನನಾಂಗ, ಯೋನಿ, vagina.

ಬೋಧಗೆಡ್ (ಕ್ರಿ)– ಪ್ರಜ್ಞೆ ಕಳೆದುಕೊಳ್ಳು, lose consciousness.

ಬೊಪ್ಪಂಗಾಯಿ (ನಾ)– ಪಪ್ಪಾಯಿ, papaya.

ಬೊಪ್ಪಟೆ (ನಾ)– ಕಾಡುಹಕ್ಕಿ, bird living in the malnad forests (vanishing bird)

ಬೊಬ್ಬೆ ಹೊಡಿ (ಕ್ರಿ) – ಕಿರುಚಾಡು, ಅರಚಾಡು, shout, scream.

ಬೊಬ್ಬೂಸ (ನಾ.ವಿ) – ತೋರದ ವ್ಯಕ್ತಿ. a fat man.

ಬೊಯ್ಗಳು (ನಾ)– ಬಯ್ಯಲು ಬಳಸುವ ಕೆಟ್ಟಪದಗಳು, cursing words.

ಬೊಯ್ಯು (ಕ್ರಿ)– ಬಯ್ಯುವುದು, acuse, curse.

ಬೊಯ್ಪು (ನಾ)– ಪ್ರಶಾಂತವಾದ ಸೂರ್ಯನ ಬೆಳಕು ಇರುವ ವಾತಾವರಣ, pleasant sunlight.

ಬೊಸ್ಕಟೆ (ನಾ.ವಿ)– ಶಕ್ತಿ ಇಲ್ಲದ ತೋರದ ವ್ಯಕ್ತಿ, fat person without much strength, plumpy.

ಬೊಸುರು (ನಾ.ವಿ)– ಬಸುರಿ, ಗರ್ಭಿಣಿ, pregnant.

ಬೊಳ್ಳ (ನಾ)– ಪ್ರವಾಹ, flood.

ಬೊಳ್ಳಡೆ (ನಾ.ವಿ)– ತುಂಬಾ ಬೆಳಕು ಬರುವ ಜಾಗ, a place with good daylight.

ಬೊಳ್ಳಿ (ನಾ)– ಬಳ್ಳಿ, ಹಗ್ಗ, rope, creeper.

ಬೊಳ್ಳಿ ಬದನೆ (ನಾ) – ಬಳ್ಳಿಯಲ್ಲಿ ಆಗುವ ಬದನೆಕಾಯಿ, ಸೀಮೆ ಬದನೆ.

ಬೊಳ್ಳಿ ಮುಟ್ಟುದು (ಕ್ರಿ) – ಹಾವು ಕಡಿತ, snakebite.

ಬೊಳ್ಳಿ ಹಾಕಂಬದು (ಕ್ರಿ) – ನೇಣು ಹಾಕಿ ಕೊಂಡು ಆತ್ಮಹತ್ಯೆ ಮಾಡಿಕೊಳ್ಳುವುದು. commit suicide by hanging.

ಬೋಳುಂವ (ನಾ)– ಹಲಸಿನ ಹಣ್ಣಿನ ಒಂದು ಪ್ರಬೇಧ.

ಬೊಳ್ಪು (ನಾ)– ಬೆಳಕು, light.
ಬೊಳ್ಪಾತ್– ಬೆಳಿಗ್ಗೆ ಆಯಿತು, it is already morning

ಬೊಳ್ಪು ತೋರ್ಸುದು (ನಾ)– ದೀಪಾವಳಿಯ ಗೋಪೂಜೆಯ ಸಂದರ್ಭದಲ್ಲಿ ದನಗಳ ಹಟ್ಟಿಯಲ್ಲಿ ದೀಪ ಉರಿಸುವುದು, keeping a light (ದೀಪ) in the cowshed on Deepavali festival.

ಬೊಳ್ಗೆಂಡೆ (ನಾ)– ಪದಾರ್ಥ ಮಾಡಿ ತಿನ್ನುವ ಕಾಡಿನ ಒಂದು ಗಡ್ಡೆ. A kind of forest yam.

ಬೋಜ (ನಾ)– ಚಿಕ್ಕಪ್ಪ, father's younger brother.

ಬೋಟಿ (ನಾ)– ಪ್ರಾಣಿಗಳ ಕರುಳಿನ ಮಾಂಸ, the meat of the intestine of the animals.

ಬೋಡು (ನಾ)– ಬುದ್ಧಿಶಕ್ತಿ, intelligence. ಉದಾ: ಅವಂಗೆತಲೆಲಿ ಬೋಡು ಇಲ್ಲೆ.

ಬೋಣಿ (ನಾ)– ವ್ಯಾಪಾರಿಯ ದಿನದ ಮೊದಲ ವ್ಯಾಪಾರದ ನಗದು ಸ್ವೀಕಾರ, receiving the first cash of the day by the shop keeper.

ಬೋಧ (ನಾ)– ಸ್ಮೃತಿ, ಎಚ್ಚರ, consciousness.

ಬೋಳ (ನಾ) – ಮಂದ ಬುದ್ಧಿಯವ, ಬೋಧಾಳ, mentally weak, inactive.

ಬೋಳಿಮಂಜ (ನಾ) – ವಿಧವೆಯ ಮಗ, ಅನಾಥ, son of a widow, orphan.

ಬೋಳು ಮಾಳಿಗೆ (ನಾ)– ಮಾಳಿಗೆಯಲ್ಲಿರುವ ತೆರೆದ ಕೋಣೆ, open terrace in the balcony.

ಬೋಳ್ಸು (ಕ್ರಿ)– ಕ್ಷೌರ ಮಾಡಿಕೊ, shave. ಸಂಪೂರ್ಣ ನಷ್ಟ ಉಂಟಾಗುವಂತೆ ಮಾಡು, ಹಣ ಲಪಲಾಯಿಸು.

ಭ

ಭಂಗಾನ್ ಬಂಗ (ಕ್ರಿ.ವಿ) – ತುಂಬಾ ಕಷ್ಟ, ತುಂಬಾ ಪ್ರಾಸದಾಯಕ, too much difficulty.

ಭಂಡಾಟ (ಕ್ರಿ)– ಕಷ್ಟದ ಜೀವನ, ಅವಮಾನಕಾರಿ ಜೀವನ, strenuous life, difficult life.

ಭತ್ತದ ಗದ್ದೆ (ನಾ)– ಭತ್ತ ಬೆಳೆಯುವ ಪ್ರದೇಶ, ಹೊಲ, paddy field.

ಭರ್ತಿ (ನಾ.ವಿ) – ತುಂಬಿದ, full, completely filled. ಉದಾ: ಅವಂಗೆ ಭರ್ತಿ 50ವರ್ಷ ಆತ್.

ಭರಣಿ (ನಾ)– ಉಪ್ಪಿನಕಾಯಿ ಹಾಕಲು ಬಳಸುವ ಚೈನಾ ಕ್ಲೇಯಿಂದ ಮಾಡಿದ ಮುಚ್ಚಳ ಇರುವ ಪಾತ್ರೆ. jar made out of china clay. ಉಪ್ಪಿನ ಭರಣಿ.

ಭಯ ಬಂಗುರ (ಕ್ರಿ.ವಿ)– ಭಕ್ತಿ ಗೌರವ ಪೂರ್ವಕ ವರ್ತನೆ, respecting with all devotion and respect.

ಭರಾಟೆ (ನಾ)– ವೇಗ, ಸಮೃದ್ಧಿ, speed, tempo. ಉದಾ: ವ್ಯಾಪಾರ ಭಾರಿ ಭರಟೆಲಿ ನಡೆರತಿತ್ತ್.

ಭಾಗ್ಸ್ (ಕ್ರಿ)– ಭಾಗಿಸುವುದು, divide.

ಭಾಷೆ ಕೊಡ್ (ಕ್ರಿ)– ಭರವಸೆ ಕೊಡು, ಪ್ರಮಾಣ ಮಾಡು, promise, swear.

ಭ್ರಾಂತಿ (ನಾ)– ಭ್ರಮೆ, ತಪ್ಪು ತಿಳುವಳಿಕೆ.

ಭೂತ ಬುಡ್ಸು (ಕ್ರಿ)– ಮಾನಸಿಕ ರೋಗಿಗಳಿಗೆ ನೀಡುವ ಮಾಂತ್ರಿಕ ಚಿಕಿತ್ಸೆ, exorcise.

ಭೂತ ಹಿಡಿ (ಕ್ರಿ)– ಭೂತಕಟ್ಟುವವನಿಗೆ ಆವೇಶ ಬರುವುದು. possessed.

ಭೋಗ್ಯ (ಕ್ರಿ) – ಗೇಣಿಗೆ ಭೂಮಿಯನ್ನು ನೀಡುವುದು. lending the land for rent.

ಮ

ಮಂಕ್ (ನಾ.ವಿ)– ಉದಾಸೀನ ಮನೋಭಾವ, ನಿರಾಸಕ್ತಿ, ಮಂಕು ಬಡಿದ, ಗರಬಡಿದ, hangover, without any interest.

ಮಂಕ್ಣಿ (ಕ್ರಿ.ವಿ) _ ಅಂಗಾತ, ಬೆನ್ನು ಕೆಳಗೆ ಮುಖ ಮೇಲೆ ಮಾಡಿ ಮಲಗು, sleep with face upward and back downward.

ಮಂಗು ಕೊತ್ತಿ (ನಾ) – ಹೆಣ್ಣು ಬೆಕ್ಕು, female cat.

ಮಂಜ (ಸ.ನಾ)– ಗಂಡು ಮಗ, son.

ಮಂಜಣೆ (ಕ್ರಿ.ವಿ) – ಪೂಸಿ ಮಾತು, flattering and pleasing words.

ಮಂಜಟಿ ಕಾಯಿ (ನಾ)– ಚೆನ್ನಮಣೆ ಆಟ ಆಡಲು ಬಳಸುವ ಕಡುಕೆಂಪು ಬಣ್ಣದ ಚಿಕ್ಕ ಬೀಜ,
a red seed used to play 'chennamane', a folklore game.

ಮಂಜಳ (ನಾ.ವಿ)– ಕೆಂಪು ಛಾಯೆ ಇರುವ ಹಳದಿ ಬಣ್ಣದ ಹುಂಜ,
a cock with reddish yellow color.

ಮಂಡೆ (ನಾ)– ನೀರು ಕಾಯಿಸಲು ಅಥವಾ ತುಂಬಿಸಿಡಲು ಬಳಸುವ ತಂಬಿಗೆಯಾಕಾರದ ದೊಡ್ಡ ಪಾತ್ರೆ.
big pot made of copper, alluminium or clay.

ಮಂಡೆ (ನಾ)– ತಲೆ, head,
ಮಿದುಳು, brain.
ಉದಾ: ಅವಂಗೆ ಒಳ್ಳೆ ಮಂಡೆ ಉಟ್ಟು.

ಮಂಡೆ ಮುಕ್ರ (ನಾ)– ತಲೆಮೇಲೆ ಕೆಂಪನೆಯ ಜುಟ್ಟಿನಂತಹ ಆಕೃತಿ ಇರುವ ಒಂದು ಜಾತಿಯ ಕಾಡು ಹಕ್ಕಿ.
a wild bird with a red crest.

ಮಂದ (ನಾ.ವಿ)– ದಪ್ಪ,
ಗಟ್ಟಿಯಾದ ದ್ರವರೂಪ,
ಉದಾ: ಸಾಂಬಾರು ಮಂದ ಉಟ್ಟು.

ಮಂದಟ್ಟ್ (ಕ್ರಿ) – ಮನದಟ್ಟು ಮಾಡು, convince.

ಮಂದ್ರಿ (ನಾ)– ಚಾಪೆ, mat.

ಮಕ್ಕ (ಸ.ನಾ)– ಮಕ್ಕಳು, children. ನಮ್ಮ ಮಕ್ಕ – sons and daughter's of a person.

ಮಗ (ನಾ)– ಮಗಳು, daughter.

ಮರ್ಗಿಲ್ (ನಾ) – ಅನ್ನ, ಪದಾರ್ಥ ತೋಡುವ ಪಾತ್ರೆ.
ದನಗಳಿಗೆ ಕುಡಿಯಲು ನೀರು ತುಂಬಿಸಿಡುವ ಮರದ ಬೋಗುಣಿ,
ನಾಯಿಗಳಿಗೆ ಆಹಾರ ಹಾಕುವ ಮರದ ಬಟ್ಟಲು,
wooden vessel.

ಮಗ್ಚು (ಕ್ರಿ)– ತಲೆಕೆಳಗಾಗಿ ಬೀಳು– ಮಗ್ಚಿಬೀತ್, turn upside down.

ಮರ್ಚಟೆ (ನಾ) – ಅನ್ನ ಬಸಿಯಲು ಬಳಸುವ ಮರದ ತಟ್ಟೆ,
wooden plate used to filter rice water.

ಮಚ್ಚೆ (ನಾ)– ದೇಹದಲ್ಲಿರುವ ಕಪ್ಪು ಅಥವಾ ಕಂದು ಬಣ್ಣದ ಗುರುತು,
mole.

ಮಜಾ (ಕ್ರಿ.ವಿ) – ಮೋಜು, ಹರ್ಷ, ಸಂತೋಷದ ಸಮಯ, enjoyment or period of cheer, entertaining time, time of dine, drink and dance.

ಮರ್ಜಿ (ನಾ.ವಿ) – ಗತ್ತು, ಘನತೆ, ಗಾಂಭಿರ್ಯಗಳಿಂದ ಕೂಡಿದ ಜೀವನ ಶೈಲಿ life style with dignity and decorum.

ಮಜ್ಜಿಗೆ ಗುತ್ತಿ (ನಾ)– ಮಜ್ಜಿಗೆ ಕಡಿಯುವ ಸುಮಾರು 3 ಅಡಿ ಎತ್ತರದ ಬಿದಿರಿನ ಗುತ್ತಿ, a bamboo piece of about three feet to grind buttermilk.

ಮಜ್ಜಿಗೆ ಹುಲ್ಲು (ನಾ)– ನಿಂಬೆ ಹುಲ್ಲು, ಔಷಧೀಯ ಮೂಲಿಕೆ, medicated herb.

ಮಜೂರಿ (ನಾ)– ಸಂಬಳ, wages.

ಮಟ್ಟ್ (ನಾ.ವಿ)– ಅಂತಸ್ತು, ಜೀವನಶೈಲಿ, status, standard.

ಮಡ್‌ಗ್ (ಕ್ರಿ)– ಇರಿಸು, keep.

ಮಡ್‌ಪಳೆ (ನಾ)– ಹೊರೆ ಹೊರಲು, ಅಡಿಕೆ ಹಾಳೆಯಿಂದ ತಯಾರಿಸಿದ ಶಿರಸ್ತ್ರಾಣ, ಮುಟ್ಟಪ್ಪಾಳೆ, ಮುಟ್ಟಾಳೆ. head cover prepared from coconut palm leaf to carry the loads.

ಮಡ್ಲ್/ ಮಡಲ್ (ನಾ) – ಒಣಗಿದ ತೆಂಗಿನ ಸೋಗೆ/ ಗರಿ. dry branches of coconut tree.

ಮಡ್ಲ್ (ನಾ) – ಹಸುವಿನ ಜನನಾಂಗ, vagina of the cow.

ಮರ್ಡ್ (ಕ್ರಿ) – ಕೂಗು, weep, ಅಳು, cry, sob.

ಮಡಿಮಾಡ್ (ಕ್ರಿ)– ದೈಹಿಕ ಶಿಕ್ಷೆ ನೀಡುವುದು, giving corporal punishment.

ಮಡ್ಡಿ (ನಾ)– ಮನೆಯಲ್ಲಿ ತಯಾರಿಸುವ ಪಶು ಆಹಾರ, home made wet fodder.

ಮಡೆ (ನಾ)– ಎಂಜಲು, spittle, saliva.

ಮಡೆಂಜಿ (ನಾ)– ಹೊಳೆಗಳಲ್ಲಿ ಕಾಣಸಿಗುವ ಒಂದರಿಂದ ಎರಡು ಅಡಿಗಳಷ್ಟು ಉದ್ದದ ದೊಡ್ಡ ಗಾತ್ರದ ರುಚಿಕರವಾದ ಮೀನು, a large tasty fish about one to two feet long living in the rivers and lakes.

ಮಡೆಗುತ್ತಿ (ನಾ)– ಪೀಕದಾನಿ, spitoon.

ಮಡ್ಕೆ (ನಾ)– ಮಡಿಕೆ, ಮಣ್ಣಿನ ಪಾತ್ರೆ, mudpot.

ಮಣ್ಣ್ ಮೊಸಳೆ (ನಾ.ವಿ) – ಸದಾ ಬಿದ್ದುಕೊಂಡೇ ಇರುವವ. lying all the time like a crocodile.

ಮಣ (ನಾ)– ತೂಕದ ಅಳತೆಯ ಮಾನ, ಒಂದು ಮಣ– 12.5 ಕೆ.ಜಿ, 20 ಮಣ– ಒಂದು ಖಂಡಿ.

ಮಣಿ (ನಾ)– ಸರ, chain.

ಮಣಿಕಟ್ಟ್ (ನಾ)– ಕೈಗಳ ಮಣಿಗಂಟು, wrist.

ಮಣ್ಣಿ (ನಾ) – ರಾಗಿ ಹುಡಿಯಿಂದ ತಯಾರಿಸುವ ತಿಂಡಿ, ರಾಗಿಮುದ್ದೆ, an eatable prepared out of ragi powder.

ಮಣೆ (ನಾ)– ನೆಲದಲ್ಲಿ ಕೂತು ಊಟ ಮಾಡುವರೇ ಕುಳಿತುಕೊಳ್ಳಲು ಬಳಸುವ 4ರಿಂದ 6ಇಂಚು ಎತ್ತರದ ಮರದ ಪೀಠ. foot stool.

ಮರ್ತ್ ಹೋಗು (ಕ್ರಿ) – ಮರೆತುಹೋಗು, forgetting.

ಮತಿ (ನಾ)– ಬುದ್ಧಿಶಕ್ತಿ, mental status. ಉದಾ: ಅವಂಗೆ ಕುಡ್ಡ್ ಮತಿ ಇಲ್ಲೆ.

ಮದನ ಕೈ (ನಾ)– ಗೋಡೆಯಲ್ಲಿ ರ್‍ಯಾಕ್‌ನಂತೆ ಮರದ ಹಲಗೆ ಇರಿಸಲು ಸಿಕ್ಕಿಸಿದ ಮರದ ಕೈ. wooden hand on the wall to keep the wooden plank on it to use it as a rack.

ಮದ್‌ರಂಗಿ (ನಾ)– ವಿವಾಹಕ್ಕೆ ಮುನ್ನ ವಧುವರರ ಕೈಗಳಿಗೆ ಮೆಹಂದಿ ಇಡುವ ಕಾರ್ಯಕ್ರಮ.

ಮದೆಕಟ್ಟು (ಕ್ರಿ)–ಚಿಕ್ಕ ಗಿಡಗಳಿಗೆ ಬಿಸಿಲಿನಿಂದ ರಕ್ಷಣೆ ಒದಗಿಸಲು ಕಟ್ಟುವ ಮರೆ, shade given to the little sapplings to give protection from heavy sunshine during the summer.

ಮನಸ್ತಾಪ (ನಾ)– ವಿರಸ, ಮಾನಸಿಕ ವೈಷಮ್ಯ, contradiction, confrontation, mental hatredness.

ಮನಾರ (ಕ್ರಿ.ವಿ)– ಸಂಪೂರ್ಣ, ಸ್ವಚ್ಛ, complete clean.

ಮನೆಒಕ್ಲು (ನಾ)– ಗೃಹಪ್ರವೇಶ ಸಮಾರಂಭ, house warming ceremony.

ಮನೆತನ (ನಾ) – ವಂಶ, ತಲೆಮಾರಿನ ಕುಟುಂಬ, family lineage.

ಮನೆಮಾತ್ (ಕ್ರಿ.ವಿ)– ಎಲ್ಲರಿಗೂ ತಿಳಿದ ವಿಷಯ, house hold word.

ಮನೆಹಕ್ಕಿ (ನಾ) – ಗುಬ್ಬಿಹಕ್ಕಿ, ಗುಬ್ಬಚ್ಚಿ, sparrow.

ಮಯಮಯ (ದ್ವಿ) – ಅಸ್ಪಷ್ಟ, not clean, blur.

ಮರ್ಯಾದಿ (ನಾ.ವಿ) – ಘನತೆ ಗೌರವ, dignity, decorum.

ಮರ್‌ದಿನ (ನಾ) – ಮಾರನೇ ದಿನ, the next day.

ಮರ್‌ದಿಬ್ಬಣ (ನಾ)– ಹೆಣ್ಣುಕೊಟ್ಟ ಮನೆಯಿಂದ ಗಂಡಿನ ಮನೆಗೆ ಶೇಷೋಪಚಾರ (ಅತಿಥಿ ಸತ್ಕಾರ ಕೂಟ)ಕ್ಕೆ ಹೋಗುವ ದಿಬ್ಬಣ.

ಮರ್‌ವಾಯ್ (ನಾ)– ಸಮುದ್ರಕ್ಕೆ ಸೇರುವ ನದಿ ತಟಗಳಲ್ಲಿ ಜೀವಿಸುವ ಚಿಪ್ಪು ಮೀನು, cockles.

ಮರಕಪ್ಪೆ (ನಾ)– ಮರದ ಪೊಟರೆಗಳಲ್ಲಿ ತೇವಾಂಶ ಇರುವಲ್ಲಿ ವಾಸಿಸುವ ಚಿಕ್ಕ ಕಪ್ಪೆ, little frog which lives in the wet warren of the tree.

ಮರಕೊಡ್ಪ (ನಾ)– ಮರಕುಟಿಗ ಹಕ್ಕಿ, wood pecker.

ಮರಹಾವು (ನಾ)– ದೂರಕ್ಕೆ ನೆಗೆಯಲು ಸಾಮರ್ಥ್ಯವಿರುವ ಮರಗಳಲ್ಲಿ ವಾಸಿಸುವ ವಿಷಯುಕ್ತ ಹಾವು, a poisonous snake which lives in the tree and has the capacity to leap.

ಮರಳುಭೂತ (ನಾ)– ಶೈವ ಗಣಾಂಶವಿರುವ ಗುಳಿಗ ಭೂತ.

ಮರಿ (ಕ್ರಿ)– ಮರೆತುಬಿಡು, forget.

ಮಲ್ಗ್ (ಕ್ರಿ)– ಮಲಗು, sleep, lie down.

ಮರ್ವ (ನಾ)– ಒಂದು ಜಾತಿಯ ಉತ್ತಮ ಮರ, ಹೊಲ್ಪೆ, a kind of hardwood.

ಮಸ್‌ಗ್ (ಕ್ರಿ)– ಮಿಸುಕಾಡು, ಅಲ್ಲಾಡು, shake, twist.

ಮಳ್ಗಾಲ (ನಾ)– ಮಳೆಗಾಲ, monsoon, rainy season.

ಮಳೆಕೋಲ್ (ನಾ)– ಕಾಡು ಹಕ್ಕಿಗಳನ್ನು ಹಿಡಿಯಲು ಚಿಕ್ಕ ಕಡ್ಡಿಗಳಿಗೆ ಮೇಣ ಹಚ್ಚಿ ಮರಗಳಲ್ಲಿ ಅಲ್ಲಲ್ಲಿ ಇರಿಸುವುದು. keeping gum pasted sticks all over the tree to catch the small wild birds.

ಮಳೆಬಿಲ್ಲ್ (ನಾ)– ಕಾಮನ ಬಿಲ್ಲು, rainbow.

ಮಾಂಜಿಮೀನ್ (ನಾ)– ಅಗಲವಾದ ಸಮುದ್ರ ಮೀನು, pomfret

ಮಾಂಜೋಳು (ನಾ)– ಹಲಸಿನ ಬೀಜದ ಮೇಲಿರುವ ಕವಚ, the thin cover on the jackfruit nut

ಮಾಂದುದು (ಕ್ರಿ)– ಕೈಯಲ್ಲಿ ಒಕ್ಕುವುದು, scratch by hand.

ಮಾಂಬಳ (ನಾ)– ಮಾವಿನಹಣ್ಣಿನ ಮಾಂಸ ವನ್ನು ಒಣಗಿಸಿ ಮಾಡುವ ಆಹಾರ, dry mango pulp.

ಮಾಟ (ನಾ)– ಅಭಿಚಾರ, witchcraft, ವಾಮಾಚಾರ.

ಮಾಟೆ/ಮೋಟೆ (ನಾ)– ಬಿಲ, ಪೊಟರೆ, warren, burrow.

ಮಾಡ್ (ನಾ)– ಮನೆಯಮಾಡು, roof.

ಮಾಡ್ (ನಾ)– ಕೆಲಸ ಮಾಡು, do. ಮಾಡಿಕಿಲ್ಲೆ –ಮಾಡಲಿಕ್ಕಿಲ್ಲ, ಮಾಡುದ್ಲೆ– ಮಾಡುವುದಿಲ್ಲ, ಮಾಡಿ (ಬ.ವ). ಮಾಡಿ (ಕ್ರಿ)– ಎಲ್ಲರೂ ಸೇರಿ ಕೆಲಸ ಮಾಡುವುದು (ಬ.ವ).

ಮಾಡ್‌ಕೋಳ್ (ನಾ) – ಹೊಲದಲ್ಲಿ ನಿರ್ಮಿಸುವ ಕಾವಲು ಚಪ್ಪರ. a raw security tower in the paddy field.

ಮಾಡ್ದುಲೆ (ಕ್ರಿ)–ಮಾಡುವುದಿಲ್ಲ, not doing.

ಮಾರ್ಣೆದಿನ (ನಾ)– ಮಾರನೇ ದಿನ, the next day.

ಮಾತ್ (ನಾ) – ಮಾತು, speech, ಮಾತಾಡ್- speak.

ಮಾತ್‌ಕೊಡು (ಕ್ರಿ)– ವಚನ ಕೊಡು, ಭರವಸೆ ಕೊಡು, promise, assure.

ಮಾತ್‌ನ ಮಲ್ಲಿ (ನಾ)– ಸದಾ ಮಾತನಾಡಿ ಕೊಂಡು ಇರುವ ಸ್ತ್ರೀ, talkative lady

ಮಾದ್ರಿಬಳ್ಳಿ (ನಾ)– ಗಟ್ಟಿಯಾದ ಒಂದು ಜಾತಿಯ ಕಾಡು ಬಳ್ಳಿ, ಇದರ ಹಣ್ಣು ಮಾದ್ರಿ ಹಣ್ಣು,
a strong wild creeper.

ಮಾನ (ನಾ.ವಿ)– ಮರ್ಯಾದಿ, ಘನತೆ, ಗೌರವ, dignity, decorum.

ಮಾನ (ನಾ)– ಅಳತೆಯ ಸಾಧನ, ಎರಡು ಪಾವು = ಒಂದು ಮಾನ,
a unit of weight.

ಮಾನ್ಮನೆ (ನಾ)– ತಾಯಿಯ ತವರು ಮನೆ, ಮಕ್ಕಳಿಗೆ ಮಾವನ ಮನೆ,
maternal uncle's house.

ಮಾಪಳ (ನಾ)– ಮಾದಳ ಹಣ್ಣು, citron.

ಮಾರ್ಪಾಡ್ (ಕ್ರಿ)– ಬದಲಾಯಿಸು, ಬದಲಾವಣೆ, change.

ಮಾಪಿ (ಕ್ರಿ)– ಕ್ಷಮಿಸು, ರಿಯಾಯಿತಿ ನೀಡು, pardon, concession.

ಮಾಪ್ಳೆ (ನಾ)– ಮುಸ್ಲಿಂ ಗಂಡಸು, muslim man.

ಮಾಪುಳ್ಚಿ (ನಾ)– ಮುಸ್ಲಿಂ ಸ್ತ್ರೀ, muslim lady.

ಮಾಪು (ಕ್ರಿ)– ರಿಯಾಯಿತಿ, concession, ಕ್ಷಮಿಸು, pardon.

ಮಾಮೂಲಿ (ನಾ)– ಪ್ರತೀದಿನ ಅಥವಾ ಎಲ್ಲಾ ಸಂದರ್ಭಗಳಲ್ಲಿ ನಡೆಯುವಂತಹ, regular, normal, ಅಧಿಕಾರಿಗಳಿಗೆ ಪ್ರತೀ ದಿನ ನೀಡುವಂತಹ ಲಂಚ, corruption money given to the officials regularly.

ಮಾಯಆಗ್ (ಕ್ರಿ) – ಕಣ್ಮರೆಯಾಗು, ಅದೃಶ್ಯವಾಗು,
disappear, go out of sight.

ಮಾಯಣ (ನಾ)– ಅಂಟು, ಅಂಟಿನಿಂದ ಕೂಡಿದ ಸೊನೆ, ಹಲಸಿನ ಮಾಯಣ, gum, wax, the gum of resin.

ಮಾರ್ (ಕ್ರಿ) – ಮಾರಾಟ ಮಾಡು, sell.

ಮಾರ್ (ನಾ)– ಒಂದು ಮಾರ್, ಕೈಗಳನ್ನು ಅಡ್ಡಕ್ಕೆ ಚಾಚಿದಾಗ ಎಡಕೈ ಬೆರಳಿನ ತುದಿಯಿಂದ ಬಲಗೈ ಬೆರಳಿನ ತುದಿಯ ತನಕ ಇರುವಷ್ಟು ಉದ್ದ,
distance from the tip of left hand finger to the tip of right hand finger after stretching both the hands.
ಒಂದು ಮಾರ್= ಮೂರು ಮೊಳ.

ಮಾರಾಪು (ಸ.ನಾ) – ವಸ್ತುಗಳನ್ನು ಬಟ್ಟೆಯಲ್ಲಿ ಕಟ್ಟಿ ಹೊರೆ ಮಾಡುವುದು, luggage packed in cloth.

ಮಾರಾಮಾರಿ (ಕ್ರಿ.ವಿ)– ಹೊಡೆದಾಟ, ಬಡಿದಾಟ,
clash, fighting.

ಮಾರಾಯ (ಸ.ನಾ)– ಪರಿಚಯದ ವ್ಯಕ್ತಿಯನ್ನು ಸಂಬೋಧಿಸುವ ಪದ (ಪು) ಮಾರಾಯ್ತಿ (ಸ್ತ್ರೀ.ಲಿ)
word used to address a familiar person,
ಉದಾ: ಏನ್ ಮಾರಾಯ, ಹೇಂಗೊಳ?

ಮಾರಿ (ನಾ.ವಿ)– ಸಾವು ತರುವ, devil which brings ill - health, death, misfortune or curse.

ಮಾರಿಕಳ (ನಾ)– ಭೂತ ಕೋಲದಲ್ಲಿ ಹಂದಿ/ ಕೋಳಿಗಳನ್ನು ತಲೆ ಕಡಿಯುವ ಸ್ಥಳ, place where the head of chicks or pig is slained during the bhootha kolam.

ಮಾಲೀಸ್ (ಕ್ರಿ)– ತಿಕ್ಕು, ಉಜ್ಜು, rub methodically.

ಮಾಸ್ಟ್ರ (ನಾ)– ಅಧ್ಯಾಪಕ, ಮಾಸ್ತರ್, master, ಪರಿಣತ.

ಮಾಸ (ನಾ)– ಮಾಂಸ, meat.

ಮಾಸೆಲ್ (ನಾ.ವಿ)– ಮಾಸಿಹೋದ, ಮಾಸಿ ಹೋಗು, ಬಣ್ಣ ಕಳೆದುಕೊಳ್ಳು, faded, fade away, lose its colour.

ಮಾಳಿಗೆ (ನಾ)–ಉಪ್ಪರಿಗೆ, ಅಂತಸ್ತು, ಮಾಳಿಗೆ ಮನೆ, ಮಹಡಿ, balcony, storey.

ಮಿಂಡ (ನಾ) – ವಿವಾಹೇತರ ಪತಿ, extra marital husband.

ಮಿಂಡಿ/ಮಿಂಡೆ (ನಾ)– ಅನಧಿಕೃತ ಉಪಪತ್ನಿ, extra marital wife.

ಮಿಕ್ಕವು (ಸ.ನಾ)– ಉಳಿದವು, remaining.

ಮಿಜಿದು (ಕ್ರಿ)– ಭತ್ತಕುಟ್ಟುವುದು, ಭತ್ತ ಮಿಜಿದು, beating the paddy to make rice.

ಮಿಠಾಯಿ (ನಾ)– ಸಿಹಿತಿಂಡಿ, sweets.

ಮಿಡಿ (ನಾ) – ಕಾಯಿ ಅಥವಾ ಹಣ್ಣಿನ ಎಳೆಯ ರೂಪ, fruit bud, tender form of the fruit.

ಮಿಣ್ಕ್ (ಕ್ರಿ)– ಮಿನುಗು, twinkle.

ಮಿಣ್ಪುಳಿ (ನಾ)–ಮಿಂಚುಹುಳ, glow worm.

ಮಿನ್ನಿರಿ (ನಾ)– ಹಲಸಿನ ರಚ್ಚೆ/ ಸಾರೆಯಲ್ಲಿರುವ ಸಣ್ಣ ಸಣ್ಣ ಹಲಸಿನ ತೋಳೆ, mini loaves of jack fruit.

ಮಿರ್‌ಂಡ್ (ಕ್ರಿ)– ಮಕ್ಕಳಿಗಾಗಿ ಆಹಾರವನ್ನು ಕೈಯಲ್ಲಿ ಅರೆಯುವುದು, grinding the food in hand.

ಮಿಸ್ಮ (ನಾ.ವಿ)– ಚತುರ, ಕೌಶಲ್ಯಪೂರ್ಣ, expert, skilled.

ಮಿಳ್ಳಿ (ನಾ)– ಚಿಕ್ಕ ಪಾತ್ರೆ, ಇಡ್ಲಿ ಮಿಳ್ಳಿ, ಎಣ್ಣೆ ಮಿಳ್ಳಿ, a small mug used to prepare idlis or to keep oil.

ಮೊಂಡ್ (ಕ್ರಿ)– ಹಲಸಿನ ಹಣ್ಣಿನಿಂದ ಸೋಳೆಯನ್ನು ಕಿತ್ತು ತೆಗೆಯುವುದು, plucking the loaves from the jackfruit.

ಮೊನ್‌ಕುಳ್ಳ (ನಾ)– ಮೀನು ತಿಂದು ಬದುಕುವ ಮೊನ್‌ಚುಳ್ಳಿ ಹಕ್ಕಿ, king fisher.

ಮೊನ್‌ಚಿರೆ (ನಾ)– ಮೀನ ಖಂಡ, calf.

ಮೊನ್‌ಕೆತ್ತಿ (ನಾ)– ಮೀನಿನ ಮೊಟ್ಟೆ, spawn, roe.

ಮೊನ್‌ರೆಂಕೆ (ನಾ)– ಮೀನಿನ ರೆಕ್ಕೆ/ ಕಿವಿರು, fins.

ಮೊಯುದು (ಕ್ರಿ)– ಸ್ನಾನ ಮಾಡುವುದು, taking bath.

ಮೀರಿ (ಕ್ರಿ.ವಿ) – ದಾಟಿಹೋಗು, ಉಲ್ಲಂಘಿಸು, ಉದಾ : ಅಂವ ಗುರುನ ಮೀರಿ ಬೆಳ್ದುಟು, ಅಂವ ಅಪ್ಪನ ಮಾತ್‌ನ ಮೀರಿ ಮದುವೆ ಆತ್.
surpass disobey, over flow, over step.

ಮೀಸುದು(ಕ್ರಿ)– ಈಜುವುದು,
swimming.

ಮೀಸೆ ಬಾಕನ (ನಾ.ವಿ) – ಯೌವ್ವನಕ್ಕೆ ಬರುವುದು, ಪ್ರಾಯಕ್ಕೆ ಬರು (ಪುಲ್ಲಿಂಗ),
grow up, becoming youth, acquire moustache, matured,

ಮುಂಗುಲಿ (ನಾ)– ಮುಂಗೂಸಿ,
mongoose.

ಮುಂಗೆ (ಕ್ರಿ.ವಿ)– ಆಗ ತಾನೆ ಮೊಳಕೆ ಬಂದ,
sprout.

ಮುಂಡಾಸ್ (ನಾ)– ಪೇಟ, turban.

ಮುಂಡು (ನಾ)– ಬಿಳಿ ಪಂಚೆ, ಧೋತರ,
white lungi.

ಮುಂಡು (ನಾ.ವಿ)– ತುದಿ, ತುಂಡರಿಸಿದ,
top/ tip has been cut.

ಮುಂಡೆ (ನಾ.ವಿ)– ವಿಧವೆ,
widow.

ಮುಂಡೋಳಿ (ನಾ)– ಒಂದು ಜಾತಿಯ ವೀಳ್ಯದೆಲೆ,
betel leaf used for chewing,
ನೋಡಿ : ಪಂಚೋಳಿ.

ಮುಂದುವರ್ಸ್ (ಕ್ರಿ) – ಮುಂದುವರಿಸು,
continue.

ಮುಂಯ್ ಮುಂಯ್ (ಅ.ವ್ಯ)– ಗೊಣಗು, ಅಸಹನೆ ವ್ಯಕ್ತಪಡಿಸು,
express dissatis faction.
ಉದಾ: ಅಂವ ಮುಂಯ್ ಮುಂಯ್ ಮಾಡುತ್ತಾ ಉಟ್ಟು,

ಮುರ್ಕಪ್ಪ ಹಿಡಿ (ಕ್ರಿ.ವಿ)– ಒಮ್ಮಿಂದೊಮ್ಮೆಲೆ ಗಟ್ಟಿಯಾಗಿ ಹಿಡಿದುಕೊಳ್ಳುವುದು,
catch tightly and suddenly.

ಮುಕ್ಕಾಲ್ (ನಾ) – ನಾಲ್ಕನೇ ಮೂರು ಭಾಗ, 3/4, three quarter,
ಹಿಂದೆ ರೂಪಾಯಿ, ಆಣೆ, ಪೈ ಪದ್ಧತಿ ಇದ್ದಾಗ ಒಂದು ಆಣೆಗೆ 4 ಮುಕ್ಕಾಲು = 1/4 ಆಣೆ, ಮಧ್ಯದಲ್ಲಿ ರಂಧ್ರ ಇದ್ದದ್ದು ಒಟ್ಟೆ ಮುಕ್ಕಾಲು, ರಂಧ್ರ ಇಲ್ಲದ್ದು ಗಟ್ಟಿ ಮುಕ್ಕಾಲು, 1/4 of anna.

ಮುಕ್ಕಾಲ್ ಮಣೆ (ನಾ)– ರೊಟ್ಟಿ ಅಥವಾ ಚಪಾತಿ ಮಾಡಲು ಅಥವಾ ಒಲೆಯ ಬದಿ ಕುಳಿತುಕೊಳ್ಳಲು ಬಳಸುವ ಮೂರು ಕಾಲಿನ ಮಣೆ,
a foot stool with three legs.

ಮುಕುಡು ಹಾಕು (ಕ್ರಿ)– ನಿದ್ರೆ ತೂಗು, ತಲೆ ಅಲ್ಲಾಡಿಸಿ 'ಹೌದು, ಅಲ್ಲ' ಎಂದು ಆಂಗೀಕ ಭಾಷೆಯಲ್ಲಿ ಹೇಳು.
Feel sleepy, say 'yes' or 'no' by nodding the head.

ಮುಕ್ಕು (ಕ್ರಿ)– ಗಬಗಬನೆ ತಿನ್ನು,
eat ravenously, gormandize, gobble.

ಮುಕ್ಕುಳ್ಸು (ಕ್ರಿ)– ಬಾಯಿ ಮುಕ್ಕಳಿಸು,
gurgle with water inside the mouth.

ಮುಕ್ಕುಳಿ (ನಾ)– ಗುಟುಕು, a sip.

ಮುರ್ಕ್ಲ (ನಾ.ವಿ)– ಮುರಿದದ್ದು, ಮುಂದು ಹೋದ, chunk, broken, ಉದಾ: ಮುರ್ಕ್ಲ ಮನೆ.

ಮುಗ್ತ್ (ಕ್ರಿ) – ಮುಗಿಯಿತು, finished, completed.

ಮುಗ್ಸ್ (ಕ್ರಿ) – ಮುಗಿಸು, finish it off.

ಮುಗಲ್ (ನಾ) – ಮೋಡ ಕವಿದ ವಾತಾವರಣ, cloudy weather.

ಮುಗ್ಗಟ್ಟ್ (ಕ್ರಿ) – ಆರ್ಥಿಕ ತೊಂದರೆ, ಹಣಕಾಸಿನ ಸಂಕಷ್ಟ, financial problem. ಉದಾ: ಅಂವ ಭಾರಿ ದುಡ್ಡ್ನ ಮುಗ್ಗಟ್ಟ್‌ಲಿ ಉಟ್ಟು, ಅಂವಂಗೆ ಅಂತ ಮುಗ್ಗಟ್ಟ್ ಏನ್ ಇಲ್ಲೆ.

ಮುಗುಟು (ನಾ)– ಹೂವಿನ ಮೊಗ್ಗು, flower bud.

ಮುಗುಳು (ನಾ.ವಿ)– ಅರೆ ಬೆಂದ ಅನ್ನ, half boiled rice, less boiled rice.

ಮುಗುಡು/ ಮೂಡು (ನಾ)– ಕೊಳಕು ತಿನ್ನುತ್ತಾ ಕೆಸರಲ್ಲಿ ವಾಸಿಸುವ ಮೀನು, a fish which lives in the ponds or gutter eating dirt.

ಮುಚ್ಚ (ನಾ)– ಮುಜು, black faced monkey, langoor.

ಮುಚ್ಚು (ಕ್ರಿ)– ಬಾಗಿಲು ಮುಚ್ಚು, ಪೆಟ್ಟಿಗೆ ಮುಚ್ಚು, ಬಾಯಿ ಮುಚ್ಚು, ಗುಂಡಿ ಮುಚ್ಚು, close, shut, fill.

ಮುಚ್ಚುರು ಕಾಯಿ (ನಾ)– ಸಸ್ಯಾಹಾರಿ ಕಾಡು ಪ್ರಾಣಿಗಳು ಇಷ್ಟಪಡುವ ಸಿಹಿಯಾದ ಚಿಕ್ಕ ಹಣ್ಣು, a sweet little fruit longed by the vegetarian wild animals.

ಮುಚ್ಚುಳು (ನಾ)– ಮುಚ್ಚಳ, ಬಿರಡೆ, cap, lid, covering.

ಮುಜೆಂಟಿ (ನಾ)– ಮರಗಳ ತೂತಿನಲ್ಲಿ ಜೀವಿಸುವ ಚಿಕ್ಕ ನೊಣಗಳ ಜೇನು ಕುಟುಂಬ, a family of small size bees which live in the holes of the wooden logs or stumps.

ಮುಟ್ಟ್ (ಕ್ರಿ)– ಮುಟ್ಟುವುದು, ಸ್ಪರ್ಶಿಸು, touch.

ಮುಟ್ಟ (ನಾ.ವಿ)– ವರೆಗೆ/ ತನಕ, till/ until, ಉದಾ: ನನ್ನ ಅಲ್ಲಿಗೆ ಮುಟ್ಟ ಬುಟ್ಟು ಬುಡು, ನಾ ಅಲ್ಲಿಗೆ ಮುಟ್ಟ ಓದ್ಯಳೆ.

ಮುಟ್ಟಾದು (ಕ್ರಿ.ವಿ)– ಹೆಂಗಸರು ಋತು ಸ್ರಾವಕ್ಕೆ ಒಳಗಾಗುವುದು, menses, ladies getting into periods.

ಮುಟ್ಟಾಳ (ನಾ.ವಿ.) – ಪೆದ್ದ, ಮೂರ್ಖ, ಅನೈತಿಕ ಕೆಲಸ ಮಾಡುವವ, loafer, idiot, a person who does immoral act.

ಮುಟ್ಟಿ (ನಾ)– ಸುತ್ತಿಗೆ, hammer.

ಮುಟ್ಟಿಮಾಡ್ದು (ಕ್ರಿ)– ಅಸೌಖ್ಯ ಉಂಟಾದಾಗ ನಾಟಿ ವೈದ್ಯರು / ತಂತ್ರವೈದ್ಯರು ಮಾಡುವ ಚಿಕಿತ್ಸೆ, treatment given by the native or witchcraft doctors.

ಮುಡ್ಕಂಡ್ (ಕ್ರಿ) – ಹೂವು ಮುಡಿದು ಕೊಂಡು, ತಲೆಗೆ ಸಿಕ್ಕಿಸಿಕೊಂಡು, wearing the flower on the hair by the ladies.

ಮುಡಿ (ನಾ) – ಅಕ್ಕಿಮುಡಿ – 42 ಸೇರು– 3 ಕಳಸಿಗೆ, a morah of rice.

ಮುಡಿ (ಕ್ರಿ)– ಧರಿಸು, wear, ಹೂವು ಮುಡಿದು– wear the flower

ಮುಡಿಪು (ನಾ)– ತಿರುಪತಿ ವೆಂಕಟ್ರಮಣ ದೇವರಿಗೆ ಪೂಜೆ (ಹರಿಸೇವೆ) ಮಾಡಿದ ಸಂದರ್ಭದಲ್ಲಿ ಅರ್ಪಿಸಲ್ಪಟ್ಟ ಕಾಣಿಕೆ ಯನ್ನು ಒಂದು ಲೋಹದ ಪೆಟ್ಟಿಗೆಯಲ್ಲಿ ಹಾಕಿ ಅಟ್ಟದಲ್ಲಿ ಕಟ್ಟಿಡುವುದು.

ಮುಡು (ನಾ)– ಕಾಲಿನ ಹಿಮ್ಮಡಿ, heel.

ಮುಡೆಂಜ (ನಾ)– ಹೊಳೆಯ ಬದಿಯ ಸಸ್ಯ, ಚಾಪೆ ಮಾಡಲು ಬಳಸುತ್ತಾರೆ.

ಮುತ್ತಿ ಹೋಗ್ (ಕ್ರಿ)– ಸಂಪೂರ್ಣ ನಶಿಸಿ ಹೋಗು, ಅಳಿಸಿಹೋಗು, vanish completely, extinction.

ಮುತ್ತು ಕೊಡ್ (ಕ್ರಿ)– ಮುತ್ತಿಡು, ಚುಂಬಿಸು, kiss.

ಮುದ್ದಾಣೆ (ನಾ)– ಮೊಡವೆ, pimple.

ಮುದಿಯ (ನಾ.ವಿ)– ಮುದುಕ, old man.

ಮುದ್ದೆ (ನಾ)– ರಾಗಿಮುದ್ದೆ, ಅನ್ನದ ಮುದ್ದೆ, lump.

ಮುರಿ (ಕ್ರಿ)– ತುಂಡರಿಸು, ಒಡೆಯು, break, ಮುರಿದು ಬೀಳು, break and fall.

ಮುರಿಯ (ಕ್ರಿ.ವಿ)–ಸಾವು ಬರಲೆಂದು ಅಥವಾ ಹಾಳಾಗಿ ಹೋಗಲೆಂದು ಶಪಿಸುವುದು, cursing for death or destruction.

ಮುಲ್ಲೆ (ನಾ)– ಪಕ್ಷಿಗಳ ಹಿಂಭಾಗದ ಪುಕ್ಕ, feather of the back of the birds.

ಮುಲ್ಲೆಗೆಂಡೆ (ನಾ)– ಪಕ್ಷಿಗಳ ಗುದದ್ವಾರದ ಮೇಲಿನ ಪುಕ್ಕ, ಕೊಬ್ಬನ್ನು ಸಂಗ್ರಹಿಸಿಡುವ ಭಾಗ. The body part of the birds just above their anus.

ಮುಸುಂಡು (ನಾ)– ಮುಖ, ಮೋರೆ, face.

ಮುಸುಕು (ನಾ)– ವಧುವಿನ ತಲೆಗೆ ಹಾಕುವ ಬಟ್ಟೆ, veil.

ಮುಳ್ಗ್ (ಕ್ರಿ)– ಮುಳುಗು, drown, sink. ನೋಡಿ: ಕಂತ್.

ಮುಳ್ಕ (ನಾ)– ಹಲಸಿನ ಹಣ್ಣಿನ ಸೊಳೆ ಬಳಸಿ ತಯಾರಿಸಿದ ಎಣ್ಣೆಯಲ್ಲಿ ಕಾಯಿಸಿದ ತಿಂಡಿ, oil fried sweet dish prepared out of jackfruit loaves.

ಮುಳ್ಕರ (ನಾ)– ಮುಳ್ಳಿನ ಪೊದರಿನಲ್ಲಿ ಆಗುವ ಚಿಕ್ಕ ಹಳದಿಬಣ್ಣದ ಕಾಡು ಹಣ್ಣು.

ಮುಳ್ಳ (ನಾ)– ಹೊಳೆಗಳಲ್ಲಿ ಕಂಡುಬರುವ, ಹಿಡಿದರೆ ಮುಳ್ಳು ಬಿಡುವ ಸುಮಾರು 6" ಉದ್ದದ ಮೀನು, a stinging fish found in the river.

ಮುಳ್ಳಂದಿ (ನಾ) – ಮುಳ್ಳು ಹಂದಿ, porkupine.

ಮುಳ್ಳು (ನಾ)– ಗಿಡಗಂಟಿಗಳಲ್ಲಿ ಕಾಣಸಿಗುವ ಮುಳ್ಳು, thorn.

ಮುಳ್ಳು ತೆಗಿಯದು (ಕ್ರಿ) – ಮಗುವಿಗೆ ನಾಟಿ ವೈದ್ಯರು ಮಡುವ ಚಿಕಿತ್ಸಾ ವಿಧಾನ, a kind of treatment to the little children given by the native doctors.

ಮೂಂಜು (ಕ್ರಿ) – ಬಾಯಿ ಒಳಗೆ ಹಾಕಿ ಕೊಂಡು ಚಪ್ಪರಿಸುತ್ತಾ ಚೀಪುವುದು, licking a thing with lips and tongue.

ಮೂಕಳ್ಮೆ (ನಾ)– ಮೂಗಿನಿಂದ ವಾಸನೆ ಯನ್ನು ತಿಳಿದುಕೊಂದು ಪರಿಸ್ಥಿತಿಯನ್ನು ಅರ್ಥೈಸಿಕೊಳ್ಳುವ ಪ್ರಾಣಿಗಳ ವಿಶೇಷ ಶಕ್ತಿ,
nasal capacity, smelling capacity.

ಮೂಕ್ (ನಾ)– ಮೂಗು, nose.

ಮೂಕ್‌ಕಟ್ಟುದು (ಕ್ರಿ) – ಶೀತದಿಂದಾಗಿ ಮೂಗಿ ನೊಳಗೆ ನೆಗಡಿ ಸಾಂದ್ರಗೊಂಡು ಉಸಿರಾಟಕ್ಕೆ ಕಷ್ಟವಾಗುವುದು,
nasal congestion.

ಮೂಕ್‌ದಾರ (ನಾ)– ಕಡಿವಾಣ.

ಮೂಕ್ ಬೊಟ್ಟು (ನಾ)– ಮೂಗುತಿ, nose ornament.

ಮೂಕ್ ಸೊಳ್ಳೆ (ನಾ)– ಮೂಗಿನ ಸೊಳ್ಳೆಗಳು, nostrils.

ಮೂಡು (ನಾ)– ಪೂರ್ವದಿಕ್ಕು, east.

ಮೂಡು (ಕ್ರಿ)– ಉದಯಿಸು, ಅರಳು, rise, come into exist.
ಉದಾ: ಸೂರ್ಯ ಮೂಡ್ದು, ಅಳಂಬು ಮೂಡ್ದು.

ಮೂಡೆ ಹಿಟ್ಟ್ (ನಾ) – ಹಲಸಿನ ಹಣ್ಣನ್ನು ಬಳಸಿ, ಸಾಗುವಾನಿ ಎಲೆಯಲ್ಲಿ ಮಡಚಿಟ್ಟು, ಹಬೆಯಲ್ಲಿ ಬೇಯಿಸಿ ತಯಾರಿಸಿದ ಅಕ್ಕಿಯ ಹಿಟ್ಟು.

ಮೂರ್ತದ ಮಣೆ (ನಾ) – ವಿವಾಹ ಸಮಾರಂಭದ ಆರಂಭಿಕ ಹಂತದಲ್ಲಿ ಗಂಡು/ ಹೆಣ್ಣಿಗೆ ಕಟ್ಟುವ ಮುಹೂರ್ತದ ಸರ, ಕಾಸ್‌ತಾಳಿ, a chain put to the neck of the bride and bridegroom at the start of the marriage function, ಈ ಮಣಿ ಕಟ್ಟಿದ ನಂತರ ಮದುಮಕ್ಕಳಿಗೆ ಸೂತಕ ಇಲ್ಲ.

ಮೂರ್ ಕಾಸ್‌ನಂವ (ನಾ.ವಿ)– ಬಯ್ಗುಳ ಪದ, ಬೆಲೆ ಇಲ್ಲದವ, ಮೌಲ್ಯ ಇಲ್ಲದವ, ಮರ್ಯಾದಿ ಇಲ್ಲದವ. person without any moral values.

ಮೂರಿ (ನಾ)– ಘಾಟುವಾಸನೆ, ಗಮಟು ವಾಸನೆ, bad smell,
ನೋಡಿ: ಸಿಂಡ್, ನಾತ.

ಮೂಲೆ (ನಾ)– ಕೋಣೆಯ ಎರಡೂ ಗೋಡೆ ಸೇರುವ ಜಾಗ, corner.

ಮೂಲೆಗುಂಪು (ಕ್ರಿ)– ಒಂದು ಗುಂಪಿನಲ್ಲಿ ಒಬ್ಬನನ್ನು ದೂರ ಇರಿಸುವುದು, ಆತನಿಗೆ ಅವಕಾಶ ಕೊಡದಿರುವುದು. keeping a person away from the group, sidelining a person, not giving opportunity.

ಮೂಲೆಪಾಲ್ (ಕ್ರಿ)– ಗಣನೆಗೆ ತೆಗೆದುಕೊಳ್ಳ ದಿರುವುದು ಪರಿಗಣಿಸದಿರುವುದು, ಕಡೆಗಣಿಸುವುದು, ಮಲತಾಯಿ ಧೋರಣೆ, not giving attention, not considering, careless, step mother attitude.

ಮೂಲೆ ಫಕ್ಕಾಸ್ (ನಾ)– ಎರಡೂ ಮಾಡು ಸೇರುವಲ್ಲಿ ಹಾಕುವ ದಪ್ಪನೆಯ ಫಕ್ಕಾಸು, hip rafter.

ಮೂಸ್ (ಕ್ರಿ)– ವಾಸನೆ ತೆಗಿ, take smell.

ಮೆಂಟೆ (ನಾ) – ದನಗಳನ್ನು ಕಾಡಿಗೆ ಮೇಯಲು ಬಿಟ್ಟಾಗ ಅವುಗಳ ಇರುವಿಕೆಯನ್ನು ತಿಳಿದುಕೊಳ್ಳಲು ಅವುಗಳ ಕುತ್ತಿಗೆಗೆ ಕಟ್ಟುವ ಮರದ ಅಥವಾ ಬಿದಿರಿನ ಗಂಟೆ, woodenbell.

ಮೆಂತೆ (ನಾ)– ಮೆಂತ್ಯೆ, methi fenugreek.

ಮೆಂತೆ ಅಡಿಗೆ (ನಾ) – ಮೆಂತೆ ಬಳಸಿ ತಯಾರಿಸಿದ ರುಚಿಕರ ಖಾದ್ಯ. ಬಾಣಂತಿಯರಿಗೆ ಈ ತಿಂಡಿ ತಯಾರಿಸಿ ಕೊಡುತ್ತಾರೆ. a tasty dish prepared from methi.

ಮೆಟ್ಟ್ (ಕ್ರಿ) – ಹೆಜ್ಜೆ ಇರಿಸು, ಒದೆಯು, step on, kick.

ಮೆಟ್ಟ್ (ನಾ) – ಜೋಡು, ಪಾದರಕ್ಷೆ, chappal.

ಮೆಟ್ಟ್ ಕತ್ತಿ (ನಾ)– ಈಳಿಗೆಮಣೆ, ಕತ್ತಿ ಸಿಕ್ಕಿಸಿದ ಮಣೆ, footstool fixed with sickle.

ಮೆಡಿದು (ಕ್ರಿ)– ಹೆಣೆಯುವುದು, knitting, plaiting, ಉದಾ: ಕುಕ್ಕೆ ಮೆಡಿದು, ಹೆಡೆಗೆ ಮೆಡಿದು.

ಮೆಡ್ಡೆ (ನಾ)– ತುಂಬಾ ಬೆಂದು ಹೋದ, ಅನ್ನವನ್ನು ಅಗತ್ಯಕ್ಕಿಂತ ಹೆಚ್ಚು ಬೇಯಿಸಿದಾಗ, over coocked, over boiled.

ಮೆಣ್ಸ್ (ನಾ)– ಮೆಣಸು, chilly.

ಮೆತ್ತ್ (ಕ್ರಿ)– ಹಿಡಿಸು, ಲೇಪಿಸು, patch, paste, fix, ಸೆಗಣಿ ಮೆತ್ತುದು, ರೊಟ್ಟಿ ಮೆತ್ತುದು, ಸಿಮೆಂಟ್ ಮೆತ್ತುದು.

ಮೆತ್ತನೆ (ನಾ.ವಿ)– ಮೃದುವಾದ, ಕೋಮಲವಾದ, soft, tender.

ಮೆದುಳು (ನಾ)– ಮಿದುಳು, brain.

ಮೆರಿದು (ಕ್ರಿ) – ಜಂಬದ ವರ್ತನೆ ಪ್ರದರ್ಶಿಸು, show off, display.

ಮೆಲ್ಲಂಗೆ (ಕ್ರಿ)– ಮೆಲ್ಲಗೆ, ನಿಧಾನವಾಗಿ, ಕ್ಷೀಣವಾಗಿ, slow, soft, low.

ಮೇಕೆ ಕಡಿದು (ಕ್ರಿ)– ದನದಂತ ಪ್ರಾಣಿಗಳು ನುಂಗಿದ ಆಹಾರವನ್ನು ಮತ್ತೆ ಜಗಿದು ನುಂಗುವುದು.

ಮೇಗಡೆ (ನಾ)– ಮೇಲ್ಭಾಗ, upper part.

ಮೇಪತ (ಸ.ನಾ)– ಜಾನುವಾರುಗಳನ್ನು ಮೇಯಿಸುವವ, ದನಗಾಹಿ. herdsman, cowherd.

ಮೇಪುಳು (ನಾ)– ಕೇಪುನ ಕೋವಿಯಲ್ಲಿ ಕೇಪು ಇಡುವ ಭಾಗ, nipple. ನೋಡಿ: ಕೇಪುನ ಕೋವಿ.

ಮೇಲಂತಸ್ತ್ (ನಾ)– ಉಪ್ಪರಿಗೆ, ಮಾಳಿಗೆ, balcony, upstair.

ಮೇಲ್ಕಟ್ಟ್ (ನಾ)– ವಿವಾಹ ಕಾರ್ಯ ನಡೆಯುವ ಚಪ್ಪರದ ಮಧ್ಯ ಭಾಗದಲ್ಲಿ, ಮೇಲ್ಭಾಗ ಬಿಳಿಬಟ್ಟೆ ಕಟ್ಟಿ ನಿರ್ಮಿಸುವ ಶುಭ ಸ್ಥಳ, holy place prepared in the middle of the pandal with white clothes as ceiling for the marriage function.

ಮೇಲಾಗಿ (ನಾ.ವಿ) – ಮಿಗಿಲಾಗಿ, ಅದಕ್ಕಿಂತಲೂ ಹೆಚ್ಚಾಗಿ, more than that, in addition to that.

ಮೇಲೆ ಬೀಳ್ (ಕ್ರಿ)– ದಾಳಿಮಾಡು, ಹಲ್ಲೆ ಮಾಡು, attack, offend.

ಮೇಲೇರಿ (ನಾ)– ವಿಷ್ಣುಮೂರ್ತಿ ಭೂತ ಕೋಲದಲ್ಲಿ ನಿರ್ಮಿಸುವ ಕೆಂಡದ ರಾಶಿ, heap of ember formed at the time of 'vishnumoorthi' bhoothakolam, ನಿರುಪು.

ಮೇಲ್ಮೈ (ನಾ)– ಹೊರಗಿನ ಭಾಗ, outer surface.

ಮೇಸ್ (ಕ್ರಿ)– ಮೇಯಿಸು, supervize while the cattle are grazing, make to graze.

ಮೈ (ನಾ)– ದೇಹ, body.

ಮೈಂದ್ (ನಾ)– ಮಂಜು, ಇಬ್ಬನಿ, dew.

ಮೈಗಳ್ಳ (ನಾ.ವಿ)– ಸೋಮಾರಿ, ಉದಾಸೀನ ಮನೋಭಾವದವ, lazy.

ಮೈಪ (ನಾ.ವಿ)– ಕೆಂಬಣ್ಣದ ಹುಂಜ, a cock with reddish color.

ಮೈಮುರ್ದ್ (ಕ್ರಿ.ವಿ)– ಕಷ್ಟಪಟ್ಟು ಕೆಲಸ ಮಾಡು, ದೈಹಿಕ ಶ್ರಮ ಅಥವಾ ದುಡಿಮೆ, work hard, toil hard.

ಮೈಲ್‌ತುತ್ತು (ನಾ)– ತಾಮ್ರದ ಲವಣ, copper sulphate.

ಮೈಲಿ ಬೀಳ್ದು (ನಾ) – ಕೋಟ್ಲೆ, chicken pox, ಸೀತಾಳೆ.

ಮೊಂಡ (ನಾ.ವಿ)– ಹಠಮಾರಿ, obstinate person, ಛಲವುಳ್ಳ, unchanging, difficult to convince.

ಮೊಂಡು (ನಾ.ವಿ)– ಹರಿತವಿಲ್ಲದ, not sharp blunt, ಬಡ್ಡು.

ಮೊಕ್ಕು (ನಾ)– ಭತ್ತದ ಧೂಳು, stubble.

ಮೊಕ್ತೇಸರ (ನಾ)– ದೈವ/ ದೇವಸ್ಥಾನಗಳ ಆಡಳಿತ ನೋಡಿಕೊಳ್ಳುವವ, the Managing Trustee of a temple/ place of worship.

ಮೊಗ (ನಾ) – ಭೂತಗಳು ಧರಿಸುವ ಮುಖವಾಡ, mask worn by the bhootham.

ಮೊಗಿದು (ಕ್ರಿ)– ಉರುಳುವುದು, ಮೊಗ್ದು ಬೀಳು, fall down, ನೀರು ಮೊಗಿದು– ತುಂಬಿ ಹೊರಕ್ಕೆ ಚೆಲ್ಲುವುದು.

ಮೊಗ್ಚುದು (ಕ್ರಿ)– ಬಸಿಯುವುದು, ಒಂದು ಪಾತ್ರೆಯಿಂದ ಇನ್ನೊಂದು ಪಾತ್ರೆಗೆ ಹಾಕುವುದು, pour off, ಉದಾ: ಚಾ ಮೊಗ್ಚುದು.

ಮೊಚ್ಚಿ (ನಾ) – ಕೊಡಲಿ, axe.

ಮೊಜ್ಜಿಗೆ (ನಾ) – ಮಜ್ಜಿಗೆ, butter milk

ಮೊಟ್ಟೆ/ ಮಟ್ಟೆ (ನಾ)– ಸೊಂಟಕ್ಕೆ ಸುತ್ತಿದ ಸೀರೆ ಅಥವಾ ಪಂಚೆ ತುದಿಯಲ್ಲಿ ಏನಾದರೂ ವಸ್ತುಗಳನ್ನು ಸುತ್ತಿ ಇರಿಸಿ ಕೊಳ್ಳುವುದು.

ಮೊಟ್ಟೆಕೋಸು (ನಾ)– ಕೋಸುಪಲ್ಲೆ, cabbage.

ಮೊಟ್ಟೆದೋಸೆ (ನಾ)– ಕೋಳಿಮೊಟ್ಟೆಯನ್ನು ಕಾವಲಿಗೆ ಹಾಕಿ ಮಾಡುವ ದೋಸೆ, omelette.

ಮೊಡ್‌ಸೆರ (ನಾ)– ಹೊರೆ ಹೊರಲು ಬಳಸುವ ಉದ್ದನೆಯ, ದಪ್ಪದ ಬಟ್ಟೆ ಚೀಲ, ಇದರ ಮಧ್ಯಕ್ಕೆ ಕಟ್ಟ ಹಾಕಿ ಎರಡು ಭಾಗ ಮಾಡಿ ಒಂದು ಭಾಗ ವನ್ನು ತಲೆಯಲ್ಲೂ ಇನ್ನೊಂದು ಭಾಗ ವನ್ನು ಬೆನ್ನಿನಲ್ಲೂ ಹೊತ್ತೊಯ್ಯುತ್ತಾರೆ.

ಮೊಡಂಕ್ (ಕ್ರಿ)– ವಿರುದ್ಧ ಮಾತನಾಡು, speak against.

ಮೊಡ್ಯಳ (ನಾ)– ಮಡಿವಾಳ, washerman, ಗೌಡ ಜನಾಂಗದವರ ಎಲ್ಲಾ ಶುಭ ಕಾರ್ಯಗಳಲ್ಲಿ ಮತ್ತು ಮರಣ ಸಂದರ್ಭಗಳಲ್ಲಿ ಇವರ ಪಾಲ್ಗೊಳ್ಳುವಿಕೆಯಿದೆ.

ಮೊಡ್ಚು (ಕ್ರಿ)– ಮಡಚಿ ಇಡುವುದು, fold, ಕುರ್ಚಿ ಮಡಚಿ ಇಡುವುದು.

ಮೊಣ್‌ಕಾಲ್ (ನಾ)– ಮೊಣಕಾಲು, knee.

ಮೊಣ್‌ಕಾಲ್ ಚಿಪ್ಪಿ (ನಾ)– ಮೊಣಕಾಲು ಚಿಪ್ಪು, patella.

ಮೊಣ್‌ಕೈ (ನಾ)– ಮೊಣಕೈ ಗಂಟು, elbow.

ಮೊದುವೆ (ನಾ)– ಮದುವೆ, ವಿವಾಹ, marriage.

ಮೊದುವೆ ಪ್ರಸ್ತಾಪ (ನಾ)– ಮದುವೆ ಸಂಬಂಧ ಪ್ರಸ್ತಾಪಿಸುವುದು. marriage proposal.

ಮೊದುಮಂಜ (ನಾ)– ಮದುಮಗ, ವರ, bridegroom.

ಮೊದುಮಕ್ಕ (ನಾ)– ವಧುವರರು, bride and bride groom.

ಮೊದ್ದು (ನಾ)– ಔಷಧಿ, medicine.

ಮೊದೋಳಿಗೆ (ನಾ)– ಮದುಮಗಳು, ವಧು, bride.

ಮೊನ್ನೆ (ನಾ) – ಎರಡು ದಿನಕ್ಕೆ ಹಿಂದೆ, ನಿನ್ನೆಯ ಹಿಂದಿನ ದಿನ, day before yesterday.

ಮೊಮ್ಮ (ನಾ)– ಮೊಲೆ, breast (ಮಕ್ಕಳ ಭಾಷೆ)

ಮೊರ (ನಾ) – ಭತ್ತವನ್ನು ಬಾಚುವ, ಗೋಚುವ ಸಾಧನ.

ಮೊರಂಡ (ನಾ.ವಿ)– ಮೊಂಡಾದ, ತುದಿ ಚೂಪು ಇಲ್ಲದ, ತುದಿ ಉರುಟಾದ, top portion is flat & blunt.

ಮೊರಟೆ (ನಾ)– ತೋಡುಗಳಲ್ಲಿ, ಕೆರೆಗಳಲ್ಲಿ ವಾಸಿಸುವ ಸುಮಾರು 6" ನಿಂದ 1' ಉದ್ದದ ಮೀನು, a fish which lives in the small streams and lakes. (ಈಗ ನಶಿಸಿಹೋಗುತ್ತಿದೆ.).

ಮೊರಿ (ನಾ)– ಮರಿ, young one.

ಮೊರ್ಲು/ ಮೊರ್ಲ (ನಾ.ವಿ)– ಮಾನಸಿಕ ಅಸ್ವಸ್ಥ, ಹುಚ್ಚ, mad, mentally disturbed.

ಮೊಲೆ (ನಾ)– ಕುಚ, breast.

ಮೊಲೆ ತೊಟ್ಟು (ನಾ)– ಮೊಲೆಯ ತುದಿ, nipple.

ಮೊಸರ್ವೆ (ನಾ) – ಮಸಿ ಅರಿವೆ, cloth used in the kitchen.

ಮೊಸಿ (ನಾ)– ಇದ್ದಲು, cinder.

ಮೊಸಿ (ಕ್ರಿ)– ಮಸೆಯುವುದು, sharpening, ಉದಾ: ಕತ್ತಿ ಮೊಸಿದು.

ಮೊಸ್ರು (ನಾ)– ಮೊಸರು, curds.

ಮೊಳ (ನಾ)– ಕೈ ಬೆರಳಿನ ತುದಿಯಿಂದ ಮೊಣಗಂಟಿನ ತನಕದ ಉದ್ದ. ಮೂರು ಮೊಳ= ಒಂದು ಮಾರ್.

ಮೊಳ್ಕೆ (ನಾ)– ಮೊಳಕೆ ಬರುವುದು, sprout, ನೋಡಿ: ಮುಂಗೆಬರು.

ಮೋಂಞ (ನಾ.ವಿ)– ಬೋಳ, ಪೆದ್ದ, inactive, less intelligent.

ಮೋಂಟ/ ಮೋಂಟಿ (ನಾ)– ಕುಂಟುತ್ತಾ ನಡೆಯುವವ/ನಡೆಯುವವಳು, crippled.

ಮೋಟು ಕುಳ್ಳ (ನಾ)– ಕಾಡಿನಲ್ಲಿ ವಾಸಿಸುವ ಉದ್ದ ಬಾಲದ ಕಪ್ಪು ಬಣ್ಣದ ಚಿಕ್ಕ ಹಕ್ಕಿ, a small black bird with long tail living in the woods.

ಮೋರೆ (ನಾ)– ಮುಖ, face.

ಮೋಸ (ಕ್ರಿ.ವಿ)– ವಂಚನೆ, ಕಪಟ, ಠಕ್ಕು. deceive, dupe, cheat.

ಮೋಹ (ಕ್ರಿ.ವಿ) – ಅತಿಯಾದ ಪ್ರೀತಿ, fondness.

ಮೋಹ ಬೆಲೆ (ನಾ)– ನಿರ್ದಿಷ್ಟ ವಸ್ತುವಿನ ಆಕರ್ಷಣೆಗೆ ಇರುವ ಬೆಲೆ, rate of the land for its attraction.

ಯ

ಯಜ್‌ಮಾನ (ನಾ)– ಕುಟುಂಬದ ಮುಖ್ಯಸ್ಥ, ಕುಟುಂಬದ ಹಿರಿಯ – ಒಡೆಯ, ಯಜಮಾನ್ರ್, head of the family, master.

ಯಜ್‌ಮಾಂತಿ (ನಾ)– ಕುಟುಂಬದ ಹಿರಿಯ ಸದಸ್ಯೆ, ಒಡತಿ, mistress, head and senior most among the ladies in a family.

ಯಥಾರ್ಥ (ಕ್ರಿ.ವಿ)– ಸತ್ಯ, ನಿಜ, ವಾಸ್ತವ, truth, reality.

ಯದ್ವಾತದ್ವಾ (ಕ್ರಿ.ವಿ)– ಕ್ರಮವಿಲ್ಲದ, ವ್ಯವಸ್ಥೆ ಇಲ್ಲದ, ನೀತಿ ನಿಯಮ ಇಲ್ಲದ, erratic, haphazard, wreckless.

ಯಮ್ಮ!/ ಯಪ್ಪ! (ಭಾ.ಅ) – ಆಶ್ಚರ್ಯ ವ್ಯಕ್ತಪಡಿಸುವ ಉದ್ಗಾರಗಳು.

ಯಾಕಾಗಿ? (ಪ್ರ)– ಯಾವ ಉದ್ದೇಶಕ್ಕಾಗಿ? ಯಾವ ಕಾರಣಕ್ಕಾಗಿ? for what purpose? for what reasons?

ಯಾಕೆ? (ಪ್ರ)–ಏಕೆ?, ಕಾರಣವೇನು? why?

ಯಾಕೇಂತ? (ಪ್ರ)– ಏಕೆ ಅಂತ? ಏಕೇಂದರೆ? ಅಂವ ಬಂದದ್ ಯಾಕೇಂತ?

ಯಾಗಾರ್ (ನಾ)– ಯಾವಾಗಲಾದರೂ, on any time. ಯಾಗಾರ್ ಬನ್ನಿ, come on any time.

ಯಾಗೋಳು(ನಾ)–ಯಾವ ದಿನ ಬೇಕಾದರೂ, on any day. ಉದಾ: ನಮ್ಮ ಮನೆಗೆ ನೀವು ಯಾಗೋಳ್ ಬರಕ್.

ಯಾಪೆ (ನಾ) – ಮಳೆಗಾಲದಲ್ಲಿ ಸಣ್ಣ ತೊರೆಗಳು ಉಂಟುಮಾಡುವ ಜಲಪಾತಗಳಲ್ಲಿ ಮೀನು ಹಿಡಿಯಲು ಬಳಸುವ ಬುಟ್ಟಿ. a basket to catch fish at the waterfall created by small streams during the monsoon.

ಯಾರುಟ್ಟು? (ಪ್ರ)– ಯಾರಿದ್ದಾನೆ? (ಏ.ವ), Who is there?

ಯಾರ್ರೂ (ಸ.ನಾ)– ಯಾರನ್ನೂ, anybody.

ಯಾರೊಳೊ? (ಪ್ರ)– ಯಾರಿದ್ದಾರೆ? (ಬ.ವ), Who are there?

ಯೋಗ (ನಾ)–ಅದೃಷ್ಟ, ವಿಧಿ, luck, fate.

ಯೋಗ್ಯ (ನಾ.ವಿ) – ಉತ್ತಮ ವ್ಯಕ್ತಿ, ಗೌರವಾರ್ಹ ವ್ಯಕ್ತಿ. good man, respected person, honorable person.

ಯೋಗ್ಯತೆ (ನಾ)– ಸಾಮರ್ಥ್ಯ, ಅರ್ಹತೆ, ability, qualification.

ಯೋಚನೆ ಮಾಡ್ (ಕ್ರಿ)– ಯೋಚಿಸು, ಚಿಂತಿಸು. think.

ರ

ರಂಪ (ನಾ)– ಜಗಳ, ಘರ್ಷಣೆ, ಗದ್ದಲ, ಕೋಲಾಹಲ, quarrel, rift, friction.

ರಂಜುದು/ ರಂದುದು (ಕ್ರಿ)– ಪದೇ,ಪದೇ, ಆಗ್ರಹಿಸು, ಪದೇ ಪದೇ ವಿನಂತಿಸು, pursuade, appeal, request repeatedly.

ರಕ್ತಬಳ (ನಾ)– ರಕ್ತ ಬೋಳ, aloes.

ರಕ್ತೇಶ್ವರಿ (ಲಕ್ಕೆಸಿರಿ) (ನಾ)– ಪ್ರಕೃತಿಯ ಆರಾಧನೆ ಮಾಡುವ ಸ್ತ್ರೀ ಶಕ್ತಿ ರೂಪಿಣಿ, nature worship in the form of faminine diety.

ರಗಳೆ (ಕ್ರಿ.ವಿ)– ಕಿರಿಕಿರಿ, irritating, ತೊಂದರೆ, disturb.

ರಟ್ಟಾಗು (ಕ್ರಿ) – ಗುಟ್ಟು ಬಯಲಾಗು, secret coming out.

ರಟ್ಟ್ (ಕ್ರಿ)– ಚಿಮ್ಮು, ರಾಚು, ಎರಚು, ನೀರು ರಟ್ಟುದು, ಕೆಸರು ರಟ್ಟುದು, splash.

ರಣ (ನಾ)– ಪಿಶಾಚಿ, ಪ್ರೇತ, devil.

ರಣಗುಟ್ಟ (ಕ್ರಿ.ವಿ)– ಮಾರಣಾಂತಿಕ, ರಣಗುಟ್ಟ ಬಿಸಿಲು. fatal heat, fatal sunshine.

ರಣಪೋಲಿ (ನಾ.ವಿ)– ಮಹಾಪೋಲಿ, ಪೋಕ್ರಿ, notorious miscreant.

ರಣಹಿಡ್ದುಟು (ಕ್ರಿ.ವಿ) – ಅಸಾಮಾನ್ಯ ವರ್ತನೆ, behave extraordinarily like a demon.

ರವ್‌ಕೆ (ನಾ)– ಕುಪ್ಪಸ, ರವಿಕೆ, blouse.

ರಸ (ನಾ)– ಹಣ್ಣುಗಳ ದ್ರವ, juice.

ರಸಾಯನ (ನಾ)– ಹಣ್ಣಿನಿಂದ ತಯಾರಿಸಿದ ರುಚಿಕರ ಖಾದ್ಯ, tasty dish prepard out of fruit especially from plantains and mangoes.

ರಾಗ (ನಾ+ಕ್ರಿ.ವಿ) – ಒಂದೇ ರೀತಿಯ ಏರಿಳಿತಗಳಿಲ್ಲದ ಮಾತು, ಒಂದೇ ರೀತಿಯ ಬೇಡಿಕೆ, monotonous.

ರಾಜಿ (ಕ್ರಿ)– ಎರಡೂ ತಂಡಗಳ ಒಪ್ಪಿಗೆಯ ತೀರ್ಮಾನ, compromise.

ರಾಟೆ (ನಾ) – ಬಾವಿಯಿಂದ ನೀರೆತ್ತಲು ಹಗ್ಗಕ್ಕೆ ಬಳಸುವ ಕಬ್ಬಿಣದ ಚಕ್ರ (ರಾಟೆ) pulley.

ರಾಮಕಡ್ತಲೆ (ನಾ.ವಿ) – ಭಾರಿ ಜೋರಿನ ಹೆಂಗಸು, ಗಯ್ಯಾಳಿ, shrew, always scolding and cursing.

ರಾಶಿ (ನಾ)– ಒಟ್ಟಿಗೆ ಸೇರಿಸಿದ ಗುಡ್ಡೆ ಹಾಕಿದ, pile, heap.

ರಿಪೇರಿ (ನಾ)– ದುರಸ್ತಿ, ಸರಿಪಡಿಸುವಿಕೆ, repair

ರಿಯಾಯಿತಿ (ಕ್ರಿ) – ವಿನಾಯಿತಿ, concession, discount, diluting the system.

ರೀಪು (ನಾ)– ಹಂಚು ಇರಿಸಲು ಫಕ್ಕಾಸಿಗೆ ಹೊಡೆಯುವ ಮರದ ಸಲಾಕೆ reapers.

ರುಚಿ (ನಾ)– ಸ್ವಾದ, taste.

ರುದ್ರ ಚಾಮುಂಡಿ (ನಾ) – ವಿಷ್ಣುವಿನ ನರಸಿಂಹ ಅವತಾರ ಎಂದು ನಂಬಲಾಗುವ, ಸಿಂಹದ ಮುಖವಾಡ ಹೊಂದಿ ಆರಾಧಿಸಲ್ಪಡುವ ದೈವ.

ರೂಪು (ನಾ.ವಿ) – ಮುಖದ ಅಂದ, ಮುಖಚಹರೆ, ಮುಖ ಸೌಂದರ್ಯ, facial beauty.
ಉದಾ: ಅದ್ ಒಳ್ಳೆ ರೂಪುನ ಗೂಡೆ.

ರೆಂಕೆ (ನಾ)– ರೆಕ್ಕೆ, wings.

ರೆಪ್ಪೆ (ನಾ)– ಕಣ್ಣಿನ ರೆಪ್ಪೆ, eyelid.

ರೈಸುದು (ಕ್ರಿ)– ಅತಿರೇಕದ ವರ್ತನೆ, ತನ್ನನ್ನು ಎಲ್ಲರೂ ಗಮನಿಸಬೇಕೆಂಬ ವರ್ತನೆ, ಹೊಸ ಹೊಸ ಬಟ್ಟೆ ಬರೆ, ಆಭರಣ ಗಳನ್ನು ಧರಿಸಿ ಮಿಂಚುವುದು, showy, craze for recognition.

ರೇಸಿ (ನಾ)– ಕೀವು, ರೆಸಿಗೆ, pus.

ರೋಮ (ನಾ) – ದೇಹದ ಮೇಲಿನ ಕೂದಲು,
hair found on the body.

ಲ

ಲಂಬು (ನಾ.ವಿ)– ಎತ್ತರವಾಗಿರುವವನು, tall and lanky.

ಲಕಲಕ (ನಾ.ವಿ) – ಮಿನುಗು, ಪ್ರಕಾಶಿಸು, twinkle, shine.

ಲಗಾಡಿ (ಕ್ರಿ.ವಿ)– ಸಂಪೂರ್ಣ ಹಾಳಾಗು, total loss, totally spoiled.

ಲಗಾವು (ಕ್ರಿ)– ಸಂಬಂಧಪಡು, related, concerned.
ಉದಾ: ಅದ್ಕು, ಇದ್ಕು ಏನೂ ಲಗಾವು ಇಲ್ಲೆ.

ಲಗಾಸ್ (ಕ್ರಿ)– ಹೊಡಿ, ಬಡಿ, beat, thrash.

ಲಗ್ತಿ (ಕ್ರಿ)– ಹತ್ತಿರದಲ್ಲೇ ಇರು, ತಾಗಿಕೊಂಡು, nearby, enclosed,
ಉದಾ: ಆ ಭೂಮಿ ನಮ್ಮ ಭೂಮಿಗೆ ಲಗ್ತಿ, ನನ್ನ ಅರ್ಜಿ ಒಟ್ಟಿಗೆ ಲಗ್ತೀಕರಿಸೊಳೆ.

ಲಡಾಯಿ (ನಾ) – ಜಗಳ, ಹೋರಾಟ, quarrel, fight.

ಲಪ್‌ಡ (ಕ್ರಿ)– ಲಪಟಾಯಿಸು, take away cunningly.

ಲಾಕಿ (ನಾ)– ಮೊಟ್ಟೆ ಹಾಕದ ಕೋಳಿ, ಇನ್ನು ಸಾಕಷ್ಟು ಬಲಿಯದ ಕೋಳಿ, not fully grown.

ಲಾಗ (ಕ್ರಿ)– ಪಲ್ಟಿಹೊಡಿ, ಲಾಗಹಾಕು, ತಲೆಕೆಳಗೆ, somersault, ಸೋಲು, ವಿಫಲವಾಗು, fail, not succeed.

ಲಾಗ್ಯಾತ್ (ನಾ)– ಅಂದಿನಿಂದ, since then.
ಉದಾ : ಸ್ವಾತಂತ್ರ್ಯ ಸಿಕ್ಕಿದ ಲಾಗ್ಯಾತ್.

ಲಾಚಾರ್ (ನಾ.ವಿ) – ಸಣಕಲು, ಕ್ಷೀಣ, weak.

ಲಾಟ್ನ (ನಾ)– ಲಾಂದ್ರ, lantern.

ಲಾತ್‌ಕಾಳ್ (ನಾ)– ಇಲಾತಿ ಕಾಳು, ಬೀನ್ಸ್ ಕಾಳು, cowgram.

ಲ್ಯಾಕ್ (ನಾ.ವಿ)– ಚಂದ, ಚೆನ್ನಾಗಿ, ರುಚಿಕರ, beautiful, fine, tasty.

ಲಾಭ (ನಾ)– ವ್ಯಾಪಾರದಲ್ಲಿ ಬರುವ ಲಾಭ, profit, ಪ್ರಯೋಜನ, benefit.

ಲಾಳ (ನಾ)– ಕುದುರೆ ಅಥವಾ ಎತ್ತಿನ ಕಾಲುಗಳ ಗೊರಸಿಗೆ ಅಥವಾ ಬೂಟ್‌ಗಳ ತಳಕ್ಕೆ ಹಾಕುವ ಕಬ್ಬಿಣದ ಪಟ್ಟಿ, horse shoe, shod.

ಲುಂಗಿ (ನಾ)– ಪಂಚೆ, ಮುಂಡು, lungi.

ಲೂಟಿ (ಕ್ರಿ)– ದರೊಡೆ, theft, robbery.

ಲೆಕ್ಕಮಾಡ್ (ಕ್ರಿ)– ಎಣಿಸು, count.

ಲೇಪುಸು (ಕ್ರಿ) – ಲೇಪಿಸು, ಲೇಪಹಾಕು, embalm.

ಲೇಸ್ (ನಾ) – ಲೇಸು, ಸೂಕ್ತ, suitable apt.

ಲೊಕ್ಕಟೆ (ನಾ)– ಲಕೋಟೆ, envelope, cover.

ಲೋಟ (ನಾ)– ಲೋಟ, tumbler, glass.

ಲೊಟ್ಟೆ (ನಾ+ಕ್ರಿ)– ಸದಾ ಸುಳ್ಳು ಹೇಳುವವ, ಬುಡೆಲ್, ಸುಳ್ಳು ಹೇಳು, lie, bluff.

ಲೋಲಾಕ್ (ನಾ)– ಕಿವಿಯ ಓಲೆಗೆ ನೇತು ಹಾಕುವ ಆಭರಣ, hanging ear ornament.

ವ

ವಕ್ಕರ್ಸ್ (ಕ್ರಿ)– ಆಗಮಿಸು, ಅತಿಥೇಯರಿಗೆ ಇಷ್ಟ ಇಲ್ಲದಿದ್ದರೂ ಆಗಮಿಸುವುದು, unwanted arrival.

ವದಂತಿ (ನಾ)– ಗಾಳಿಸುದ್ದಿ, rumour.

ವರ್ಣರ ಪಂಜುರ್ಲಿ (ನಾ) – ರುದ್ರ ಚಾಮುಂಡಿಯ ಆಶ್ರಿತ ದೈವ.

ವಸೀ (ನಾ.ವಿ)– ಸ್ವಲ್ಪ, ಹನೀಸ್, ಹಂಞ.

ವಯ್ಯಕಯ್ಯ (ಕ್ರಿ)– ಹುಳಿ ರಗಳೆ, ಸದಾಕಿರಿಕಿರಿ, always disturbing.

ವ್ರತ (ಕ್ರಿ.ವಿ)– ಧಾರ್ಮಿಕ ಆಚರಣೆ, religious rite.

ವಾಕರಿಕೆ (ಕ್ರಿ)– ವಾಂತಿ, vomit.

ವಾಚಾಳಿ (ನಾ.ವಿ) – ಅತಿಯಾಗಿ ಮಾತನಾಡುವವ, too much talkative.

ವಾಡಿಕೆ (ಕ್ರಿ.ವಿ)– ಸಾಂಪ್ರದಾಯಿಕ ನಿಯಮ, ಕಟ್ಟುಕಟ್ಟಳೆ, customary, ಸುದ್ದಿ, news, known to all, ಎಲ್ಲರಿಗೂ ತಿಳಿದ ವಿಷಯ.

ವಾಪಾಸ್ (ಕ್ರಿ) – ಪುನಃ ಮತ್ತೆ, again, in return.

ವಾರೆಕೋರೆ/ ಓರೆಕೋರೆ (ನಾ.ವಿ) – ಅಂಕು ಡೊಂಕು, ವಕ್ರ, meandering, with curves.

ವಾಸಿ (ಕ್ರಿ)– ಗುಣಮುಖ, recovering from illness. heal, ಚೇತರಿಸಿಕೊಳ್ಳು.

ವಾಸಿ (ನಾ) – ಉತ್ತಮ, ಚೆನ್ನಾಗಿ, better, ಉದಾ: ಈಗ ಅವನ ಪರಿಸ್ಥಿತಿ ಎಷ್ಟೋ ವಾಸಿ

ವ್ಯಾದೆ (ನಾ)–ಗಡುವು, ನೀಡಿದ ನಿಶ್ಚಿತ ಕಾಲಾವಧಿ, due date, period allotted.

ವ್ಯಾಜ್ಯ (ನಾ)– ದಾವೆ, ಕಲಹ, dispute, clash, conflict.

ವಿಕಾರ (ನಾ.ವಿ)– ವಿದ್ರೂಪ, ಕುರೂಪ, ugly face, horrible face, frightening face.

ವಿಚಾರ್ಸ್ (ಕ್ರಿ)– ವಿಚಾರಿಸು, ತನಿಖೆ ಮಾಡು, ವಿವರ ಸಂಗ್ರಹಿಸು, enquire, collect information.

ವಿಲೇವಾರಿ (ಕ್ರಿ) – ಹಂಚು, ತಲುಪಿಸು, distribute.

ವಿಶೇಷ (ನಾ)– ಮಾಮೂಲಿಯಲ್ಲದ್ದು, something special, unusual, extra- ordinary.

ವಿಷಯ (ನಾ)– ವಸ್ತು, ವಿಚಾರ, ಸಂಗತಿ, ಸನ್ನಿವೇಶ, subject, theme, happning, incident, situation.

ವೀಳ್ಯ (ನಾ)– ತಾಂಬೂಲ, ವೀಳ್ಯದೆಲೆ, betel leaf, ವೀಳ್ಯನೀಡು – ಒಪ್ಪಂದದ ಸಂಕೇತ, ವೀಳ್ಯ ನೀಡಿ ಆಮಂತ್ರಿಸು, ವೀಳ್ಯ ಶಾಸ್ತ್ರ – ಮದುವೆಗೆ ಮುನ್ನ ನಡೆಯುವ ನಿಶ್ಚಯ ತಾಂಬೂಲ.

ವೇಷ (ನಾ.ವಿ)– ಉಡುಪು, dress, custume, ವಿಶೇಷ ಉಡುಪು, ಮಾಮೂಲಿಯಲ್ಲದ ಉಡುಪು, ರೂಪಬದಲಾಯಿಸುವ ಉಡುಪು, ನಾಟಕದ ವೇಷ, ಯಕ್ಷಗಾನ ವೇಷ.

ವೇಷ್ಟಿ (ನಾ)–ಇಮ್ಮಡಿ ಅಳತೆಯ ಬಿಳಿ ಧೋತಿ, white dhoti of double size.

ವೈರತ್ವ (ನಾ)– ವೈಮನಸ್ಸು, ದ್ವೇಷ, ವಿರೋಧಿ ಭಾವನೆ, enemity, hatredness, revenge.

ವೈವಾಟ್ (ಕ್ರಿ.ವಿ)– ವಹಿವಾಟು, ವ್ಯವಹಾರ, affairs.

ಶ

ಶಂಕೆ (ಕ್ರಿ.ವಿ)– ಸಂದೇಹ, ಸಂಶಯ, doubt, suspicion.

ಶಂಖ (ನಾ) – ಊದುವ ಶಂಖ, ಶಂಖ ನಾದ, conch.

ಶಂಖಪುಷ್ಪಿ (ನಾ)– ಶಂಖಪುಷ್ಪಿ ಹೂವಿನ ಗಿಡ, ಔಷಧೀಯ ಸಸ್ಯ.

ಶಕುನ (ನಾ) – ಒಂದು ಕೆಲಸಕ್ಕೆ ಹೊರಡುವಾಗ ಕಂಡುಬರುವ / ಎದುರಿಸುವ ಕೆಲವೊಂದು ಸನ್ನಿವೇಶ ಗಳನ್ನು ಶುಭ ಶಕುನ, good omen, ಹಾಗೂ ಅಪಶಕುನ bad omen ಎಂದು ಪರಿಗಣಿಸುತ್ತಾರೆ, ಒಂದು ರೀತಿಯ ಮೂಢನಂಬಿಕೆ,

ಶರ್‌ಬತ್ ಹಣ್ಣ್ (ನಾ)– ನಿಂಬೆಹಣ್ಣಿನಂತಹ ಆಕರ್ಷಣೀಯ ಹಣ್ಣು, ಶರಬತ್ ಮಾಡಲು ಬಳಸುತ್ತಾರೆ.
fruit used for juice.

ಶಾಯಿ (ನಾ)– ಮಸಿದ್ರವ, ink, ಕೆಂಪು, ಕಪ್ಪು, ಹಸಿರು ಬಣ್ಣದ ಶಾಯಿಯನ್ನು ಬಳಸುತ್ತಾರೆ, red ink for correction, blue ink for normal writing, green ink used by the gazetted level officers.

ಶಾಸ್ತಿ (ಕ್ರಿ)– ಶಿಕ್ಷೆ, ದಂಡನೆ, punishment, sentence, ಉದಾ: ಅಂವ ಮಾಡ್ದ ಅತ್ರೋಣಕ್ಕೆ ಅವಂಗೆ ತಕ್ಕ ಶಾಸ್ತಿ ಆವುಟು.

ಶಿಖಂಡಿ (ನಾ)– ನಪುಂಸಕ, ದಿಟ್ಟ ನಿರ್ಧಾರ ಕೈಗೊಳ್ಳದವ, ಷಂಡ,
eunuch, neither male or female.

ಶಿಲ್ವೆಮರ (ನಾ) – ಮೋಪಿಗಾಗಿ ಬಳಸುವ ಗಟ್ಟಿಯಾದ ಮರ, ಇದರ ಬೀಜ ತಿನ್ನಲು ರುಚಿ.

ಶುಂಠಿ (ನಾ)– ಪದಾರ್ಥಗಳಲ್ಲಿ ಬಳಸುವ ಖಾದ್ಯ, ginger.

ಶುಚಿ (ನಾ)– ಸ್ವಚ್ಛ, ನಿರ್ಮಲ, clean.

ಶೇಷೆ (ಕ್ರಿ)–ವರೋಪಚಾರ (ಶೇಷೋಪಚಾರ) ಸಂದರ್ಭದಲ್ಲಿ ತಲೆಯ ಮೇಲೆ ಅಕ್ಕಿ ಹಾಕಿ (ಶೇಷೆ ಹಾಕಿ)ಶುಭ ಕೋರುವುದು/ ಹರಸುವುದು.

ಶೇಷೆಕಾಳ್ (ನಾ)– ಅಕ್ಷತೆ ಕಾಳು, confetti.

ಶೇಷೋಪಚಾರ(ನಾ)–ವಿವಾಹ ಸಮಾರಂಭ ದಲ್ಲಿ ಧಾರಾಕಾರ್ಯದ ನಂತರ ವಧು ವರರಿಗೆ ಹರಸುವ ಕಾರ್ಯಕ್ರಮ, ಅತಿಥಿ ಸತ್ಕಾರ ಕೂಟ. blessing and reception programme.

ಶ್ಯಾನುಭೋಗ (ನಾ)– ಹಿಂದೆ ಪ್ರತೀ ಗ್ರಾಮ ದಲ್ಲಿ ಇರುತ್ತಿದ್ದ ಕಂದಾಯ ಇಲಾಖೆಯ ಗ್ರಾಮ ಮಟ್ಟದ ಅಧಿಕಾರಿ, village officer incharge of revenue administration.

ಷ

ಷಂಡ (ನಾ.ವಿ)– ನಪುಂಸಕ, impotent.

ಷಡ್ಡುಗ (ನಾ)– ಹೆಂಡತಿಯ ಸೋದರಿಯರ ಗಂಡ, co-brother.

ಷರತ್ತು (ನಾ)– ಕರಾರು, condition.

ಷೋಕಿ (ನಾ.ವಿ)– ಬೆಡಗು, ಬಿನ್ನಾಣ, ನಾವಿನ್ಯತೆ, fashionable.
ಉದಾ: ಅಂವ ಭಾರಿ ಷೋಕಿ ಮನುಷ್ಯ.

ಸ

ಸಂಕಟ (ಕ್ರಿ.ವಿ) – ಅನಾರೋಗ್ಯದಿಂದ ಉಂಟಾಗುವ ದೈಹಿಕ ನೋವು,
physical pain due to ill health.

ಸಂಕಪಾಷಾಣ (ನಾ)– ಭಾರಿ ಕಾಲ್ಪನಿಕ ವಿಷ, severe imaginary poison, ಪಾಷಾಣ – arsenic.

ಸಂಕಬಳ್ಳ (ನಾ)– ಕಾಳಿಂಗ ಸರ್ಪ, king cobra.

ಸಂಕಲ್ಪ (ನಾ) – ತೀರ್ಮಾನ, ನಿರ್ಣಯ, resolution, decision, ದೇವರ ಮುಂದೆ ಮಾಡಿಕೊಳ್ಳುವ ಭಿನ್ನಹ.

ಸಂಕಲೆ (ನಾ)– ಸಂಕೋಲೆ, ಸರಪಳಿ, steel chain.

ಸಂಗತ (ನಾ)– ಸಂಗಾತಿ, ಒಡನಾಡಿ, companion, ಜೊತೆಗಾರ.

ಸಂಗತಿ (ನಾ) – ವಿಷಯ, ವಿಚಾರ, happening, incident, situation happened.

ಸಂತೆ (ನಾ) – ವಾರಕ್ಕೊಂದು ದಿನ ನಡೆಯುವ ತೆರೆದ ಮಳಿಗೆ ವ್ಯಾಪಾರ, ಜಾತ್ರೆಗಳಲ್ಲಿ ಬರುವ ಅಂಗಡಿಮಟ್ಟುಗಳು, openyard business.

ಸಂದಿಗ್ಧ (ನಾ)– ಇಕ್ಕಟ್ಟಿನ ಸ್ಥಿತಿ, dilemma.

ಸಂದ್ (ನಾ) – ಎರಡು ವಸ್ತುಗಳನ್ನು ಜೋಡಿಸಿದ ಜಾಗ, place of joint.

ಸಂಪಟ (ನಾ)– ಕಲ್ಲನ್ನು ಬೀಸಿ ಬಹುದೂರ ಬಿಸಾಡಲು ಬಳಸುವ ಹುರಿ ಹಗ್ಗದಿಂದ ಮಾಡಿದ ಸಾಧನ, ಕವಣೆ, sling.

ಸಂಪಟಕಟ್ಟುದು (ಕ್ರಿ)– ತೋಳುಗಳ/ ಗಳುಗಳ/ ಕಂಬಗಳ ಎರಡೂ ಬದಿಯಿಂದ ತಟ್ಟೆ ಗಳನ್ನಿಟ್ಟು ಕಟ್ಟುವ ಕಟ್ಟ, tie tightly from both side.

ಸಂಮಾನ (ನಾ) – ವಿಶೇಷ ಸಾಧನೆ ಮಾಡಿದಾಗ, ಪ್ರಶಸ್ತಿ ಬಂದಾಗ ಮಾಡುವ ಅಭಿನಂದನಾ ಕಾರ್ಯಕ್ರಮ, felicitation, ನೂತನ ವಧುವರರಿಗೆ ನೀಡುವ ಔತಣಕೂಟ, dinner hosted in honour of newly married couple.

ಸಕ್ಕರೆ ಕಾಯಿಲೆ (ನಾ)– ಮಧುಮೇಹ, diabetes.

ಸಖತ್ (ಕ್ರಿ.ವಿ)– ಭಾರಿ, ತುಂಬಾ, ತೀವ್ರ, ಚೆನ್ನಾಗಿ, ಸಾಕಷ್ಟು, heavy, too much, more than expected, ಉದಾ: ನಮ್ಮಲ್ಲಿ ನಿನ್ನೆ ಸಖತ್‌ಮಳೆ ಹೊಡ್ತ್.

ಸಜ್ಜಿಗೆ (ನಾ)– ರವೆ, ಉಪ್ಪಿಟ್ಟು, rolong.

ಸಟ್ಟುಗ (ನಾ)– ಕಾವಲಿಯಿಂದ ಹಿಟ್ಟನ್ನು/ ತಿಂಡಿಯನ್ನು ಎಬ್ಬಿಸಲು ಬಳಸುವ ಚಪ್ಪಟೆಯ ಸೌಟು. ladle.

ಸಡಗರ (ನಾ.ವಿ) – ಸಮಾರಂಭದ ಗೌಜಿ, ಗಮ್ಮತ್ತು, grandeur and glory of the function.

ಸಣಪ (ಸ.ನಾ) – ಚಿಕ್ಕಪ್ಪ, father's younger brother and the husband of mother's younger sister.

ಸಣವ (ಸ.ನಾ)– ಚಿಕ್ಕಮ್ಮ, younger sister of the mother and the wives of father's younger brothers.

ಸಣ್ಣ (ನಾ.ವಿ)– ಚಿಕ್ಕ, ಪುಟ್ಟ, small, little.

ಸತ್ಕಾರ (ಕ್ರಿ)– ಉಪಚಾರ, ಆತಿಥ್ಯ hospitality, reception.

ಸರ್ತಿ (ಕ್ರಿ.ವಿ)– ಬಾರಿ, ಸಲ. ಎರಡೂ ಸರ್ತಿ ಎರಡು ಸಲ, once, twice, thrice, four times, likewise.

ಸರ್ಪಸುತ್ತ್ (ನಾ) – ತೀಕ್ಷ್ಣವಾದ ಚರ್ಮ ಖಾಯಿಲೆ,
severe skin disease, herpes.

ಸಪೂರ (ನಾ.ವಿ)– ತೆಳ್ಳಗೆ, thin.

ಸರ್ಬತ್ (ನಾ)– ಸಕ್ಕರೆ+ನೀರು+ನಿಂಬೆರಸದ ಪಾನಕ, ಪೇಯ, sherbet.

ಸಬ್ಬಲ್ (ನಾ)– ಒಂದು ಬದಿ ಚೂಪಾದ ಸನ್ನೆಯಾಗಿ ಬಳಸಲು ಉಪಯೋಗಿಸುವ ಕಬ್ಬಿಣದ ದಪ್ಪನೆಯ ಸರಳು ಸವೆಗೋಲು, crowbar.

ಸಬೂಬು (ಕ್ರಿ.ವಿ)– ಸಮರ್ಥನೆ, ಕ್ಷುಲ್ಲಕ ಕಾರಣ ನೀಡು, ನೆಪ, justifiacation by giving silly reasons.

ಸಮಗಾರ (ನಾ)– ಚರ್ಮ ಹದಮಾಡುವವ, ಚಪ್ಪಲಿ ತಯಾರಿಸುವವ, cobbler.

ಸಮಿದು (ಕ್ರಿ) – ಸವೆದು ಹೋಗು,
worn out

ಸರ್ಕ್ (ನಾ)– ಉತ್ತರ ಕ್ರಿಯೆ ನಡೆಯುವ ಮನೆಗೆ, ಉತ್ತರ ಕ್ರಿಯಾ ಕಾರ್ಯಕ್ರಮದ ಭೋಜನಕ್ಕೆ ಅವಶ್ಯವಿರುವ ವಸ್ತುಗಳನ್ನು ಮೃತರ ಬಂಧುಗಳು ಕಳುಹಿಸಿಕೊಡುವ ಪದ್ಧತಿ.

ಸರಳಿಮರ (ನಾ) – ಚಿಕ್ಕ ಜಾತಿಯ ಕಾಡು ಮರ, ಚಿಕ್ಕದಾದ ರುಚಿಕರ ಹಣ್ಣು ನೀಡುತ್ತದೆ, ಇದರ ಕೊಂಬೆಯನ್ನು ಉತ್ತರಕ್ರಿಯಾ ಕಾರ್ಯಕ್ರಮಗಳಲ್ಲಿ ಬಳಸುತ್ತಾರೆ.

ಸರಾಗ (ಕ್ರಿ.ವಿ)– ಸಲೀಸಾಗಿ, ಸುಲಭವಾಗಿ, smooth, with ease, without any obstacle.

ಸರಾಯ (ನಾ)– ಸಾರಾಯಿ, arrack.

ಸರಿ (ಕ್ರಿ.ವಿ)– ಹೌದು, ಆಗಬಹುದು, ಒಪ್ಪಿಗೆ, ಸಮ್ಮತಿ, yes, correct, oK.

ಸರಿಗಟ್ಟ್ (ಕ್ರಿ)– ಪರಿಸ್ಥಿತಿ ಸರಿಯಾದರೆ, ಇಕ್ಕಡೆಗಳಿಗೂ ಒಪ್ಪಿಗೆಯಾದರೆ, ಸನ್ನಿವೇಶ, ಸಂದರ್ಭಗಳು ಕೂಡಿಬಂದರೆ, situation is oK, agreeable to both the parties, situation found suitable.

ಸರಿಗೆ (ನಾ)– ಉಕ್ಕಿನ ತಂತಿ, steel wire.

ಸರಿಮಾಡ್/ ಸರಿಮಾಡೊಕು (ಕ್ರಿ) – ಸರಿಪಡಿಸು, ಸರಿ ಮಾಡಬೇಕು, ಪರಿಹರಿಸು, set right, settle, make it smooth.

ಸರಿರಾತ್ರಿ (ನಾ)– ನಡುರಾತ್ರಿ, midnight.

ಸಲ್ಯಾಣತ್ತ್ (ಕ್ರಿ.ವಿ)– ಬಯ್ಗಳು,
cursing words.

ಸಲೀಸ್ (ಕ್ರಿ.ವಿ)– ಸುಲಭವಾಗಿ ನವಿರಾಗಿ, smooth, without obstacle.

ಸಸಾರ (ಕ್ರಿ.ವಿ)– ಕಡೆಗಣಿಸು, ತಿರಸ್ಕಾರದಿಂದ ಕಾಣು, careless treatment, treat with contempt.

ಸ್ವರ್ಗಕ್ಕೆ ಸಲ್ಲುಸುದು (ಕ್ರಿ)– ಉತ್ತರಕ್ರಿಯೆಯ ದಿನ ಅವರ ಸಮಾಧಿ ಬಳಿಯಲ್ಲಿ ನುಡಿ ನಮನ ಸಲ್ಲಿಸಿ ಸ್ವರ್ಗಕ್ಕೆ ತೆರಳಿ ಎಂದು ಪ್ರಾರ್ಥಿಸುವುದು. wishing the dead to go to heaven on the day of obsequial ceremony.

ಸ್ವಯಾರ್ಜಿತ (ಕ್ರಿ.ವಿ)– ತಾನೇ ಗಳಿಸಿದ ಆಸ್ತಿ, self acquired property.

ಸಾಂಕ್ (ಕ್ರಿ)– ಸಾಕುವುದು, tend, ದನ ಸಾಂಕುದು, ಕೋಳಿ ಸಾಂಕುದು.

ಸಾಂತಾಣಿ (ನಾ)– ಒಣಗಿಸಿ ರಕ್ಷಿಸಿಡುವ ಹಲಸಿನ ಬೀಜ, dry jackfruit nuts.

ಸಾಂಬ್ರಾಣಿ (ನಾ) – ಪರಿಮಳ ದ್ರವ್ಯ, frankincense.

ಸಾಂಬ್ರಾಣಿ ಗಿಡ (ನಾ)– ದೊಡ್ಡ ಪತ್ರೆ, country borage.

ಸಾಕಣಿ (ನಾ)– ಸಾಕುವುದು, ಬೆಳೆಸುವುದು, ಪೋಷಿಸುವುದು. fostering, looking after.

ಸಾಕಾಕಿಲೆ (ಕ್ರಿ)– ಸಾಕಾಗಲಿಕ್ಕಿಲ್ಲ, not sufficient.

ಸಾಕ್ (ಕ್ರಿ)– ಇಷ್ಟು ಸಾಕು, ಇನ್ನು ಬೇಡ, not enough, not sufficient.

ಸಾಕ್ಷಿ (ನಾ)– ರುಜುವಾತು, ಪುರಾವೆ, witness, proof, ಆಧಾರ.

ಸಾಗು (ನಾ) – ಸಬ್ಬಕ್ಕಿ, sago.

ಸಾಯಿ (ಕ್ರಿ)– ಮರಣ ಹೊಂದು, ನಿಧನವಾಗು, die.

ಸಾರ್ (ನಾ)– ಸಾಂಬಾರು, sambar.

ಸಾರಣಿ (ಕ್ರಿ)– ನೆಲ, ಗೋಡೆಗೆ ಸಿಮೆಂಟ್ ಸಾರಿಸುವುದು, ಗಾರೆ ಹಾಕು, plastering, mortar.

ಸಾರಿಬಳ / ಸಾರಿಪಳ್ಳ (ನಾ) – ಒಂದು ವಿಷಯುಕ್ತ ಹಾವು, a poisonous snake.

ಸಾರು (ಕ್ರಿ)– ಹೊಂಚುಹಾಕು, ಅವಕಾಶಕ್ಕಾಗಿ ಕಾಯು, waiting for opportunity.

ಸಾರ್ಸು (ಕ್ರಿ) – ಸಾರಿಸು, ನೆಲಕ್ಕೆ ಸೆಗಣಿ ಸಾರಿಸುವುದು, ಬಳಿಯುವುದು, clean with water or cow dung water.

ಸಾರೆ (ನಾ)– ಹಲಸಿನ ಹಣ್ಣಿನ ಸಿಪ್ಪೆ/ ಹೊರ ಭಾಗ/ ಮೇಲ್ಪದರ, rind or skin of jack fruit.

ಸಾಲ್ (ನಾ)– ಸಾಲಾಗಿ ನಿಲ್ಲು, ಸರದಿಯ ಸಾಲು, line.

ಸಾಲಾವಳಿ (ನಾ)– ಮದುವೆ ಸಂದರ್ಭದಲ್ಲಿ ಗಂಡುಹೆಣ್ಣಿನ ಸಂಬಂಧ ಜ್ಯೋತಿಷ್ಯದ ಆಧಾರದಲ್ಲಿ ನಿಗದಿಗೊಳಿಸುವುದು.

ಸಾವ್ಕಾರ (ನಾ)– ವ್ಯಾಪಾರಿ, ಹಣದ ವಹಿವಾಟು ಮಾಡುವವ, business man, money lender.

ಸಾವು (ನಾ)– ಮರಣ, ನಿಧನ, death, expiry.

ಸಾಸಿವೆ (ನಾ)– ಸಂಭಾರ ಜೀನಸು, a spice, mustard.

ಸಿಂಗ್ಲೀಕ (ಗು) – ನೋಡಲು ಕುರೂಪಿ, ವರ್ತನೆ ಕಪಿಯದ್ದು. an ugly person with monkey like behavior.

ಸಿಂಡರ್ಸ್ (ಕ್ರಿ)– ಮುಖಸಿಂಡರಿಸು, ಅಸಹನೆ, ಅತೃಪ್ತಿ, ಅಸಮಾಧಾನವನ್ನು ಮುಖದಲ್ಲಿ ವ್ಯಕ್ತಪಡಿಸು. express dissatisfaction on the face.

ಸಿಂಹ ಘರ್ಜಿಸುದು (ಕ್ರಿ)– ಹುಲಿ, ಸಿಂಹ ಕೂಗುವುದು, roaring, ಗಟ್ಟಿಯಾದ ಸ್ವರದಲ್ಲಿ ಮಾತನಾಡುವುದು. Talk with loud voice.

ಸಿಕ್/ ಚಿಕ್ (ಕ್ರಿ.ವಿ)– ಸಿಕ್ಕು, ಸಿಕ್ಕಾಗುವುದು, ಬಿಡಿಸಲು ಕಷ್ಟವಾಗುವ, ಗೋಜಲು ಗೋಜಲು, ಜಟಿಲವಾಗುವುದು, becoming more complicated, unable to solve.

ಸಿಕ್ಕ್ (ಕ್ರಿ)– ಸಿಗು, ಲಭ್ಯವಾಗು, ಭೇಟಿಯಾಗು, ಉದಾ: ನೀ ಅಲ್ಲಿ ಸಿಕ್ಕ್, ಮಾತಾಡಮೊ. be there, let us meet.

ಸಿಕ್ಕ್‌ಸ್ (ಕ್ರಿ)– ಸಿಕ್ಕಿಸು, fix.

ಸಿಕ್ಕಾಬಟ್ಟೆ (ಕ್ರಿ.ವಿ) – ಒಟ್ಟಾರೆ, ಗೊತ್ತು ಗುರಿಯಿಲ್ಲದೆ, ಯೋಜನಾರಹಿತ, unorganized, haphazard.

ಸಿಕ್ಕುದು (ಕ್ರಿ)– ಸಿಗುವುದು, ಪಡೆಯುವುದು, getting, ಉದಾ: ನೋಡಿ: ಸಿಕ್ಕು (ಕ್ರಿ), ಸಿಕ್ಕುದ್ಲೆ– ಸಿಗುವುದಿಲ್ಲ, ಸಿಕ್ಕಿನೆ – ಸಿಗುತ್ತೇನೆ, available.

ಸಿಗಿ (ಕ್ರಿ)– ಸೀಳುಮಾಡು, split, ತಟ್ಟೆ ಸಿಗಿದು.

ಸಿಡ್‌ಕ್ (ನಾ.ವಿ)– ಸಿಡುಕು, ಸಿಡುಕಿನಿಂದ ಮಾತನಾಡು, ಕೋಪದಿಂದ ಮಾತನಾಡು, tantrum, short temper.

ಸಿಡ್‌ಕ್ ಮೋರೆ (ನಾ)– ಸಿಡುಕಿನ ಮುಖ, ಸದಾ ಕೋಪದ ಮುಖ, angry face, glumness.

ಸಿಡ್ಲ್ (ನಾ)– ಸಿಡಿಲು, lightning.

ಸಿಡಿ (ನಾ)– ಹಕ್ಕಿಗಳನ್ನು ಹಿಡಿಯಲು ಕಾಡಿನ ಬಲ್ಲೆಗಳಲ್ಲಿ ಹಗ್ಗ ಮತ್ತು ಬಾಗಿದ ಕೋಲಿನಿಂದ ಮಾಡುವ ನಮೂನೆ.

ಸ್ಥಿರ ಸೊತ್ತು (ನಾ)– ಖಾಯಂ ಸೊತ್ತು, immovable property.

ಸಿಡ್ತ (ನಾ)– ಸಿಡಿತ, ನೋವು, ಜುಂಜುಂ ನೋವು. ಉದಾ: ತಲೆ ಸಿಡ್ತಲಿ ತಡಿಯಕೆ ಬೊತ್ತು. pricking ache or pain.

ಸಿದ್ಧ ವೇಷ (ನಾ)– ಸುಗ್ಗಿ ತಿಂಗಳ ಶುಕ್ಲ ಪಕ್ಷದ ಪಾಡ್ಯದಿಂದ ಹುಣ್ಣಿಮೆ ತನಕ ರಾತ್ರಿ ಹೊತ್ತಿನಲ್ಲಿ ದೀಪದ ಬೆಳಕಿನಲ್ಲಿ ಕುಣಿಯುವ ಜನಪದ ನೃತ್ಯ. ಇದು ವೈದಿಕ ವಿರೋಧಿ, ಶೈವ ಸಂಬಂಧ ಬಿಂಬಿಸುವ ವೇಷ.

ಸೀಂಕ್ (ನಾ)–ಚೂಪಾದ ಚಿಕ್ಕ ಮರದ ತುಂಡು a tiny and sharp piece of wood.

ಸೀಂಕ್ರ್ (ನಾ) – ಮಳೆಯ ಜೊತೆ ಗಾಳಿ ಬೀಸುವಾಗ ಬೀಸಿ ಬರುವ ಮಳೆನೀರು, splashing of rain water due to wind.

ಸೀಂತ್ರಿ (ಕ್ರಿ)– ಮೋಸ, ಕಪಟ, ಕುತಂತ್ರ, cunning, in a dishonest way.

ಸೀನ್ದು (ನಾ)– ಸೀನುವುದು, sneezing.

ಸೀರ್ತುಂಡು (ನಾ)– ಸೊಂಟಕ್ಕೆ ಸುತ್ತಿಕೊಳ್ಳಲು ಬಳಸುವ ಬಟ್ಟೆ ತುಂಡು, piece of cloth to tie up round the waist.

ಸೀರ್‌ಬಾಯಿ (ನಾ.ವಿ) – ಸೀಳುತುಟಿ, harelip.

ಸೀಳ್ದು (ಕ್ರಿ)– ಸೀಳುವುದು, ನೋಡಿ: ಸಿಗಿ, cleave, ಉದಾ: ಮೀನ್‌ನ ಹೊಟ್ಟೆ ಸೀಳಿ ಸ್ವಚ್ಛಮಾಡ್ದು.

ಸುಂಪೆ (ನಾ)– ಪಾತ್ರೆಗಳನ್ನು ಒಲೆಯಿಂದ ತೆಗೆದು ಮಗುಚಿ ಬೀಳದಂತೆ ತಳ ದಲ್ಲಿಡುವ ಬೈಹುಲ್ಲಿನಿಂದ ಮಾಡಿದ ವೃತ್ತಾಕಾರದ ಸಾಧನ.

ಸುಂಕಾಣಿ (ನಾ)– ತೆಂಗಿನ ಗರಿ ಅಥವಾ ಬಿದಿರಿನ ತಟ್ಟೆಯಿಂದ ಮಾಡಿದ ಸೂಟೆ, a torch made out of dry palm leaf or bamboo bars.

ಸುಕ್ಕಿಕಂಡ್ (ಕ್ರಿ) – ತಿರುಗಾಡಿಕೊಂಡು, ಅಲೆದಾಡಿಕೊಂಡು, wandering.

ಸುಕ್ಕ್‌ಗಟ್ಟ್ (ಕ್ರಿ)–ಮುದುಡಿಹೋಗು, shrink.

ಸುಕ್ರುಮ ಬೇರ್ (ನಾ) – ನನ್ನಾರಿ ಬೇರು, medicated root.

ಸುಗ್ಗಿ (ನಾ) – ಎರಡನೇ ಭತ್ತದ ಬೆಳೆ, second paddy crop, ಕಟಾವಿನ ಸಮಯ, harvest season.

ಸುರ್ಗೆ (ನಾ)– ಭೂತ ಬಳಸುವ ಖಡ್ಗದ ಮಾದರಿ, a sword like weapon.

ಸುಡ್‌ಗಾಡ್ (ನಾ)– ಸ್ಮಶಾನ, ಮಸಣ, grave yard. ನೋಡಿ: ಚೂಟ್‌ಕಳ.

ಸುಡ್ಕುಳಿ (ನಾ)– ಒಂದು ಕುಟುಂಬದವರಿ ಗಾಗಿ ಮೀಸಲಿಟ್ಟ ಸ್ಮಶಾನ ಸ್ಥಳ. a place of cremation reserved for a family.

ಸುಣ್ಣ (ನಾ)– ಚೂರ್ಣ, limestone, calcium carbonate.

ಸುಣ್ಣ ಕುಪ್ಪಿ (ನಾ)– ತಾಂಬೂಲ/ ವೀಳ್ಯದ ಪೆಟ್ಟಿಗೆ/ ಹರಿವಾಣದಲ್ಲಿ ಸುಣ್ಣ ತುಂಬಿಸಿ ಇರಿಸುವ ಅಗಲ ಬಾಯಿಯ ಚಿಕ್ಕ ಬಾಟ್ಲಿ. a small bottle or container with lime.

ಸುತ್ತಮುತ್ತ (ನಾ)– ಅಕ್ಕಪಕ್ಕ, ಸುತ್ತಲೂ, round about.

ಸುತ್ (ನಾ)– ಸುತ್ತು ಹಾಕು, come round.

ಸುತ್ ಕಡಿಮೆ – ಮಾನಸಿಕ ಅಸ್ಥಿರತೆ, mental disorder.

ಸುತ್ ಸರಿಉಟ್ಟು – ಮಾನಸಿಕ ಸ್ಥಿರತೆ, mentally stable.

ಸುದ್ಧ (ಕ್ರಿ)– ಶುದ್ಧ, ದೇವರ ತೀರ್ಥ ಪುಣ್ಯಾರ್ಚನೆ ಸಿಂಪಡಿಸಿಕೊಂಡು ಸೂತಕದಿಂದ ವಿಮುಕ್ತನಾಗು, ದೇವರ ಪೂಜಾರಿಗಳು ಜಾತ್ರಾ ಸಮಯದಲ್ಲಿ ಮಾಂಸ, ಮದ್ಯ, ಸ್ತ್ರೀ ಸಂಗವನ್ನೆಲ್ಲಾ ತ್ಯಜಿಸಿ ದಿನಕ್ಕೆ ಮೂರು ಬಾರಿ ಸ್ನಾನಾದಿ ಗಳನ್ನು ಮಾಡಿ ಸದಾ ಶುಚಿರ್ಭೂತರಾಗಿ ಶುದ್ಧದಲ್ಲಿರುವುದು.

ಸುಪ್ಪ (ನಾ.ವಿ)– ರೂಪ, ಮುಖದ ಆಕಾರ, ಮುಖದ ನೋಟ, shape or beauty or appearance of the face.

ಸುಬಗ (ನಾ.ವಿ)– ಉತ್ತಮ ನಡತೆಯವ, ಪ್ರಾಮಾಣಿಕ, well behaved, honest.

ಸುಮ್ಮನೆ (ಕ್ರಿ.ವಿ)– ಮೌನವಾಗಿ, ಯಾವುದೇ ಪ್ರತಿಕ್ರಿಯೆ ಇಲ್ಲದ, silent, passive.

ಸುಮಾರ್ (ಕ್ರಿ.ವಿ)– ಸಾಧಾರಣ, ಹೆಚ್ಚು ಕಡಿಮೆ, ಅಷ್ಟಾಗಿರಬಹುದು, almost.

ಸುರ್‌ಮಾಡ್ (ಕ್ರಿ) – ಆರಂಭಿಸು, ಪ್ರಾರಂಭಿಸು, begin, start.

ಸುರಗಿ (ನಾ) – ಪರಿಮಳಯುಕ್ತ ಒಣಗಿಸಿ ಬಳಸುವ ಹೂವು.

ಸುರಿ (ಕ್ರಿ)– ಮೇಲಿನಿಂದ ನೀರು ಬೀಳುವುದು, ಮಳೆ ಸುರಿಯುವುದು, falling of water, raining.

ಸುರಿ (ಕ್ರಿ)– ಪಾಯಸ ಕೈಯಿಂದ ತಿನ್ನುವುದು, ಪಾಯಸ ಸುರಿದು ತಿನ್ನುವುದು. eat the diluted food with the help of hand.

ಸುರು (ಕ್ರಿ)– ಆರಂಭ, ಪ್ರಾರಂಭ, begin.

ಸುಲಭ (ಕ್ರಿ.ವಿ)– ಪ್ರಯಾಸವಿಲ್ಲದ, ಕಷ್ಟಕರವಲ್ಲದ, easy, not difficult.

ಸುರುಂಟಿ (ಕ್ರಿ.ವಿ)– ಸುತ್ತಿಕೊಂಡು, ಸುರುಟಿಕೊಂಡು, ಉದಾ: ನಾಯಿ ಸುರುಂಟಿ ಮಲ್ಗಿಟು, sleeping by twisting round.

ಸುಲಿ (ಕ್ರಿ)– ಸಿಪ್ಪೆ ತೆಗಿ, peel a nut/ fruit ತೆಂಗಿನಕಾಯಿ ಸುಲಿದು, ಅಡಿಕೆ ಸುಲಿದು.

ಸುಲಿಗೆ (ಕ್ರಿ.ವಿ)– ಮೋಸದಿಂದ ಹಣ ಪಡೆಯುವುದು, getting money illegally.

ಸುಸ್ತು (ಕ್ರಿ)– ಆಯಾಸ, ಬಚ್ಚಲು, tiresome, fatigue.

ಸುಸ್ನೆ (ಕ್ರಿ)– ಸೃಷ್ಟಿಸು, create. ಉದಾ: ಅಂವ ಅಲ್ಲಿ ಒಂದು ಪರಿಸ್ಥಿತಿ ಸುಸ್ನೆ ಮಾಡ್ತ್.

ಸುಳಿ (ನಾ)– ನೀರಿನ ಸುಳಿ, ಹೊಳೆಗಳಲ್ಲಿ ನೀರು ಸುತ್ತು ಸುತ್ತು ತಿರುಗುವುದು, whirlpool, whirling.

ಸುಳಿ (ಕ್ರಿ)– ಸುಳಿದಾಡು, ಕಾಣಬರು, wander, visible. ಉದಾ: ಹಾವು ಅಲ್ಲೆ ಸುಳಿದಾಡ್ತಾ ಇತ್ತ್.

ಸುಳ್ಪು (ಕ್ರಿ)– ಕಾರ ಆದಾಗ ಬಾಯಿಯ ಮೂಲಕ ವೇಗವಾಗಿ ಉಸಿರಾಡುವುದು. breathing quickly through mouth when there is too much pungency. ಹಾವು ಬುಸುಗುಟ್ಟುವುದು, hissing of the snakes.

ಸುಳ್ಳಿಲ (ನಾ)– ಇಂಪಾದ ಸ್ವರದಲ್ಲಿ ಸಿಳ್ಳೆ ಹಾಕುವ ರೀತಿಯಲ್ಲಿ ಕೂಗುವ ಕಾಡಿನ ಪುಟ್ಟ ಹಕ್ಕಿ. a small bird which makes a melodious whistling sound.

ಸೂಂಟ್ರು (ಕ್ರಿ.ವಿ)– ಹುರಿದಾಗ ಅಥವಾ ಬೇಯಿಸುವಾಗ ಸರಿಯಾಗಿ ಕರಡದಿದ್ದರೆ ತಳಭಾಗ ಅಡಿಹಿಡಿದು ಕರಿಯಾಗುವುದು, get charred while baking or roasting.

ಸೂಂಡುದು (ಕ್ರಿ)– ಮಳೆಬಂದಾಗ ಕೊಡೆ ಅಥವಾ ಗೊರಬೆಯನ್ನು ತಲೆಯ ಮೇಲೆ ಹಿಡಿಯುವುದು, ಉದಾ: ಕೊಡೆ ಸೂಂಡುದು. Holding the umbrella over the head while raining.

ಸೂಂತ್ರಿ (ನಾ) – ಒಲೆ ಊದಿ ಬೆಂಕಿ ಉರಿಯುವಂತೆ ಮಾಡಲು ಬಳಸುವ ಓಟೆಯ ಅಥವಾ ಲೋಹದ ಚಿಕ್ಕ ಕೊಳವೆ, blow pipe.

ಸೂಟೆ (ನಾ)– ತೆಂಗಿನ ಗರಿ ಅಥವಾ ಬಿದಿರಿನ ಕಡ್ಡಿಗಳಿಂದ ಮಾಡಿದ ದೊಂದಿ, torch made out of dry coconut palm or bamboo sticks.

ಸೂಡಿ (ನಾ)– ಒಂದುಕಟ್ಟು, ಹಿಡಿಸೂಡಿ, ನೇಜಿಸೂಡಿ.

ಸೂತ್‌ಗ (ಕ್ರಿ.ವಿ)– ಹುಟ್ಟು ಸಾವಿನ ದಿನಗಳಲ್ಲಿ ಆಚರಿಸುವ ಮೈಲಿಗೆ ದಿನಗಳು, ದೇವ ಕಾರ್ಯಗಳಿಗೆ ನಿಷಿದ್ಧವಾದ ದಿನಗಳು. (ಹುಟ್ಟಿಗೆ 16ದಿನ, ಸಾವಿಗೆ 11ದಿನಗಳು)

ಸೂರ್ಯ ಮುಳ್ಗುದು (ಕ್ರಿ) – ಸೂರ್ಯ ಮುಳುಗುವುದು, ಸೂರ್ಯ ಅಸ್ತಮಿಸುವುದು, ಸೂರ್ಯ ಕಂತುವುದು, sunset.

ಸೂರ್ಯಮೂಡ್ದು (ಕ್ರಿ) – ಸೂರ್ಯ ಉದಯಿಸುವುದು, sunrise.

ಸೂರ (ನಾ.ವಿ)– ಧೈರ್ಯದ ವ್ಯಕ್ತಿ, ಹೋರಾಟಗಾರ, ಸಾಹಸಿ, courageous, man of fighting quality, adventurous.

ಸೂರಡಿ (ನಾ) – ಮಾಡಿನಿಂದ ಮಳೆ ನೀರು ಬೀಳುವ ಸ್ಥಳ, place where the rain water falls from the roof.

ಸೂಸು/ ತೂಸು (ಕ್ರಿ)– ಚೆಲ್ಲು, ಬಸಿಯು, spill the water, ವ್ಯಾಪಿಸು, ಹರಡು, spread. ಉದಾ: ಸೂಸುತ್ತಿರುವ ಸೂರ್ಯನ ಕಿರಣಗಳು.

ಸೂಳೆ (ನಾ) – ವೇಶ್ಯೆ, prostitute.

ಸೂಳೆಹಕ್ಕಿ (ನಾ) – ಕಾಡಿನ ಹಕ್ಕಿ, a forest bird.

ಸೆಕೆ (ನಾ) – ಅತೀ ಹೆಚ್ಚಿನ ವಾತಾವರಣ ಉಷ್ಣತೆ, high temperature & hot atmosphere.

ಸೆಕೆಗಾಲ (ನಾ)– ಬೇಸಿಗೆ ಕಾಲ, summer, period of high temperature.

ಸೆಗ್‌ಣಿ (ನಾ)– ದನದ ಮಲ, cowdung.

ಸೆಗ್‌ಣಿ ಮುದ್ದ (ನಾ)– ಕಾಡು ಹಕ್ಕಿ, a forest bird.

ಸೆಗ್‌ಣಿ ಕೀರ (ನಾ)– ಕಾಡುಹಕ್ಕಿ, a forest bird.

ಸೆಡ್ಲ (ಕ್ರಿ.ವಿ)– ಸಡಿಲ, loose, ಉದಾ: ಆ ಕಟ್ಟಿನ ಹಂಞ ಸೆಡ್ಲ ಮಾಡ್.

ಸೆಡೆ (ನಾ)– ಸೌಟು, ಗೆರಟೆಯಿಂದ ಮಾಡಿದ ಸಟ್ಟುಗ, ladle spoon made out of coconut shell.

ಸೆಡೆಕಾವು (ನಾ)– ಸೆಡೆ/ ಚಮಚದ ಹಿಡಿ, handle.

ಸೆಪ್ಪ (ನಾ)– ಜನನಾಂಗದ ಸುತ್ತಲೂ ಬರುವ ಕೂದಲು, pubic hair.

ಸೆಲು/ತೆಳು (ನಾ.ವಿ)– ತೆಳ್ಳಗೆ, thin.

ಸೆಲೆ (ನಾ)– ಕಿರಿದಾಗಿ ತೆರೆದ ಭಾಗ, ಕಲ್ಲು ಮರಗಳಲ್ಲಿರುವ ಬಿರುಕು, ನೀರಿನ ಸೆಲೆ– ನೀರಿನ ಮೂಲ, ಉದಾ: ಅಲ್ಲಿ ನೀರಿನ ಸೆಲೆ ಉಟ್ಟು.

ಸೆರ್‌ಂಗ್ (ನಾ)– ಸೀರೆ ಸೆರಗು, ಸೀರೆಯ ಕೊನೆಯ ಭಾಗ, a decorative part of the end of the saree (which is put over the shoulder)

ಸೆರೆ (ನಾ)– ಸ್ವಲ್ಪ ಜಾಗ ಇರುವ ಇಕ್ಕಟ್ಟಾದ ಭಾಗ, tiny narrow place.
ಉದಾ: ಆ ಸೆರೆಲಿ ಹಾವು ಒಳಗೆ ಬಾತ್

ಸೆರೆಹತ್ತುದು (ಕ್ರೀ)– ಊಟ ಮಾಡುವಾಗ ಆಹಾರದ ತುಣುಕು ಶ್ವಾಸನಾಳಗಳಿಗೆ ಪ್ರವೇಶಿಸುವುದು, ಸೆರೆಹತ್ತುದು, laryngo spasm.

ಸೆರೆಹಿಡಿದು (ಕ್ರಿ) – ಮತ್ತು ಏರುವುದು, intoxication.

ಸೆಳ್ತ (ಕ್ರಿ)– ಸೆಳೆತ, ಸ್ನಾಯುನೋವು, cramp.

ಸೆಳ್ಳಿ (ನಾ)– ಹಂದಿಮಾಂಸದ ಚರ್ಬಿ ತುಂಬಿದ ಚರ್ಮ,
fatty skin of the pig.

ಸೇಂಕು (ಕ್ರಿ)– ಏದುಸಿರು ಬಿಡು,
take deep breath.

ಸೇಂಡೆ (ನಾ)– ಇಡೀ ಹಲಸಿನ ಹಣ್ಣನ್ನು ಕುಯ್ದು ಮಾಡಿದ ಸಾರೆ ಸಹಿತವಾದ ಭಾಗಗಳು,
part of the jackfruit sliced.

ಸೇರ್ (ನಾ)– ಅಳತೆಯ ಮಾನ, 4 ಪಾವು = 1ಸೇರು, 42ಸೇರು= ಒಂದು ಮುಡಿ.

ಸೇರ್ಸ್ (ಕ್ರಿ)– ಜೊತೆ ಸೇರಿಸು, ಒಟ್ಟುಗೂಡಿಸು, ಸೇರ್ಪಡೆ,
add, make them to join together, gather.

ಸೇಲೆ (ಕ್ರಿ.ವಿ) – ಬೆಡಗು, ಬಿನ್ನಾಣ,
showy, sexy behavior.

ಸೈ (ಕ್ರಿ) – ಸರಿ, ಒಪ್ಪಿಗೆ, ಆಗಲಿ,
yes, agreed, go ahead.

ಸೈರಿಸ್ (ಕ್ರಿ)– ಸೈರಿಸಿಕೊಳ್ಳು, ಸಹಿಸಿಕೊಳ್ಳು, tolerate, bear.

ಸೊಂಟ (ನಾ)– ನಡು, ಕಟಿ, waist.

ಸೊಕ್ಕು (ನಾ.ವಿ)– ಗರ್ವ, ದುರಹಂಕಾರ, ಜಂಭ, ಉದ್ರೇಕ, ಅತಿಯಾದ ಧೀಮಾಕು, overpride, arrogance.

ಸೊಡ್ಡು (ನಾ)– ಮುಖ, ಮೊರೆ, face.

ಸೊತ್ತು (ನಾ) – ಆಸ್ತಿ, ಸ್ಥಿರ, ಚರ ಆಸ್ತಿಗಳು, ಸಂಪತ್ತು, both movable and immovable property.

ಸೊನೆ (ನಾ)– ಕೆಲವು ಸಸ್ಯಗಳ ತೊಗಟೆಯಲ್ಲಿ ಹೊರಬರುವ ಬಿಳಿಯಾದ ಅಂಟು ದ್ರವ, resin, latex, sap.

ಸೊಪ್ಪು (ನಾ)– ಎಲೆ, leaf.

ಸೊಯೆ (ನಾ.ವಿ)– ಪ್ರಜ್ಞೆ,
consciousness.

ಸೊರಗು (ಕ್ರಿ)– ನಿತ್ರಾಣವಾಗು, ಕ್ಷೀಣಿಸು, grtting physically weak.

ಸೊರೂತ (ನಾ.ವಿ)– ನೇರ, ಅಂಕುಡೊಂಕು ಇಲ್ಲದ, straight.

ಸೊಳ್ಳೆ (ನಾ)– ಮೂಗಿನ ಸೊಳ್ಳೆ, nasal cavity.

ಸೋಂಕು (ಕ್ರಿ)– ಹತ್ತಿರಬರು, ಒಳಪ್ರವೇಶಿಸು, ಅಂಟಿಕೊಳ್ಳು, ಹರಡು, contagious.

ಸೋಂಕಿ ನೋಡು (ಕ್ರಿ)– ಬಂದು ನೋಡು, ಇಣುಕಿ ನೋಡು,
ಉದಾ: ನೀ ಒಮ್ಮೆ ಸೋಂಕಿ ನೋಡ್.

ಸೋಂತೆಕಾಯಿ (ನಾ)– ಸೌತೆಕಾಯಿ, cucumber.

ಸೋಂಬೇರಿ (ನಾ.ವಿ)– ಸೋಮಾರಿ, lazy.

ಸೋಕು (ನಾ.ವಿ)– ಚಂದ, ಆಕರ್ಷಣೀಯ, beautiful, attractive.

ಸೋಗೆ (ನಾ) – ಅಡಿಕೆ ಮರದ ಸೋಗೆ, leaf of the arecanut plant.

ಸೋಜಿ (ನಾ)– ರವೆ+ಹಾಲು+ಸಕ್ಕರೆ ಮಿಶ್ರಿತ ಪಾಯಸ, payasam made out of soji.

ಸೋಡಚೀಟಿ (ನಾ) – ಹಕ್ಕು ಖುಲಾಸೆ, surrender deed.

ಸೋಮಾರ ಹಣ್ಣ್ (ನಾ)– ಸೋಮಾರ ಎಂಬ ಚಿಕ್ಕ ಪೊದರಿನಲ್ಲಿ ಬೆಳೆಯುವ ಕೆಂಪುಬಣ್ಣದ ರುಚಿಕರವಾದ ಚಿಕ್ಕ ಹಣ್ಣು.

ಸೋರ್ (ಕ್ರಿ)– ಮಳೆಯಾದಾಗ ನೀರು ಒಸರುವುದು, leakage of water from the roof due to rain.

ಸೋರೆಕಾಯಿ (ನಾ)– ಬಾಟ್ಲಿಯಂತಹ ಆಕೃತಿಯ ತರಕಾರಿ, bottlegourd.

ಸೋರೆ (ನಾ)– ಒಣಗಿದ ಸೋರೆಕಾಯಿಯ ಚಿಪ್ಪಿನಿಂದ ಮಾಡಿದ ಕಂಟೈನರ್, container made out of the shell of dry bottlegrourd.

ಸೋಲ್ (ಕ್ರಿ)– ಸೋತು ಹೋಗುವುದು, ಅಪಜಯ, defeat, lose.

ಸೋಳೆ (ನಾ)– ಹಲಸು, ಮುಸುಂಬಿ, ಕಿತ್ತಳೆಹಣ್ಣಿನ ಒಳಭಾಗದ ಎಸಳುಗಳು, loaves of the fruits

ಸೌಂಟು (ನಾ)– ಸೌಟು, ದೊಡ್ಡ ಚಮಚ, ladle, big spoon.

ಸೌಖ್ಯ (ಕ್ರಿ.ವಿ)– ಆರೋಗ್ಯ, health.

ಹ

ಹಂಗ್ (ನಾ)– ಋಣ, ಕೊಡಲು ಬಾಕಿ ಇದೆ, owe, ಉದಾ: ನಾ ಅವನ ಹಂಗ್‌ಲಿ ಒಳೆ, encumberance

ಹಂಗ್‌ಸ್ (ಕ್ರಿ)– ಮಾಡಿದ ಅಪಕಾರವನ್ನು ತಿಳಿಸಿ ಹಂಗಿಸುವುದು. reminding him the trouble he has given, teasing with.

ಹಂಚ್ (ಕ್ರಿ)– ವಿತರಿಸು, distribute, ಹಂಚುದು– ವಿತರಿಸುವುದು.

ಹಂಞ (ನಾ)– ಸ್ವಲ್ಪ, ನೋಡಿ: ವಶಿ, ಹನೀಸ್, little, small quantity.

ಹಂಡ್ಞ್ (ಕ್ರಿ)– ಹರಡು, spread.

ಹಂಡೆ (ನಾ)– ಅಗಲ ಬಾಯಿ ಇರುವ ಪೀಪಾಯಿಯಂತಹ ಲೋಹದ ಪಾತ್ರೆ. couldron

ಹಂದಾಡ್ಸ್ (ಕ್ರಿ)– ಅಲ್ಲಾಡಿಸು, shake,

ಹಂದಿ ಗುರುಗುಟ್ಟುದು (ಕ್ರಿ) – ಹಂದಿ ಕೂಗುವುದು, grunting.

ಹಂದಿಗೂಡು (ನಾ)– ಹಂದಿ ವಾಸಿಸಲು ಮಾಡುವ ಗೂಡು, pigsty.

ಹಂದಿಬಳ್ಳಿ (ನಾ)– ಈ ಬಳ್ಳಿಯ ಕಾಯಿಯನ್ನು ದೀಪಾವಳಿಯ ಸಂದರ್ಭದಲ್ಲಿ ಮಾಲೆಮಾಡಿ ಬಲೀಂದ್ರನಿಗೆ ಹಾಕುತ್ತಾರೆ.

ಹಕ್ (ನಾ)– ಕಿಡಿ, spark.

ಹರ್ಕ್‌ಲ (ನಾ.ವಿ)– ಹರಿದುಹೋದ, torn.

ಹಕ್ಕಲೆ (ನಾ)– ಹತ್ತಿರ, very near.

ಹಕ್ಕಿ (ನಾ)– ಪಕ್ಷಿ, bird.

ಹಕ್ಕಿಗಳ ಚಿಲಿಪಿಲಿ (ನಾ) – ಪಕ್ಷಿಗಳು ಕೂಗುವುದು, twittering.

ಹಕ್ಕುದಾರ (ನಾ)– ವಾರೀಸುದಾರ, heir, successor.

ಹರ್ಕೆ (ಕ್ರಿ)– ಹರಿಕೆ, ದೇವರಿಗೆ ಅರ್ಪಿಸುವ ಹರಿಕೆ, offering, ಹರಿಕೆ ಸಂದಾಯ– ಕೊಟ್ಟ ಹಾಗೆ ಮಾಡು.

ಹಗಲಕಾಯಿ (ನಾ)– ಹಾಗಲಕಾಯಿ, bitter guord.

ಹರ್ಗುದು (ಕ್ರಿ)– ಹರಡುವುದು, ಭತ್ತ ಹರ್ಗುದು, ಅಡಿಕೆ ಹರ್ಗುದು, spread out.

ಹಗೆತನ (ನಾ)– ದ್ವೇಷ, hatredness.

ಹಚ್ಚೆ ಹಾಕುದು (ಕ್ರಿ)– ದೇಹದ ಮೇಲೆ ಚಿತ್ರ ಬಿಡಿಸುವುದು. Tattooing.

ಹಜಾಮ (ನಾ)– ಕ್ಷೌರಿಕ, barber.

ಹಜಿರ್ (ಕ್ರಿ)– ಸ್ವಚ್ಛಗೊಳಿಸು, ಕೋಳಿ ಹಜಿರ್ ಮಾಡ್ದು, ಮೀನ್ ಹಜಿರ್ ಮಾಡ್ದು, repair cleanly, make ready to cook. ನೋಡಿ: ಅಚ್‌ಕಟ್.

ಹಟ್ಟಿ (ನಾ)– ದನದ ಕೊಟ್ಟಿಗೆ, cowshed.

ಹಡ್ಲ್ (ನಾ.ವಿ)– ಬೇಸಾಯ ಮಾಡದೆ ಬಿಟ್ಟ ಹೊಲ, ಹಡ್ಲ್ ಗದ್ದೆ, uncultivated paddy field.

ಹಡ್ (ಕ್ರಿ)– ಸಂಭೋಗ ಮಾಡು, intercourse.

ಹಡ್ಜೆ (ನಾ.) – ತಲೆಗೆ ಸ್ನಾನ ಮಾಡಲು ಬಳಸುವ ಲೋಳೆಯ ಅಂಶವಿರುವ ಸಸ್ಯ, a plant used to take bath.

ಹಣ್ಣ್ (ನಾ)– ಹಣ್ಣು, ಕಾಯಿ ಬಲಿತು ಹಣ್ಣಾಗುವುದು, fruit.

ಹಣ್ಣ್‌ನ ಚೂಲಿ (ನಾ)– ಹಣ್ಣಿನ ಸಿಪ್ಪೆ, rind of the fruit.

ಹಣ್ಣ್‌ನ ಮಾಸ (ನಾ)– ಹಣ್ಣಿನ ಮಾಂಸ, pulp, kernel.

ಹಣೆ (ನಾ)– ಕಣ್ಣುಗಳ ಮೇಲ್ಭಾಗ, ತಿಲಕ ಇಡುವ ಭಾಗ, forehead.

ಹಣೆಬರ (ನಾ.ವಿ)– ವಿಧಿ, ಅದೃಷ್ಟ, fate, luck.

ಹತ್ತ್ (ಕ್ರಿ)– ಏರು, climb, ಅರ್ಥೈಸು, understand, ತಲೆಗೆ ಹತ್ತುದು.

ಹತ್ಯಾರ್ (ನಾ) – ಉಪಕರಣಗಳು, equipments.

ಹದ್ದ್‌ಬಸ್ತ್ (ಕ್ರಿ)– ಹತೋಟಿ, ಅಂಕೆ, control.

ಹದ್ದ್‌ಮೀರ್ (ಕ್ರಿ)– ಹತೋಟಿ ತಪ್ಪು, go out of controle.

ಹದ್ಮುದು/ ಹದ್ಕಿ ಬೀಳು (ಕ್ರಿ)– ಬೆಚ್ಚಿ ಬೀಳು, ಭಯದಿಂದ ಒಮ್ಮೆ ನಡುಗುವುದು, tremble with sudden fear.

ಹನೀಸ್ (ನಾ)– ಸ್ವಲ್ಪ, little, ನೋಡಿ: ವಶಿ, ಹಂಞ.

ಹನ್ಕು (ಕ್ರಿ)– ನೀರು ತೊಟ್ಟಿಕ್ಕು, dripping of water.

ಹಪ್ಪಳ (ನಾ)– ಅಕ್ಕಿ, ಗೆಣಸು, ಹಲಸಿನ ಹಣ್ಣಿನಿಂದ ಮಾಡುವ ತೆಳ್ಳಗಿನ ರೊಟ್ಟಿ, muffins.

ಹಬ್ಬ (ನಾ) – ವಿಶೇಷ ಆಚರಣೆಗಳು, festival, feast.

ಹಬ್ಬಂತಿಗೆ/ ಹಬ್ಬಲಿಕೆ (ನಾ) – ಕನಕಾಂಬರ ಹೂವು.

ಹಬ್ಬುಸು (ಕ್ರಿ)– ಹಬ್ಬಿಸು, ಹರಡು, spread, ಆಧಾರ ಕೊಟ್ಟು ನಿಲ್ಲಿಸು, ಬಳ್ಳಿ ಹಬ್ಬುಸು.

ಹಮ್ಮಿಕೊಳ್ಳ್ (ಕ್ರಿ)– ಅನುಷ್ಠಾನಗೊಳಿಸು, ಆಚರಿಸು, ಏರ್ಪಡಿಸು, ಯೋಜಿಸು. celebrate, put into practice, plan to undertake.

ಹಮ್ಮು (ನಾ.ವಿ)– ತಿಳಿಗೇಡಿ, ಅನಾಗರಿಕ, ಅಪ್ರಾಮಾಣಿಕ, idiot, dishonest, humbug.

ಹಮ್ಮು (ನಾ.ವಿ)– ಅಹಂಕಾರ, ಮದ, ಗರ್ವ, pride, arrogance.

ಹರ್‌ಕ್ (ನಾ.ವಿ)– ಹರಿದ, torn.

ಹರ್‌ಗುದು (ಕ್ರಿ)– ಹರಡುವುದು, spread.

ಹರಟೆ (ಕ್ರಿ.ವಿ) – ಖಚಿತ ವಿಷಯವಿಲ್ಲದ ಮಾತು, ಲೋಕಾಭಿರಾಮ, chat, casual conversation.

ಹರಟೆ ಮಲ್ಲ (ನಾ.ವಿ)– ಸದಾ ಹರಟೆ ಮಾತಿನಲ್ಲಿ ತೊಡಗಿಕೊಂಡಿರುವವ, man always indulged in chatting, ಹರಟೆ ಮಲ್ಲಿ (ಸ್ತ್ರೀ.ಲಿ).

ಹರಿ (ಕ್ರಿ)– ಹರಿದುಹಾಕು, tear.

ಹರಿ (ನಾ)– ಮೊನಚು, ಹರಿತ, sharp, ಉದಾ: ಕತ್ತಿ ಒಳ್ಳ ಹರಿ ಉಟ್ಟು.

ಹರಿಬಿದ್ದ್ ಓಡ್ – ಒಮ್ಮಿಂದೊಮ್ಮೆಲೆ ವೇಗವಾಗಿ ಓಡು. ran helter, skelter.

ಹರಿಕೆ ಹಣ (ನಾ)– ಮದುವೆ ಕಾರ್ಯಕ್ರಮ ಆರಂಭಕ್ಕೆ ಮುನ್ನ ಕುಲದೇವರಿಗೆ ಕಟ್ಟುವ ಹರಿಕೆ ಹಣ.

ಹರಿಯಕಿಲೆ (ಕ್ರಿ)– ಸಾಧ್ಯವಾಗಲಾರದು, not possible, ಉದಾ: ಅವಂದ ಅದ್ ಹರಿಯಕಿಲೆ.

ಹರಿವಾಣ (ನಾ)– ದೇವರಿಗೆ ಹಣ್ಣುಕಾಯಿ ಇತ್ಯಾದಿ ಅರ್ಪಿಸಲು, ಬಳಸುವ ಹಿತ್ತಾಳೆ ತಟ್ಟೆ, brass plate used at the places of worship.

ಹರುಂಬುಳಿ (ಕ್ರಿ) – ಸಂಭೋಗ ಮಾಡಲು ಹೋರಿ ಹಸುವಿನ ಮೇಲೆ ಏರಿ ಬರುವುದು. Intercourse of the ox and cow.

ಹಲ್ಲ್‌ಕಡ್ಡಿ (ನಾ)– ಹಲ್ಲಿನ ಸೆರೆಯಲ್ಲಿ ನಿಂತ ಆಹಾರದ ತುಣುಕನ್ನು ತೆಗೆಯಲು ಬಳಸುವ ಕಡ್ಡಿ. tooth pick.

ಹಲಗೆ (ನಾ)– ಮರದ ಹಲಗೆ, wooden plank.

ಹಲಗೆ ಮೆಟ್ಟ್ (ಕ್ರಿ)– ಉಳುಮೆ ಮಾಡಿ ನೇಜಿ ನೆಡುವ ಮೊದಲು ಕೆಸರು ಮಣ್ಣನ್ನು ಎತ್ತುಗಳಿಂದ ಹಲಗೆಯನ್ನು ಎಳೆಸಿ ಸಮತಟ್ಟು ಮಾಡುವುದು. levelling the plowed paddy field with wooden plank drawn by ox.

ಹಲ್ಕ (ಗು)– ನೀಚ, ನಿಕೃಷ್ಟ ವ್ಯಕ್ತಿ, bad man, hopeless fellow.

ಹಲ್ಕಟ್ (ಕ್ರಿ.ವಿ)– ನೀಚ ಕೆಲಸ, ನೀತಿಗೆಟ್ಟ ಕೆಲಸ, immoral work.

ಹಲ್ಕಿ (ಕ್ರಿ.ವಿ)– ನೀಚ ಕೆಲಸ, hopeless work.

ಹಲ್ಸಿನಕ್ಕಿ (ನಾ)– ಹಲಸಿನ ಹಣ್ಣಿನ ಬೀಜ. Nut of the jackfruit.

ಹಲ್ಲ್‌ಕಚ್ಚ್ (ಕ್ರಿ.ವಿ) – ಸಿಟ್ಟಿನ ಪ್ರದರ್ಶನ, ಕೋಪ ಮಾಡಿಕೊಳ್ಳು, expression of anger.

ಹಲ್ಲ್‌ಕತ್ತಿ (ನಾ) – ಭತ್ತದ ತೆನೆಯನ್ನು ಕೊಯ್ಯಲು ಬಳಸುವ ಕತ್ತಿ, a sickle like saw for harvest work.

ಹಸ್‌ಗ್ (ನಾ.ವಿ)– ಹಿತಕರವಲ್ಲದ ರುಚಿ, bad taste.

ಹಸ್ರಾಯ (ನಾ)– ಹರಿಸೇವೆ, ತಿರುಪತಿ ವೆಂಕಟರಮಣ ದೇವರಿಗೆ ಮಾಡುವ ಪೂಜೆ. pooja worshipping Lord Venkatramana of Thirupathi.

ಹಸಿ (ನಾ.ವಿ)– ಬೇಯಿಸದ, ಒಣಗದ, not baked, not dried, raw.

ಹಸಿಬಿಸಿ (ನಾ)– ಅರೆಬೆಂದ, half boiled.

ಹಸಿಮೊಟ್ಟೆ (ನಾ)– ಹಸಿರು ಬಣ್ಣದ ಚಿಟ್ಟೆ, grasshopper.

ಹಸಿಹಾವು (ನಾ)– ಎಲೆಗಳ ಮೇಲೆ ಕಂಡು ಬರುವ ಹಸಿರು ಬಣ್ಣದ ಚಿಕ್ಕ ನಿರುಪದ್ರವಿ ಹಾವು, a small green coloured harmless snake found on the leaves.

ಹಸೆ (ನಾ)– ವಿವಾಹ ಸಂದರ್ಭದಲ್ಲಿ ವಧು ವರರನ್ನು ಕೂರಿಸಿ ಉಪಚರಿಸುವ ಸ್ಥಳ.

ಹಳ್ತ್ (ನಾ.ವಿ)– ಹಳೆಯದಾದ, very old, worn out.

ಹಳಬ (ನಾ.ವಿ)– ಹಿರಿಯ ವ್ಯಕ್ತಿ, an elderly man.

ಹಳ್ಳ (ನಾ)– ಹೊಳೆ, river.

ಹಳ್ಳಿ (ನಾ)– ಗ್ರಾಮೀಣ ಪ್ರದೇಶ, rural place.

ಹಳ್ಸುದು (ಕ್ರಿ)– ಹಳಸಿ ಹೋಗು, ಆಹಾರ ಕೆಟ್ಟು ಹೋಗು, food getting spoiled.

ಹಳು (ನಾ)– ಕಳೆಗಿಡ, weed.

ಹಾಂಕಾರ (ನಾ.ವಿ)– ದರ್ಪ, ಅಹಂಕಾರ, ಜಂಭ, ಹಮ್ಮು, pride, arrogance, impolite.

ಹಳ್ಳೆತಿರ್ಗುದು – ಏನೊಂದು ಉದ್ದೇಶವಿಲ್ಲದೆ ತಿರುಗಾಡುವುದು, wandering with out any purpose.

ಹಾಂಗೂ ಹೀಂಗೂ (ಕ್ರಿ.ವಿ)– ಹಾಗೂ ಹೀಗೂ, ಒಟ್ಟಾರೆಯಾಗಿ, this way or that way.

ಹಾಂಗೆ (ಕ್ರಿ.ವಿ)– ಹಾಗೆ, in that way, like that. ಹಾಂಗ್ಯಾಕು– ಹಾಗಾಗಬೇಕು, cursing, ಹಾಂಗುಟ್ಟು – ಹಾಗೆ ಇದೆ, ಹಾಂಗೇಂತ – ಹಾಗೆಂದು.

ಹಾಂಟ್ಸ್ (ಕ್ರಿ)– ತಾಗಿಸು, ಡಿಕ್ಕಿಹೊಡೆ, hit.

ಹಾಂತೆ (ನಾ)– ಜಿರಳೆ, cockroach.

ಹಾಕ್ (ಕ್ರಿ)– ಹಾಕು, ನೀಡು, ನೀರ್‌ಹಾಕ್, ಗಾಳಿ ಹಾಕ್, ಗಾಳಹಾಕ್, ಊಟಹಾಕ್, put, give, provide.

ಹಾಕಂಬೊದು (ಕ್ರಿ)– ಹಾಕಿಕೊಳ್ಳುವುದು, ಧರಿಸು, ಅಂಗಿ ಹಾಕಂಬೊದು, wearing. ಹಾಡ್ (ಕ್ರಿ)– ಹಾಡು, sing,

ಹಾಡ್ (ನಾ.ವಿ)– ಹಗಲು ಎಂಬ ಪದಕ್ಕೆ ನಾಮ ವಿಶೇಷಣ. ಉದಾ: ಹಾಡ್ ಹಗಲೇ ಅವನ ಕೊಲೆ ಮಾಡ್ದೊ.

ಹಾರ್ತ್ (ಕ್ರಿ)– ಹಾರಿಹೋಯಿತು, flew away, jumped, leaped, ಉದಾ: ಹಕ್ಕಿ ಹಾರ್ತ್, ಅಂವ ಕುದ್ದಲ್ಲಿಂದಲೇ ಹಾರ್ತ್.

ಹಾನಿ (ನಾ)– ಅಳತೆಯ ಮಾನ, ಎರಡು ಸೇರು– ಒಂದು ಹಾನಿ, ಮಾಂಸದ ಅಳತೆ, measering the meat in olden days.

ಹಾನಿ (ಕ್ರಿ)– ತೊಂದರೆ, ನಷ್ಟ, damage, loss, difficulty. ಉದಾ: ಮೊನ್ನೆನ ಮಳೆಲಿ ಭಾರಿ ಹಾನಿ ಆತ್.

ಹಾಮಸೆ (ನಾ) – ಪಾಚಿ, ಪಾವಜಿ, ಹಾವಸೆ, moss.

ಹಾರ್ (ಕ್ರಿ)– ಹಾರು, ನೆಗೆಯು, jump, leap.

ಹಾರಂವ (ನಾ)– ಬ್ರಾಹ್ಮಣ, ಪುರೋಹಿತ, brahmin.

ಹಾರಂವ (ನಾ) – ಹಾರುವವನು, person who jumps.

ಹಾರ್ಯಾಡ್ (ಕ್ರಿ.ವಿ)– ಸಿಡಿಮಿಡಿಗೊಳ್ಳು, ಸಿಟ್ಟಿನಿಂದುಂಟಾಗುವ ಉದ್ರೇಕಕಾರಿ ಸ್ಥಿತಿ, ಅತಿರೇಕದ ವರ್ತನೆ ಉ: ಅಂವ ಸಿಟ್ಟ್‌ಲಿ ಹಾರಾಡ್ದೆ.

ಹಾರಿಕೆ ಮಾತ್ (ನಾ)– ಸ್ಪಷ್ಟವಲ್ಲದ ಮಾತು, ತಪ್ಪಿಸಿಕೊಳ್ಳುವಂತಹ ಮಾತು, not specific, in a lighter vein, escaping way.

ಹಾಲೆಮರ (ನಾ)– ಪಾಲೆಮರ, ದೀಪಾವಳಿಯಲ್ಲಿ ಬಲೀಂದ್ರ ಹಾಕಲು ಬಳಸುವ ಮರ, ಇದರ ಕೆತ್ತೆಯನ್ನು ಔಷಧಿಯಾಗಿ ಬಳಸುತ್ತಾರೆ.

ಹಾವುಮೀನ್ (ನಾ)– ಹೊಳೆಗಳಲ್ಲಿ ಕಂಡು ಬರುವ ಹಾವಿನಂತೆ ಕಾಣುವ ಸುಮಾರು ಒಂದರಿಂದ ಎರಡು ಅಡಿ ಉದ್ದದ ಕಪ್ಪು ಮೀನು. eel (snake like dark fish)

ಹಾವುಜಡೆ (ನಾ) – ಹಾವಿನ ಜಡೆ, hood of the snake.

ಹಾವು ಚೂಲಿ (ನಾ)– ಹಾವು ಕಳಚಿಕೊಂಡ ಸಿಪ್ಪೆ, sheff.

ಹಾವು ಬುಸುಗುಡ್ಡು (ಕ್ರಿ)– ಹಾವು ಬುಸು ಗುಟ್ಟುವುದು, hissing of the snakes.

ಹಾಳ್ ಮಾಡ್ (ಕ್ರಿ)– ಹಾಳು ಮಾಡು, ಕೆಟ್ಟದು ಮಾಡು, ತೊಂದರೆ ಮಾಡು, spoil, damage, disturb.

ಹಾಳೆ (ನಾ)– ಅಡಿಕೆ ಸೋಗೆಯ ಜೊತೆ ಗಿರುವ ಹಿಂಗಾರವನ್ನು ಮುಚ್ಚುವ ಭಾಗ, arecanut leaf used to make leaf cup (plate)

ಹಾಳೆ ತೊಟ್ಟ್ (ನಾ)– ಸೆಗಣಿ ಕೆರೆದು ಸಾರಿಸಲು ಬಳಸುವ ಆಯತಾಕಾರದ ಹಾಳೆಯ ತುಂಡು, a rectangular shaped arecanut leaf used to smear cowdung to the floor.

ಹಿಂಟೆ (ನಾ.ವಿ)– ಮಣ್ಣಿನ ಚಿಕ್ಕ ಬೊಡ್ಡೆ, ಮಣ್ಣಿನ ಹಿಂಟೆ,
irregular shaped balls of mud.

ಹಿಂಡ್ (ನಾ)– ಹಿಂಡ್, herd,
ಹಕ್ಕಿಗಳ ಹಿಂಡ್ – flock of birds.
ದನಗಳ ಹಿಂಡ್ – herd of cows.

ಹಿಂಡ್ಲ್ (ನಾ)– ಸಮೂಹ, ಗುಂಪು.
ಉದಾ: ಬೆದ್‌ರ್ ಹಿಂಡ್ಲ್ – thicket of bamboos.

ಹಿಂಡುದು (ಕ್ರಿ)– ಒತ್ತಿ, ರಸ ತೆಗೆಯುವುದು, squeeze, take out the juice by pressing.
ಉದಾ: ನಿಂಬುಳಿ ಹಿಂಡುದು.

ಹಿಂಬೊತು (ನಾ)– ಸಂಜೆ, evening.

ಹಿಕ್‌ಮತ್ (ನಾ)– ಗುಟ್ಟಾದ ಉಪಾಯ, secret idea,
ದುರಾಲೋಚನೆ,
ulterior motive.

ಹಿಚ್‌ಕ್ (ಕ್ರಿ)– ಹಿಚುಕುವುದು, ಕೈಯಿಂದ ಒತ್ತಿ ಅಪ್ಪಚ್ಚಿ ಮಾಡುವುದು,
press, squeeze.
ನೋಡಿ: ಚಿಂಬುರ್ಲ್.

ಹಿಟ್ಟ್ (ನಾ)– ಅಕ್ಕಿಯನ್ನು ಕಡೆದು, ಬಂದ ಮಾಡಿ, ಕಾವಲಿ ಅಥವಾ ಹಬೆಯಲ್ಲಿ ಬೇಯಿಸಿ ಮಾಡಿದ ತಿಂಡಿ,
ಉದಾ: ದೋಸೆ, ರೊಟ್ಟಿ, ಇಡ್ಲಿ ಇತ್ಯಾದಿ.
a dish made from rice flour after baking or roasting or steaming.

ಹಿಟ್ಟ್ ಹುಳಿಬರ್ಸುದು (ಕ್ರಿ)– ಅಕ್ಕಿಯ ಬಂದಕ್ಕೆ ಉದ್ದನ್ನು ಕಡೆದು ಹಾಕಿ ಬುರುಗಿಸುವುದು, leaven.

ಹಿಡ್ಕ /ಹಿಡಿ (ಕ್ರಿ)– ಹಿಡಿದುಕೊ,
catch, hold on.
ಹಿಡ್ದೊಳೊ – ಹಿಡಿದಿದ್ದೇವೆ,
already caught,
ಉದಾ: ಕಳ್ಳನ ಹಿಡ್ದೊಳೊ.

ಹಿತ್ತಾಳೆ ಕೆಬಿ (ನಾ.ವಿ)– ಅವರಿವರ ಚಾಡಿ ಮಾತನ್ನು ಕೇಳಿ ಅದನ್ನು ನಂಬುವವ, one who believes back- biting comments.

ಹಿಯಾಳ್ಸ್ (ಕ್ರಿ)– ನಿಂದಿಸು, ದೂಷಿಸು, ಅವಮಾನಿಸು, ಕಡೆಗಣಿಸು,
abuse, speak ill of, insult.

ಹಿತ್ಲ್ (ನಾ)– ಹಿತ್ತಿಲು, ಮನೆಯ ಸುತ್ತು ಮುತ್ತಲಿನ ಜಾಗ,
place round about the house.

ಹೀಂಗೆ (ಕ್ರಿ.ವಿ)– ಹೀಗೆ, in this way, ಹೀಂಗಾದರೆ – ಹೀಗಾದರೆ, ಹೀಂಗ್ಯಾಕೆಬೊತ್ತು– ಹೀಗಾಗಬಾರದು. ನೋಡಿ: ಹಾಂಗೂ ಹೀಂಗೂ.

ಹೀಂಪು (ಕ್ರಿ)– ಚೀಪುವುದು, ಬಾಯಿ ಒಳಗೆ ಹಾಕಿ ಚಪ್ಪರಿಸುತ್ತಾ ನೆಕ್ಕು, lick in tongue enjoying its taste.

ಹೀರ್ (ಕ್ರಿ)– ನೇರವಾಗಿ ಕುಡಿ, ತುಟಿ ನಾಲಗೆ ಗಳ ಸಹಾಯವಿಲ್ಲದೆ ಕುಡಿ, suck.

ಹೀರೆಕಾಯಿ (ನಾ)– ಹೀರೆಕಾಯಿ ತರಕಾರಿ, pot herb.

ಹುಕ್ಕತ್ (ಕ್ರಿ) – ಒಳಗೆ ಪ್ರವೇಶಿಸಿತು, entered.

ಹುಗಿದು (ಕ್ರಿ)– ನೆಲದಲ್ಲಿ ಹೂಳುವುದು, bury.

ಹುಗು (ಕ್ರಿ)– ನುಗ್ಗು, enter.

ಹುಗ್ಗೆ (ನಾ)– ಅನ್ನ, rice.

ಹುಚ್ಚು (ನಾ.ವಿ)– ಮಾನಸಿಕ ಅಸ್ಥಿರತೆ, mental instability ನೋಡಿ: ಮೊರ್ಲ್.

ಹುಟ್ಟುಗುಣ (ನಾ.ವಿ)– ಸಹಜಗುಣ, innate quality, inherited quality.

ಹುಟ್ಟುವಳಿ (ನಾ)– ಉತ್ಪತ್ತಿ, income from the property.

ಹುಡ್ಕು (ಕ್ರಿ)– ಹುಡುಕಾಡು, search.

ಹುಣ್ಸುಳಿ (ನಾ) – ಹುಣಸೇ ಹುಳಿ, tamarind.

ಹುತ್ತ (ನಾ)– ಇರುವೆಗೂಡು, ant hill. ಇವುಗಳಲ್ಲಿ ಹಾವುಗಳು ಕೂಡಾ ವಾಸ ಮಾಡುತ್ತವೆ.

ಹುನ್ನರು (ನಾ)– ಹುನ್ನಾರ, ಉಪಾಯ, plan, idea.

ಹುರ್ಪು (ಕ್ರಿ.ವಿ)– ಹುರುಪು, ಉತ್ಸಾಹ, ಕ್ರಿಯಾಶೀಲತೆ, interest, zeal, enthusiasm.

ಹುಬ್ಬು (ನಾ)– ಕಣ್ಣಿನ ಮೇಲ್ಭಾಗ, eyebrow.

ಹುರಿಯಕ್ಕಿ (ನಾ)– ಮಂಡಕ್ಕಿ, puffed rice.

ಹುಲುಸು (ನಾ.ವಿ)– ಚೆನ್ನಾಗಿ, ಸಮೃದ್ಧಿ ಯಾಗಿ, ಫಲವತ್ತಾಗಿ, beautifully grown, good crop.

ಹುಲ್ಲುಪೊಡ್ಪು (ನಾ)– ಹುಲ್ಲುಗಾವಲು, pasture, meadow.

ಹುಶಾರ್ (ನಾ.ವಿ)– ಚುರುಕು, ಬುದ್ಧಿವಂತ, ಕೌಶಲ್ಯಪೂರ್ಣ, active, intelligent, skilled. ಉದಾ: ಅಂವ ಭಾರಿ ಹುಶಾರ್‌ನ ಹೈದ. ಆರೋಗ್ಯವಂತ, healthy. ಉದಾ: ಹುಶಾರ್ ಒಳ ಅಲ್ಲಾ? – ಆರೋಗ್ಯವಾಗಿದ್ದೀಯಾ?, ಮನೆಲಿ ಅಜ್ಜಂಗೆ ಹುಶಾರಿಲ್ಲೆ– ಆರೋಗ್ಯವಾಗಿಲ್ಲ, ಜಾಗರೂಕತೆ– careful. ಉದಾ: ಪೇಟೆಲಿ ನಡ್ಕಂಡ್ ಹೋಕನ ಹುಶಾರಾಗಿರೊಕು.

ಹುಳಮೇಯ್ದು (ನಾ)– ಹುಳುಕಡ್ಡಿ, ಗಜಕರ್ಣ, ಚರ್ಮರೋಗ, ringworm.

ಹುಳ್ಕ (ನಾ.ವಿ)– ಅಸೂಯೆ, ಮತ್ಸರ ಹೊಂದಿದವ, person with jealousy nature. (ಪು)

ಹುಳ್ಕಿ (ನಾ.ವಿ), (ಸ್ತ್ರೀ)– ಅಸೂಯೆ ಮತ್ಸರ ಹೊಂದಿದವಳು, jealousy woman.

ಹುಳ್ಳಂಗೆ (ನಾ.ವಿ)– ರುಚಿಕರವಾದ, very tasty, delicious.

ಹುಳಿದೋಸೆ (ನಾ)– ಬಂದವನ್ನು ಹುಳಿ ಬರಿಸಿ, (ಬುರುಗಿಸಿ) ತಯಾರಿಸಿದ ದೋಸೆ,
dosa prepared sfter leavening the wet rice flour.

ಹುಳಿರಗಳೆ (ಕ್ರಿ)– ಸದಾ ಕಿರಿಕಿರಿ, always disturbing, nuisance.

ಹುಳುಕು (ನಾ.ವಿ)– ನಂಜು, ಮತ್ಸರ, ಸಣ್ಣ ಬುದ್ಧಿ,
jealous, narrow mindedness.

ಹುಳುಕಡ್ಡಿ (ನಾ)– ಗಜಕರ್ಣ, ಚರ್ಮರೋಗ, ringworm.

ಹುಳ್ಕ್ ಹಲ್ಲ್ (ನಾ.ವಿ)– ಹಾಳಾದ ಹಲ್ಲು, damaged teeth.

ಹೂಂಜ (ನಾ)– ಹುಂಜ, cock.

ಹೂಂಜ ಕೂಂಗುದು (ಕ್ರಿ) –
ಹುಂಜ ಕೂಗುವುದು,
cock crows.

ಹೂಂದೈ (ನಾ)– ಹೂವಿನ ಗಿಡ, flower plant.

ಹೂಂಸು (ನಾ)– ಹೂಸು, ಅಪಾನುವಾಯು, fart, flatus.

ಹೂಜಿ (ನಾ)– ನೀರು ತುಂಬಿಸಿಡುವ ಪಾತ್ರೆ, jug.

ಹೂಟೆ (ನಾ) – ಉಳುಮೆ, plough, ಹೂಡುವುದು.

ಹೂಡು (ಕ್ರಿ) – ಉಳುಮೆ ಮಾಡು, ploughing.

ಹೂತೆಗ್‌ಸಿ ನೋಡ್ದು (ಕ್ರಿ)– ವಿವಾಹ ಸಂಬಂಧ ಕೂಡಿ ಬರುತ್ತದೆಯೇ ಎಂಬುದನ್ನು ದೇವರ ಮುಂದೆ ಹೂ ತೆಗೆಸಿ ನೋಡುವುದು.

ಹೂ ಬಿಸಿಲ್ (ನಾ) – ಬೆಳಗ್ಗಿನ ಬಿಸಿಲು, ಎಳೆಬಿಸಿಲು, morning sunshine.

ಹೂಳು (ನಾ)– ದಫನ ಮಾಡು, bury.

ಹೆಂಗ್‌ಸ್ (ನಾ)– ಹೆಣ್ಣು, ಸ್ತ್ರೀ, woman.

ಹೆಂಡ (ನಾ)– ಸರಾಯಿ, ಮದ್ಯ, alchohol.

ಹೆರ್ಕ್ (ಕ್ರಿ)– ಹೆಕ್ಕು, pickup.
ಹೆರ್ಕಿಡ್ – ಹೆಕ್ಕಿ ಬಿಸಾಡು.

ಹೆಗ್‌ಲ್ (ನಾ)– ಭುಜ, shoulder.

ಹೆಗ್ಗಣ (ನಾ)– ದೊಡ್ಡ ಗಾತ್ರದ ಇಲಿ, bandicoot.

ಹೆರ್ಗಲ್ (ನಾ) – ಬೀಳುಮೀನು (ದೇವರ ಮೀನು)
masheer fish.

ಹೆಟ್ಟ್ (ಕ್ರಿ)– ಚುಚ್ಚು, ತಿವಿ, sting, insert.
ಉದಾ: ಕಾಲಿಗೆ ಮುಳ್ಳು ಹೆಟ್ಟಿತ್.

ಹೆಡ್ಡ (ನಾ.ವಿ)– ಮುಗ್ದ, ಏನೂ ತಿಳಿಯದವ ಏನೂ ಅರಿಯದವ, ಪೆದ್ದ, innocent, not matured, not active,
ಹೆಡ್ಡಿ (ಸ್ತ್ರೀ.ಲಿ).

ಹೆಡೆಗೆ (ನಾ) – ಸಾಮಾನು ಹೊರಲು ಬಳಸುವ ಬಿದಿರಿನ ಸಲಾಕೆ (ಬೆತ್ತ), ಕಾಡು ಬಳ್ಳಿಯ ಸಲಾಕೆಯಿಂದ ತಯಾರಿಸಿದ ಅಗಲವಾದ ಬುಟ್ಟಿ
a wide basket made of bamboo/ cane/creepers to carry things.

ಹೆಣ್ಣ್ (ನಾ)– ಹೆಂಡತಿ wife.

ಹೆಣ (ನಾ)– ಶವ, dead body.

ಹೆದ್ರ್ಸ್ (ಕ್ರಿ)– ಹೆದರಿಸು, ಬೆದರಿಸು, frighten.

ಹೆಪ್ಪುಗಟ್ಟ್ (ಕ್ರಿ)– ಹೆಪ್ಪುಗಟ್ಟುವುದು, 0^0 ಉಷ್ಣತೆಯಲ್ಲಿ ನೀರು ಗಟ್ಟಿಯಾಗು, freeze.

ಹೆಬಗ (ನಾ.ವಿ)– ಹೆಡ್ಡ, ಪೆದ್ದ, dull, inactive.

ಹೆಬ್ಬಟೆ (ನಾ)– ಪ್ರಾಣಿಗಳ ಜಠರ.

ಹೆಬ್ಬಟೆ ಬೆರಳ್ (ನಾ)– ಹೆಬ್ಬೆರಳು, thumb.

ಹೆಮರ್ಣೆ (ನಾ) – ತೆಂಗಿನಕಾಯಿ ತುರಿಯುವ ಮಣೆ, scrapper, crater.

ಹೆಮರ್ಣೆ ಸೊಪ್ಪು (ನಾ)– ಅಜೀರ್ಣಕ್ಕೆ ಬಳಸುವ ಔಷಧೀಯ ಸಸ್ಯ, a medicated plant used for indigestion.

ಹೆರಿ (ಕ್ರಿ)– ತೆಂಗಿನಕಾಯಿ ತುರಿಯುವುದು, ಕಾಯಿ ಹೆರಿ, ಸೊಪ್ಪು ಕೊಯ್ಯುವುದು– ಸೊಪ್ಪು ಹೆರಿದು, ಹುಲ್ಲು ಹೆರಿದು.

ಹೆರ್ (ಕ್ರಿ) – ಹೆರಿಗೆ, ಪ್ರಸವಿಸು deliver the child.

ಹೆರುಹಾಕು (ಕ್ರಿ)– ಹೆಪ್ಪು ಹಾಕು, mixing little quantity of curd to the milk in order to prepare curds.

ಹೆಸ್ರ ಇಸುದು (ಕ್ರಿ) – ನಾಮಕರಣ ಸಮಾರಂಭ, naming ceremony.

ಹೆಸ್ರ ಹೋದಂವ (ನಾ.ವಿ)– ಪ್ರಸಿದ್ಧ, ಜನಪ್ರಿಯ, very famous, popular.

ಹೇಂಗಾರ್ (ಕ್ರಿ.ವಿ)– ಹೇಗಾದರೂ, at any cost.

ಹೇಂಗೆ?(ಪ್ರ)– ಹೇಗೆ? How?, ಹೇಂಗೊಳ? – ಹೇಗಿದ್ದಿಯ? How are you?

ಹೇಂಟೆ (ನಾ)– ಹೇಟೆ, ಹೆಣ್ಣ್‌ಕೋಳಿ, hen.

ಹೇತ್ (ನಾ)– ಕಾರಣ, ನೆಪ, false reason, ಕ್ಷುಲ್ಲಕ ಕಾರಣ, ಕುಂಟುನೆಪ

ಹೇತ್ (ಕ್ರಿ)– ಮಲ ವಿಸರ್ಜನೆ ಮಾಡಿ, after passing the motion.

ಹೇನ್ (ನಾ)– ತಲೆಕೂದಲಿನಲ್ಲಿರುವ ಹೇನು, louse.

ಹೇಲ್ (ನಾ)– ಮಲ, human excreta,

ಹೇಲ್ (ಕ್ರಿ)– ಮಲ ವಿಸರ್ಜನೆ ಮಾಡು, pass the motion.

ಹೇಸಿಗೆ/ಕೆ (ನಾ)– ಗಲೀಜು, ಕೊಳಕು, dirty, unpleasant.

ಹೇಳ್ದು (ಕ್ರಿ)– ಹೇಳುವುದು, telling, say, ಹೇಳ್ದುಂತೇಳ್ರೆ– ಹೇಳುವುದೇನೆಂದರೆ, ಹೇಳ್ತ್ – ಹೇಳಿದ, he told, ಹೇಳಿತು– it told.

ಹೈದ (ನಾ)– ಹುಡುಗ, boy, lad.

ಹೈಲ್ (ನಾ)– ಕಟಾವಿನ ಸಂದರ್ಭದಲ್ಲಿ, ಭತ್ತ ಅಥವಾ ಭತ್ತದ ತೆನೆಯಿಂದ ತುಂಡಾಗಿ ಹೊರಬರುವ ಅತೀ ಚಿಕ್ಕ ತುಂಡು,
a tiny piece of straw, stubble.

ಹೊಂಚುಹಾಕುದು (ಕ್ರಿ)– ದಾಳಿ ನಡೆಸಲು ಕಾದು ನಿಲ್ಲುವುದು,
waiting for attack, prowl, ambush.

ಹೊಕ್ಕುಳು (ನಾ)– ನಾಭಿ,
navel.

ಹೊಕ್ಕುಳು ಬಳ್ಳಿ (ನಾ) – ನಾಭಿಬಳ್ಳಿ,
umblical cord.

ಹೊಕ್ಕುಳ್ ಬಳ್ಳಿ ಹುಗ್ದದ್ (ಕ್ರಿ)– ಒಂದು ಸ್ಥಳದಲ್ಲಿ ಖಾಯಂ ಆಗಿ ಠಿಕಾಣಿ ಹೂಡಿದರೆ ಈ ರೀತಿ ಹೇಳುತ್ತಾರೆ.
Usage for a guest who stays in a house for a long time.

ಹೊಗ್ಳ್ (ಕ್ರಿ)– ಹೊಗಳು, ಮುಖ ಸ್ತುತಿ ಮಾಡು, ಪ್ರಶಂಸೆ ಮಾಡು,
praise, flatter.

ಹೊಗ್ಲುಲಿ (ನಾ.ವಿ)– ಸದಾ ತಿರುಗಾಡಿ ಕೊಂಡಿರುವ ಪ್ರಾಣಿ,
wandering animal,
ಈ ಗುಣ ಹೊಂದಿರುವ ಮನುಷ್ಯರಿಗೂ ಬಯ್ಗುಳ ಪದವಾಗಿ ಬಳಸುತ್ತಾರೆ.

ಹೊಗೆಮೊಸಿ (ನಾ)– ಹೊಗೆಯಿಂದಾಗಿ ಅಡುಗೆ ಮನೆ/ ಬೆಸಗೆಯ ಅಡಿಯಲ್ಲಿ ಶೇಖರಣೆಯಾಗುವ ಕರಿ.
soot.

ಹೊಟ್ಟ (ನಾ)– ದೊಡ್ಡ ಕೊಕ್ಕಿನ ಮಲೆನಾಡ ಕಾಡುಗಳಲ್ಲಿ ಕಂಡುಬರುವ ಹಕ್ಕಿ,
a bird with large beak found in the malnad woods, Hornbill.

ಹೊಟ್ಟು (ನಾ.ವಿ)– ಜಳ್ಳು, ಜಡ್ಡು, ಸಿಪ್ಪೆ ಒಳಗೆ ಏನೂ ಇಲ್ಲದ ಹೊಟ್ಟುಕಾಯಿ,
only husk, empty inside.

ಹೊಟ್ಟೆ ಉರಿ (ನಾ)– ಮತ್ಸರ, jealousy, ಅಸೂಯೆ.

ಹೊಟ್ಟೆ ಉಬ್ಬರ್ಸುದು (ಕ್ರಿ)– ಅಜೀರ್ಣ, ವಾಯು ಮುಂತಾದ ಕಾರಣಗಳಿಂದಾಗಿ ಹೊಟ್ಟೆ ಉಬ್ಬರಿಸಿ ಬರುವುದು,
flatulence, windiness.

ಹೊಟ್ಟೆ ಬರ್ಸುದು (ಕ್ರಿ)– ಗರ್ಭಿಣಿಯನ್ನಾಗಿ ಮಾಡು, ಗರ್ಭ ಧರಿಸುವಂತೆ ಮಾಡು,
make a woman pregnant.

ಹೊಟ್ಟೆಪಾಡ್ (ನಾ)– ಬದುಕಿಗಾಗಿ, ಮೂರು ಹೊತ್ತು ಊಟಕ್ಕಾಗಿ,
for the livelihood, earning for food.

ಹೊಟ್ಟೆ ಬಾಕ (ನಾ.ವಿ) – ತಿಂಡಿಪೋತ, ಮಾಮೂಲಿಗಿಂತ ಹೆಚ್ಚು ತಿನ್ನುವವ,
craze for eating.

ಹೊಟ್ಟೆಹಿಸ್ (ಕ್ರಿ)– ಹಸಿವಾಗು, get hungry.

ಹೊಟ್ಟೆ ಹೊರಿ (ಕ್ರಿ)– ಜೀವನ ನಿರ್ವಹಣೆ, ಅತೀ ಕಡಿಮೆ ಆದಾಯದಲ್ಲಿ ಬದುಕುವುದು,
living with a meager income.

ಹೊಡಿ (ಕ್ರಿ)– ಹೊಡಿ, ಬಡಿ,
beat, thrash.

ಹೊರ್ಡ್ (ಕ್ರಿ)– ಹೊರಟು ನಿಲ್ಲು, be ready, to go out, ಹೊರ ಹೋಗಲು ತಯಾರಾಗು.

ಹೊಡೆ (ನಾ)– ಕಟಾವಿಗೆ ಸಿದ್ಧವಾದ ತೆನೆ, ಬೆಳೆದು ನಿಂತ ತೆನೆ. corn ready for harvest.

ಹೊಣ್ಕ್ (ಕ್ರಿ)– ಉರುಳು, roll, ಉ: ಅಂವ ಓಡ್‌ಕನ ಹೊಣ್ಕಿ ಬೀತ್ – ಆತ ಓಡುವಾಗ ಉರುಳಿ ಬಿದ್ದ.

ಹೊತ್ತಿಳಿದು (ಕ್ರಿ)– ಸಂಜೆಯಾಗು, ಸೂರ್ಯ ಮುಳುಗುತ್ತಾ ಬರು, evening, sunsetting time.

ಹೊತ್ತು (ನಾ)– ದಿನದ ನಿರ್ದಿಷ್ಟ ಸಮಯ, ಅವಧಿ, ಬೆಳಗ್ಗಿನ ಹೊತ್ತು, ಸಂಜೆಯ ಹೊತ್ತು, period of time in a day.

ಹೊತ್ತು ಕಳಿ (ಕ್ರಿ)– ಕಾಲಹರಣ ಮಾಡು, wasting the time, while away the time.

ಹೊತ್ತು ಮೀರ್ತ್ (ಕ್ರಿ)– ತಡ ಆಯಿತು, already late, delay.

ಹೊದ್ರಿ (ನಾ)– ಹೊದಲು, rice popcorn, ಮಂಡಕ್ಕಿಯಂತಹ ಹುರಿದ ಅಕ್ಕಿ.

ಹೊರು (ಕ್ರಿ)– ಹೊತ್ತುಕೊಂಡು ಹೋಗು, carry either on head or shoulder.

ಹೊರ್ಸು (ಕ್ರಿ)– ಹೊರಿಸು, placing the load on others head.

ಹೊಲಿ (ಕ್ರಿ)– ಹೊಲಿಯುವುದು, stitch, ಬಟ್ಟೆ ಹೊಲಿಯುವುದು.

ಹೊಲಿ (ನಾ)– ಭತ್ತವನ್ನು ಧಾನ್ಯ ರೂಪದ ಬಡ್ಡಿಗೆ ಸಾಲ ನೀಡುವುದು, ಭತ್ತ ಹೊಲಿಗೆ ಕೊಡ್ತು.

ಹೊಯಿಲ್ (ನಾ) – ವೇಗವಾಗಿ ನೀರು ಹರಿಯುವುದು, ನೀರಿನ ಪ್ರವಾಹ, current of water.

ಹೊಯ್ಯು (ಕ್ರಿ)– ಬಸಿಯು, ಚೆಲ್ಲು, ನೀರು ಹಾಕು, pour.

ಹೊರ್‌ಕಡೆ (ಕ್ರಿ) – ಮಲವಿಸರ್ಜನೆ, ಬಹಿರ್ದೆಶೆ, go for a second call.

ಹೊರಗಾಗು (ಕ್ರಿ)– ಮುಟ್ಟಾಗು, meet the menstral period, ಋತುಸ್ರಾವ.

ಹೊರಿದು (ಕ್ರಿ) – ಹುರಿಯುವುದು, roasting.

ಹೊಲ್ಸು (ನಾ)– ಕೊಳೆ, ಕೆಸರು, ಹೇಸಿಕೆ, dirt, filth, muddy.

ಹೊಲ್ಸು (ಕ್ರಿ)– ಹೊಲಿಸಿಕೊಳ್ಳು, get it stitched.

ಹೊಲ್ಪೆಮರ (ನಾ)– ಮರ್ವದ ಮರ, a hard wood found in the malnad jungle.

ಹೊಶೆಪು (ನಾ)– ಹೊಗೆಸೊಪ್ಪು, tobacco.

ಹೊಸ್ತ್ (ನಾ)– ಹೊಸ ಅಕ್ಕಿಯ ಅಡುಗೆಯ ಆಚರಣೆ, a celebration on the occasion of cooking the rice of the fresh crop.

ಹೊಸ್ತಿಲ್ (ನಾ)– ಮನೆಯ ಎದುರಿನ ಬಾಗಿಲಿನ ಕೆಳಚೌಕಟ್ಟು, thresh hold.

ಹೊಳ್ಳರ ಪಳ್ಳರ (ಕ್ರಿ.ವಿ)– ನಿಶ್ಯಕ್ತಿಯಿಂದ ವಾಲಿಕೊಂಡು ಹೋಗುವುದು,
walk oscilating.

ಹೋಳ್ಪು (ಕ್ರಿ)– ಹೊಳೆಯು, shine.

ಹೊಳ್ಳು (ನಾ)– ಗುದದ್ವಾರ, anus.

ಹೊಳೆಕರೆ (ನಾ)– ನದಿಯು ಅಥವಾ ಹೊಳೆಯ ದಡ,
bank of the river.

ಹೊಳ್ಕೆ (ನಾ)– ಉಡ ಜಾತಿಗೆ ಸೇರಿದ ಹಲ್ಲಿಯಂತೆ ಕಾಣುವ ಉಭಯವಾಸಿ ಪ್ರಾಣಿ,
ghorpad, hill iguana.

ಹೋಕು (ನಾ)– ಚಿಕ್ಕ ಗೆಡ್ಡೆ,
small bulbos,
ಕೆಸುವಿನ ಹೋಕು.

ಹೋಕನ (ಕ್ರಿ)– ಹೋಗುವಾಗ,
while going.

ಹೋಗಟ ಬರಟ (ಕ್ರೀ)– ಹೋಗುವ ಬರುವ ಸಂಬಂಧ, ಬಾಂಧವ್ಯ,
ಹೋಗಿ ಬರುವಿಕೆ,
visiting each others house.

ಹೋತ್ (ಕ್ರಿ)– ಹೋಗಿ ಆಯಿತು,
went, already gone.

ಹೋದಿಗಾ/ ಹೋದಿಯಾ (ಕ್ರಿ) –
ಹೋಗುತ್ತಿಯಾ,
are you going?

ಹೋನೆ/ ಹೋವೆ (ಕ್ರಿ) –
ಹೋಗುತ್ತೇನೆ– am going.
ಹೋಗುತ್ತೇವೆ – are going.

ಹೋಲ್ಸ್ (ಕ್ರಿ)– ಹೋಲಿಸು, ತುಲನೆ ಮಾಡು,
compare.

ಹೋಸು (ಕ್ರಿ)– ಹೊದೆಸು, ಹಾಸು, ಮುಚ್ಚು,
ಉದಾ: ಒಲ್ಲಿ ಹೋಸುದು; ಮಾಡಿಗೆ ಹುಲ್ಲು ಹೋಸುದು,
put over, cover.

ಹೋಳು (ನಾ)– ಪದಾರ್ಥಕ್ಕಾಗಿ ತುಂಡು ಮಾಡಿದ ತರಕಾರಿ ತುಂಡುಗಳು, ಸೌತೆಕಾಯಿ ಹೋಳು, ವೀಳ್ಯದೆಲೆ ಜಗಿಯಲು ಬಳಸುವ ಅಡಿಕೆ ಹೋಳು,
piece with some regular size.

ಹ್ಯೊಕಂಬದು (ಕ್ರಿ)– ಸುರಿದುಕೊಳ್ಳುವುದು,
pouring water.

ಹೌದಯಾ (ಕ್ರಿ)– ಹೆಂಡತಿಯನ್ನು ಕರೆಯಲು ಬಳಸುವ ಪದ,
word used by the husbands to call their wives.

ಕ್ರ.ಸಂ.	ವಿಭಕ್ತಿ	ಪ್ರತ್ಯಯ		ಪ್ರಯೋಗ	
		ಕನ್ನಡ	ಅರೆಭಾಷೆ	ಕನ್ನಡ	ಅರೆಭಾಷೆ
1.	ಪ್ರಥಮಾ ವಿಭಕ್ತಿ	ಉ	ಇಲ್ಲ	ರಾಮನು ಬಂದನು	ರಾಮ ಬಾತ್ / ಬಂದೊ
2.	ದ್ವಿತೀಯಾ ವಿಭಕ್ತಿ	ಅನ್ನು	ಅ/ನ	ರಾಮನನ್ನು ಹಿಡಿದರು	ರಾಮನ ಹೆಡ್ದೊ
3.	ತೃತೀಯಾ ವಿಭಕ್ತಿ	ಇಂದ	ಂದ	ರಾಮನಿಂದ ಪಡೆದರು	ರಾಮಂದ ಪಡ್ದೊ
4.	ಚತುರ್ಥಿ ವಿಭಕ್ತಿ	ಗೆ/ನಿಗೆ	ಂಗೆ	ರಾಮನಿಗೆ ಕೊಟ್ಟರು	ರಾಮಂಗೆ ಕೊಟ್ಟೊ
5.	ಪಂಚಮೀ ವಿಭಕ್ತಿ	ದೆಸೆಯಿಂದ	ಂದಾಗಿ	ರಾಮನ ದೆಸೆಯಿಂದ	ರಾಮಂದಾಗಿ/ರಾಮಂಗಾಗಿ
6.	ಷಷ್ಠೀ ವಿಭಕ್ತಿ	ಅ	ಅ	ರಾಮನ ತಮ್ಮ	ರಾಮನ ತಮ್ಮ
7.	ಸಪ್ತಮೀ ವಿಭಕ್ತಿ	ಅಲ್ಲಿ	ಹಕ್ಕಲೆ	ರಾಮನಲ್ಲಿದ್ದ ಬಿಲ್ಲು	ರಾಮನಕ್ಕಲೆ ಇದ್ದ ಬಿಲ್ಲ್
8.	ಸಂಭೋಧನಾ ವಿಭಕ್ತಿ	ಏ	ಏ	ರಾಮನೇ ಕಾರಣ	ರಾಮನೇ ಕಾರಣ

ಹೋಗು ಎಂಬ ಕ್ರಿಯಾಪದದ ರೂಪಗಳು					
ಸಕಾರಾತ್ಮಕ		ನಕಾರಾತ್ಮಕ		ಪ್ರಶ್ನಾರ್ಥಕ	
ಏಕವಚನ	ಬಹುವಚನ	ಏಕವಚನ	ಬಹುವಚನ	ಏಕವಚನ	ಬಹುವಚನ
ನಾ ಹೋನೆ	ನಾವು ಹೋವ್ರೊ	ನಾ ಹೋದುಲೆ	....	ನೀ ಹೋದ್ಯನಾ?	ನೀವು ಹೋದ್ಯರಾ?
ನಾ ಹೋದೆ	ನಾವು ಹೋದೊ	ನಾ ಹೋತ್‌ಲೆ	....	ಅಂವ ಹೋದೆನಾ?	ಅವು ಹೋದವೆನಾ?
ನಾ ಹೋವೆ	ನಾವು ಹೋವ್ರೊ	ನಾ ಹೋಕಾದುಲೆ	ನಾವ್‌ಗೆ ಹೋಕಾದುಲೆ	ನೀ ಹೋವನಾ?	ನೀವು ಹೋವರಿಯಾ?
ನಾ ಹೋಗ್‌ತಾ ಒಳೆ	ನಾವು ಹೋಗ್‌ತಾ ಒಳೊ	ನಾ ಹೋಗ್‌ತಾ ಇಲ್ಲೆ	....	ನೀ ಹೋಗ್‌ತಾ ಒಳನಾ?	ನೀವು ಹೋಗ್‌ತಾ ಒಳರಿಯಾ?
ನಾ ಹೋಗ್‌ತಾ ಇದ್ದೆ	ನಾವು ಹೋಗ್‌ತಾ ಇದ್ದೊ	ನಾ ಹೋಗ್‌ತಾ ಇತ್ತ್‌ಲೆ	....	ನೀ ಹೋಗ್‌ತಾ ಇದ್ದನಾ?	ನೀವು ಹೋಗ್‌ತಾ ಇದ್ದರಿಯಾ?
ನಾ ಹೋಗ್‌ತಾ ಇರುವೆ	ನಾವು ಹೋಗ್‌ತಾ ಇರುವ್ರೊ	ನಾ ಹೋಗ್‌ತಾ ಇರಿಕಿಲೆ	....	ನೀ ಹೋಗ್‌ತಾ ಇರುವನಾ?	ನೀವು ಹೋಗ್‌ತಾ ಇರುವರಿಯಾ?
ನಾ ಹೋಗೊಳೆ	ನಾವು ಹೋಗೊಳೊ	ನಾ ಹೋತ್‌ಲೆ	....	ನೀ ಹೋಗಳ ನಾ?	ನೀವು ಹೋಗಳರಿಯಾ?
ನಂಗೆ ಹೋಗ್ಯಾವುಟು	ನಾವ್‌ಗೆ ಹೋಗ್ಯಾವುಟು	ನಂಗೆ ಹೋಕೆ ಆತ್‌ಲೆ	ನಾವ್‌ಗೆ ಹೋಕೆ ಆತ್‌ಲೆ	ನಿಂಗೆ ಹೋಗ್ಯಾವುಟಾ?	....
ನಂಗೆ ಹೋಕುಟ್ಟು	ನಾವ್‌ಗೆ ಹೋಕುಟ್ಟು	ನಂಗೆ ಹೋಕಿಲ್ಲೆ	ನಾವ್‌ಗೆ ಹೋಕೆ ಇಲ್ಲೆ	ನಿಂಗೆ ಹೋಕುಟ್ಟಾ?	....
ನಂಗೆ ಹೋಕು	ನಾವು ಹೋಕು	ನಾ ಹೋಕಿಲೆ	....	ನೀ ಹೋದುಲೆನಾ?	....
ನೀ ಹೋಗು	ನೀವು ಹೋಗಿ	ನೀ ಹೋಗ್‌ಬಡ	ನೀವು ಹೋಗ್‌ಬಡಿ	ನೀ ಹೋದಿಯನಾ?	ನೀವು ಹೋದೆರಾ?
ನೀ ಹೋಗಿದ್ದೆ	ನೀವು ಹೋಗಿದ್ದರಿ	ನೀ ಹೋಗಿತ್ತೆ	....	ನೀ ಹೋಗಿದ್ದನಾ?	ನೀವು ಹೋಗಿದ್ದರಿಯಾ?
ನೀ ಹೋಗಿದ್ದ	ನೀವು ಹೋಗಿದ್ದರಿ	ನೀ ಹೋಗಿತ್ತೆ	....	ನೀ ಹೋಗಿತ್ತೆನಾ?	....
ನೀ ಹೋಗ್‌ತಾಒಳ	ನೀವು ಹೋಗ್‌ತಾಒಳರಿ	ನೀ ಹೋಗ್‌ತಾ ಇತ್ತೆ	....	ನೀ ಹೋಗ್‌ತಾ ಒಳನಾ?	ನೀವು ಹೋಗ್‌ತಾ ಒಳರಿಯಾ?
ನೀ ಹೋಗ್‌ತಾ ಇದ್ದೆ	ನೀವು ಹೋಗ್‌ತಾ ಇದ್ದರಿ	ನೀ ಹೋಗ್‌ತಾ ಇತ್ತೆ	....	ನೀ ಹೋಗ್‌ತಾ ಇದ್ದನಾ?	ನೀವು ಹೋಗ್‌ತಾ ಇದ್ದರಿಯಾ?
ನೀ ಹೋಗ್‌ತಾ ಇರುವ	ನೀವು ಹೋಗ್‌ತಾ ಇರುವರಿ	ನೀ ಹೋಗ್‌ತಾ ಇರಿಕಿಲೆ	....	ನೀ ಹೋಗ್‌ತಾ ಇರುವನಾ?	ನೀವು ಹೋಗ್‌ತಾ ಇರುವರಿಯಾ?

ಹೋಗು ಎಂಬ ಕ್ರಿಯಾಪದದ ರೂಪಗಳು					
ಸಕಾರಾತ್ಮಕ		ನಕಾರಾತ್ಮಕ		ಪ್ರಶ್ನಾರ್ಥಕ	
ಏಕವಚನ	ಬಹುವಚನ	ಏಕವಚನ	ಬಹುವಚನ	ಏಕವಚನ	ಬಹುವಚನ
ನೀ ಹೋಗಳ	ನೀವು ಹೋಗಳರಿ	ನೀ ಹೋಬಡ	ನೀವು ಹೋಬಡಿ	ನೀ ಹೋಗಳನಾ?	ನೀವು ಹೋವರಿಯಾ?
ನೀ ಹೋಗ್ಯಾವುಟು	ನೀವು ಹೋಗ್ಯಾವುಟು	ನೀ ಹೋಗಿತ್ಲೆ	....	ನೀ ಹೋಗ್ಯಾವುಟಾ?	ನೀವು ಹೋಗ್ಯಾವುಟಾ?
ನೀ ಹೋಕುಟ್ಟು	ನೀವು ಹೋಕೊಳರಿ	ನೀ ಹೋಕಿಲ್ಲೆ/ಹೋಕಿಲೆ	....	ನಿಂಗೆ ಹೋಕುಟ್ಟಾ?	ನೀವ್ಗೆ ಹೋಕುಟ್ಟಾ?
ಅಂವ/ಅದ್	**ಅವು**	**ಅಂವ /ಅದ್**	....	**ಅಂವ**	**ಅವು**
ಅಂವ ಹೋದು	ಅವು ಹೋವೊ	ಅಂವ ಹೋಕಿಲೆ	....	ಅಂವ ಹೋದಾ?	ಅವು ಹೋವೊನಾ?
ಅಂವ ಹೋತ್	ಅವು ಹೋದೊ	ಅಂವ ಹೋತ್ಲೆ	....	ಅಂವ ಹೋತಾ?	ಅವು ಹೋವೊನಾ?
ಅಂವ ಹೋಗಿದ್ದದೆ	ಅವು ಹೋಗಿದ್ದವೆ	ಅಂವ ಹೋಗಿರ್ದುಲೆ	....	ಅಂವ ಹೋಗಿದ್ದದೆನಾ?	ಅವು ಹೋಗಿದ್ದವೆನಾ?
ಅಂವ ಹೋಗ್‌ತಾಉಟ್ಟು	ಅವು ಹೋಗ್‌ತಾಒಳೊ	ಅಂವ ಹೋಗ್‌ತಾ ಇಲ್ಲೆ	....	ಅಂವ ಹೋಗ್‌ತಾ ಉಟ್ಟಾ?	ಅವು ಹೋಗ್‌ತಾ ಒಳೊನಾ?
ಅವಂ ಹೋಗ್‌ತಾ ಇತ್ತ್	ಅವು ಹೋಗುತ್ ಇದ್ದೊ	ಅಂವ ಹೋಗ್‌ತಾ ಇಲ್ಲೆ	....	ಅವಂ ಹೋಗ್‌ತಾ ಇತ್ತಾ?	ಅವು ಹೋಗ್‌ತಾ ಇದ್ದನೋ?
ಅಂವ ಹೋಗ್‌ತಾ ಇರ್ದು	ಅವು ಹೋಗುತ್ ಇರುವೊ	ಅಂವ ಹೋಗ್‌ತಾ ಇರಿಕಿಲೆ	....	ಅಂವ ಹೋಗ್‌ತಾ ಇರುದಾ?	ಅವು ಹೋಗ್‌ತಾ ಇರುವುನೋ?
ಅಂವ ಹೋವುಟು	ಅವು ಹೋಗೋಳೊ	ಅಂವ ಹೋತ್‌ಲೆ	....	ಅವಂ ಹೋವು ಟಾ?	ಅವು ಹೋಗೊಳನಾ?
ಅಂವ ಹೋಗಿತ್ತ್	ಅವು ಹೋಗಿರುವೊ	ಅಂವ ಹೋಗಿತ್ಲೆ	....	ಅಂವ ಹೋಗಿತ್ತಾ?	ಅವು ಹೋಗಿರುವೊನೋ?
ಅಂವ ಹೋಗಿರ್ದು	ಅವು ಹೋಗಿರೊಕು	ಅಂವ ಹೋಗಿರಿಕಿಲೆ	....	ಅಂವ ಹೋಗಿರ್ದಾ?	ಅವು ಹೋಗಿರುವೊನೋ?
ಅಂವ ಹೋಕು	ಅವು ಹೋಕು	ಅಂವ ಹೋಕಿಲೆ	....	ಅಂವ ಹೋಬಡನಾ?	ಅವು ಹೋಬಡನಾ?
ಅಂವ ಹೋಗಿಯೇ ಹೋಕು	ಅವು ಹೋಗಿಯೇ ಹೋಕು	ಅಂವ ಹೋಕೇಲೆ	....	ಅಂವ ಹೋದೋ?	ಅವು ಹೋವೊನಾ?

ಕಾಲ – ಕ್ರಿಯಾಪದ 'ಬರಿ'			
	ವರ್ತಮಾನ ಕಾಲ	ಭೂತಕಾಲ	ಭವಿಷ್ಯತ್ ಕಾಲ
ಸರಳ **(Simple or Indefinite)**	ನಾ ಕಾಗದ ಬರಿವೆ ನಾವು ಕಾಗದ ಬರಿವೊ ನೀ ಕಾಗದ ಬರಿ ನೀವು ಕಾಗದ ಬರಿನಿ ಅಂವ / ಅದ್ ಕಾಗದ ಬರಿದು ಅವು ಕಾಗದ ಬರಿವೊ	ನಾ ಕಾಗದ ಬರ್ದೆ ನಾವು ಕಾಗದ ಬರ್ದೊಳೊ ನೀ ಕಾಗದ ಬರ್ದ ನೀವು ಕಾಗದ ಬರ್ದಳರಿ ಅಂವ / ಅದ್ ಕಾಗದ ಬರ್ತ್ ಅವು ಕಾಗದ ಬರ್ದೊಳೊ	ನಾ ಕಾಗದ ಬರ್ದನೆ ನಾವು ಕಾಗದ ಬರ್ದವೆ ನೀ ಕಾಗದ ಬರ್ದಿಯ ನೀವು ಕಾಗದ ಬರಿವರಿ ಅಂವ / ಅದ್ ಕಾಗದ ಬರ್ದದೆ ಅವು ಕಾಗದ ಬರ್ದವೆ
ನಿರಂತರ **(Continuous)**	ನಾ ಕಾಗದ ಬರಿತಾ ಒಳೆ ನಾವು ಕಾಗದ ಬರಿತಾ ಒಳೊ ನೀ ಕಾಗದ ಬರಿತಾ ಒಳ ನೀವು ಕಾಗದ ಬರಿತಾ ಒಳರಿ ಅಂವ / ಅದ್ ಕಾಗದ ಬರಿತಾ ಉಟ್ಟು ಅವು ಕಾಗದ ಬರಿತಾ ಒಳೊ	ನಾ ಆಗದ ಬರಿತಾ ಇದ್ದೆ ನಾವು ಕಾಗದ ಬರಿತಾ ಇದ್ದೊ ನೀ ಕಾಗದ ಬರಿತಾ ಇದ್ದೆ ನೀವು ಕಾಗದ ಬರಿತಾ ಇದ್ದರಿ ಅಂವ / ಅದ್ ಕಾಗದ ಬರಿತಾ ಇತ್ತ್ ಅವು ಕಾಗದ ಬರಿತಾ ಇದ್ದೊ	ನಾ ಕಾಗದ ಬರಿತಾ ಇರುವೆ ನಾವು ಕಾಗದ ಬರಿತಾ ಇರುವೊ ನೀ ಕಾಗದ ಬರಿತಾ ಇರುವ ನೀವು ಕಾಗದ ಬರಿತಾ ಇರುವರಿ ಅಂವ / ಅದ್ ಕಾಗದ ಬರಿತಾ ಇರ್ದು ಅವುಕಾಗದ ಬರಿತಾ ಇರುವೊ
ಪೂರ್ಣ ಸಮಗ್ರ **(Perfect)**	ನಾ ಕಾಗದ ಬರ್ದೊಳೆ ನಾವು ಕಾಗದ ಬರ್ದೊಳೊ ನೀ ಕಾಗದ ಬರ್ದಳ ನೀವು ಕಾಗದ ಬರ್ದಳರಿ ಅಂವ / ಅದ್ ಕಾಗದ ಬರ್ದುಟು ಅವು ಕಾಗದ ಬರ್ದೊಳೊ	ನಾ ಕಾಗದ ಬರ್ದಾವುಟು ನಾವು ಕಾಗದ ಬರ್ದಾವುಟು ನೀ ಕಾಗದ ಬರ್ದಿದ್ದ ನೀವು ಕಾಗದ ಬರ್ದಿದ್ದರಿ ಅಂವ / ಅದ್ ಕಾಗದ ಬರ್ದೀತ್ ಅವು ಕಾಗದ ಬರ್ದಾವುಟು	ನಾ ಕಾಗದ ಬರಿಯಕುಟ್ಟು ನಾವು ಕಾಗದ ಬರಿಯಕುಟ್ಟು ನೀ ಕಾಗದ ಬರ್ದಿರುವ ನೀವು ಕಾಗದ ಬರ್ದಿರುವರಿ ಅಂವ / ಅದ್ ಕಾಗದ ಬರ್ದಿರ್ದು ಅವು ಕಾಗದ ಬರ್ದಿರುವೊ

ಅರೆಭಾಷೆ ಗಾದೆಗ

ಮತ್ತು

ನುಡಿಗಟ್ಟ್‌ಗ

ಅರೆಭಾಷೆ ಗಾದೆಗ

ವೇದ ಸುಳ್ಳಾದರೂ ಗಾದೆ ಸುಳ್ಳಾಕಿಲೆ

ಅಂಗ ಇಲ್ಲದವನ ಮಂಗ ಚೇಷ್ಟೆ
ಅಲ್ಪಜ್ಞಾನಿಯ ಅಪ್ರಬುದ್ಧ ವರ್ತನೆ
immatured behaviour of a less knowledgeable person.

ಅಂಗ ಭಂಗ ಆದರೂ
ಸಿಂಗಾರಕ್ಕೇನೂ ಕೊರತೆ ಇಲ್ಲೆ.
ಸಂಪತ್ತಿನ ಒಂದು ಭಾಗ ಕಳೆದುಕೊಂಡರೂ ಆಡಂಭರ ಮಾಡುವುದನ್ನು ನಿಲ್ಲಿಸುವುದಿಲ್ಲ.
Even after losing the property also people never stop showing their richness.

ಅಂಗೈ ಅಗಲ ಹೊಲ ಮಾಡ್ದವಂಗೆ
ಮುಂಗೈ ತುಂಬಾ ತುಪ್ಪ
ಹೊಲ, ಗದ್ದೆ, ಬೇಸಾಯ ಮಾಡುವವನಿಗೆ ಚೆನ್ನಾಗಿ ಊಟ ಮಾಡಲು ಸಾಧ್ಯ
A farmer may not find scarcity for good food

ಅಂಗೈ ಹುಣ್ಣಿಗೆ ಕನ್ನಡಿ ಬೇಡ
ನಮ್ಮ ನಮ್ಮ ಲೋಪದೋಷಗಳನ್ನು ನಮಗೆ ಇನ್ನೊಬ್ಬರ ಸಹಾಯವಿಲ್ಲದೆ ಅರ್ಥ ಮಾಡಿಕೊಳ್ಳಬಹುದು
We can easily understand our own weaknesses without the assistance of others.

ಅಂಡೆಲಿ ಇಲ್ಲೆ ಅಳೆಗೆಲಿ ಇಲ್ಲೆ
ಸಣ್ಣ ಮಟ್ಟ ಜವಾಬ್ದಾರಿ ನಿರ್ವಹಿಸುವುದಿಲ್ಲ. ದೊಡ್ಡ ಜವಾಬ್ದಾರಿಯನ್ನೂ ನಿರ್ವಹಿಸುವುದಿಲ್ಲ
Neither takes the responsibility of minor activities nor the major one.

ಅಂಡೆಬಾಯಿ ಮುಚ್ಚಿ ಕಾಗದ್,
ದೊಂಡೆಬಾಯಿ ಕಟ್ಟಿ ಕಾಗದ್
ದೊಡ್ಡ ಅವಕಾಶಗಳನ್ನು ಕಳೆದುಕೊಳ್ಳಬಾರದು. ಅಂತೆಯೇ ನಮ್ಮ ದೇಹಕ್ಕೆ ಅವಶ್ಯವಿರುವ ಆಹಾರ, ಪಾನೀಯಗಳನ್ನು ಕಾಲ ಕಾಲಕ್ಕೆ ತೆಗೆದುಕೊಳ್ಳದೆ ಇರಬಾರದು
We should not lose good opportunities. Simultaneously we should take necessary food and drinks needed for our body.

ಅಂಡೆಗೂ ಸಿಕ್ಕಿಕಿಲೆ, ದೊಂಡೆಗೂ ಸಿಕ್ಕಿಕಿಲೆ
ಬೆಳೆ ನಾಶವಾದಾಗ ರೈತ ಹೇಳುವ ಮಾತು – ತಿನ್ನಲೂ ಸಿಗಲಿಲ್ಲ. ಸಂಗ್ರಹಿಸಲೂ ಸಿಗಲಿಲ್ಲ
Neither to eat nor to store.

ಅಂದಿಗೆ ಅದೇ ಲೇಸ್, ಇಂದಿಗೆ ಇದೇ ಲೇಸ್
ಅಂದಿನ ದಿನಕ್ಕೆ ಅದು ಸೂಕ್ತವಾಗಿತ್ತು. ಇಂದಿನ ದಿನಕ್ಕೆ ಇದು ಸೂಕ್ತವಾಗಿದೆ
That was suitable for that day and this is suitable for this day; adjustment with life.

ಅಂಬು ಅಟ್ಟಲಿ, ಬಿಲ್ಲ್ ಬೆಟ್ಟಲಿ
ಬಾಣ ಅಟ್ಟದಲ್ಲಿ, ಬಿಲ್ಲು ಬೆಟ್ಟದಲ್ಲಿ – ಯಾವುದೇ ತಯಾರಿ ನಡೆದಿಲ್ಲ. ಜವಾಬ್ದಾರಿ ಯಿಂದ ಕೆಲಸ ನಿರ್ವಹಿಸಿಲ್ಲ.
No preparation has been done, irresponsibility shown on the work entrusted.

ಅಂವನ ರೋಮ ಅಲ್ಲಾಡ್ದಷ್ಟ್
ಶರೀರ ಅಲ್ಲಾಡ್ದುಲೆ
ಮೈಮುರಿದು ಕೆಲಸ ಮಾಡುತ್ತಿಲ್ಲ. ದೈಹಿಕ

ಶ್ರಮವಹಿಸದ ಸೋಮಾರಿ
A lazy person who does not work hard.

ಅಕ್ಕ ಇರ್‌ಕನ ಮುಟ್ಟ ಭಾವ
ನಮ್ಮ ಹತ್ತಿರದ ರಕ್ತಸಂಬಂಧಿಗಳು ಇರುವ ತನಕ ನೆಂಟರ ಮನೆಯ ಸಂಬಂಧ (ತಾಯಿ ಇರುವ ತನಕ ತವರು)
Close relationship with our relatives as long as our blood (intimate) relatives are there.

ಅಕ್ಕನ ಬಂಗಾರವಾದರೂ ಅಕ್ಕಸಾಲಿ ಬಿಡ
ತನ್ನಕ್ಕನ ಚಿನ್ನವಾದರೂ ಸರಿ ಒಂದಷ್ಟು ಚಿನ್ನವನ್ನು ಕಬಳಿಸದೆ ಚಿನಿವಾರ ಬಿಡಲಾರ. ನಮ್ಮ ಹತ್ತಿರದ ಬಂಧುಗಳಾದರೂ ಕೂಡಾ ಯಾವುದಾದರೊಂದು ಲಾಭ ಇಲ್ಲದೆ ನಮ್ಮ ಕೆಲಸ ಮಾಡಲಾರರು
Even our close relatives also will not turn out our work without any returns.

ಅಕ್ಕಿ ಖರ್ಚ್ ಕಾಗದ್
ಅಕ್ಕನ ಮಕ್ಕ ಲಾಚಾರಾಕಾಗದ್
ಮನೆಯ ಆರ್ಥಿಕ ಪರಿಸ್ಥಿತಿ ಹಾಳಾಗ ಬಾರದು, ನೆಂಟರಿಷ್ಟರಿಗೆ ಆತಿಥ್ಯದಲ್ಲಿ ಕೊರತೆ ಯಾಗಬಾರದು.
There should not be any lapse in the hospitality with out any hindrance to the economic Position.

ಅಕ್ಕಿ ಕೊಟ್ಟು ಉಂಬಕೆ ಅಕ್ಕನ ಮನೆನೇ ಆಕಾ?
ಹಣ ಕೊಟ್ಟು ಆತಿಥ್ಯ ಪಡೆಯುವುದಿದ್ದರೆ ನೆಂಟರಿಷ್ಟರ ಮನೆಯೇ ಆಗಬೇಕಾ?
Is there any necessity of getting hospitality on payment in our relatives house?

ಅಕ್ಕಿ ಭತ್ತ ಇರುವಲ್ಲಿ
ಎಲಿ, ಹೆಗ್ಗಣಗ ಇಲ್ಲದಿರುವನೋ?
ಸಂಪತ್ತು ತುಂಬಿರುವಲ್ಲಿ ಅದನ್ನು ಕಬಳಿಸಲು ಜನ ಸೇರಿಕೊಳ್ಳುತ್ತಾರೆ
People gather round to swallow the resources where there is richness.

ಅಗತ್ಯಕ್ಕಿಂತ ಹೆಚ್ಚಿಗೆ ಯಾರ್ರೂ ನಂಬ್‌ಬಡ.
ಅನಗತ್ಯವಾಗಿ ಯಾರ ಮೇಲೂ ತುಂಬಾ ನಂಬಿಕೆ ಇರಿಸುವುದು ಬೇಡ
It is not necessary to over trust any body; be careful in trusting others.

ಅಜ್ಜಂಗೆ ಸಾವ್‌ನ ಚಿಂತೆ,
ಮಕ್ಕಳಿಗೆ ಆಟದ ಚಿಂತೆ
ಅವರವರ ಪ್ರಾಯಕ್ಕನುಗುಣವಾಗಿ ಅವರವರ ಭಾವನೆಗಳೂ ಭಿನ್ನವಾಗಿರುತ್ತವೆ
Feelings of the people differ from age to age; generation gap.

ಅಜೀರ್ಣ ಆದೆಂತ ಊಟ ಬುಡಿಕೆ ಆದೆನಾ?
ಹಿಡಿದ ಕೆಲಸದಲ್ಲಿ ಸೋಲುಂಟಾಗಬಹುದು ಎಂಬ ಭಯದಿಂದ ಪ್ರಯತ್ನವನ್ನೇ ಮಾಡದಿರುವುದು.
Not putting any effort thinking that he may not succeed.

ಅಜ್ಜಿಗೆ ಅರಿವೆ ಚಿಂತೆ
ಮೊಮ್ಮಗಳಿಗೆ ಗಂಡನ ಚಿಂತೆ
ಕುಟುಂಬದ ಹಿರಿಯ ವ್ಯಕ್ತಿಗಳು ತಮ್ಮ ಆರೋಗ್ಯ, ಬಟ್ಟೆಬರೆ, ಬದುಕಿನ ಬಗ್ಗೆ ಚಿಂತಿಸಿದರೆ, ಮೊಮ್ಮಕ್ಕಳು ತಮಗೆ ಬರಲಿರುವ ಗಂಡ ಹೆಂಡತಿಯ ಬಗ್ಗೆ ಚಿಂತಿಸುತ್ತಾರೆ
The desires and demands of the people according to their age.
ಪ್ರಾಯಕ್ಕನುಗುಣವಾಗಿ ತಮ್ಮ ಆಶೆ, ಅಭಿಲಾಷೆಗಳು ಬದಲಾಗುತ್ತದೆ.

ಅಜ್ಜಿ ಸಾಂಕಿದ ಮಂಜ ಬೊಜ್ಜಕ್ಕೂ ಬಾರದ್.
ಮುದ್ದಾಗಿ, ಕೊಂಡಾಟದಿಂದ ಸಾಕಲ್ಪಟ್ಟ ಮಕ್ಕಳು ಜಗತ್ತನ್ನು ಎದುರಿಸುವಲ್ಲಿ ವಿಫಲ ರಾಗುತ್ತಾರೆ.

Children who are brought up with lots of affection find it difficult to face the world.

ಅಜ್ಜಿ ಇದ್ದ ಮನೆಗೆ ವೈದ್ಯ ಬೇಡ
ಹೆಚ್ಚಿನ ಅಜ್ಜಿಯಂದಿರು ನಾಟಿ ಔಷಧಿ ಮತ್ತು ಚಿಕಿತ್ಸೆಯಲ್ಲಿ ಪ್ರಾವಿಣ್ಯತೆ ಹೊಂದಿರುತ್ತಾರೆ.
Most of the grand mothers are experts in local home made medicine and treatment.

ಅಜ್ಜಿ ಇಲ್ಲದ ಮನೆ ಮೊಜ್ಜಿಗೆ ಇಲ್ಲದ ಊಟ
ಹೆಚ್ಚಿನ ಅಜ್ಜಿಯಂದಿರು ಮನೆಯ ಎಲ್ಲಾ ಚಟುವಟಿಕೆಗಳ ಅವಿಭಾಜ್ಯ ಅಂಗವಾಗಿದ್ದು, ರುಚಿಕರವಾಗಿ ಅಡುಗೆ ಮಾಡಬಲ್ಲವರೂ ಆಗಿರುತ್ತಾರೆ. ಊಟಕ್ಕೆ ಮಜ್ಜಿಗೆ ಎಷ್ಟು ಅವಶ್ಯವೋ ಮನೆಗೆ ಅಜ್ಜಿ ಕೂಡಾ ಅಷ್ಟೇ ಅವಶ್ಯ
Most of the Grand mothers are part and parcel of every house, along with that they are very good cooks. Hence their presence adds taste not only to the family but also to the food.

ಅಟ್ಟ ಇಲ್ಲದಂವಂಗೆ ಮದುವೆ ಯಾಕೆ?
ಸರಿಯಾದ ಮನೆ, ಸವಲತ್ತು, ಗೌಪ್ಯತೆಯನ್ನು ಕಾಪಾಡುವ ಸೌಲಭ್ಯ ಇಲ್ಲದವನಿಗೆ ಮದುವೆಯಾಗುವ ಅರ್ಹತೆ ಇರುವುದಿಲ್ಲ
It is not nice for a person to marry without having a house.

ಅಡಿ ತಪ್ಪಿರೆ ಆನೆನೂ ಬಿದ್ದದೆ
ಊರಿದ ಹೆಜ್ಜೆ ತಪ್ಪಿದಾಗ ಯಾರಾದರೂ ಬೀಳುತ್ತಾರೆ. ನಮ್ಮ ಕೆಲಸ ಕಾರ್ಯಗಳಲ್ಲಿ ನಾವು ತಪ್ಪಿದಾಗ ಸೋಲುಂಟಾಗುವುದು ಸಹಜ.
If our strategies are not proper while executing a work we may face failure.

ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು
ಒಂದು ಸಲ ನಾವು ಮಾನ ಕಳೆದುಕೊಂಡರೆ ಮತ್ತೆ ನಾವು ಎಷ್ಟು ಮೊತ್ತ ಖರ್ಚು ಮಾಡಿದರೂ ಅದನ್ನು ಪುನಃ ಪಡೆಯಲು ಸಾಧ್ಯವಾಗದು.
Money can not buy reputation and character.

ಅಡಿಗೆ ಬಿದ್ದರೂ ಮೀಸೆ ಮಣ್ಣಾತ್‌ಲೆ
ಕೆಲವರು ಸೋತರೂ ಸೋಲೊಪ್ಪಿಕೊಳ್ಳಲು ಸಿದ್ಧರಿರುವುದಿಲ್ಲ.
There are people who are not ready to accept defeat.

ಅಡಿಗೆ ಬಿದ್ದರೂ ಮೂಕು ಮೇಲೆ
ಕೆಲವರು ಸೋತಾಗಲೂ ಅದು ನನ್ನ ಸೋಲಲ್ಲ ಎಂದು ತಿಳಿದುಕೊಳ್ಳುತ್ತಾರೆ.
There are people who are not ready to accept their defeat or failure.

ಅಣ್ಣ ಮಾಡ್ದರ ಅಣ್ಣನೇ ಮಾಡೊಕು
ಅವರವರ ಜವಾಬ್ದಾರಿಯನ್ನು ಅವರವರೇ ನಿರ್ವಹಿಸಬೇಕು
One should discharge his own duties and responsibilities entrusted to him.

ಅಣ್ಣ ಸತ್ತರೆ ಅಮಾಸೆ ನಿಂತದೆನಾ?
ನಾವು ಏನು ತೊಂದರೆ ಅನುಭವಿಸಿದರೂ ಜಗತ್ತಿನ ಚಟುವಟಿಕೆಗಳು ನಡೆಯುತ್ತಾ ಇರುತ್ತದೆ.
Whatever may be our problems, the activities around the world are going on.

ಅತ್ತ ಹೋದರೆ ಕಷ್ಟ, ಇತ್ತ ಹೋದರೆ ನಷ್ಟ
ಅತ್ಯಂತ ಇಕ್ಕಟ್ಟಿನಲ್ಲಿ ಸಿಲುಕಿರುವ ಸನ್ನಿವೇಶ
Fixing in a dilemma.

ಅತಿ ಆಸೆ ಗತಿಗೇಡ್
ಅತಿಯಾದ ಜಿಪುಣತನ ಮಾನಸಿಕ ಬಡತನವನ್ನು ತರುತ್ತದೆ
Greediness leads to mental poverty.

ಅತಿ ಸ್ನೇಹ ಗತಿಗೆಡ್ಸಿತ್
ಅತಿಯಾದ ಗೆಳೆತನ ಬಡತನ ತಂದು ಕೊಟ್ಟಿತು. ಇಲ್ಲಿ ದುಷ್ಟ ಅಭ್ಯಾಸಗಳ ಸ್ನೇಹ ಎಂದು ಅರ್ಥೈಸಿಕೊಳ್ಳವುದು ಸೂಕ್ತ.
Too much friendship with bad habits may lead to poverty. Too much is too bad.

ಅತ್ತೆ ಸತ್ತ ಮೇಲೆ ಸೊಸೆ ಅತ್ತತ್
ಅತ್ತೆ ಮರಣಿಸಿದ ನಂತರ ಅತ್ತೆಯ ಪ್ರಾಮುಖ್ಯತೆ ಹಾಗೂ ಅಗತ್ಯತೆಯನ್ನು ಮನಗಂಡು ಸೊಸೆ ಪಶ್ಚಾತ್ತಾಪಪಟ್ಟಳು
Realising the importance and necessity of the mother in law after her death the daughter in law wept with repentance.

ಅತ್ತೆಗೊಂದು ಕಾಲ ಸೊಸೆಗೊಂದು ಕಾಲ
ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಪ್ರಾಮುಖ್ಯತೆಯನ್ನು ಸೂಕ್ತ ಕಾಲದಲ್ಲಿ ಕಂಡುಕೊಳ್ಳುತ್ತಾನೆ.
Each and every person finds his importance at suitable times. Every dog has its own day.

ಅತ್ತೆ ಮೇಲೆ ಸಿಟ್ಟ್ ಕೊತ್ತಿ ಮೇಲೆ
ಕೆಲವೊಂದು ಬಾರಿ ನಮಗೆ ನಮ್ಮಿಂದ ಮೇಲಿರುವವರ ಮೇಲೆ ಅಥವಾ ಹೆಚ್ಚು ಪ್ರಭಾವಶಾಲಿಗಳ ಅಥವಾ ಬಲಿಷ್ಟರ ಮೇಲೆ ಸಿಟ್ಟುಗೊಂಡಾಗ, ಆ ಸಿಟ್ಟನ್ನು ನಮ್ಮಿಂದ ದುರ್ಬಲರ ಮೇಲೆ ಪ್ರದರ್ಶಿಸಿ ನೆಮ್ಮದಿ ಪಡೆದುಕೊಳ್ಳುತ್ತೇವೆ.
Sometimes we get angry with someone but we show our anger with someone else who are weaker than us.

ಅತ್ತೆ ಬೊಯ್ದು ಬುದ್ಧಿಗೆ,
ಸೊಸೆ ಬೊಯ್ದು ಸುದ್ದಿಗೆ
ಅತ್ತೆಯಂದಿರು ತಮ್ಮ ಸೊಸೆಯಂದಿರನ್ನು ತಿದ್ದಿ ತೀಡಿ, ಉತ್ತಮ ಗೃಹಿಣಿಯನ್ನಾಗಿ ಪಳಗಿಸುವ ಪ್ರಕ್ರಿಯೆಯಲ್ಲಿ ಅವರನ್ನು ಬಯ್ಯುತ್ತಾರೆ. ಆದರೆ ಸೊಸೆ ಅನುಕಂಪ ಗಿಟ್ಟಿಸಲು, ಪ್ರಾಮುಖ್ಯತೆ ಪಡೆಯಲು ಪ್ರತಿಭಟಿಸುತ್ತಾಳೆ.
Mother in law curses her daughter in law while trying to set her right but daughter-in law curses in return to get sympathy and recognition.

ಅರ್ಥ ಕಲ್ತವಂಗೆ ಅಬ್ಬರ ಜಾಸ್ತಿ
ಅರ್ಧಂಬರ್ಧ ಜ್ಞಾನ ಹೊಂದಿದವರು ಸಾಮಾನ್ಯವಾಗಿ ಅಹಂ ಪ್ರದರ್ಶಿಸುತ್ತಾರೆ.
People with psuedo knowledge suffer from Egoism and pride.

ಅನ್ಯಾಯಂದ ಗಳ್ಸಿದ್ ಒಳಿಯದ್,
ನ್ಯಾಯಂದ ಗಳ್ಸಿದ್ ಅಳಿಯದ್
ಅನ್ಯಾಯವಾಗಿ ಗಳಿಸಿದ್ದು ಉಳಿಯಲಾರದು. ನ್ಯಾಯದಿಂದ ಗಳಿಸಿದ್ದು ಅಳಿದು ಹೋಗಲಾರದು
The unjust earnings will not last long whereas the just earnings will remain for ever.

ಅನ್ಯಾಯನ ಶಿಕ್ಷಿಸುದೇ ನ್ಯಾಯ
ಅನ್ಯಾಯ ಮಾಡಿದವನಿಗೆ ಶಿಕ್ಷೆಯಾದಾಗಲೇ ನ್ಯಾಯ ದೊರಕಿದಂತಾಗುವುದು.
Justice is achieved only when unjust is punished.

ಅಪ್ಪನ ಅರಮನೆಂದ ಗಂಡನ ಕಿರುಮನೆ ಲೇಸ್
ತವರಿನಿಂದ ಯಾವಾಗಲೂ ಗಂಡನ

ಮನೆಯೇ ಲೇಸು
Husband's house is always safer than father's house.

ಅಪ್ಪ ನೆಟ್ಟ ಆಲದ ಮರಕ್ಕೆ ಸುತ್ತು ಹಾಕುದು
ಯಾವುದೇ ರಚನಾತ್ಮಕ ಬೆಳವಣಿಗೆ ಹಾಗೂ ಬದಲಾವಣೆಯನ್ನು ಕಾಣದೆ ಹಿರಿಯರ ದಾರಿಯಲ್ಲೇ ಮುಂದುವರಿಯುವುದು
Moving on the path of the parents without facing any challenges or constructive developments.

ಅಪ್ಪ ಆಸ್ತಿ ಮಾಡ್ತ್ ಮಂಜ ಸಾಲ ಮಾಡ್ತ್
ತಂದೆ ಸಾಕಷ್ಟು ಆಸ್ತಿ ಪಾಸ್ತಿ ಸಂಪಾದಿಸಿದರು. ಆದರೆ ಮಗ ಏನನ್ನೂ ಗಳಿಸದೆ ತಂದೆಯ ಆಸ್ತಿಗೆ ಸಾಲ ಮಾಡಿ ಅದನ್ನು ಕಳಕೊಂಡ.
Son has not taken any steps neither to develop his father's property nor to develop himself.

ಅಪ್ಪಂಗೆ ಬೆಣ್ಣೆ ಆಗದ್
ಮಂಜಂಗೆ ತುಪ್ಪ ಆಗದ್
ಅಪ್ಪ ಮತ್ತು ಮಗನ ಅಭಿರುಚಿಗಳು ವಿಭಿನ್ನ
The likings, tastes and interests of the people differ from person to person even the father and the son.

ಅಭಾವ ಬಂದರೂ ಸ್ವಭಾವ ಬದಲಾಗದ್
ನಮಗೆ ಬಡತನ ಬಂದರೂ ನಮ್ಮ ಮನುಷ್ಯ ಸ್ವಭಾವ ಗುಣ ಅನೇಕ ಬಾರಿ ಬದಲಾಗುವುದಿಲ್ಲ.
Our innate nature and character does not change even in the time of poverty also.

ಅಮ್ಮ ಮಾತಾಡಿಕೆ ಕಲ್ಸಿದೆ, ಶಾಲೆ ಏನ್ ಮಾತಾಡುಕೂಂತ ಕಲ್ಸಿದೆ, ಜಗತ್ತ್ ಯಾಗ ಮಾತಾಡುಕೂಂತ ಕಲ್ಸಿದೆ
ಅಮ್ಮ ಮಾತನಾಡಲು ಕಲಿಸುತ್ತಾರೆ, ಶಾಲೆ ಏನನ್ನು ಮಾತನಾಡಬೇಕು ಎಂದು ಕಲಿಸುತ್ತದೆ. ಸಮಾಜ ಮತ್ತು ಅನುಭವ ಯಾವಾಗ ಮಾತಾಡಬೇಕೆಂದು ಕಲಿಸುತ್ತದೆ.
Mother teaches us to speak; the school teaches us what to speak and the society or our experience teaches us where to speak.

ಆಯ್ಯೆ ಮಕ್ಕ ಆದರೇನ್, ಹೊಟ್ಟೆ ಬೇರೆ ಬೇರೆ ಅಲ್ಲನಾ?
ತಾಯಿ ಮಕ್ಕಳೆಂಬ ನಿಕಟ ಸಂಬಂಧವಿದ್ದರೂ ಅವರ ಆಶೆ, ಅಭಿರುಚಿಗಳು, ಆಸಕ್ತಿಗಳು, ಇಷ್ಟಗಳು ಭಿನ್ನವಾಗಿರುತ್ತವೆ
The tastes, likings, interests and attitude of the people are different even with the mother and her children.

ಅಯ್ಯೆ ಹೊಟ್ಟೆ ನೋಡ್ತ್
ಹೆಣ್ಣ್ ಜೋಬು ನೋಡ್ತ್
ಮಗ ಮನೆಗೆ ಬಂದಾಗ ಆತ ಊಟ ಮಾಡಿದ್ದಾನೊ ಇಲ್ಲವೋ ಎಂಬುದನ್ನು ತಾಯಿ ಗಮನಿಸಿದರೆ, ಹೆಂಡತಿ ಆತನ ಕಿಸೆಯನ್ನು ಗಮನಿಸಿದಳು
When the son came to the house, his mother looked at his stomach with the concern whether he had taken food or not but his wife looked at his pocket.

ಅಯ್ಯೆಗೆ ಹೊಡಿಬಡ
ಗುಬ್ಬಿ ಹಕ್ಕಿ ಗೂಡು ಹಾಳ್ ಮಾಡ್ ಬಡ.
ತಾಯಿಗೆ ಹಿಂಸೆ ನೀಡಬೇಡ, ಗುಬ್ಬಿ ಹಕ್ಕಿ, (ಮನೆ ಹಕ್ಕಿ)ಯ ಗೂಡು ಹಾಳು ಮಾಡಬೇಡ (ಗುಬ್ಬಿ ಹಕ್ಕಿ ಮನೆಯಲ್ಲಿ ಗೂಡು ಕಟ್ಟಿದರೆ ಅದೃಷ್ಟ ಎಂದು ನಂಬುತ್ತಾರೆ)
Don't punish your mother and do not destroy the nest of the sparrow.

ಅಯ್ಯೆನ ಮಾತ್, ಅಪ್ಪನ ಬೀಜ
ತಂದೆ ತಾಯಿಗಳ ಗುಣ ಸ್ವಭಾವಗಳು ಮಕ್ಕಳಲ್ಲಿ ಬಂದೇ ಬರುತ್ತದೆ
The nature and the culture of the parents are inherited by the children.

ಅರಿಯಕೆ ಎಲ್ಲವು, ಕುಡಿಯಕೆ ಒಬ್ಬನೆ
ಎಲ್ಲರು ಸೇರಿ ಮದ್ದು ಅರೆದು ಒಬ್ಬನಿಗೆ ಕುಡಿಸಿದರು. ಎಲ್ಲರು ತಪ್ಪು ಮಾಡಿ ಒಬ್ಬನ ಮೇಲೆ ಹೊರಿಸಿದರು
One held responsible for the mistake committed by many.

ಅಲ್ಪಂಗೆ ಸಿಟ್ಟ್ ಜಾಸ್ತಿ
ಅರಿವು, ಜ್ಞಾನ, ಅನುಭವದ ಕೊರತೆ ಇರುವವನಿಗೆ ಸಿಟ್ಟು ಹೆಚ್ಚು a person with less knowledge, awareness and experience gets more angry.

ಅಲ್ಪರ ಸಂಗ ಅಭಿಮಾನ ಭಂಗ
ಅರಿವು, ಜ್ಞಾನ, ಅನುಭವದ ಕೊರತೆ ಇರುವವರ ಜೊತೆ ಸೇರಿದರೆ ತಮ್ಮ ಗೌರವ, ಸ್ವಾಭಿಮಾನಕ್ಕೆ ಧಕ್ಕೆಯಾಗಬಹುದು
We may lose our respect and dignity if we are in contact with people of less knowledge and awareness.

ಅವಕಾಶ ಬಾಕನ ಆಕಾಶ ನೋಡ್ಬಡ
ಅವಕಾಶ ಬಂದಾಗ ಎದುರಿಸಲು ಸಿದ್ಧನಾಗು.
Be ready to face the opportunities when it knocks at your door.

ಅವನವನ ಕೈ ಅವನವನ ತಲೆ ಮೇಲೆ
ತನ್ನ ಜವಾಬ್ದಾರಿಯ ನಿರ್ವಹಣೆ ತನ್ನ ಮೇಲೆಯೇ ಇರುತ್ತದೆ
One should be responsible for his own duties and responsibilities.

ಅವನ ನೆರಳ್‌ಗೆ ಅಂವನೇ ಹೆದ್‌ರ್‌ದಾಂಗೆ
ಅಪರಾಧಿ ಮನೋಭಾವ
guilty consciousne
ತನ್ನ ತಪ್ಪಿಗೆ ತಾನೇ ಜವಾಬ್ದಾರಿ ಎಂಬ ಭಯ.

ಅವಶ್ಯಕತೆನೇ ಸಂಶೋಧನೆಗೆ ಮೂಲ
ಅವಶ್ಯಕತೆ /ಅಗತ್ಯತೆ ಬಂದಾಗ ನಾವು ಅದಕ್ಕೊಂದು ಪರಿಹಾರ ಕಂಡು ಹುಡುಕಿ ಕೊಳ್ಳುತ್ತೇವೆ. ಅದುವೇ ಸಂಶೋಧನೆಗೆ ಮೂಲವಾಗುತ್ತದೆ
Necessity is the mother of invention.

ಆ ಕಾನಕ್ಕಾದ ಈ ಕುರೆ
ಈ ಕುರೆಗಾದ ಆ ಕಾನ
ಮದುವೆ ಸಂಬಂಧ ಏರ್ಪಟ್ಟಾಗ ವಧು ಮತ್ತು ವರರ ಜೀವನ ಕ್ರಮ ಮತ್ತು ಸಂಸ್ಕೃತಿಯ ನಕಾರಾತ್ಮಕ ಅಂಶಗಳನ್ನು ಹೋಲಿಸಿ ಇಬ್ಬರೂ ಒಂದೇ ಎಂದು ಹೇಳುವ ಹಗುರವಾದ ಮಾತು
By considering the negative points of the bride and bridegroom, the people compare them by telling these words in a lighter vein.

ಆಚಾರಕ್ಕೂ ಆತ್, ನೀತಿಗೂ ಆತ್
ಆದರ್ಶಕ್ಕೂ ನೀತಿಗೂ ಸರಿಹೊಂದುವಂತೆ
Suitable both for ideals and practice

ಆಡ್ ಮುಟ್ಟದ ಸೊಪ್ಪಿಲ್ಲೆ
ಕೆಲವರು ಎಲ್ಲಾ ಕ್ಷೇತ್ರಗಳ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ.
People who take part in all the activities.

ಆದರೆ ಒಂದು ಮರ, ಹೋದರೆ ಒಂದು ಬೀಜ.
ಕೆಲವೊಂದು ಬಾರಿ ದೊಡ್ಡ ಸಾಧನೆ ಮಾಡು ವರೇ ನಮ್ಮ ಕಿಂಚಿತ್ ಪ್ರಯತ್ನ ಮಾಡಲೇ ಬೇಕು. ಆ ಪ್ರಯತ್ನದಲ್ಲಿ ವಿಫಲನಾದರೂ

ಎದೆಗುಂದಬಾರದು
Some time we have to make our humble attempt for great achievement even if we face failure.

ಆನೆ ಕದ್ದರೂ ಕಳ್ಳ, ಅಡಿಕೆ ಕದ್ದರೂ ಕಳ್ಳ
ದೊಡ್ಡ ವಸ್ತುವನ್ನು ಕದ್ದರೂ ಕಳ್ಳ, ಚಿಕ್ಕ ವಸ್ತು ಕದ್ದರೂ ಕಳ್ಳನಾಗುತ್ತಾನೆ
Even if one steals a little thing also, he is considered as thief.

ಆನೆ ಕೆಂಚಿಲ್ ಒಳಗೆ ಹೋಕಿಲೆ
ದೊಡ್ಡ ವ್ಯಕ್ತಿತ್ವ ಹೊಂದಿದವರು ಎಂದೂ ಸಣ್ಣ ಬುದ್ದಿ ತೋರಿಸಲಾರರು
Great men never fail to show their greatness.

ಆನೆ ಹೊಟ್ಟೆಗೆ ಕಾಸ್‌ನ್ ಮಜ್ಜಿಗೆ
ಶ್ರೀಮಂತನ ಖರ್ಚಿಗೆ ಚಿಕ್ಕಾಸು ಕೊಟ್ಟಂತೆ, ಸಖತ್ ಊಟ ಮಾಡುವವನಿಗೆ ಹಿಡಿ ಅನ್ನ ಕೊಟ್ಟಂತೆ
Meeting the little demands of a person who has a lot of demands.

ಆನೆ ಮೇಲೆ ಕುದ್ದಂವಂಗೆ ನಾಯಿನ ಹೆದರಿಕೆ ಏನ್?
ಸಾಕಷ್ಟು ಸುರಕ್ಷಿತವಾಗಿದ್ದವರು ಸಣ್ಣ ಪುಟ್ಟ ಬೆದರಿಕೆಗಳಿಗೆ ಹೆದರುವ ಅವಶ್ಯಕತೆ ಇಲ್ಲ
One need not fear for little things when he is in a secured place.

ಆನೆಗೆ ಗಂಟೆ ಬೇಕಾ?
ಆನೆಯಂತಹ ದೊಡ್ಡ ಪ್ರಾಣಿ ಬರುವಾಗ ಗಂಟೆ ಹೊಡೆಯುವ ಅಗತ್ಯವಿಲ್ಲ. ಅತ್ಯಂತ ಪ್ರಮುಖವಾದಂತಹ ವಿಷಯಗಳಿಗೆ ಪ್ರಚಾರದ ಅಗತ್ಯವಿಲ್ಲ
Very very important things do not need publicity.

ಆನೆ ಹೋದಲ್ಲೇ ದಾರಿ
ಪ್ರಸಿದ್ಧ ವ್ಯಕ್ತಿಗಳ ಜೀವನ ಚರಿತ್ರೆಯೇ ನಮಗೊಂದು ದಾರಿದೀಪ.
The biography of great people is a beacon light to our life.

ಆಸೆನೇ ದುಃಖಕ್ಕೆ ಮೂಲ
ಹೆಚ್ಚೆಚ್ಚು ಹಣ ಮಾಡಬೇಕೆಂಬ ಆಸೆ ನಮ್ಮ ಮಾನಸಿಕ ಸಂತೋಷವನ್ನು ಹಾಳು ಮಾಡಿ ದುಃಖಕ್ಕೆ ಕಾರಣವಾಗುತ್ತದೆ
Our greediness and too much craze to earn more and more spoils our mental happiness and leads to grief.

ಆಸೆಗೆ ಮಿತಿ ಇಲ್ಲೆ, ಗೂಡೆಗೆ ಗತಿ ಇಲ್ಲೆ.
ತಮ್ಮ ಮಗಳಿಗೆ ಒಳ್ಳೇ ವರ ಬರಬೇಕೆಂಬ ಆಶೆಯಿಂದ ಬಂದ ಪ್ರಸ್ತಾಪಗಳನ್ನೆಲ್ಲಾ ತಿರಸ್ಕರಿಸುತ್ತಾ ಹೋಗಿ ಕೊನೆಗೆ ತಮ್ಮ ಮಗಳಿಗೆ ಗತಿ ಇಲ್ಲದಂತಾಯ್ತು
Rejecting the proposal one by one hoping for still better proposals, finally led to the desperation of the girl.

ಆಸೆಗೆ ಮಿತಿ ಇಲ್ಲೆ, ದುಃಖಕ್ಕೆ ಎಣೆ ಇಲ್ಲೆ.
ಮನುಷ್ಯನ ದುರಾಸೆಗೆ ಮಿತಿ ಇರುವುದಿಲ್ಲ. ಈ ದುರಾಸೆಯಿಂದ ಉಂಟಾಗುವ ದುಃಖಕ್ಕೂ ಮಿತಿ ಇರುವುದಿಲ್ಲ
There is no limit for human wants, this finally leads to grief in life.

ಆಳ್ ಮಾಡ್ದ ಕೆಲ್ಸ ಹಾಳ್
ಯಾವಾಗಲೂ ನಮ್ಮ ಕೆಲಸವನ್ನು ನಾವೇ ಮಾಡಿದಾಗ ನಾವು ಯೋಜಿಸಿದಂತೆ ಅತ್ಯಂತ ಅಚ್ಚುಕಟ್ಟಾಗಿ ಕೆಲಸ ಮಾಡಲು ಸಾಧ್ಯ. ನಮ್ಮ ಕೆಲಸಗಾರ ಮಾಡಿದ ಕೆಲಸ ಹೆಚ್ಚಿನ ಬಾರಿ ನಮ್ಮ ನಿರೀಕ್ಷೆಗೆ ಅನುಗುಣವಾಗಿ ಇರುವುದಿಲ್ಲ
When we do our own work, we can

do it perfectly according to our expectations. We can't expect the same from our servants.

ಇಂದ್‌ನ್ ಸೋಲು, ನಾಳಿನ ಗೆಲುವು
ಸೋಲು ಎಂಬುದು 'ತಡ' ಮಾತ್ರ ತಡೆ ಅಲ್ಲ
Failure means only delay, not defeat. Failure is the stepping stone to success.

ಇಡೀ ಮುಳ್ಗಿದವಂಗೆ ಇನ್ನೆಂತಹ ಚಳಿ
ಒಂದು ಕೆಲಸದಲ್ಲಿ ನಾವು ಸಂಪೂರ್ಣ ತೊಡಗಿಸಿಕೊಂಡಾಗ ನಮಗೆ ಯಾವುದೇ ಹಿಂಜರಿಕೆ, ಭಯ ಉಂಟಾಗುವುದಿಲ್ಲ
When one is totally indulged in some work, then there is no chance for fear and hesitation.

ಇದ್ದದ್ ಇದ್ದಾಂಗೆ ಹೇಳ್‌ರೆ ಕೆಂಡದಂತಹ ಕೋಪ
ನಮ್ಮ ಲೋಪಗಳನ್ನು ಇತರರು ಎತ್ತಿ ತೋರಿಸಿದಾಗ ನಮಗೆ ಸಿಟ್ಟು ಬರುತ್ತದೆ
When somebody exposes our weakness, we get angry.

ಇಬ್ಬರ ಜಗಳ ಮೂರ್‍ನೆಂವಂಗೆ ಆದಾಯ
ಇಬ್ಬರ ಜಗಳದಲ್ಲಿ ಮೂರನೆಯವ ಪ್ರವೇಶಿಸಿ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವುದು
Achieving the selfish motives in the quarrel or dispute of others.

ಇರ್‌ಕನ ಯಾರೂ ಬೇಡ,
ಇಲ್ಲದಿರ್‌ಕನ ಎಲ್ಲವೂ ಬೇಕು
ನಮ್ಮಲ್ಲಿ ಶ್ರೀಮಂತಿಕೆ ಇದ್ದಾಗ ನಮಗೆ ಯಾರೂ ಬೇಕೆನಿಸುವುದಿಲ್ಲ. ಬಡತನ ಬಂದಾಗ ಎಲ್ಲರ ಸಹಾಯ ಬೇಕೆನಿಸುತ್ತದೆ.
When we are financially sound we feel as if we don't want any body but at the time of poverty we desire for the help of everybody.

ಉಂಡಂವ ಹೆದ್‌ರೊಕೂಂತಿಲ್ಲೆ, ನೊಂದವ ಬೊಯ್ಯಕೂಂತಿಲ್ಲೆ
ಮನುಷ್ಯನ ಜೀವನದ ಮೊದಲ ಬೇಡಿಕೆ ಆಹಾರ. ಅದನ್ನು ಪಡೆದ ನಂತರ ಆತ ಯಾವುದಕ್ಕೂ ಭಯಪಡುವ ಅವಶ್ಯಕತೆ ಇಲ್ಲ. ಅಂತೆಯೇ ಬೇಸರವಾದಾಗ ಇತರರಿಗೆ ಬಯ್ಯುವುದರಿಂದ ಯಾವುದೇ ಪ್ರಯೋಜನವಾಗಲಾರದು
If the stomach is full, one need not fear for anything. Cursing others at the time of grief will not do any good.

ಉಂಡದ್ ಮೈಗೆ ಹಿಡಿಯೊಕ್,
ಕಂಡದ್ ಮನ್ಸಿಗೆ ಹಿಡಿಯೊಕ್
ಊಟ ದೇಹಕ್ಕೆ ಹಿತವಾಗಿರಬೇಕು, ಕಂಡ ದೃಶ್ಯ ಕಣ್ಣಿಗೆ ಹಿತವಾಗಿರಬೇಕು. ಹಿತ ಮಿತವಾದ ಆಹಾರ ಬಳಸಬೇಕು ಅಂತೆಯೇ ಕಣ್ಣಿಗೆ ಹಿತವಾದುದನ್ನೆ ನೋಡಬೇಕು. ಎಲ್ಲಾ ಸನ್ನಿವೇಶಗಳಲ್ಲಿ ಉತ್ತಮ ಅಂಶಗಳನ್ನೇ ಕಾಣು.
Consume balanced diet and find good in everything you see.

ಉಂಡ ಮನೆಗೆ ಎರಡು ಬಗಿಬಡ
ಅನ್ನ ಹಾಕಿದವನಿಗೆ, ಸಾಕಿ ಸಲಹಿದವನಿಗೆ ಯಾವಾಗಲೂ ಎರಡು ಬಗೆಯಬಾರದು
We should not show disloyalty to those who have fed us or brought up.

ಉಂಡ ಮನೆನ, ಕಲ್ತ ವಿದ್ಯೆನ ಮರಿಯಕಾಗದ್
ಊಟ ಹಾಕಿದ ಮನೆಯನ್ನೂ, ಕಲಿತ ವಿದ್ಯೆಯನ್ನೂ ಮರೆಯಬಾರದು
We should not forget the house where we are fed and the education that we have learnt.

ಉಂಡ ಮೇಲೆ ಜಾತಿ ಕೇಳಿ ಕಾಗದ್
ಹಸಿದು ಊಟ ಮಾಡಿದ ನಂತರ ಆ

ಮನೆಯವರ ಜಾತಿ ಕೇಳಬಾರದು. ತಿನ್ನುವ ಆಹಾರಕ್ಕೆ, ಹಸಿವೆಗೆ ಜಾತಿ ಇಲ್ಲ
There is no religion or caste for the hunger and the food that we eat.

ಉಂಬಕಾಗಿ ಬದ್‌ಕ್‌ಬಡ,
ಬದ್‌ಕ್‌ಗಾಗಿ ಉಣ್
ಊಟಕ್ಕಾಗಿ ಮಾತ್ರ ಬದುಕಬೇಡ, ಬದುಕಲು ಒಂದಷ್ಟು ಊಟ ಮಾಡು. ತಿಂದುಂಡು ಕಾಲ ಕಳೆಯಬೇಡ, ನಿನ್ನ ಬದುಕು ಸಮಾಜಕ್ಕೆ ಒಂದಷ್ಟು ಪ್ರಯೋಜನಕಾರಿಯಾಗಲಿ
Don't live only to eat, eat to live. Don't waste your life only by eating, do some useful work in your life.

ಉಗುರುಂದ ಆದೊಕ್ಕೆ ಮೊಚ್ಚಿ ಯಾಕೆ?
ಅತ್ಯಂತ ಸುಲಭವಾಗಿ ಪರಿಹರಿಸಲು ಸಾಧ್ಯ ವಾಗುವುದನ್ನು ಜಟಿಲಗೊಳಿಸುವುದು ಯಾಕೆ. ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವೇಕೆ
Some people convert easily solvable problems into more and more rigid and complex.

ಉಟ್ಟ ಸೀರೆ ಗಟ್ಟಿ ಇದ್ದರೆ ಬಂದ ಮಿಂಡ ಏನ್ ಮಾಡ್ದೆ
ಹೆಂಗಸರು ತಾವು ಮಾನಸಿಕವಾಗಿ ಗಟ್ಟಿ ಯಾಗಿದ್ದರೆ ತಮ್ಮ ನೈತಿಕ ಮಟ್ಟವನ್ನು ಉಳಿಸಿ ಕೊಳ್ಳಬಹುದು
Ladies can maintain their moral standard if they are mentally stable and strong.

ಉತ್ತರನ ಶೌರ್ಯ ಒಲೆ ಮುಂದೆ
ಏನನ್ನೂ ಸಾಧಿಸಲಾಗದ ಕೆಲವರು ಅಡುಗೆ ಮನೆಯಲ್ಲಿ ತಮ್ಮ ಸಾಧನೆಗಳನ್ನು ಹೇಳಿ ಕೊಂಡು ಬೀಗುತ್ತಾರೆ. ಕಾರ್ಯರೂಪಕ್ಕೆ ಬಂದಾಗ ಅವರು ಶೂನ್ಯರಾಗುತ್ತಾರೆ.
There are people who boast of their achievements in the kitchen but in reality they could not achieve anything.

ಉತ್ತದೆ ಬೆಳೆ ಆಕಿಲೆ, ಉಡದೆ ಕೊಳೆ ಆಕಿಲೆ.
ಶ್ರಮ ವಹಿಸಿ ಭೂಮಿಯನ್ನು ಹಸನು ಗೊಳಿಸಿದರೆ ಉತ್ತಮ ಬೆಳೆಯಾಗಬಲ್ಲದು. ಕಠಿಣ ಶ್ರಮ ಯಶಸ್ಸಿನ ಹಾದಿ. ಅಂತೆಯೇ ನಮ್ಮ ಕೈಯನ್ನು, ಮೈಯನ್ನು, ಬಟ್ಟೆಯನ್ನು ದೈಹಿಕ ಶ್ರಮದಿಂದ ಕೊಳೆ ಮಾಡಿ ಕೊಂಡಾಗಲೇ ಬಾಯಿ ಮೊಸರಾಗಬಲ್ಲುದು.
Hard work alone is the key to success.

ಉದ್ಯೋಗ ಪುರುಷ ಲಕ್ಷ್ಮಣ
ಗಂಡಸರಾದವರು ಸದಾ ಕ್ರಿಯಾಶೀಲರಾಗಿದ್ದು ಏನಾದರೊಂದು ಉದ್ಯೋಗ ಮಾಡುತ್ತಿದ್ದು ಸಂಸಾರವನ್ನು ಆಧರಿಸಬೇಕು.
Men should indulge in hard work and lead the family.

ಉಪ್ಪರಿಗೆ ಮನೆ ಇದ್ದರೂ ಉಪ್ಪಿಲ್ಲದೆ ಊಟ ಇಲ್ಲೆ
ಎಷ್ಟೇ ಶ್ರೀಮಂತಿಕೆಯ ಜೀವನ ನಡೆಸುತ್ತಿದ್ದರೂ ಕೂಡಾ ಕೆಲವೊಂದು ಮೂಲಭೂತ ಜೀವನಾವಶ್ಯಕ ವಸ್ತುಗಳು ಇಲ್ಲದಿದ್ದಾಗ ಬದುಕು ಕಷ್ಟಸಾಧ್ಯ.
Basic necessities are essential to lead a happy life even though one is in the midst of luxury.

ಉಪ್ಪುಗಿಂತ ರುಚಿ ಇಲ್ಲೆ,
ತಾಯಿಗಿಂತ ಬಂಧು ಇಲ್ಲೆ.
ಯಾವುದೇ ತಿಂಡಿ, ಪದಾರ್ಥಗಳು ಉಪ್ಪಿ ನಿಂದಾಗಿ ರುಚಿ ಪಡೆದುಕೊಳ್ಳುತ್ತವೆ. ಅಂತೆಯೇ ಒಂದು ಕುಟುಂಬದಲ್ಲಿ ತಾಯಿಯ ಪಾತ್ರ ತುಂಬಾ ಪ್ರಾಮುಖ್ಯ.
The role of the mother in a family is very very important like the role of salt while preparing the eatables. Salt enhances the taste of an

eatable likewise mother adds beauty to the family.

ಉಪ್ಪು ತಿಂದಂವ ನೀರು ಕುಡಿಯೊಕೆ.
ತಪ್ಪು ಮಾಡಿದವರು ಶಿಕ್ಷೆ ಅನುಭವಿಸಲೇ ಬೇಕು.
Person who has committed mistake has to enjoy the punishment.

ಉಮ್ಮಣಿ ತಿಂದ್ ಕುಲಗೆಟ್ಟಾಂಗೆ
ಸಣ್ಣಪುಟ್ಟ ಹಣ ದುರುಪಯೋಗ ಮಾಡಿ ಅಥವಾ ಲಂಚ ಪಡೆದು ಭ್ರಷ್ಟಾಚಾರಿ ಎನಿಸಿಕೊಂಡ ಹಾಗೆ.
Becoming a culprit by misusing meagre funds or taking little bribe.

ಊಟಕ್ಕೆ ಮುಂದೆ ಕೆಲ್ಸಕ್ಕೆ ಹಿಂದೆ
ಕೆಲವರು ತಿನ್ನುವುದಕ್ಕೆ ಮುಂದೆ ಇರುತ್ತಾರೆ. ಕೆಲಸಕ್ಕೆ ತುಂಬಾ ಹಿಂದಿರುತ್ತಾರೆ
There are some who are in the forefront to eat but for work they remain in the back.

ಊಟಲಿ ಬಕಾಸುರ, ನಿದ್ದೆಲಿ ಕುಂಭಕರ್ಣ
ಕೆಲವರಿಗೆ ತಿನ್ನುವುದು ಮತ್ತು ಊಟ ಮಾಡುವುದು ಬಿಟ್ಟರೆ ಬೇರೆನೂ ಮಾಡಲು ತಿಳಿದಿಲ್ಲ
There are some who get pleasure only by eating and sleeping.

ಊಟಕ್ಕೆ ಮುಂದೆ ಉಪ್ಪಿನಕಾಯಿ,
ಮಾತಿಗೆ ಮುಂದೆ ಗಾದೆ
ಊಟಕ್ಕೆ ಮುಂದಾಗಿ ಬಳಸುವ ಉಪ್ಪಿನಕಾಯಿ ಇಡೀ ಊಟದ ರುಚಿಯನ್ನು ಹೆಚ್ಚಿಸುತ್ತದೆ. ಅದೇ ರೀತಿ ಮಾತು ಆರಂಭಕ್ಕೆ ಮುನ್ನ ಗಾದೆ ಹೇಳಿ ಆರಂಭಿಸಿದರೆ ಮಾತಿನ ಸೌಂದರ್ಯ ಹೆಚ್ಚುತ್ತದೆ.
Use of proverbs adds beauty to the speech.

ಊಟ ನಂಗೆ ಮೆಚ್ಚಿಗೆ ಆಕು,
ಮಾನ ಉಳ್ದವ್‌ಕೆ ಮೆಚ್ಚುಗೆ ಆಕು.
ತನಗೆ ಹಿತವಾದ ಊಟ ಮಾಡಬೇಕು ಆದರೆ ತನ್ನ ವರ್ತನೆ, ತನ್ನ ವ್ಯಕ್ತಿತ್ವ ಇತರರಿಗೆ ಹಿತವಾಗ ಬೇಕು
We should take food suitable for us but our behaviour and personality should be admired by others.

ಊಟ ಬಲ್ಲಂವಂಗೆ ರೋಗ ಇಲ್ಲೆ.
ಚೆನ್ನಾಗಿ ಹಸಿವೆ ಆಗುವವನಿಗೆ ಹಾಗೂ ಸದಾ ಹಿತಮಿತವಾಗಿ ಆಹಾರ ಸೇವಿಸುವವನಿಗೆ ರೋಗವಿಲ್ಲ.
A person who takes good and limited food regularly has no fear for any illness.

ಊಟ ಕೊಟ್ಟ ಮನೆ ಹಾಳಾಕಿಲೆ,
ಗೊಬ್ಬರ ಕೊಟ್ಟ ಮರ ಸಾಯಕಿಲೆ
ಆತಿಥ್ಯವನ್ನು ನೀಡಿದ ಮನೆ ವೃದ್ಧಿಯಾಗುತ್ತದೆ. ಆದರಾತಿಥ್ಯವೇ ಮನೆಯ ವೈಭವ. ಅಂತೆಯೇ ಗೊಬ್ಬರ ಹಾಕಿದ ಮರ ಎಂದೂ ಸಾಯಲಾರದು, ಅದು ಫಲ ನೀಡುತ್ತಾ ಇರುತ್ತದೆ.
Hospitality brings prosperity to the house likewise the tree always reaps fruits when we put fertilizer to it.

ಊಟಕ್ಕೆ ಇಲ್ಲದಿದ್ದರೂ ಉಪಚಾರಕ್ಕೆ ಕಡಿಮೆ ಇಲ್ಲೆ
ಬಡತನ ಇದ್ದರೂ ಆದರಾತಿಥ್ಯದಲ್ಲಿ ಕಡಿಮೆಯಾಗಬಾರದು
Poverty should not hinder hospitality.

ಊರಿಗೊಂದು ದಾರಿ ಆದರೆ ಪೋರಂಗೊಂದು ದಾರಿ
ಇಡೀ ಊರಿಗೇ ಒಂದು ನಿಯಮ ಮತ್ತು

ಕಟ್ಟುಪಾಡಿಗೆ ಒಳಪಟ್ಟು ವಾಸಿಸುತ್ತಿದ್ದರೆ, ಕಿಡಿಗೇಡಿಯೊಬ್ಬ ತನ್ನದೇ ದಾರಿ ಕಂಡು ಕೊಳ್ಳುತ್ತಾನೆ
A miscreant never hesitates to break the social systems of the society.

ಊರಿಗೆ ಅರಸ ಆದರೂ ಅಯ್ಯೆಗೆ ಮಂಜನೇ.
ಒಬ್ಬ ವ್ಯಕ್ತಿ ಎಷ್ಟೆ ದೊಡ್ಡ ವ್ಯಕ್ತಿಯಾದರೂ ತನ್ನ ತಂದೆ, ತಾಯಿ, ಗುರು, ತನ್ನ ಊರು ಹಾಗೂ ಬಂಧುಗಳಿಗೆ ಆತ ಸದಾ ಋಣಿಯಾಗಿರಬೇಕು.
Whatever may be the position of a person, he should be grateful to his parents, teachers and to his native place.

ಊರಿಗೊಂದು ದೇವಸ್ಥಾನ,
ಮನೆಗೊಂದು ಯಜ್ಮಾನ
ಒಂದು ಊರಿನಲ್ಲಿ ಸುವ್ಯವಸ್ಥಿತವಾದ ಸಾಮಾಜಿಕ ಹಾಗೂ ಧಾರ್ಮಿಕ ಜೀವನ ಇರಬೇಕೆಂದರೆ ಅಲ್ಲೊಂದು ದೇವಸ್ಥಾನ ಇರಬೇಕು. ಅಂತೆಯೇ ಮನೆಗೊಬ್ಬ ಯಜಮಾನನಿದ್ದಾಗ ಅಲ್ಲಿ ಕೂಡಾ ಸುವ್ಯವಸ್ಥೆ ಯನ್ನು ಕಾಣಬಹುದು
A temple for a village and a master for a house is necessary to maintain systematic and organized way of life.

ಊರು ಮೇಲೆ ಊರು ಬಿದ್ದರೆ ಶ್ಯಾನುಭೋಗರ ಶೇಟ ಹೋತು
ಜಗತ್ತು ಏನಾದರೂ ಬೇಜವಾಬ್ದಾರಿಗಳು ತಲೆಕೆಡಿಸಿಕೊಳ್ಳುವುದಿಲ್ಲ.
Irresponsible people do not care for the happenings around the world.

ಊರು ಕೊಳ್ಳೆ ಹೊಡ್ಡ ಮೇಲೆ,
ಕೋಟೆ ಬಾಗಿಲ್ ಮುಚ್ಚಿದಾಂಗೆ
ಎಲ್ಲವನ್ನೂ ಕಳೆದುಕೊಂಡ ಮೇಲೆ ಎಚ್ಚೆತ್ತು ಕೊಂಡಂತೆ
Awakening or realising after losing everything.

ಎಂಕು ಪಣಂಬೂರಿಗೆ ಹೋದಾಂಗೆ
ಜೀವನದಲ್ಲಿ/ ಯಾವುದೇ ಕೆಲಸದಲ್ಲಿ ಒಂದು ಸ್ಪಷ್ಟವಾದ ಗುರಿ ಬಿದ್ದೇಶ ಇಲ್ಲದಿರುವುದು.
No goal, purpose or ambition in life.

ಎಣ್ಣೆ ಹಾಕಿರೆ ಮೈಗೆ ಗುಣ,
ಮಣ್ಣ್ ಹಾಕಿರೆ ಮರಕ್ಕೆ ಗುಣ.
ಎಣ್ಣೆ ಲೇಪನ ಮಾಡಿದರೆ ದೇಹಕ್ಕೆ ಉತ್ತಮ ಅಂತೆಯೇ ಮಣ್ಣು ಸುತ್ತಲೂ ಹಾಕಿದರೆ ಮರಕ್ಕೆ ಉತ್ತಮ. ಸರಿಯಾದ ಸಾಕಣೆ ಪೋಷಣೆ ಇದ್ದರೆ ಬೆಳವಣಿಗೆ ಸಾಧ್ಯ
Growth or stability requires proper care, feeding and tending.

ಎತ್ತ್ ಏರಿಗೆಳ್ಯಕನ ಕೋಣ ನೀರಿಗೆಳ್ತ್
ಒಂದು ಗುಂಪಿನಲ್ಲಿ ಅಥವಾ ಒಂದು ಕುಟುಂಬ ದಲ್ಲಿ ಎರಡು ವಿಭಿನ್ನ ದೃಷ್ಟಿಕೋನಗಳು
Two opinions in a group or family.

ಎತ್ತ್‌ನ ನಂಬಿ ಬಿತ್ತಿ ಕಾಗದ್,
ನೆಂಟನ ನಂಬಿ ಬದುಕಿಕಾಗದ್
ನಾವು ಯಾವಾಗಲೂ ಪರಾವಲಂಬಿ ಗಳಾಗದೆ, ಸ್ವಾವಲಂಬಿಗಳಾಗಿ ಬದುಕಬೇಕು
We should always stand in our own legs. We should not be dependent to others.

ಎತ್ತಿ ಬೀಳ್ಸುವ ಕುದ್ರೆಂದ,
ಹೊತ್ತು ಸಾಗ್ಸುವ ಕತ್ತೆಲೇಸ್.
ನಮ್ಮನ್ನು ಬೆಂಬಲಿಸುತ್ತೇವೆ ಎಂದು ನಂಬಿಸಿ, ನಡು ನೀರಿನಲ್ಲಿ ಕೈಬಿಡುವ ನಯ ವಂಚಕ ಶೋಕಿ ಜನರಿಗಿಂತ, ಸ್ವಾಮಿ ನಿಷ್ಠೆಯಿಂದ ಸೇವೆ ಮಾಡುವ ಮುಗ್ಧ ಜನರನ್ನು ಯಾವಾಗಲೂ ನಂಬಬಹುದು.
We can believe innocent, loyal

people rather then the showy, dishonest people who give a lot of assurances.

ಎತ್ತಿಗೆ ಜ್ವರ ಎಮ್ಮೆಗೆ ಬರೆ
ಕೆಲವೊಂದು ಬಾರಿ ನಾವು ಸದುದ್ದೇಶದಿಂದ ಮಾಡುವ ಕಾರ್ಯಗಳು ಇತರರಿಗೆ ತೊಂದರೆ ಉಂಟು ಮಾಡುತ್ತದೆ
Some times the work that we carry on with good intent harms others.

ಎರಡು ಕೈ ಸೇರದೆ ಚಪ್ಪಾಳೆ ಆದುಲೆ
ಒಂದು ಜಗಳ, ವ್ಯಾಜ್ಯ, ಘರ್ಷಣೆ ನಡೆಯುವಾಗ ಅಲ್ಲಿ ಇಬ್ಬರ ಅಥವಾ ಇತ್ತಂಡಗಳ ಪಾತ್ರವು ಇದ್ದೇ ಇರುತ್ತದೆ
In case of a quarrel or dispute both the parties are equally responsible

ಎಲ್ಲವು ಕಾಯಿ ಹೆರಿಯುಕ್‌ನ ನಾವು ಚಿಪ್ಪಿಯಾರ್ ಹೆರಿಯೋಕಲ್ಲ
ಎಲ್ಲರೂ ಪಾಯಸ ತಿನ್ನುವಾಗ ನಾವು ಅನ್ನವಾದರೂ ತಿನ್ನಬೇಕಲ್ಲಾ? ಸಮಾಜದಲ್ಲಿ ಇತರರ ಜೊತೆ ನಾವು ಸರಿಸಮಾನವಾಗಿ ನಿಲ್ಲಲು ನಡೆಸುವ ಪ್ರಯತ್ನ.
One's effort to stand at par with our neighbours.

ಎಲ್ಲಾ ದಾನಗಳಿಂದ ಸಮಾಧಾನ ಮೇಲ್
ಸಮಾಧಾನವೇ ವ್ಯಕ್ತಿ ಸಮಾಜಕ್ಕೆ ಕೊಡುವ ದೊಡ್ಡ ದಾನ.
Patience is the highest reward one can give to the society.

ಎಲ್ಲಾ ಬಿಟ್ಟ ಭಂಗಿ ನೆಟ್ಟ
ಎಲ್ಲಾ ರಚನಾತ್ಮಕ ಕಾರ್ಯಗಳನ್ನು ಕೈಬಿಟ್ಟು ಸಮಾಜಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು.
Indulging in anti-social activities leaving all the constructive works.

ಎಲಿಗಳ ಮೇಲೆ ಸಿಟ್ಟ್‌ಲಿ ಮಾಡಿಗೆ ಕಿಚ್ಚಿ ಕೊಟ್ಟತ್‌ಗಡ
ಒಂದು ಸಣ್ಣ ಸಮಸ್ಯೆಯನ್ನು ಸುಲಭವಾಗಿ ನಿವಾರಿಸುವ ಬದಲು ಅದನ್ನೊಂದು ದೊಡ್ಡ ಘಟನೆಯನ್ನಾಗಿ ಮಾರ್ಪಡಿಸಿ, ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಿ ಮತ್ತೆ ಸರಿಪಡಿಸುವುದು.
Rather than solving silly problems in a simple way, making it a big issue and finding a solution after facing so many difficulties and losses.

ಎಷ್ಟ್ ಮರ್ಟರೂ ಸತ್ತಂವ ಹುಟ್ಟಿ ಬಾದುಲೆ
ನಾವು ಎಷ್ಟೇ ಪಶ್ಚಾತ್ತಾಪ ಪಟ್ಟರೂ ಆಗಿ ಹೋದ ತಪ್ಪನ್ನು ಸರಿಪಡಿಸಲು ಸಾಧ್ಯವಿಲ್ಲ.
Whatever may be the repentance it is not possible to set right the mistake done.

ಐಶ್ವರ್ಯ ಬಾಕನ ಅರ್ಧ ರಾತ್ರಿಲಿ ಕೊಡೆ ಹಿಡ್ದಾಂಗೆ
ಶ್ರೀಮಂತಿಕೆ ಬಂದಾಗ ನಾವು ಬುದ್ಧಿಶಕ್ತಿ, ವಿವೇಕವನ್ನು ಕಳೆದುಕೊಳ್ಳುತ್ತೇವೆ
Richness fades our wisdom, rationality, politeness and mannerisms.

ಒಂದ್ ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ
ಸ್ವಾರ್ಥಕ್ಕಾಗಿ ಪಕ್ಷಪಾತತನ ತೋರಿಸುವುದು
Showing partiality for selfishness.

ಒಂದ್ ಹೆತ್ತರೂ ಅಯ್ಯೆ, ಹತ್ತ್ ಹೆತ್ತರೂ ಅಯ್ಯೆ
ಒಂದು ಮಗುವಿದ್ದರೂ, ಹತ್ತು ಮಕ್ಕಳಿದ್ದರೂ ತಾಯ್ತನದ ಅನುಭವ ಒಂದೇ ಆಗಿರುತ್ತದೆ. ಒಂದೇ ತೆರನಾದ ಒಂದು ಘಟನೆ ಇರಬಹುದು ಅಥವಾ ಹತ್ತು ಘಟನೆ ಇರಬಹುದು ಪಡೆಯುವ ಅನುಭವ ಒಂದೇ ಆಗಿರುತ್ತದೆ
The experience we get is similar even if it is one incident or several incidents.

ಒಂದ್ ಹೆತ್ತದ್ ಹತ್ತ್ ಹೆತ್ತದಕ್ಕೆ ಬುದ್ಧಿ ಹೇಳ್ತ್‌ಗಡ
ಕಡಿಮೆ ಅನುಭವ ಇರುವವರು ಹೆಚ್ಚು ಅನುಭವ ಇರುವವರಿಗೆ ಬುದ್ಧಿ ಹೇಳಿದಂತೆ
Less experienced people advising the more experienced people.

ಒಂದೇ ಹಟ್ಟಿಲಿರುವ ದನಂಗಳೂ ಒಮ್ಮೊಮ್ಮೆ ಕುತ್ತಿ ಕಂಡವೆ
ಒಂದು ಕುಟುಂಬದ ಒಳಗಿನ ಸದಸ್ಯರೂ ಒಮ್ಮೊಮ್ಮೆ ಜಗಳ ಮಾಡಿಕೊಳ್ಳುವುದು ಸಹಜ
It is natural that some times even the members of a family also quarrel among each other.

ಒಟ್ಟಿಗೆ ದುಡಿಯೊಕು, ಒಟ್ಟಿಗೆ ತಿನೊಕು
ಜೊತೆಗೂಡಿ ಕೆಲಸ ಮಾಡಬೇಕು. ಜೊತೆ ಗೂಡಿ ಅದರ ಫಲವನ್ನು ಅನುಭವಿಸಬೇಕು.
We should work together and together enjoy its benefits.

ಒಪ್ಪದ ಸೀರೆ ಒಂಭತ್ತಿದ್ದರೇನ್
ಮನಸ್ಸಿಗೊಪ್ಪದ ಸುಖಃ ಎಷ್ಟಿದ್ದರೇನು. ಮಾನಸಿಕ ನೆಮ್ಮದಿ ಇಲ್ಲದಿದ್ದರೆ ಶ್ರೀಮಂತಿಕೆ ಇದ್ದರೇನು ಪ್ರಯೋಜನ
Richness is of little account without mental happiness or contentment.

**ಒಲ್ಲಿ ತಲೆ ಮುಚ್ಚಿರೆ ಕಾಲ್ ಕಂಡದೆ,
ಕಾಲ್ ಮುಚ್ಚಿರೆ ತಲೆ ಕಂಡದೆ**
ಅನೇಕ ಬಾರಿ ನಮ್ಮ ಆದಾಯ ಮತ್ತು ಖರ್ಚು ಹೊಂದಾಣಿಕೆಯಾಗುವುದಿಲ್ಲ
Difficulties in meeting both ends.

ಒಲೆಲಿ ಹೊಗೆ ಹೋದರೆ ಮನೆ ತುಂಬಾ ನೆಂಟ್ರ್
ಮನೆಯ ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದರೆ ನೆಂಟರಿಷ್ಟರು ನಮ್ಮ ಜೊತೆಗಿದ್ದಾರೆ.
Relatives throng us if our economic position is good.

ಒಲೆಗೊಂದು ಕೊಳ್ಳಿ, ಮನೆಗೊಂದು ಅಜ್ಜಿ
ಒಲೆಯಲ್ಲೊಂದು ಕೊಳ್ಳಿ ಇದ್ದರೆ ಒಲೆಯಲ್ಲಿ ಬೆಂಕಿ ಸದಾ ಇರುತ್ತದೆ. ಅದರಂತೆ ಮನೆ ಯಲ್ಲೊಬ್ಬರು ಅಜ್ಜಿ ಇದ್ದರೆ ಇಡೀ ಮನೆಯಲ್ಲಿ ಸದಾ ಲವಲವಿಕೆ ಇರುತ್ತದೆ.
Grand mothers in the house all the time keep the houses lively.

ಒಳಗಿನ ಗುಟ್ಟು ಶಿವನೇ ಬಲ್ಲ
ಕೆಲವೊಂದು ಜೀವನದ ರಹಸ್ಯಗಳು ನಮಗೆ ತಿಳಿಯದಿದ್ದಾಗ ನಾವು ದೇವರ ಕೃಪೆಯನ್ನು ಯಾಚಿಸುತ್ತೇವೆ.
We own every thing to God when we sometime do not know some of the secrets of life.

ಓಟು ಕೇಳುವ ಇಂದ್‌ನ ಭಿಕ್ಷುಕರೇ ನಾಳೆನ ಭಕ್ಷಕರ್
ಇಂದಿನ ಹಲವು ರಾಜಕಾರಿಣಿಗಳು ಇಂದು ಓಟು ಬೇಡುತ್ತಾರೆ. ನಾಳೆ ಗೆದ್ದು ಬಂದು ನಾಯಕರಾಗಿ ಭ್ರಷ್ಟಾಚಾರಿಗಳಾಗುತ್ತಾರೆ.
The politicians of today beg for vote and after winning the elections they make money in immoral ways.

ಓದು ಒಕ್ಕಾಲ್, ಬುದ್ಧಿ ಮುಕ್ಕಾಲ್
ಚೆನ್ನಾಗಿ ಓದಿ ಬುದ್ಧಿವಂತನೂ ಆಗಲಿಲ್ಲ, ಜೀವನಾನುಭವದ ಮುಖಾಂತರ ಬುದ್ಧಿ ಯನ್ನು ಗಳಿಸಿಕೊಳ್ಳಲಿಲ್ಲ.
He has neither gained knowledge through studies nor gained wisdom through experience.

ಕಕ್ಕೆಗೆ ಕತ್ತಲೆ ಆಕಿಲೆ, ಗುಮ್ಮಂಗೆ ಹಗಲ್ ಆಕಿಲೆ
ಕಾಗೆ ಹಗಲಿಗೆ ಹೊಂದಿಕೊಂಡ ಪಕ್ಷಿ, ಆದುದರಿಂದ ಅದಕ್ಕೆ ರಾತ್ರಿ ಆಗದು. ಗೂಬೆ ರಾತ್ರಿಗೆ ಹೊಂದಿಕೊಂಡ ಪಕ್ಷಿ. ಆದುದರಿಂದ ಅದಕ್ಕೆ ಹಗಲು ಆಗದು. ನಾವು ಯಾವ ವಾತಾವರಣಕ್ಕೆ ಹೊಂದಿಕೊಳ್ಳುತ್ತೇವೆಯೋ

ಅದೇ ವಾತಾವರಣದಲ್ಲಿ ಕ್ರಿಯಾಶೀಲ ರಾಗಿರುತ್ತೇವೆ.
We are active only in the environment where we are accustomed to.

ಕಟ್ಟಿ ಕೊಟ್ಟ ಬುತ್ತಿ, ಹೇಳಿಕೊಟ್ಟ ಬುದ್ಧಿ ಬಾಳಿಕೆ ಬಾಕಿಲೆ
ತಾನೇ ಗಳಿಸಬೇಕು. ತಾನೇ ಬದುಕು ಸಾಗಬೇಕು, ತನ್ನ ಅನುಭವದಿಂದ ತಾನು ಬುದ್ಧಿವಂತನಾಗಬೇಕು.
One should stand in his own legs and gain knowledge through his own experience.

ಕಡ್ದ ಕತ್ತಿಗೂ ಗಂಧದ ಮರ ಪರ್ಮಳ ಕೊಟ್ಟದೆ
ಸಜ್ಜನರು ತಮಗೆ ಅವಮಾನ ಮಾಡಿದವರಿಗೂ ಬಹುಮಾನ ನೀಡುತ್ತಾರೆ.
Sandalwood tree gives its perfume even to the axe which cuts it.

ಕಡ್ಡೆಗೆ ಕಾಲ್ ಬಚ್‌ಕನ ನಾಯಿಗೆ ಹೇಲ್‌ಬಾತ್
ಇನ್ನೇನ್ ಪರಿಹಾರ ದೊರೆಯಿತು, ಯಶಸ್ಸು ದೊರೆಯಿತು ಎನ್ನುವಷ್ಟರಲ್ಲಿ ನಮ್ಮ ಪ್ರಯತ್ನಕ್ಕೆ ಏನಾದರೊಂದು ತೊಡಕುಂಟಾಗುವುದು.
Facing some problem at the final stage of our successful attempt.

ಕಣ್ಣ್ ಕಾಣದ ನಾಯಿಗೆ ಹೇಲ್ ತೋರ್ಸಿದಾಂಗೆ
ದಿಕ್ಕು ತೋಚದವನಿಗೆ ಸಂಪತ್ತು ಒದಗಿ ಬಂದಂತೆ.
Getting fortune for a poverty stricken desperate person.

ಕಣ್ಣಿಗೆ ಕಂಪು, ಮಣ್ಣಿಗೆ ತಂಪು
ಕಣ್ಣಿಗೆ ಹಿತವಾಗಿ ಕಾಣುವಂತಾದ್ದು ಪರಿಸರಕ್ಕೂ ತಂಪು, ನೆಮ್ಮದಿ ನೀಡಬಲ್ಲುದು.
The thing which is pleasant to our eyes is also favourable to the environment.

ಕತ್ತಲೆಗೆ ಕಂಡ ಬಾಮಿಗೆ ಹಗಲ್ ಬಿದ್ದಾಂಗೆ
ತಿಳಿದೂ ತಿಳಿದೂ ಸೋಲನ್ನು ಆಹ್ವಾನಿಸಿದಂತೆ
Knowingly inviting the defeat.

ಕತ್ತೇಗೇನ್ ಗೊತ್ತು ಗಂಧದ ಪರ್ಮಳ
ಅನಕ್ಷರಸ್ಥನಿಗೆ ಸಾರಸ್ವತ ಲೋಕದ ಸವಿ ಏನು ಗೊತ್ತು; ಅಜ್ಞಾನಿಗೇನುಗೊತ್ತು ಜ್ಞಾನದ ಮೌಲ್ಯ
An illiterate person can't enjoy the taste of literary world

ಕತ್ತೆ ಮೇದಲ್ಲಿ ಮತ್ತೆ ಮೇವಿಲ್ಲೆ
ಒಂದು ವಿಷಯದ ಮೇಲೆ ಏನನ್ನೂ ಬಾಕಿ ಮಾಡದೆ ಬೆಳಕು ಚೆಲ್ಲುವುದು.
Throwing light on some subject completely without leaving anything; totally covering the subject.

ಕದ್ದ್ ತಿಂಬೊದಕ್ಕಿಂತ ಬೇಡಿ ತಿಂಬೊದು ಒಳ್ಳದ್
ಕಳ್ಳತನ ಮಾಡಿ ಬದುಕುವುದಕ್ಕಿಂತ ಭಿಕ್ಷೆ ಎತ್ತಿ ಬದುಕುವುದು ಒಳಿತು.
It is better to live by begging rather than live by stealing.

ಕನಸ್‌ನ್ ನೆಂಟ್ ಕನ್ನಡಿ ಒಳಗೆನ ಗಂಟ್
ಕನಸಿನಲ್ಲಿ ಉಂಟಾಗುವ ಸಂತೋಷ, ಸಂಭ್ರಮಗಳು ಕನ್ನಡಿ ಒಳಗೆ ಸಂಪತ್ತು ನೋಡಿದಂತೆ.
The happiness and splendor that we get in the dreams are as good as the wealth that we see in the mirror.

ಕತ್ತೆ ಉಬ್ಬುದರ್‌ಂದ ಎತ್ತ್ ಯಾಗೋಳ್ ಆಕಿಲೆ
ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಒಂದು ಮಿತಿ ಇದೆ. ಅದನ್ನು ಮೀರಲು ಸಾಧ್ಯವಿಲ್ಲ.
Each and every person has a limit and one can't cross it.
(ಕಿರಿಬೆರ್‌ಳ್ ಎಷ್ಟ್ ಬಾಪಿರೂ ಹೆಬ್ಬೆರಳ್ ಆಕಿಲೆ)

ಕಬ್ಬಿಣ ಕಾಯಕನ ಹೊಡ್ಕಣಕು
ಸಂದರ್ಭ ನೋಡಿ ಕೆಲಸ ಸಾಧಿಸಿಕೊಳ್ಳಬೇಕು.
Strike the rod when it is hot.

ಕಮ್ಮಾರನ ಮನೆಲಿ ಸೂಜಿ ಸಿಕ್ಕಿಕಿಲೆ
ಅವರವರ ಆಸಕ್ತಿ, ಅಭಿರುಚಿಗಳಿಗನುಗುಣ ವಾಗಿ ಅವರು ಸಮರ್ಥರಿರುತ್ತಾರೆ. ಉಳಿದ ವಿಚಾರಗಳು ಅವರಿಗೆ ತಿಳಿದಿರುವುದಿಲ್ಲ.
People are particular only in their fields, they are not skilful in other fields.

ಕರ್‌ನ ಸೆಗಣಿ ಶುದ್ಧಕ್ಕೆ ಸಾಲದ್ :
ಚಿಕ್ಕವರ ಸಾಮರ್ಥ್ಯ ಮತ್ತು ಅನುಭವಗಳು ಕೆಲವೊಂದು ಕೆಲಸಗಳ ನಿರ್ವಹಣೆಗೆ ಸಾಕಾಗುವುದಿಲ್ಲ.
Some times the capacity and the experience of the younger generation may not be enough to execute some important works.

ಕರಣ ತಪ್ಪಿರೆ ಮರಣ
ಜ್ಞಾನಶಕ್ತಿ ಅಥವಾ ಬುದ್ಧಿ ಕಳೆದುಕೊಂಡರೆ ಸೋಲು ನಿಶ್ಚಿತ.
Failure is inevitable if we lose our senses.

ಕರುಬುಡಿಕೆ ಹೋಕನ ದನ
ಹೂಟೆಗೆ ಹೋಕನ ಎತ್ತ್.
ತನ್ನ ತನ್ನ ಕೆಲಸ ಕಾರ್ಯಗಳಿಗೆ ಸೂಕ್ತವಾದ ಸನ್ನಿವೇಶಗಳನ್ನು ನಿರ್ಮಾಣ ಮಾಡಿಕೊಳ್ಳಬೇಕು.
We have to create suitable situation while executing the works.

ಕಷ್ಟ ಬಾರದೆ ಇಷ್ಟ ಇಲ್ಲೆ
ಕಠಿಣ ದುಡಿಮೆ ಮಾತ್ರ ಯಶಸ್ಸು ತಂದು ಕೊಡಬಲ್ಲುದು.
Head work alone is the key to success.

ಕಳ್ಳನ ಹೆಜ್ಜೆ ಕಳ್ಳಂಗೇ ಗೊತ್ತು
ಕೆಲವೊಂದು ವೃತ್ತಿ ರಹಸ್ಯಗಳು ಆಯಾ ವೃತ್ತಿಯವರಿಗೆ ಮಾತ್ರ ತಿಳಿದಿರುತ್ತದೆ.
Some of the professional secrets are known to the people of those professions only.

ಕಳ್ಳನ ಮನ್ಸ್ ಹುಳ್ಳಂಗೆ ಹುಳ್ಳಂಗೆ
ಪ್ರತಿಯೊಬ್ಬ ತಪ್ಪಿತಸ್ಥನೂ ಅಪರಾಧಿ ಮನೋಭಾವದಿಂದ ನರಳುತ್ತಾನೆ.
Each and every guilty person suffer from guilty consciousness.

ಕಳ್ಳಂಗೆ ಕೊಳ್ಳಿ ನೆವನ
ಕೆಲಸದಲ್ಲಿ ಆಸಕ್ತಿ ಇಲ್ಲದ ಸೋಮಾರಿ ಏನಾದ ರೊಂದು ಕಾರಣ ನೀಡಿ ತಪ್ಪಿಸಿಕೊಳ್ಳುತ್ತಾನೆ.
A lazy man gives some excuses to avoid the hard work.

ಕಾನೂನು ಬಡವನ ಹೀರ್‌ದೆ,
ಶ್ರೀಮಂತ ಕಾನೂನುನ ಹೀರ್‌ದೆ.
ನಮ್ಮ ಪ್ರಚಲಿತ ಕಾನೂನುಗಳು ಬಡವರನ್ನು ಶೋಷಣೆಗೆ ಒಳಪಡಿಸಿದರೆ, ಶ್ರೀಮಂತರು ಕಾನೂನನ್ನು ಮೀರಿ ನಿಲ್ಲುತ್ತಾರೆ.
Law squeezes the poor but the rich squeeze the law.

ಕಾಮಾಲೆ ಕಣ್ಣ್‌ನವ್‌ಕೆ ಜಗತ್ತೆಲ್ಲಾ ಅರ್‌ಶಣ
ಕೆಲವರಿಗೆ ಇಡೀ ಜಗತ್ತು ತನ್ನ ದೃಷ್ಟಿಕೋನ ದಂತೆ ಕಂಡುಬರುತ್ತದೆ.
For some, the world appears according to their mentality.

ಕಾಯರ ಮರದ ಕಡೆ ಕೊಡಿ ಒಂದೇ
ಕಾಸರಕನ ಮರದ ಬುಡವು ಕಹಿ, ಚಿಗುರು ಕೂಡಾ ಕಹಿ. ಅಂತೆಯೇ ಕೆಲವೊಂದು ಮನೆ ಯಲ್ಲಿ ಅಜ್ಜ, ಮಗ, ಮೊಮ್ಮಗ ಎಲ್ಲರೂ ಒಂದೇ ರೀತಿಯ ಕೆಟ್ಟ ಭಾವನೆಯವರಾಗಿರುತ್ತಾರೆ.
In a house all the people have the

same wicked ideas.

ಕಾಲ್ ಜಾರಿಕಾಗದ್, ನಾಲಗೆ ಮೀರಿಕಾಗದ್
ನಮ್ಮ ಕೆಲಸ ಕಾರ್ಯಗಳಲ್ಲಿ ನಾವು ತಪ್ಪಿ ಹೋಗಬಾರದು ಅಂತೆಯೇ ನಮ್ಮ ಮಾತುಗಳು ಕೂಡಾ ಸೌಜನ್ಯತೆಯಿಂದ ಕೂಡಿದ್ದು ಮಿತಿ ಮೀರಬಾರದು.
We should not commit any mistakes in our activities and in the same way we should also be careful while speaking.

ಕಾಲ್‌ನ ಮೆಟ್ಟ್ ಕಾಲ್‌ಲೇ ಬೇಕು
ನಾವು ಗೆಳೆತನ ಬೆಳೆಸುವಾಗ ತುಂಬಾ ಜಾಗರೂಕರಾಗಿರಬೇಕು. ಕೆಲವರನ್ನು ನಾವು ಎಲ್ಲಿ ಇರಿಸಬೇಕೋ ಅಲ್ಲೆ ಇರಿಸಬೇಕು. ದುಷ್ಟರನ್ನು ಹತ್ತಿರ ಮಾಡಿಕೊಳ್ಳಬಾರದು.
Keep the wicked away from us.

ಕಾವಿ ಉಟ್ಟವೆಲ್ಲಾ ಸನ್ಯಾಸಿಗಲ್ಲ.
ಉಡುಗೆ ತೊಡುಗೆಯಲ್ಲಿ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಅಳೆಯಲು ಸಾಧ್ಯವಿಲ್ಲ.
It is not possible to judge the personality of a person by looking at his dress.

ಕಾವ್ಲಿಂದ ಕಿಚ್ಚಿಗೆ ಬಿದ್ದಾಂಗೆ
ಕಾವಲಿಯಿಂದ ಬೆಂಕಿಗೆ ಬಿದ್ದ ಹಾಗೆ. ಬಂದ ಕಷ್ಟ ಇನ್ನಷ್ಟು ಉಲ್ಬಣಿಸಿದಂತೆ.
The problems and difficulties gets more and more worse.

ಕಾಸಿಗೆ ಹೋದರೆ ಕಾಸಿಗೊಂದು ಕುದುರೆ
ಕೆಲವೊಂದು ವಸ್ತುಗಳು ಧಾರಾಳವಾಗಿ ದೊರೆಯುವ ಪ್ರದೇಶದಲ್ಲಿ ಅವುಗಳ ಬೆಲೆ ತುಂಬಾ ಕಡಿಮೆಯಿರುತ್ತದೆ.
The price of some goods is quite cheaper where it is available in abundance.

ಕಾಶಿಗೆ ಹೋದರೂ ಆಶೆ ಹೋಕಿಲೆ
ಮನುಷ್ಯ ತನ್ನ ಜೀವಮಾನದ ಕೊನೆಯ ದಿನಗಳಲ್ಲಿ ತೀರ್ಥಯಾತ್ರೆ ಮಾಡಿ ಬಂದರೂ ಆತನಲ್ಲಿರುವ ಆಶೆ, ಸ್ವಾರ್ಥ, ಜಿಪುಣತನ ಮರೆಯಾಗದು.
The greediness, selfishness will not vanish in a person even after making the pilgrimage at the end of his life.

ಕಾಶಿಗೆ ಹೋದರೆ ಕತ್ತೆ ಕುದುರೆ ಆದೇನಾ?
ಎಷ್ಟು ತೀರ್ಥಯಾತ್ರೆ ಮಾಡಿದರೂ, ಎಷ್ಟು ದೇವರನ್ನು ಪೂಜಿಸಿದರೂ ವ್ಯಕ್ತಿಯ ಮೂಲಭೂತ ಗುಣಗಳು ಬದಲಾಗುವುದಿಲ್ಲ.
The basic nature of a person will not change even if he makes a pilgrimage or lot of prayers to God.

ಕಾಳಂಗೆ ಬಂದದ್ ಬೋಳಂಗೆ ಬಾರದಿರ್ದುಲೆ
ದೇಶದ ಕಾನೂನು, ಸಮಾಜ ನೀತಿ, ನಿಯಮ ಕಟ್ಟುಪಾಡುಗಳು ಎಲ್ಲರಿಗೂ ಸಮಾನವಾಗಿರುತ್ತದೆ.
The law of the land applies equally to all.

ಕಿಚ್ಚಿ ಇಲ್ಲದೆ ಹೊಗೆ ಹೋದುಲೆ
ಕಾರಣ ಇಲ್ಲದೆ ಯಾವುದೇ ಸಮಸ್ಯೆ, ಘರ್ಷಣೆ, ಜಗಳ ಉಂಟಾಗುವುದಿಲ್ಲ.
With out a reason or cause there will not be any issues, quarrels or frictions.

ಕುಂಟಂಗೆ ಎಂಟು ಬುದ್ಧಿ
ಕುಳ್ಳಗಿನ/ಕುಂಟುತ್ತಾ ನಡೆಯುವವನಿಗೆ ವಿಪರೀತ ಬುದ್ಧಿ ಎಂದು ಹೇಳುತ್ತಾರೆ. ಅಂಗವಿಕಲರೂ ಕೂಡಾ ಹೆಚ್ಚಿನ ಇಂದ್ರಿಯ ಶಕ್ತಿ ಹೊಂದಿರುತ್ತಾರೆ ಎಂದು ಹೇಳುತ್ತಾರೆ.
It is said that the dwarf, crippled and handicapped are gifted with more intelligence.

ಕುಂಬಳ ಕಾಯಿಕದ್ದಂವ ಹೆಗ್‌ಲ್ ಮುಟ್ಟಿ ನೋಡ್ತ್
ಅಪರಾಧಿ ಮನೋಭಾವ ಕಾಡುವಿಕೆ.
Feeling of guilty consciousness.

ಕುಂಬಾರಂಗೆ ವರ್ಷ ದೊಣ್ಣೆಗೆ ನಿಮಿಷ
ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡು ಓರ್ವ ಮಾದರಿ ವ್ಯಕ್ತಿ ಎಂದೆಣಿಸಿಕೊಳ್ಳಲು ಅನೇಕ ವರ್ಷಗಳು ಬೇಕು. ಆದರೆ ಅದೇ ವ್ಯಕ್ತಿತ್ವವನ್ನು ಹಾಳುಗೆಡವಲು ಒಂದು ಚಿಕ್ಕ ಘಟನೆ ಸಾಕು.
It takes a long time to build up an ideal personality but one minute is enough to spoil the same.

ಕುಡಿಯಕೆ ಆದೇಂತ ಎಣ್ಣೆ ಕುಡಿಯಕೆ ಆದೆನಾ?
ನಾವೊಂದು ಕೆಲಸ ಮಾಡುವಾಗ ಅದನ್ನು ನಿಯತ್ತಾಗಿ, ನೈತಿಕ ತಳಹದಿಯಲ್ಲಿ ಮಾಡ ಬೇಕು. ಹಾಗೆ ಮಾಡಲು ಸಾಧ್ಯವಿಲ್ಲದಿದ್ದಾಗ ಕೆಟ್ಟದಾರಿ ಹಿಡಿಯಲಾಗುತ್ತದೆಯೇ?
It is not fair to execute a work in an anti- social or unjust manner.

ಕುದ್ದು ತಿಂಬವಂಗೆ ಹೊನ್ನ ರಾಶಿನೂ ಸಾಲದು
ಏನನ್ನೂ ಗಳಿಸದೇ ಆರಾಮವಾಗಿ ಖರ್ಚು ಮಾಡಿಕೊಂಡು ಕಾಲ ಕಳೆಯುವವನಿಗೆ ಎಷ್ಟೇ ಸಂಪತ್ತಿದ್ದರೂ ಸಾಲದು.
Any amount of wealth is not enough for a person who is idle and never earns anything.

ಕುರುಡರ ರಾಜ್ಯಲಿ ಒಕ್ಕಣ್ಣ ರಾಜ
ಅಜ್ಞಾನಿಗಳ ಮಧ್ಯೆ ಅಲ್ಪಜ್ಞಾನಿ; ಬಡವರ ಮಧ್ಯೆ ಒಂದಷ್ಟು ಶ್ರೀಮಂತ; ಎರಡೂ ಕಾಲು ಇಲ್ಲದವರ ಮಧ್ಯೆ ಒಂದು ಕಾಲಿನವ ಅಂತೆಯೇ ಕುರುಡರ ಮಧ್ಯೆ ಒಕ್ಕಣ್ಣ ನಾಯಕ ನಾಗುತ್ತಾನೆ.
A man with one eye becomes a leader in the land of blind people.

ಕುರುಡು ಕಣ್ಣ್‌ಗಿಂತ ಕೋಸ್ ಕಣ್ಣ್ ಮೇಲ್
ಏನೂ ಅವಕಾಶ ಇಲ್ಲದಿರುವುದರಿಂದ ಅಲ್ಪ ಅವಕಾಶ ಮೇಲು
Little opportunity is better than no opportunity

ಕೂಸು ಮರ್ಡದೆ ಅಯ್ಯೆ ಹಾಲ್‌ಕೊಡಿಕಿಲೆ
ಬೇಡಿಕೆ ಇಲ್ಲದೆ ಯಾವುದೇ ಯೋಜನೆಗಳು ಈಡೇರಲಾರವು
Demands will not be fulfilled unless we cry for it.

ಕೂಸು ಹುಟ್ಟಿಕೆ ಮುಂದೆ ಕೂಸಿಗೆ ಅಂಗಿ ಹೊಲ್ಸಿದಾಂಗೆ
ಯೋಜನೆ ಪೂರ್ತಿಯಾಗುವುದಕ್ಕೆ ಮೊದಲೇ ಯೋಜನೆಯ ಫಲವನ್ನು ನಿರೀಕ್ಷಿಸಿ ಆನಂದಿಸುವುದು.
Enjoying the expected returns of the project before it is executed.

ಕೆಟ್ಟ್ ನೆಂಟ್ರ ಸೇರ್ಬಡ, ಕೊಟ್ಟ ದಾನ ತಿರ್ಗಿ ಕೇಳ್ಬಡ
ಎಲ್ಲವನ್ನು ಕಳಕೊಂಡು ನೆಂಟ್ರಮನೆಗೆ ಸೇರಿದರೆ ಅವಮಾನ ಕಟ್ಟಿಟ್ಟ ಬುತ್ತಿ. ಅಂತೆಯೇ ನೀಡಿದ ದಾನವನ್ನು ಎಂದೂ ಹಿಂದಿರುಗಿಸು ಎಂದು ಕೇಳಬಾರದು.
Don't fall in to the feet of the relatives after losing everything and don't ask to return the donation given.

ಕೆಟ್ಟ ಮೇಲೆ ಬುದ್ಧಿ
ಸೋಲಿನಲ್ಲಿ ಗೆಲುವಿನ ಪಾಠ
Lesson learnt after the failure

ಕೆಟ್ಟ ಕಣ್ಣ್‌ಗ ಒಳ್ಳದರ ಮಾಡಿಕಿಲೆ,
ಒಳ್ಳ ಕಣ್ಣ್‌ಗೆ ಕೆಟ್ಟದರ ನೋಡಿಕಿಲೆ
ಕೆಟ್ಟ ದೃಷ್ಟಿ ಕೋನದಿಂದ ಒಳ್ಳೆಯದನ್ನು ಮಾಡ ಲಾಗುವುದಿಲ್ಲ ಅಂತೆಯೇ ಒಳ್ಳೆಯ ಹೃದಯವಂತಿಕೆಯ ಕಣ್ಣುಗಳು ಕೆಟ್ಟದನ್ನು ನೋಡಲಾರವು.

Negative thinking will not enable us to do some good things and positive thinking will not allow us to see bad things.

ಕೆಟ್ಟವರ ಸಹವಾಸ ಬೇಡ,
ಕೊಟ್ಟವರ ಹಗೆತನ ಬೇಡ

ದುಷ್ಟರ ಸಂಗ ಅಭಿಮಾನ ಭಂಗ; ನಮಗೆ ಹೆಣ್ಣು, ಹೊನ್ನು, ಮಣ್ಣು ನೀಡಿ ಸಹಕರಿಸಿದವರ ಜೊತೆ ಎಂದೂ ಹಗೆತನ ಮಾಡಬೇಡ.

Don't fall into the company of wicked and don't develop any hatredness on those who have helped you.

ಕೆಟ್ಟ ಊಟಂದ ದಿನ ಹಾಳ್,
ಕೆಟ್ಟ ಹೆಣ್ಣ್ಂದ ರಾತ್ರಿ ಹಾಳ್

ಊಟ ಕೆಟ್ಟದಾದರೆ ಹಗಲು ಹೊತ್ತಿನ ಕೆಲಸ ಮಾಡಲು ಉತ್ಸಾಹ ಇಲ್ಲದಾಗುತ್ತದೆ; ಹೆಂಡತಿ ಕಿರಿಕಿರಿ ಮಾಡಿದರೆ ರಾತ್ರಿಯ ವಿಶ್ರಾಂತಿಯೂ ಹಾಳಾಗುತ್ತದೆ.

Stale food spoils the day's work and the scolding of the wife spoils the rest of the night.

ಕೇಡ್ ಮಾಡ್ರೆ ಕೇಡ್ ತಪ್ಪಿಕಿಲೆ

ನಾವು ಇನ್ನೊಬ್ಬರಿಗೆ ಕೇಡು ಬಗೆದರೆ ಅದು ನಮಗೇ ಕೇಡು ಬಗೆದಂತೆ.

If we hate others, it will definetely have its adverse effect.

ಕೆಲಸ ಇಲ್ಲದ ಆಚಾರಿ ಕೂಸ್‌ನ ಕುಂಡೆ ಕೆತ್ತಿತ್

ಏನೂ ಕೆಲಸ ಇಲ್ಲದ ವ್ಯಕ್ತಿಯ ಮನಸ್ಸು ಕೆಟ್ಟದ್ದನ್ನೂ ಯೋಚಿಸುತ್ತದೆ.

An evil mind is the devil's work shop.

ಕೆಲಸದ ದಡ್ಡಿಗೆ, ಮಕ್ಕಳ ಅಡ್ಡಿ

ಕೆಲಸ ಮಾಡಿ ಅನುಭವ ಇಲ್ಲದ, ಆಸಕ್ತಿ ಇಲ್ಲದ ಹೆಂಗಸಿಗೆ ಕೆಲಸ ಮಾಡಲು ಮಕ್ಕಳು ಅಡ್ಡಿ ಮಾಡಿದರೆಂಬ ನೆವನ.

A lazy lady accuses her children that they are not allowing her to work.

ಕೇರೆ ತಿಂಬವರ ಊರಿಗೆ ಹೋದರೆ ನಡು ತುಂಡಿಗೆ ಕೈ ಹಾಕೊಕು

ನಾವು ಇನ್ನೊಂದು ಊರಿಗೆ ಹೋದರೆ ಅವರ ಸಂಪ್ರದಾಯ, ರೀತಿ, ರಿವಾಜುಗಳು ಹಾಗೂ ಆಹಾರ ಕ್ರಮಕ್ಕೆ ನಾವು ಆದಷ್ಟು ಬೇಗನೇ ಹೊಂದಿಕೊಳ್ಳಬೇಕು.

If we go to some unknown places, we have to adjust with their customs, lifestyle and food habits.

ಕೇಳ್ದೆಲ್ಲಾ ನಂಬಿಕಾಗದ್,
ಗೊತ್ತಿದ್ದದ್ದೆಲ್ಲಾ ಹೇಳಿಕಾಗದ್

ಸರಿಯಾಗಿ ವಿಮರ್ಶೆ ಮಾಡದೆ ಕೇಳಿದ್ದನ್ನೆಲ್ಲಾ ನಂಬಬಾರದು, ಅಂತೆಯೇ ನಮಗೆ ತಿಳಿದದ್ದನ್ನೆಲ್ಲಾ ಹೇಳಲು ಹೋಗಬಾರದು, ಏಕೆಂದರೆ ಅವುಗಳೆಲ್ಲಾ ಸರಿ ಇಲ್ಲದಿರಬಹುದು.

We should not believe whatever is heard likewise we should not tell whatever is there in our mind.

ಕೈ ಕೆಸರಾದರೆ ಬಾಯಿ ಮೊಸರು

ಕಠಿಣ ದುಡಿಮೆ ಬಿಟ್ಟರೆ ಯಶಸ್ಸಿಗೆ ಅನ್ಯ ಮಾರ್ಗವಿಲ್ಲ.

Hard work alone is the key to success.

ಕೈಗೆ ಬಂದ ತುತ್ತು ಬಾಯಿಗೆ ಬಾತ್ಲೆ

ಇನ್ನೇನು ಫಲವನ್ನು ಅನುಭವಿಸಬೇಕೆನ್ನುವಷ್ಟರಲ್ಲಿ ಅವಕಾಶ ವಂಚಿತನಾಗುವುದು.

One could not reap the benefits at the final stage.

ಕೈಗೆ ಕೈ ಸೇರ್‌ರೆ ಚಪ್ಪಾಳೆ,
ಮಾತಿಗೆ ಮಾತ್ ಬೆಳ್‌ದರೆ ಜಗಳ

ಎರಡು ಕೈಸೇರಿದರೆ ಚಪ್ಪಾಳೆ, ಮಾತಿಗೆ

ಮಾತು ಬೆಳೆದರೆ ಜಗಳ.
Two hands make the clap and harsh words begin the clash.

ಕೈನ ಐದು ಬೆರಳ್ ಒಂದೇ ರೀತಿ ಇರ್ದುಲೆ
ಒಂದು ಕುಟುಂಬ ಸದಸ್ಯರು ಅಥವಾ ಒಂದು ಗುಂಪಿನ ಸದಸ್ಯರು ಒಂದೇ ರೀತಿ ಇರುವುದಿಲ್ಲ.
The five fingers of the hand are different from one another likewise even the members of the same family also differ each other.

ಕೈಲಿರುವ ಒಂದು ಹಕ್ಕಿ ಬಲ್ಲೆಲಿರುವ ಎರಡ್ ಹಕ್ಕಿಗಿಂತ ಮೇಲ್
ಇನ್ನೂ ಕೈ ಸೇರದಿರುವ ವಸ್ತುವಿಗಿಂತ ಕೈ ಸೇರಿದ ವಸ್ತುವೇ ಮೇಲು.
One in the hand is better than two in the bush.

ಕೊಂಕಣಿ ಎಮ್ಮೆಗೆ ಕೊದಂಟಿ ಮೊದ್ದು
ಕೆಲವೊಂದು ವ್ಯಕ್ತಿಗಳನ್ನು ದೈಹಿಕ ಶಿಕ್ಷೆ ನೀಡುವ ಮೂಲಕ ಮಾತ್ರ ಸರಿಪಡಿಸಬಹುದು.
Only Physical punishment can set right some people.

ಕೊಟ್ಟದ್ ನಂಗೆ, ಮುಚ್ಚಿ ಇಸಿದ್ ಇನ್ನೊಬ್ಬಂಗೆ
ದಾನ ಮಾಡಿದಾಗ ದೊರೆಯುವ ಕೀರ್ತಿ, ಪುಣ್ಯ ಎಲ್ಲವೂ ನಮಗೆ ಸಿಗುತ್ತದೆ. ಬಚ್ಚಿಟ್ಟರೆ ಮುಂದೆ ನಾವು ಮರಣಿಸಿದಾಗ ಇನ್ನೊಬ್ಬರ ಕೈ ಸೇರುತ್ತದೆ.
The credit, popularity and the goodwill that we earn while making the donations remains with us but if we hide it, it passes onto the hands of others after our demise.

ಕೊಟ್ಟ ಹೆಣ್ಣ್ ಕುಲಂದ ಹೊರಗೆ
ಹೆಣ್ಣು ಮಗಳು ಮದುವೆಯಾದ ತಕ್ಷಣ ತನ್ನ ಗಂಡನ ಗೋತ್ರದವಳಾಗುತ್ತಾಳೆ. ತನ್ನ ತಂದೆಯ ಮನೆಯ ಸೂತಕಗಳಿಗೂ ಅವಳು ಬಾಧ್ಯಳಾಗುವುದಿಲ್ಲ.
Soon after the marriage the bride loses all her connections with the father's house.

ಕೊಟ್ಟ ಮೇಲೆ ಯೋಚನೆ, ಕೆಟ್ಟ ಮೇಲೆ ಚಿಂತೆ
ಯಾವುದೇ ಯೋಚನೆ ಮಾಡದೆ ಏನಾದರೂ ಕೊಟ್ಟು ಬಿಡುವುದರಿಂದ ನಾವು ಮೋಸ ಹೋಗಿ ಆಮೇಲೆ ಮತ್ತೆ ಚಿಂತೆಗೆ ಒಳಗಾಗುತ್ತೇವೆ.
Repenting after lending something without thinking.

ಕೊಟ್ಟ ಸಾಲ ಕೇಳದೆ ಹೋತ್,
ಬಿತ್ತಿದ ಬೆಳೆ ಕೊಯ್ಯದೆ ಹೋತ್
ನೀಡಿದ ಸಾಲವನ್ನು ಕೇಳಲಾಗದೆ ಕಳೆದು ಕೊಳ್ಳುವುದು. ಅಂತೆಯೇ ಬಿತ್ತಿದ ಬೆಳೆಯನ್ನು ಆರೈಕೆ ಮಾಡದೆ ಕಳೆದುಕೊಳ್ಳುವುದು.
The money lent was lost without asking back likewise the crop was lost without taking care.

ಕೊಟ್ಟು ಕೆಟ್ಟವು ಇಲ್ಲೆ,
ತಿಂದ್ ಬದ್‌ಕಿದವು ಇಲ್ಲೆ.
ದಾನ ಮಾಡಿ ಕೆಟ್ಟವರಿಲ್ಲ, ಹಣ ನುಂಗಿ ಹಾಕಿ ಬದುಕಿನಲ್ಲಿ ಯಶಸ್ಸು ಕಂಡವರಿಲ್ಲ.
Charity never spoils anybody but no one finds success in the money earned through illegal way.

ಕೊಡಲಿನ ಕಾವು ತನ್ನ ಕುಲಕ್ಕೆ ಮೃತ್ಯು
ಮರದ ತುಂಡಿನಿಂದ ಮಾಡಿದ ಕೊಡಲಿಯ ಕಾವು (ಹಿಡಿ) ಯ ಸಹಾಯದಿಂದ ಮರವನ್ನೇ ಕಡಿಯಲು ಬಳಸುತ್ತಾರೆ. ಉದಾ: ಬ್ರಿಟಿಷರು ಭಾರತೀಯರನ್ನೇ ಬಳಸಿ ಭಾರತೀಯರನ್ನೇ ಸೋಲಿಸಿದರು. ನಮ್ಮ ನಾಶವನ್ನು ನಮ್ಮ ಕೈಯಲ್ಲೇ ಮಾಡಿಸುವುದು.
Destroying us in our own hands.

ಕೊಡ್ದ್ ಮೂರ್ ಕಾಸ್,
ಕೋಣೆ ತುಂಬಾ ಹಾಸಿಗೆ ಹಾಸ್
ಸಣ್ಣ ಸಂಬಳ ಅಥವಾ ಪಗಾರವನ್ನು ನೀಡಿ ನಮ್ಮನ್ನು ಸಂಪೂರ್ಣವಾಗಿ ದುಡಿಸಿಕೊಳ್ಳುವುದು.
Utilizing all our energy by paying less remuneration.

ಕೊಣೆಯಕೆ ಗೊತ್ತಿಲ್ಲದವಂಗೆ ರಂಗಸ್ಥಳ ಡೊಂಕ್
ತನ್ನ ಕೆಲಸವನ್ನು ಸರಿಯಾಗಿ ನಿರ್ವಹಿಸಬಲ್ಲದವ ಏನಾದರೊಂದು ನೆಪ ನೀಡುವುದು
Giving some silly reasons for not performing properly.

ಕೊತ್ತಿಗೆ ಗಂಟೆ ಕಟ್ಟುವು ಯಾರ್?
ಏನಾದರೊಂದು ಪ್ರತಿಭಟನೆ ಮಾಡುವಾಗ ಅದರ ನೇತೃತ್ವ ವಹಿಸುವವರು ಯಾರು?
Who will bell the cat ? Who is to take the lead to protest against the boss?

ಕೊತ್ತಿಗೆ ಆಟ ಎಲಿಗೆ ಪ್ರಾಣ ಸಂಕಟ
ಶ್ರೀಮಂತರಿಗೆ, ಬಲ್ಲಿದರಿಗೆ ಮೋಜು ಒದಗಿಸುವ ಸನ್ನಿವೇಶಗಳು, ಬಡವರಿಗೆ, ದುರ್ಬಲರಿಗೆ ಪ್ರಾಣ ಸಂಕಟ ತರಬಲ್ಲವು.
The entertaining incidents of the rich may bring disaster to the poor.

ಕೊಳ್ತ್ ಹೋದರೂ ಕೊಟ್ಟು ಹೋಕಿಲೆ
ಜಿಪುಣರು ಮನೆಯಲ್ಲಿದ್ದ ವಸ್ತುಗಳು ಕೊಳೆತು ಹೋದರೂ ಅದನ್ನು ಇತರರಿಗೆ ಕೊಡಲಾರರು.
Stingy people will not give the things to other even if it is perished in heaps in the houses.

ಕೋಪ ಇರಿಕಾಗದ್, ಮಾತ್ ತಪ್ಪಿಕಾಗದ್
ಸಿಟ್ಟಾಗುವುದು ಕಡಿಮೆ ಮಾಡಬೇಕು, ಕೊಟ್ಟ ಮಾತಿಗೆ ತಪ್ಪಬಾರದು
One should not get angry and should not fail to keep up the promise.

ಕೋಳಿಗೆ ಕೊಡಿ (ಜನನಾಂಗ) ಇಲ್ಲೆ ನಾಯಿಗೆ ನಾಚಿಗೆ ಇಲ್ಲೆ
ಪ್ರೀತಿ ಕುರುಡು
Love is blind.

ಖರ್ಜೂರ ಹಣ್ಣಾಕನ ಕಕ್ಕೆ ಬಾಯಿಲಿ ಹುಣ್ಣು
ಅವಕಾಶ ಒದಗಿಬಂದಾಗ ನಾವು ಎದುರಿಸಲು ಸಿದ್ಧರಿರುವುದಿಲ್ಲ.
Sometimes we are not ready to meet the opportunities.

ಗಂಜಿ ಉಕ್ಕಿರೆ ಒಳ್ಳೆದ್, ಹೊಟ್ಟೆ ಕುಗ್ಗಿರೆ ಒಳ್ಳೆದ್.
ಮಾಡಿದ ಅಡಿಗೆ ಚೆನ್ನಾಗಿ ಬೇಯಬೇಕು, ವಿಪರೀತ ಹೊಟ್ಟೆ ಬಾರದಂತೆ ದೇಹದ ಸಮತೋಲನ ಕಾಪಾಡಬೇಕು.
Food items should be properly cooked and we should maintain the physical fitness

ಗಂಜಿ ಇರ್‌ಕನ ಗೈಪಿಲ್ಲೆ,
ಗೈಪಿರ್‌ಕನ ಗಂಜಿ ಇಲ್ಲೆ.
ಅವಕಾಶ ಇರುವಾಗ ನಾವು ಸಿದ್ಧರಿರುವುದಿಲ್ಲ, ನಾವು ಸಿದ್ಧರಿರುವಾಗ ಅವಕಾಶ ಇರುವುದಿಲ್ಲ.
Sometimes we are not ready when there are opportunities and sometimes when we are ready there are no opportunities.

ಗಂಡ ಪಟ್ಟೆ ಸೀರೆ ತಂದದೇಂತ ಹೆಣ್ಣ್ ಇದ್ದ ಸೀರೆನ ಸುಟ್ಟು ಹಾಕಿತ್‌ಗಡ
ಮುಂದಿನ ದಿನಗಳಲ್ಲಿ ಸಂಪತ್ತು ಕೈ ಸೇರಬಹುದು ಎಂಬ ನಿರೀಕ್ಷೆಯೊಂದಿಗೆ ಕೈಯಲ್ಲಿದ್ದ ಸಂಪತ್ತನ್ನು ಕೈಬಿಡುವುದು.
Losing the meagre wealth in hand hoping for more wealth.

ಗಂಡ್‌ಸರ ಕೈಲಿ ದುಡ್ಡುನಿಲ್ಲಿಕಿಲೆ,
ಹೆಂಗ್‌ಸರ ಬಾಯಿಲಿ ಗುಟ್ಟು ನಿಲ್ಲಿಕಿಲೆ.
ಗಂಡಸರು ಸಾಮಾನ್ಯವಾಗಿ ಖರ್ಚುಗಾರರು, ಅವರ ಕೈಯಲ್ಲಿ ಹಣ ನಿಲ್ಲಲಾರದು. ಹೆಂಗಸರುಹೆಚ್ಚು ವಾಚಾಳಿಗಳು ಅವರು ತಮ್ಮ ಮಾತಿನ ಭರಾಟೆಯಲ್ಲಿ ಮನಸ್ಸಿನಲ್ಲಿದ್ದ ಗುಟ್ಟನ್ನೆಲ್ಲಾ ಬಿಚ್ಚಿಡುತ್ತಾರೆ.
Men are spend thrifts and Ladies can't maintain the secrets.

ಗಂಡ ಇರ್‌ಕನ ಬುದ್ಧಿ ಇತ್ಲೆ,
ಬುದ್ಧಿ ಬಾಕನ ಗಂಡ ಇತ್ಲೆ.
ತನ್ನನ್ನು ನೋಡಿಕೊಳ್ಳುವವರು, ಸಾಕುವವರು, ರಕ್ಷಿಸುವವರು ಇದ್ದಾಗ ಬುದ್ಧಿ ಇರಲಿಲ್ಲ; ಬುದ್ಧಿ ಬಂದಾಗ ಅವರು ಇರಲಿಲ್ಲ. ಉದಾ: ಪೋಷಕರು ನೀನು ಓದು ಎಂದಾಗ, ಓದಲಿಲ್ಲ. ಓದಬೇಕು ಎಂದೆನಿಸಿದಾಗ ಪೋಷಕರು ಇಲ್ಲ.
Most of the times we fail to utilise the opportunities.

ಗಂಡಂಗೆ ಬೇಡದ ಹೆಣ್ಣ್ ಗುಂಡುಕಲ್ಲಿಗೂ ಬೇಡ
ಗಂಡನಿಗೇ ಇಷ್ಟವಾಗದ ಹೆಣ್ಣು ಬೇರೆ ಯಾರಿಗೂ ಇಷ್ಟವಾಗಲಾರಳು. ಗಂಡನ ಪ್ರೀತಿಯನ್ನು ಸಂಪಾದಿಸುವುದು ಪತ್ನಿಯ ಕರ್ತವ್ಯ.
Gaining the love of the husband is more important for a wife in a family life.

ಗಂಡಿಗೆ ಎದೆಗಟ್ಟಿ ಇರೊಕು,
ಹೆಣ್ಣಿಗೆ ಸೊಂಟ ಗಟ್ಟಿ ಇರೋಕು
ಗಂಡು ದೈಹಿಕವಾಗಿ ಬಲಿಷ್ಠವಾಗಿರಬೇಕು. ಹೆಣ್ಣಿಗೆ ಅಡುಗೆ ಮನೆಯಲ್ಲಿ ಬಗ್ಗಿ ಕೆಲಸ ಮಾಡುವರೇ, ಮಗುವನ್ನು ಎತ್ತಿಕೊಳ್ಳುವರೇ ಬಿಂದಿಗೆ ಇಟ್ಟುಕೊಳ್ಳುವರೇ ಸೊಂಟ ಗಟ್ಟಿ ಯಾಗಿರಬೇಕು.
A man should be physically strong where as the waist of the women should be strong to work in the kitchen to carry the child and to carry the pail.

ಗಟ್ಟಿ ಆದರೆ ರೊಟ್ಟಿ, ತೆಳ್ಳಂಗೆ ಆದರೆ ದೋಸೆ.
ಹಾಗಾದರೂ ಸರಿ, ಹೀಗಾದರೂ ಸರಿ, ಸೋತರೂ ಲಾಭ; ಗೆದ್ದರೂ ಲಾಭ.
Let it be anything either this or that.

ಗತಿಗೆಟ್ಟರೂ ಮತಿಗೆಡಿಕಾಗದ್.
ಬಡತನ ಬಂದರೂ ಮಾನ ಕಳೆದು ಕೊಳ್ಳಬಾರದು.
One should not lose his self respect even if there is poverty.

ಗರುಡನ ಗೂಡಿಗೆ ನಾಗರ ಕನ್ನ ಹಾಕಿದಾಂಗೆ
ತನ್ನ ವೈರಿಯ ಮೇಲೆಯೇ ಮೋಸದ ದಾಳಿ ಮಾಡಿದಂತೆ.
Attacking the enemy cunningly.

ಗರ್ವ ಶ್ರೀಮಂತನ ಪೋಷಾಕ್.
ವ್ಯಕ್ತಿಗೆ ಶ್ರೀಮಂತಿಗೆ ಬಂದಂತೆ ಆತನಲ್ಲಿ ಗರ್ವ, ಜಂಭ, ಅಹಂ ಸೇರಿಕೊಳ್ಳುತ್ತದೆ.
Pride and Egoism are the part and parcel of richness.

ಗಳಿಸ್ಕೆ ಒಬ್ಬ ತಿಂಬಕೆ ಹತ್ತ್.
ಒಂದು ಕುಟುಂಬದಲ್ಲಿ ಗಳಿಸಲು ಒಬ್ಬನೇ, ತಿನ್ನಲು ಹತ್ತು ಮಂದಿ
In a family there is only one person to earn and a lot to eat.

ಗಿಣ್‌ಂಜ ಕೋಳಿ ಹಿಡ್ತ್‌ಂತ ಕಕ್ಕೆ ಕೋಳಿ ಹಿಡಿಯಕೆ ಹೋತ್‌ಗಡ
ನಿನ್ನಿಂದ ಹೆಚ್ಚು ಬಲಿಷ್ಠ ಒಂದು ಕೆಲಸ ಮಾಡಿದ ಎಂದು ತಿಳಿದು ದುರ್ಬಲನಾದ ತಾನೂ ಕೂಡಾ ಆ ಕೆಲಸ ಮಾಡಲು ಮುಂದಾಗುವುದು. ಆತ (ಶ್ರೀಮಂತ) ಕಾರು ಕೊಂಡುಕೊಂಡ ಎಂದು ತಿಳಿದು ತಾನೂ (ಬಡವ) ಕಾರು ಕೊಂಡುಕೊಳ್ಳಲು ಮುಂದಾಗುವುದು.

Trying to imitate the rich, false status / prestige.

ಗಿಳಿ ಸಾಂಕಿ ಕೊತ್ತಿ ಕೈಲಿ ಕೊಟ್ಟಾಂಗಾತ್
ಸುಂದರವಾದ, ಮುದ್ದಾದ ಗಿಳಿಯನ್ನು ಸಾಕಿ, ಅದನ್ನು ಕೊಂದು ತಿನ್ನುವ ಬೆಕ್ಕಿನ ಕೈಲಿಯಲ್ಲಿ ಕೊಟ್ಟಂತೆ, ತಮ್ಮ ಹೆಣ್ಣು ಮಕ್ಕಳನ್ನು ತಿಳಿಯದೆ ಯಾವುದೋ ಪಾತಕಿಗೆ ಮದುವೆ ಮಾಡಿ ಕೊಟ್ಟಂತೆ
Handing over the innocent to the criminal.

ಗುಣ ಇಲ್ಲದ ಹೆಣ್ಣ್ ರುಚಿ ಇಲ್ಲದ ಹಣ್ಣ್
ಸದ್ಗುಣಗಳಿಲ್ಲದ ಹೆಣ್ಣು ರುಚಿ ಇಲ್ಲದ ಹಣ್ಣಿನಂತೆ
The woman without good character is like that of a fruit without taste.

ಗುಣ ನೋಡಿ ಹೆಣ್ಣ್ ತರಕು,
ಹಾಲು ನೋಡಿ ಹಸು ತರಕು
ಹೆಣ್ಣನ್ನು ಸೊಸೆಯಾಗಿ ಮನೆಗೆ ತರುವಾಗ ಆಕೆಯ ಗುಣ ನೋಡಿ ಆಯ್ಕೆ ಮಾಡಬೇಕು ಮನೆಗೆ ಹಸು ಕೊಂಡಾಗ ಅದು ಎಷ್ಟು ಹಾಲು ನೀಡುತ್ತಿದೆ ಎಂಬುದನ್ನು ನೋಡಬೇಕು.
While bringing the daughter in law we have to look at her character where as while buying a cow we have to see the quantity of milk it gives.

ಗುಣ ನೋಡಿ ಹೆಣ್ಣ್ ಕೊಡಕು,
ಮರ ನೋಡಿ ಬೊಳ್ಳಿ ನೆಡಕು
ಹುಡುಗನ ಗುಣ ನೋಡಿ ಹೆಣ್ಣು ಕೊಡಬೇಕು, ಅಂತೆಯೇ ಮರದ ಗುಣಮಟ್ಟ ನೋಡಿ ಬಳ್ಳಿ ನೆಡಬೇಕು.
While giving our daughter in marriage to a boy we have to look at his character likewise we have to find the quality of the tree while planting a creeper.

ಗುಣವಂತೆ ಇರುವ ಗುಡಿಸಲೇ ಸ್ವರ್ಗ
ಸದ್ಗುಣಿಯಾದ ಹೆಣ್ಣಿದ್ದರೆ ಬಡತನ ಕ್ಷುಲ್ಲಕ
Poverty is negligible in the presence of a good wife.

ಗುಣವೇ ಬಡವನ ಹಣ
ಒಳ್ಳೆಯತನವೇ ಬಡವನ ಶ್ರೀಮಂತಿಕೆ
Goodness is the wealth of the poor.

ಗೆಜ್ಜೆ ಕಟ್ಟಿದ ಮೇಲೆ ಕುಣಿಯಕೆ ನಾಚಿಕೆ ಯಾಕೆ?
ಒಂದು ಕೆಲಸ ಮಾಡುವುದೆಂದು ತೀರ್ಮಾನಿಸಿದ ಮೇಲೆ ಯಾವುದೇ ಹಿಂಜರಿಕೆಯಿಲ್ಲದೆ ಮುಂದುವರಿಯಬೇಕು.
There should not be any hesitation in executing the work once decided.

ಗೆದ್ದವು ಓಡಿ ಹೋದುಲೆ,
ಓಡಿ ಹೋವು ಗೆಲ್ಲುದುಲೆ
ಜೀವನದ ಯಾವುದೇ ಪ್ರಕ್ರಿಯೆಯಲ್ಲಿ ಗೆಲುವು ಸಾಧಿಸಿದವರು ಸಮಾಜದಲ್ಲಿ ದೂರ ಉಳಿಯುವುದಿಲ್ಲ; ದೂರ ಉಳಿಯುವವರು ಎಂದು ಗೆಲ್ಲುವುದಿಲ್ಲ.
Winners never quit, quitters never win.

ಗೊತ್ತಿದ್ದಂವ ಮಾಡದೆ ಕೆಟ್ಟ್ ಹೋತು,
ಮಾಡ್ದಂವ ನೋಡದೆ ಕೆಟ್ಟ್ ಹೋತು.
ತಿಳಿದವ ಮಾಡದೆ ಕೆಟ್ಟುಹೋಯಿತು. ಮಾಡಿದವ ಅದನ್ನು ಸರಿಯಾಗಿ ನೋಡಿ ಕೊಳ್ಳದೆ ಕೆಟ್ಟುಹೋಯಿತು.
An experienced and learned man failed without executing any work and the executed work failed without proper supervision.

ಚರ್ಮ ಎಳಿಯಕನ ಮಾಸ ಬರೋಕೆ
ಒಬ್ಬನನ್ನು ಟೀಕೆ ಮಾಡುವಾಗ ಬಯ್ಯುವಾಗ ಅವನ ಕೆಟ್ಟ ಕಾರ್ಯಗಳನ್ನು ಹೇಳಲೇ

ಬೇಕಾಗುತ್ತದೆ. ಕೃಷಿ ಮಾಡಬೇಕೆಂದರೆ ಒಂದಷ್ಟು ಕಾಡು ಕಡಿಯಲೇಬೇಕಾಗುತ್ತದೆ.
While criticizing person his wicked deeds has to be quoted out

ಚರ್ಮ ತೊಳೆದರೆ ಕರ್ಮ ಹೋದೆನಾ?
ಬಹಿರಂಗ ಶುದ್ಧಿಯಾದರೆ ಸಾಲದು ಅಂತರಂಗವು ಶುದ್ಧಿಯಾಗಬೇಕು.
External cleanliness will not cleanse the internal sin.

ಚಳಿ ಇಲ್ಲದವಂಗೆ ಕಂಬ್ಳಿ ಯಾಕೆ?
ತನಗೆ ಅವಶ್ಯಕವಲ್ಲದ ವಸ್ತುಗಳನ್ನು ನಾವು ಕೊಂಡುಕೊಳ್ಳುವುದಾದರೂ ಏಕೆ?
What is the necessity of buying luxurious things which is not useful to us?

ಚಿಂತೆ ಮತ್ತು ವ್ಯಥೆ ಇಲ್ಲದವಂಗೆ ಸಂತೆಲೂ ನಿದ್ದೆ
ಚಿಂತೆ ಮತ್ತು ವ್ಯಥೆ ನಿದ್ರೆಯನ್ನು ದೂರ ಮಾಡುತ್ತದೆ. ಅವರೆಡೂ ಇಲ್ಲದಾತ ಅತ್ಯಂತ ಜನನಿಭಿಡ, ಗದ್ದಲದ ಪ್ರದೇಶದಲ್ಲೂ ನಿದ್ರಿಸಬಲ್ಲ.
A man without worry and grief can have a sound sleep even in the midst of market.

ಚಿನ್ನದ ಚೂರಿಂತ ಹೊಟ್ಟೆಗೆ ಹಾಕಿಕೆ ಆದೆನಾ?
ತಮಗೆ ಬಹಳ ಆಪ್ತ, ಆತ್ಮೀಯ ಹಾಗೂ ಶ್ರೀಮಂತ ಎಂಬ ಕಾರಣಕ್ಕಾಗಿ ಆತನನ್ನು ತಪ್ಪು ಮಾಡಲು ಬಿಡಲಾಗುತ್ತದೆಯೇ?
Is it possible to allow one of our rich, close and intimate person to go in a wrong way?

ಜನಕ್ಕೆ ಅಂಜಿ ನಡಿಯೋಕೂಂತಿಲ್ಲೆ, ಮನಕಂಜಿ ನಡಿಯಕು
ಜನರಿಗೆ ಹೆದರಿ ನಡೆಯಬೇಕೆಂದೇನಿಲ್ಲ, ಆತ್ಮ ಸಾಕ್ಷಿಗನುಗುಣವಾಗಿ ನಡೆಯಬೇಕು.
We should live in accordance with our self consciousness. We need not fear for what the people say.

ಜನ ನಿನ್ನ ಹೆಣಾಂತ ಹೇಳಿಕೆ ಮುಂದೆ ಪುಣ್ಯ ಮಾಡ್
ಮರಣಿಸುವ ಮೊದಲು ಆದಷ್ಟು ಪುಣ್ಯದ ಕೆಲಸ ಮಾಡು
Do good works as much as possible before death

ಜನ ನೋಡಿ ಕೇಳೊಕು,
ಜಾಗ ನೋಡಿ ಕುದ್ರೋಕು
ಏನಾದರೂ ವಿಷಯ ತಿಳಿಯಬೇಕೆಂದಿದ್ದರೆ ಸೂಕ್ತ ಜನ ನೋಡಿ ಕೇಳು, ಅಂತೆಯೇ ಒಂದು ಜಾಗದಲ್ಲಿ ನೆಲೆಸುವ ಮೊದಲು ಆ ಜಾಗವನ್ನು ಚೆನ್ನಾಗಿ ಪರಿಶೀಲಿಸಿ ಅಲ್ಲಿ ನೆಲೆಸು
If you want any information ask with a suitable person and before settling in a place study that place well.

ಜಾಗೆ ನೋಡಿ ಬಿತ್ತೋಕು,
ಗುಣ ನೋಡಿ ಹೆಣ್ಣು ಕೊಡೋಕು
ಒಂದು ಜಾಗದ ಫಲವತ್ತತೆಯನ್ನು ಗಮನಿಸಿ ಬಿತ್ತನೆ ಮಾಡಬೇಕು ಅಂತೆಯೇ ಹುಡುಗನ ಗುಣ ನೋಡಿ ಅವನಿಗೆ ಹೆಣ್ಣು ಕೊಡಬೇಕು.
Saw the seed by finding out the fertility of the soil like wise give a girl in marriage to a boy by looking at his character and conduct.

ಜಾಣಂಗೆ ಮಾತ್‌ನ ಪೆಟ್ಟ್,
ಕೋಣಂಗೆ ಚಾಟಿನ ಪೆಟ್ಟ್
ಬುದ್ಧಿವಂತನಿಗೆ ಮಾತಿನ ಮೂಲಕ ಪೆಟ್ಟು ನೀಡಬೇಕಾಗುತ್ತದೆ.
A wise man can be punished through words but an ediot had to be punished with a whip.

ಜಾತಿಗೆ ಜಾತಿ ಹಗೆ, ನಾಯಿಗೆ ನಾಯಿ ಹಗೆ
ಒಂದು ನಾಯಿ ಇನ್ನೊಂದು ನಾಯಿಯನ್ನು ಕಂಡರೆ ಮುಗಿ ಬೀಳುವಂತೆ ತನ್ನದೇ ವೃತ್ತಿ, ತನ್ನದೇ ವ್ಯಾಪಾರ ಹೊಂದಿದ ಇನ್ನೊಬ್ಬ ವ್ಯಕ್ತಿಯೊಂದಿಗೆ ಒಂದು ವಿಧದ ಸ್ಪರ್ಧೆ ಇರುವುದು ಸಹಜ.
There is a kind of competition with a person of same capacity, same profession, same business like a dog which attacks another dog wherever it finds.

ಜಾತಿ ಬಿಟ್ಟರೂ, ನೀತಿ ಬಿಡಿಕಾಗದ್
ಜಾತಿ, ಧರ್ಮಗಳಿಗಿಂತಲೂ ಆದರ್ಶಗಳು ಮುಖ್ಯ.
Ideals are more important than caste and religion.

ಜ್ಞಾನ ಬಂದರೆ, ಬುದ್ಧಿ ಬೆಳ್ದದೆ.
ಜ್ಞಾನ ಹೆಚ್ಚಿದಂತೆ ಬುದ್ಧಿಯೂ ಪರಿಪಕ್ವ ಗೊಳ್ಳುತ್ತದೆ.
Man becomes more and more wise as he gains more and more knowledge.

ಜೇನು ತೆಗ್ದಂವ ನೆಕ್ಕಿ ನೋಡದಿರಿಕಿಲೆ
ಜೇನು ತೆಗೆಯುವವ ಅದರ ರುಚಿ ನೋಡದಿರ ಲಾರ. ತನ್ನ ವೃತ್ತಿಯಲ್ಲಿನ ಸಂತಸದ ಕ್ಷಣಗಳನ್ನು ಎಲ್ಲರೂ ಅನುಭವಿಸುತ್ತಾರೆ.
People enjoy the taste of their profession, at the same time they are bound to be attracted by the weaknesses of their profession.

ಜೇನ್ನೊಣದ ಬಾಯಿಲಿ ಜೇನುಟ್ಟು ಮುಳ್ಳುನೂ ಉಟ್ಟು
ಯಶಸ್ಸಿನ ಹಿಂದೆ ಕಷ್ಟ ಕಾರ್ಪಣ್ಯಗಳೂ ಇರುತ್ತದೆ. ಸಿಹಿಯ ಜೊತೆ ಕಹಿಯೂ ಇದೆ.
There is a lot of difficulty and strain behind the success. There is bitterness behind every sweet experience

ಜೋಡು ಇರುವಲ್ಲೇ ಇರೋಕು
ಕೀಳು ಮನೋಭಾವದ ವ್ಯಕ್ತಿಗಳನ್ನು ದೂರ ದಲ್ಲೆ ಇರಿಸಬೇಕು, ಹತ್ತಿರ ಸೇರಿಸಿಕೊಳ್ಳ ಬಾರದು.
We should keep wicked people at a distance.

ಜೋಬು ತುಂಬಾ ದುಡ್ಡುಬೇಕು,
ಮನೆ ತುಂಬಾ ಜನಬೇಕು.
ಮನೆಯಲ್ಲಿ ಸದಾ ಜನ ತುಂಬಿದ್ದರೆ ಸಂತೋಷ. ಆದರೆ ಅವರ ನಿರ್ವಹಣೆಗೆ ನಮ್ಮ ಹಣಕಾಸಿನ ಪರಿಸ್ಥಿಯೂ ಸದೃಢವಾಗಿರಬೇಕು.
It is nice to have more people in the house but our economic position should also be sound to maintain them.

ತರ್ಕ ಮಾಡ್ರೆ ಬರ್ಕತ್ತಾದುಲೆ
ವಾದ ಮಾಡುವುದು ಸೌಜನ್ಯತೆಯಲ್ಲ, ವಾದ ಮಾನವೀಯ ಸಂಬಂಧವನ್ನು ಹಾಳು ಗೆಡವುತ್ತದೆ.
Don't argue, only discuss or consult.

ತಪ್ಪು ಮಾಡ್ದು ಮನುಷ್ಯತ್ವ – ಕ್ಷಮಿಸುದು ದೈವತ್ವ
ಹುಟ್ಟಿದ ಮನುಷ್ಯ ತಪ್ಪು ಮಾಡುತ್ತಾ ಇರು ತ್ತಾನೆ. ತಪ್ಪುಗಳನ್ನು ಕ್ಷಮಿಸುವ ಗುಣ ನಾವು ಪಡೆದರೆ ಅದು ದೈವ ಗುಣ.
To err is human - to forgive is divine.

ತಲೆ ಹಣ್ಣಾದರೂ ಬುದ್ಧಿ ಹಣ್ಣಾಲ್ತೆ
ತಲೆ ನೋಡಲು ಬಿಳಿಯಾದರೂ, ಪ್ರಾಯ ಪ್ರಬುದ್ಧನಾದರೂ, ಜೀವನಾನುಭವ ಪಡೆದರೂ ಕೆಲವರ ಬುದ್ಧಿ ಮಾಗಿರುವುದಿಲ್ಲ.
Some people never become great (in human qualities) even if they become elderly

ತಲೆ ಹೋದ ಮೇಲೆ ಮಂಡಾಸ್ನ ಮೇಲೆ ಆಶೆ ಎಂತದ್?
ಮಾನ, ಮರ್ಯಾದಿ, ಗೌರವ, ಘನತೆ ಹಾಳಾದ ಮೇಲೆ ಪ್ರತಿಷ್ಠೆಯ ಸಂಕೇತವಾದ ಮುಂಡಾಸಿನ ಮಹತ್ವವಾದರೂ ಏನು?
There is no charm for a turban after losing the dignity and decorum.

ತಲೆ ಗಟ್ಟಿ ಉಟ್ಟೂಂತ ಕಲ್ಲಿಗೆ ಹೊಡಿಯಕಾಗದ್
ತಾನು ಸಮರ್ಥ ಎಂಬ ಭಾವನೆ ಇದ್ದವರೂ ಅಸಾಧ್ಯ ಎನ್ನುವುದನ್ನು ಮಾಡಲು ಹೋಗ ಬಾರದು.
Let us not attempt for impossible tasks eventhough we are competent.

ತಲೆಗೆ ಹೊಯ್ದರೆ ಕಾಲಿಗೆ ಇಳಿಯದಿರದ್
ಮಾನಸಿಕ ಚಿಂತೆಗೆ ತುತ್ತಾದವ ದೈಹಿಕ ವಾಗಿಯೂ ಸೊರಗುತ್ತಾನೆ. ಮದ್ಯದ ಅಮಲು ತಲೆಗೆ ಏರಿದರೂ ಕಾಲು ತನ್ನ ಶಕ್ತಿ ಕಳೆದುಕೊಳ್ಳುತ್ತದೆ.
Mental worry leads to physical deficiency.

ತಾಂಗುವ ಮುಂದೆ ಬೊಗ್ಗುದು ಒಳ್ಳೆದ್
ಅಪಾಯ ಬರುವುದಕ್ಕೆ ಮೊದಲೇ ಜಾಗರೂಕ ರಾಗಿರಬೇಕು.
Prevention is better than cure.

ತಾನ್ ಕಳ್ಳ, ಪರರ ನಂಬ
ತನ್ನ ಮನಸ್ಸು ಪ್ರಾಮಾಣಿಕವಾಗಿಲ್ಲದಿದ್ದರೆ ಇತರರನ್ನೂ ನಂಬುವುದು ಕಷ್ಟ, ಆತ ಎಲ್ಲಿ ಮೋಸ ಮಾಡಿ ಬಿಡುತ್ತಾನೋ ಎಂಬ ಸಂಶಯ ಕಾಡುತ್ತದೆ.
It is difficult to believe others if we are not honest.

ತಾಯಿ ಇಲ್ಲದ ಮನೆ, ನೀರಿಲ್ಲದ ಕೆರೆ
ತಾಯಿ ಇಲ್ಲದ ಮನೆ, ನೀರಿಲ್ಲದ ಕೆರೆಯಂತೆ, ಎರಡೂ ಕಡೆ ಕುಡಿಯಲು ಕೂಡಾ ನೀರು ಸಿಗಲಾರದು
A house without mother is a lake without water.

ತಾನಾಗಿ ಮಾಡಿಕಿಲೆ,
ಇನ್ನೊಬ್ಬಂಗೆ ಮಾಡಿಕೆ ಬುಡಿಕಿಲೆ
ತಾನು ಮಾಡಲಾರ, ಇನ್ನೊಬ್ಬನಿಗೆ ಮಾಡಲು ಬಿಡಲಾರ.
He won't do it, he will not allow others to do it- a pessimist.

ತಾಳಕ್ಕೆ ತಕ್ಕ ಮೇಳ, ಕಾಲಕ್ಕೆ ತಕ್ಕ ಕೋಲ
ಬದಲಾಗುತ್ತಿರುವ ಜಗತ್ತಿನಲ್ಲಿ ಹೊಂದಿ ಕೊಂಡು ಬದುಕುವುದು.
Life is full of adjustment with the changing scenario.

ತಾಳ್ದಂವ ಬಾಳ್ದು
ತಾಳ್ಮೆ ನೆಮ್ಮದಿಯ ಜೀವನದ ರಹದಾರಿ
Patience leads to contented life.

ತಿಂಬಕೆ ಗತಿ ಇಲ್ಲದಿದ್ದರೂ ಉಡ್ದು ಪಟ್ಟೆ ಸೀರೆ
ತನ್ನ ಆರ್ಥಿಕ ಸ್ಥಿತಿಗಿಂತಲೂ ಮೀರಿ ವೈಭವದ ಜೀವನ ನಡೆಸುವುದು.
Leading a luxurious and showy life more than one's Economic position.

ತಿಪ್ಪೆಲಿ ಇರವ್‌ಕೆ ಉಪ್ಪರಿಗೆ ಕನಸ್
ಕೆಲವರು ತಮ್ಮ ನಿರೀಕ್ಷೆಗೂ ಮೀರಿ ಕನಸು ಕಾಣುತ್ತಾರೆ.
Over ambitious.

ತಿಳ್ದವ್ ಹೇಳ್ದ್ ಗಾದೆ,
ಹಿರಿಯವು ಹೇಳ್ದ್ ಪುರಾಣ
ತಿಳಿದವರು, ಜ್ಞಾನಿಗಳು ಹೇಳುವ ಮಾತು ಗಳೆಲ್ಲಾ ಹಿತವಚನಗಳಾಗಿದ್ದರೆ, ಪ್ರಾಯಸ್ಥರು ಹೇಳುವ ಮಾತೆಲ್ಲಾ ಅನುಭವದಿಂದ ಪಕ್ವ ವಾದ ಇತಿಹಾಸ.
What ever the wise and learned say

is proverbs of advice and what ever the elderly people say is history of experience.

ತುಂಬಿದ ಕೊಡ್ಪಣ ತುಳ್ಕಿಕಿಲೆ
ಜ್ಞಾನಿ ಎಂದೂ ಅರ್ಧಬುದ್ಧಿ ತೋರಿಸಲಾರ, ತಪ್ಪಿ ಹೋಗಲಾರ, ತನ್ನನ್ನು ತಾನು ಹೊಗಳಿ ಕೊಳ್ಳಲಾರ.
A wise man never goes wrong.

ತೊಟ್ಲು ತೂಗುವ ಕೈ ದೇಶನೂ ಆಳ್ದು
ಕುಟುಂಬ ನಿರ್ವಹಣೆ ಮಾಡುವ, ಮಕ್ಕಳನ್ನು ಸಾಕಿ ಸಲಹುವ ಹೆಣ್ಣು ಮಗಳು ದೇಶವನ್ನೂ ಆಳಬಲ್ಲಳು- ಉದಾ: ಇಂದಿರಾಗಾಂಧಿ, ಗೋಲ್ಡಾಮೀರ್, ಮಾರ್ಗರೆಟ್ ಥ್ಯಾಚರ್, ಸಿರಿಮಾವೋ ಬಂಡಾರ ನಾಯಕೆ.
Hands that rock the cradle rules the world.

ತೌಡು ತಿಂಬವ ಹೋದರೆ ಉಮಿ ತಿಂಬಂವ ಬಾತ್
ಒಬ್ಬ ಲಂಚಕೋರ ಅಧಿಕಾರಿ ಹೋದರೆ ಅವನಿಂದಲೂ ದೊಡ್ಡ ಲಂಚಕೋರ ಆ ಹುದ್ದೆಗೆ ಬಂದ.
The person who came as an officer is more corrupt than the earlier one.

ದಂಡಕ್ಕುಟ್ಟು ದಾನಕ್ಕಿಲ್ಲೆ
ಅಪ್ರಯೋಜಕ, ಸಮಾಜಕ್ಕೆ ಏನೂ ಪ್ರಯೋಜನ ಇಲ್ಲ
Useless person, No help to the society.

ದನ ಮಕ್ಕಳ ನೋಡ್‌ಕನ ಕೇರೆಗೆ ಬೆನ್ನ್ ತೊರ್ಸಿತ್‌ಗಡ
ನಮಗೆ ಯಾರನ್ನಾದರೊ ಕಂಡಾಗ ಅವನಿಂದ ನಮಗೆ ಆಗಬಹುದಾದ ಕೆಲಸದ ನೆನಪಾಗುವುದು
We remember some work favourable to us whenever we meet that concerned person.

ದಾಕ್ಷಿಣ್ಯಕ್ಕೆ ಬೊಸುರಾದರೆ ಹೆರಿಕೆ ಜಾಗ ಇಲ್ಲೆ
ಅನೈತಿಕ ಸಂಬಂಧದಿಂದ ಗರ್ಭಿಣಿಯಾದರೆ ಮಗುವಿನ ಹೆರಿಗೆಗೆ ಆಶ್ರಯಸಿಗಲಾರದು. ಯಾವುದೇ ಅನೈತಿಕ ಹಾಗೂ ಸಮಾಜ ಬಾಹಿರ ಚಟುವಟಿಕೆಗಳಿಗೆ ಯಾರ ಆಶ್ರಯವೂ ದೊರೆಯುವುದಿಲ್ಲ.
There is no shelter from the society for illegal and anti social activities.

ದಿಕ್ಕಿಲ್ಲದವಂಗೆ ದೇವ್ರೇ ದಿಕ್ಕು
ಅನಾಥರಿಗೆ, ಏನು ಮಾಡಬೇಕೆಂದು ತೋಚದವರಿಗೆ, ಜೀವನದಲ್ಲಿ ಜಿಗುಪ್ಸೆ ಹೊಂದಿದವರಿಗೆ ದೇವರ ಆರಾಧನೆ ಮಾನಸಿಕ ಸ್ಥಿರತೆ, ಆತ್ಮ ಸ್ಥೈರ್ಯ, ನೆಮ್ಮದಿ ಯನ್ನು ತಂದು ಕೊಡಬಲ್ಲುದು.
Faith in God gives meaning and purpose to human life.

ದೀಪ ಇಲ್ಲದ ಮೇಲೆ ರೂಪ ಎಲ್ಲಿಟು
ಮನೆಯಲ್ಲಿ ಬೆಳಕು ಇಲ್ಲದವ ತನ್ನ ರೂಪ ವನ್ನು ಕಂಡುಕೊಳ್ಳುವುದಾದರೂ ಹೇಗೆ, ಮನೆಯ ಆರ್ಥಿಕ ಪರಿಸ್ಥಿತಿಯ ಮೇಲೆ ವ್ಯಕ್ತಿಯ ರೂಪ, ಸೌಂದರ್ಯಕ್ಕೆ ಮಹತ್ವ ಬರುತ್ತದೆ.
The beauty of a person counts on the Economic position of a person.

ದೀಪದಡಿ ಕತ್ತಲೆ
ನಮ್ಮ ದೌರ್ಬಲ್ಯಗಳು ನಮಗೆ ಅರ್ಥವಾಗು ವುದಿಲ್ಲ
We can't understand our own weaknesses.

ದುಃಖಲಿ ಇರಂವನ ಹಕ್ಕಲೆ ಹೋಗಿ ಮಾತಾಡ್, ಶ್ರೀಮಂತ ಕರ್‌ದರೆ ಮಾತ್ರ ಹೋಗ್

ದುಃಖದಲ್ಲಿರುವವರನ್ನು ನಾವೇ ಹೋಗಿ ಸಂತೈಸಬೇಕು, ಶ್ರೀಮಂತ ಕರೆದರೆ ಮಾತ್ರ ಹೋಗಬೇಕು.

Go at your own and console a person who is in grief but don't meet a rich man unless you are invited.

ದುಡಿಯದೆ ತಿಂಬಕಾಗದ್,
ತಿನ್ನದೆ ಮಲ್ಗಿಕಾಗದ್

ದುಡಿಮೆ ಮಾಡದೆ ಕುಳಿತು ತಿನ್ನುವುದು ಹಾಗೂ ಏನನ್ನೂ ತಿನ್ನದೆ ಮಲಗುವುದು ಹಿತಕರವಲ್ಲ.

Eating without doing any work and sleeping in the night without eating is not advisable.

ದುಡ್ಡಿದ್ದರೆ ನಿಂಗೆ ನೀ ಕಾಂಬಕಿಲೆ,
ದುಡ್ಡಿಲ್ಲದಿದ್ದರೆ ಊರಿಗೇ ನೀ ಕಾಂಬಕಿಲೆ

ಶ್ರೀಮಂತನಿಗೆ ತಾನು, ಏನು ಹೇಗೆ ಎಂಬುದು ಆತನ ಅಹಂನಿಂದಾಗಿ ತಿಳಿಯಲಾರದು, ಬಡವನನ್ನು ಊರೇ ಗುರುತಿಸಲಾರದು.

Rich can't evaluate himself, where as the poor is not recognized by the society.

ದುಡ್ಡು ಇದ್ದಂವ ದೊಡ್ಡಪ್ಪ

ಸಮಾಜದಲ್ಲಿ ಹಣಕ್ಕೆ ಎಲ್ಲಿಲ್ಲದ ಗೌರವ. ಹಣ ಇದ್ದವ ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿ.

Richmen are considered as great men in our society.

ದುಡ್ಡುನ ಆಸೆಗೆ ತುಪ್ಪ ಮಾರಿ, ಕುಪ್ಪಿ ನೆಕ್ಕಿತ್‌ಗಡ

ಹಣದ ಆಸೆಗೆ ತನ್ನಲ್ಲಿದ್ದ ಅಮೂಲ್ಯ ವಸ್ತುಗಳನ್ನೆಲ್ಲಾ ಮಾರಿ ಕೊನೆಗೆ ಅದಕ್ಕಾಗಿ ಪರಿತಪಿಸಿಕೊಂಡ.

Due to the greediness for money people sell their valuable things and finally repenting for it.

ದುಡ್ಡು ತಿಂಬವಂಗೆ ಹಾಳೂರಾದರೇನ್, ಕೋಳ್ಯೂರಾದರೇನ್?

ಲಂಚಕೋರನಿಗೆ, ಮೋಸಗಾರರಿಗೆ ಯಾವ ಊರಾದರೇನು, ಎಲ್ಲಿ ಹೋದರೂ ಅವರು ಹಣ ಗಳಿಸುತ್ತಾರೆ.

Corrupt officials and dishonest people make money wherever they go.

ದೂರದ ಬೆಟ್ಟ ನುಣ್ಣಂಗೆ

ದೂರದೂರಿನಲ್ಲಿರುವ, ನಗರದಲ್ಲಿರುವ ಹಾಗೂ ವಿದೇಶಗಳಲ್ಲಿರುವ ಜನರ ಜೀವನ ತುಂಬಾ ಸುಖಕರ ಹಾಗೂ ಉಲ್ಲಾಸಮಯ ಎಂದು ನಾವು ತಿಳಿದುಕೊಳ್ಳುವುದು.

We think that the people living in the cities or in foreign countries lead a comfortable and luxurious life.

ದೂರು ಕುಂಡತಂಗೆ ಭತ್ತ ಬಲ್ಲಾಳ್‌ರಿಗೆ

ಬೆಳೆದ ಭತ್ತವೆಲ್ಲಾ ಗೇಣಿಯ ರೂಪದಲ್ಲಿ ಬಲ್ಲಾಳನ ಮನೆಗೆ. ಭತ್ತ ಕಡಿಮೆಯಾಯಿತೆಂದು ಆಳಿನ ಮೇಲೆ ಆರೋಪ. ಸಂಪತ್ತು ಸೇರುವುದು ಯಾರಿಗೋ? ಆರೋಪ ಇನ್ನಾರ ಮೇಲೋ.

Collecting wealth in name of others.

ದೇವ್ರು ಕೊಟ್ಟರೂ, ಪೂಜಾರಿ ಬುಡಿಕಿಲೆ

ನಾವು ಏನಾದರೊಂದು ಸೌಲಭ್ಯದಿಂದ ಅನುಗ್ರಹಿಸಲ್ಪಟ್ಟರೂ, ಮಧ್ಯವರ್ತಿಗಳು ಅದರಿಂದ ನಮ್ಮನ್ನು ವಂಚಿತರನ್ನಾಗಿ ಮಾಡುತ್ತಾರೆ.

Even though we are blessed by God the middle men do not allow us to get it.

ದೇಶ ತಿರ್ಗೋಕು ಭಾಷೆ ಕಲಿಯೊಕು

ಸಾಕಷ್ಟು ಪ್ರವಾಸ ಮಾಡಿ ಜಗತ್ತು ನೋಡಿ ತಿಳಿದುಕೊಳ್ಳಬೇಕು ಅಂತೆಯೇ ಬೇರೆ ಬೇರೆ

ಭಾಷೆಗಳನ್ನು ಕಲಿತಾಗ ಆ ಭಾಷೆಯ ಸಾಹಿತ್ಯವನ್ನು ಅಧ್ಯಯನ ಮಾಡಲು ಸಾಧ್ಯವಾಗುತ್ತದೆ.
Touring round the world and learning different languages enhances one's knowledge and wisdom.

ದೇಶ ಸುತ್ತಿ ನೋಡ್, ಕೋಶ ಓದಿ ನೋಡು
ದೇಶ ಸುತ್ತಿದಾಗ, ಅಮೂಲ್ಯವಾದ ಗ್ರಂಥಗಳನ್ನು ಓದಿದಾಗ ನಾವು ಜ್ಞಾನಿಗಳು, ಅನುಭವಿಗಳೂ, ಬುದ್ಧಿವಂತರೂ ಆಗುತ್ತೇವೆ.
We become more wise, more experienced and more knowledgeable people when we make an extensive tours and read valuable books.

ದೈ ಇರ್‌ಕನ ಬೊಗ್ಗದ್ದ್ ಮರ ಆಕನ ಬೊಗ್ಗಿದೆನಾ?
ಬಾಲ್ಯದಲ್ಲಿಯೇ ಮಕ್ಕಳನ್ನು ತಿದ್ದಿ ತೀಡಿ ಬುದ್ಧಿ ಕಲಿಸಬೇಕು ಮುಂದೆ ಅವರು ಬೆಳೆದು ನಿಂತಾಗ ಸಾಧ್ಯವಾಗುವುದಿಲ್ಲ.
Children should be properly moulded in the childhood and it is not possible when they growup and become adults.

ದೊಡ್ಡವರೊಟ್ಟಿಗೆ ಮಾತ್ ಒಳ್ಳೆದ್,
ಬಡವರೊಟ್ಟಿಗೆ ಊಟ ಒಳ್ಳೆದ್.
ಶ್ರೀಮಂತರ ಜೊತೆ ವಿನಯದಿಂದ, ಸೌಜನ್ಯತೆಯಿಂದ ಮಾತನಾಡಬೇಕು, ಬಡವರ ಜೊತೆ ಸ್ವಚ್ಛಂದವಾಗಿ ಮಾತನಾಡುತ್ತಾ ಊಟ ಮಾಡಬಹುದು.
Let us be very polite with the rich and it is nice to dine with poor freely without any obligation.

ದೊಡ್ಡವರೊಟ್ಟಿಗೆ ಹಗೆ ಬೇಡ,
ಸಣ್ಣವರೊಟ್ಟಿಗೆ ಸಲುಗೆ ಬೇಡ.
ದೊಡ್ಡ ಮನುಷ್ಯರ ಜೊತೆ ಹಗೆತನ ಬೇಡ, ಅವರು ಯಾವಾಗಲಾದರೂ ನಮಗೆ ತೊಂದರೆ ಉಂಟು ಮಾಡಬಹುದು ಅಂತೆಯೇ ಸಣ್ಣ ಬುದ್ಧಿ ಇರುವವರ ಜೊತೆ ಸಲುಗೆ ಬೇಡ. ಅವರು ನಮ್ಮ ಸಲುಗೆಯನ್ನು ದುರುಪಯೋಗ ಪಡಿಸಿಕೊಳ್ಳಬಹುದು.
It is better not to have hatredness with the rich and lenience with the unwise.

ದೊಡ್ಡವು ಮಾಡ್ರೆ ಆಚಾರ,
ಪಾಪದವು ಮಾಡ್ರೆ ವ್ಯಭಿಚಾರ.
ದೊಡ್ಡ ಮನುಷ್ಯರು ತಪ್ಪು ಮಾಡಿದರೆ ಅದು ಜೀವನ ಕ್ರಮ ಎಂದು ಪರಿಗಣಿಸಬೇಕು, ಬಡವ ತಪ್ಪು ಮಾಡಿದರೆ ಅದು ಅನೈತಿಕ ಕೆಲಸ ಎಂದು ಪರಿಗಣಿಸಲಾಗುತ್ತದೆ.
The mistakes committed by the rich are considered as life style where as the mistake of the poor is considered as immoral.

ದೊಡ್ಡ ಪಾಪಕ್ಕೆ ದೊಡ್ಡ ನರಕ
ಘೋರ ಪಾತಕಕ್ಕೆ ಘೋರ ಶಿಕ್ಷೆ.
Higher the sin more the punishment.

ದೊರೆ ಮರ್ಜಿ ಕುರೆ ಬುದ್ಧಿ
ರಾಜ ಮಹಾರಾಜರ ಜೀವನ ಶೈಲಿ, ಬುದ್ಧಿ ಮಾತ್ರ ಮಂಗನದು.
Royal life but uncivilized behaviour

ಧರ್ಮಕ್ಕೆ ಸಿಕ್ಕಿದ್, ದಾನಕ್ಕೆ ಹೋತ್
ಬೆಲೆಕೊಡದೆ, ಶ್ರಮವಹಿಸದೆ ಬಿಟ್ಟಿ ಸಿಕ್ಕಿದ ಸಂಪತ್ತು ದಾನಕ್ಕಾಗಿ ವಿನಿಯೋಗವಾಯಿತು.
Wealth secured free of cost without any effort went away for charity.

ನಂಗೆ ಗತಿ ಇಲ್ಲೆ, ಅವಂಗೆ ಮತಿ ಇಲ್ಲೆ
ನನಗೆ ಅವನಿಲ್ಲದಿದ್ದರೆ ಗತಿ ಇಲ್ಲ, ಅವನು

ಅಹಂ ಹಾಗೂ ಜಂಭದ ಪರಿಣಾಮವಾಗಿ ಮತಿಹೀನನಾಗಿದ್ದಾನೆ.
Without him I have no future but he had lost his wisdom due to his pride or egoism.

ನಂಗೆ ಬೇಡ ಇನ್ನೊಬ್ಬಂಗೆ ಕೊಡಿಕಿಲೆ
ತಾನು ತಿನ್ನಲಾರ, ಇನ್ನೊಬ್ಬನಿಗೆ ಕೊಡಲಾರ' ಎಂಬ ಸಿನಿಕಲ್ ಮನೋಭಾವ.
He won't enjoy and he will not allow others to enjoy.

ನಂಟ್ ಕಳಿಯಕೂ ಆಗದ್, ಗಂಟ್ ಬುಡಿಕೂ ಆಗದ್
ಗಂಟು (ನಿಧಿ, ಸಂಪತ್ತು) ಕಳೆದು ಹೋಗಲೂ ಬಾರದು ನೆಂಟಸ್ತಿಕೆ ಕಳೆದುಕೊಳ್ಳಲೂ ಬಾರದು. ಆರ್ಥಿಕ ಪರಿಸ್ಥಿತಿಯನ್ನು ಹಾಳುಗೆಡವದೆ ನೆಂಟಸ್ಥಿಕೆ ಉಳಿಸಿಕೊಳ್ಳಬೇಕು.
Maintaining the relationship without losing any money or wealth.

ನಂಟ್ ಇದ್ದರೆ ಗಂಟ್
ಒಳ್ಳೆಯ ಅಥವಾ ನೆರೆಯವರ ಜೊತೆ ಉತ್ತಮ ಸಂಬಂಧ ನಮಗಿದ್ದರೆ ಅವರು ಸದಾ ನಮಗೆ ಸಹಾಯ ಮಾಡುತ್ತಾರೆ.
A good relationship with our relatives, friends and neighbours is our strength.

ನಂಬಿದವಂಗೆ ಇಂಬು, ನಂಬದವಂಗೆ ಅಂಬು
ನಂಬಿದವನಿಗೆ ಬೆಂಬಲ, ಪ್ರೋತ್ಸಾಹ, ನಂಬದವನಿಗೆ ತೊಂದರೆ.
Favour to the supporters and disturbance to the non-supporters.

ನಗಾಡುವ ಗಂಡನ,
ಮರ್ಡುವ ಹೆಣ್ಣ್‌ನ ನಂಬಿಕಾಗದ್
ಗಂಡಸು ನಗುತ್ತಾ ನಗುತ್ತಾ ಕೆಲವು ಗಂಭೀರ ವಿಚಾರಗಳನ್ನು ಹಗುರವಾಗಿ ತೆಗೆದುಕೊಳ್ಳುತ್ತಾನೆ. ಅಂತೆಯೇ ಕೂಗುವ ಹೆಣ್ಣು ಗಂಡಿನ ಹೃದಯವನ್ನು ಕರಗಿಸಿ ಮಂಕು ಬೂದಿ ಎರಚುತ್ತಾಳೆ.
Do not believe the laughing man and the weeping lady.

ನನ್ನ ಮೋರೆ ಓರೆ ಆದರೆ ಕನ್ನಡಿನ ದೂರುದು ಯಾಕೆ?
ನನ್ನ ಲೋಪಗಳಿಗೆ, ದೌರ್ಬಲ್ಯಗಳಿಗೆ ಇನ್ನೊಬ್ಬನನ್ನು ಆರೋಪಿಸುವುದು ಸರಿಯಲ್ಲ.
It is unfair to curse others for the weakness of mine.

ನಮ್ಮ ಬೆನ್ನ್ ನಾವ್‌ಗೆ ಕಾಂಬದ್ಲೆ
ನಮ್ಮ ಲೋಪದೋಷಗಳು ನಮಗೆ ಕಾಣುವುದಿಲ್ಲ, ನಮ್ಮ ಬಗ್ಗೆ ಜನ ಏನು ಹೇಳುತ್ತಾರೆಂದು ನಮಗೆ ಗೊತ್ತಾಗುವುದಿಲ್ಲ.
We could not find our own weaknesses.

ನಯ ಇದ್ದರೆ ಭಯ ಇಲ್ಲೆ
ನಯ, ವಿನಯ, ಸೌಜನ್ಯತೆಗಳಿದ್ದರೆ ಯಾರಿಂದಲು ಭಯವಿಲ್ಲ.
Politeness avoids quarrel and there is no fear for friction

ನಾಯಿಗೇನ್ ಗೊತ್ತ್ ಉಪ್ಪಿನಕಾಯಿ ರುಚಿ
ಅಜ್ಞಾನಿಗಳಿಗೆ, ಅವಿದ್ಯಾವಂತರಿಗೆ, ಅನಕ್ಷರಸ್ಥರಿಗೆ ಸಾಹಿತ್ಯ, ಸಂಸ್ಕೃತಿ, ಜ್ಞಾನ, ಅರಿವು ಎಂಬಿತ್ಯಾದಿ ವಿಚಾರಗಳ ರುಚಿ ತಿಳಿಯುವುದು ಕಷ್ಟ.
The illiterate, uneducated, the unwise can't enjoy the taste of culture, literature, wisdom, awareness etc.

ನಾಯಿ ಬೊಗಳ್‌ರೆ ದೇವಸ್ಥಾನ ಹಾಳಾದ್ಲೆ
ನಾಯಿ ಬೊಗಳಿದ ತಕ್ಷಣ ದೇವಾಲಯದ

ಪಾವಿತ್ರ್ಯಕ್ಕೆ ಧಕ್ಕೆಯಾಗುವುದಿಲ್ಲ. ಕೆಲವೊಂದು ಸಾತ್ವಿಕ ವ್ಯಕ್ತಿಗಳನ್ನು ಟೀಕಿಸಿದಾಗ ಅವರ ಸಾತ್ವಿಕತೆಗೆ ಧಕ್ಕೆಯಾಗುವುದಿಲ್ಲ
Criticizing the noble people will not spoil their image, sanctity and nobility.

ನಾಯಿ ಬೀಲಕ್ಕೆ ಓಟೆ ಹಾಕಿದಾಂಗೆ
ಕೆಲವರನ್ನು ಎಷ್ಟು ತಿದ್ದಿದರೂ ಸರಿಯಾಗು ವುದಿಲ್ಲ.
There are people who do not change inspite of any amount of guidance, correction and training.

ನಾಯಿ ಮೊಲೆಲಿ ಹಾಲಿದ್ದಾಂಗೆ
ಕೆಲವೊಂದು ಜಿಪುಣರ, ಅಯೋಗ್ಯರ ಕೈಯಲ್ಲಿ ಸಂಪತ್ತು ಇದ್ದ ಹಾಗೆ.
Wealth in the hands of greedy, unworthy and useless people.

ನಾಯಿಗೆ ಹೇಳ್‌ಕನ ನಾಯಿ ಅದರ ಬೀಲದೊಟ್ಟಿಗೆ ಹೇಳ್ತ್.
ಕೆಲವೊಂದು ಕೆಲಸಗಳನ್ನು ನಾವು ಒಬ್ಬರಿಗೆ ವಹಿಸಿಕೊಟ್ಟಾಗ ಆತ ಅದನ್ನು ಇನ್ನೊಬ್ಬರಿಗೆ ಹಸ್ತಾಂತರಿಸುವುದು
When we entrust a work to one, he passes it on to others.

ನಾಯಿ ಬಾಲ ಯಾಗೋಳು ಡೊಂಕು
ಕೆಲವರನ್ನು ಎಷ್ಟು ತಿದ್ದಿದರೂ ಸರಿಯಾಗು ವುದಿಲ್ಲ ಹಾಗೂ ಬದಲಾಗುವುದಿಲ್ಲ
Some do not change inspite of the best efforts.

ನಾಲ್‌ಕೆ ಒಳ್ಳೆದಾದರೆ ನಾಡಿಗೆ ಒಳ್ಳೆದ್
ನಮ್ಮ ಮಾತು ಚೆನ್ನಾಗಿದ್ದರೆ ಅದು ಊರಿಗೆ ಒಳ್ಳೆಯದು.
Our good words do good to the society.

ನಾವೊಂದು ನೆನ್‌ದರೆ ದೇವ್ರೊಂದು ನೆನ್‌ದದೆ
ದೇವರು ನೆನೆದಂತೆ ಜಗತ್ತು ನಡೆಯುತ್ತದೆ ಹೊರತು ನಾವೆಣಿಸಿದಂತೆ ನಡೆಯುವುದಲ್ಲ.
Man proposes, God disposes.

ನಾವು ಸಮಯನ ಕೊಲ್ಲುತ್ತಾ ಇದ್ದವೆ, ಸಮಯ ನಮ್ಮ ಕೊಲ್ಲುತ್ತಾ ಇದ್ದದೆ.
ಏನೊಂದೂ ಕೆಲಸ ಮಾಡದೆ ಅನೇಕ ಬಾರಿ ನಾವು ಕಾಲ ಕಳೆಯುತ್ತೇವೆ. ಜೊತೆಗೆ ಸಮಯವು ಜಾರಿ ಹೋಗಿ ನಾವು ಮುದಿತನ ದತ್ತ ಸಾಗುತ್ತಾ ಇರುತ್ತೇವೆ.
We kill the time, the time kills us.

ನಾ ಸಾಯೋಕು, ನಾ ಸ್ವರ್ಗ ಪಡಿಯೋಕು
ತಾನು ಶ್ರಮಪಡಬೇಕು, ತಾನು ಸಾತ್ವಿಕ ಜೀವನ ನಡೆಸಬೇಕು, ತಾನು ಸಂತೋಷ ನೆಮ್ಮದಿ ಪಡೆಯಬೇಕು.
I should work hard and I should lead an ideal life so that I should get happiness and contentment.

ನಾ ಹೊಡ್ದಾಂಗೆ ಮಾಡ್ನೆ, ನೀ ಮರ್ಟಾಂಗೆ ಮಾಡ್
ಕಣ್ಣೊರಸುವ ತಂತ್ರ, ನಾನು ಹೊಡೆದಾಗೆ ಮಾಡ್ತೇನೆ. ನೀನು ಕೂಗಿದಾಗೆ ಮಾಡು
Eye washing techinque

ನಿಧಾನವೇ ಪ್ರಧಾನ
ನಿಧಾನವಾಗಿ ಅಚ್ಚುಕಟ್ಟಾಗಿ ಮಾಡುವ ಕೆಲಸ ಯಾವಾಗಲೂ ಯಶಸ್ಸು
Slow and steady wins the race

ನಿಧಾನವಾಗಿ ಯೋಚ್ನೆ ಮಾಡ್ ತುರ್ತಾಗಿ ಕೆಲಸ ಮಾಡ್
ನಿಧಾನವಾಗಿ, ಯೋಚಿಸಿ ಕೆಲಸ ಮಾಡ ಬೇಕು, ಎಲ್ಲವನ್ನೂ ಯೋಜಿಸಿದ ನಂತರ ತುರ್ತಾಗಿ ಕೆಲಸ ಮಾಡಿ ಮುಗಿಸಬೇಕು
Plan the work slowly but execute the same quickly.

ನಿನ್ನ ಅಡ್ಗೆನ ನೀನೆ ಉಣದಿದ್ದರೆ ಹೇಂಗೆ?
ನಿನ್ನ ಯಶಸ್ಸು ಮತ್ತು ಸೋಲನ್ನು ನೀನೇ ಅನುಭವಿಸಬೇಕು
You have to enjoy both your success and defeat.

ನಿನ್ನ ಬುದ್ಧಿ ನಿಂಗೆ ಮೊದಲ ಗುರು
ನಮ್ಮ ನಮ್ಮ ಬುದ್ಧಿಯೇ ನಮಗೆ ಮೊದಲ ಗುರು.
Our first teacher is our own wisdom.

ನಿನ್ನೆ ಹೇಳ್ದ ಮಾತ್ ಇಂದಿಗಿಲ್ಲೆ,
ಇಂದ್ ಹೇಳ್ದ ಮಾತ್ ನಾಳೆಗಿಲ್ಲ
ತುಂಬಾ ಜನರು ಹೇಳಿದ ಮಾತನ್ನು, ನೀಡಿದ ಭರವಸೆಯನ್ನು ಉಳಿಸಿಕೊಳ್ಳುವುದಿಲ್ಲ.
Most of the times people fail to keep up the promise and assurances.

ನಿಯಮ ಇದ್ದರೆ, ಯಮನೂ ಹೆದ್ರ್ದೆ
ನಾವು ನಿಯತ್ತಿನಿಂದ ಬದುಕಿದರೆ ಸಾವಿಗೂ ಹೆದರಬೇಕೆಂದಿಲ್ಲ. We need not fear for death if we lead a systematic life.

ನೀತಿ ಗೆಟ್ಟವಂಗೆ ಜಾತಿ ಏಕೆ?
ನೀತಿ ನಿಯಮ ಕೆಟ್ಟವನಿಗೆ ಜಾತಿಯ ಬೆಂಬಲ ಸಮಾಜದ ಬೆಂಬಲ ದೊರಕಲಾರದು.
The people of our society, our relatives and the people of our caste will not support us if we lead anti-social and immoral life.

ನೀರ್ ಕಡ್ದರೆ ಬೆಣ್ಣೆ ಬಾಕಿಲೆ,
ಪೊಯ್ಯ ಹಿಂಡಿರೆ ಎಣ್ಣೆ ಬಾಕಿಲೆ
ಫಲವತ್ತತೆ ಇಲ್ಲದ ಭೂಮಿಯಲ್ಲಿ ಎಷ್ಟು ಕೃಷಿ ಮಾಡಿದರು ಫಸಲು ಬರಲಾರದು
We can't get good crop in an unfertile land even if we do very good cultivation.

ನೀರ್ ಸೇರ್ದು ಸಮುದ್ರನ,
ದುಡ್ಡು ಸೇರ್ದು ಇದ್ದಂವನ
ನೀರು ಸಮುದ್ರ ಸೇರಿದಂತೆ, ಹಣ ಶ್ರೀಮಂತ ನಲ್ಲಿಯೇ ಶೇಖರಣೆಯಾಗುತ್ತದೆ. ಶ್ರೀಮಂತ ಇನ್ನೂ ಶ್ರೀಮಂತನಾಗುತ್ತಾ ಬೆಳೆಯುತ್ತಾನೆ.
Water finally reaches the sea likewise money acrues with the rich. Rich become richer and richer.

ನುಂಗಿಕೂ ಅಲ್ಲ, ಉಗಿಯಕೂ ಅಲ್ಲ
ನಮ್ಮ ಆತ್ಮೀಯರು, ಬಂಧುಗಳು ತಪ್ಪೆಸಗಿದಾಗ ನಮಗೆ ಅದನ್ನು ಬೆಂಬಲಿಸಲೂ ಆಗುವುದಿಲ್ಲ, ಅವರನ್ನು ಶಿಕ್ಷಿಸಲೂ ಆಗುವುದಿಲ್ಲ.
It is difficult either to support or to pardon our own people when they commit some mistakes.

ನೆಂಟ ಎಂದೂ ಮನೆಂವ ಆಕಿಲೆ,
ಮನೆಂವ ಎಂದೂ ನೆಂಟ ಆಕಿಲೆ
ಹೊರಗಿನಿಂದ ಬಂದ ವ್ಯಕ್ತಿ ಎಂದು ನಮ್ಮ ಮನೆಯ ಸದಸ್ಯನಾಗಲಾರ ಮನೆಯಲ್ಲಿಯೇ ಹುಟ್ಟಿ ಬೆಳೆದವ ಎಂದು ನೆಂಟನಾಗಲಾರ.
A member of our family can never become a guest and a guest can never become a member of the family.

ನೆಂಟ್ರ ಮೇಲೆ ಪ್ರೀತಿ ಅಕ್ಕಿ ಮೇಲೆ ಆಶೆ
ಮನೆಯ ಆರ್ಥಿಕ ಸ್ಥಿತಿಗೆ ಹೊರೆಯಾಗದಂತೆ ಅತಿಥಿಗಳಿಗೆ ಆತಿಥ್ಯ ನೀಡಬೇಕು
Hospitality should be within the limits of our Economic position.

ನೆಂಟ್ರ ದೂರ ಇಸೊಕು, ನೀರ್ ಹಕ್ಕಲೆ ಇಸೊಕು
ನೆಂಟ ಎಷ್ಟೇ ಹತ್ತಿರದ ಬಂಧುವಾದರೂ ಆತನನ್ನು ಒಂದು ಅಂತರದಲ್ಲೆ ಇರಿಸಬೇಕು ಆದರೆ ನಮ್ಮ ಬಹು ಅವಶ್ಯಕ ವಸ್ತುವಾದ ನೀರು ನಮ್ಮ ಹತ್ತಿರದಲ್ಲೇ ಇರಬೇಕು.
We should keep our relatives at

arm's length but we should keep water very near to us

ನೆರ್ದ ಮೇಲೆ ನಾಚಿಕೆ ಇಲ್ಲೆ,
ಹೆತ್ತ ಮೇಲೆ ಹೇಸಿಕೆ ಇಲ್ಲೆ
ಹೆಣ್ಣು ಋತುಮತಿಯಾಗಿ, ಬಾಲ್ಯಾವಸ್ಥೆಯನ್ನು ಕಳೆದುಕೊಂದು ಪ್ರೌಢಾವಸ್ಥೆಗೆ ಬಂದಾಗ ನಾಚಿಕೆ ಸ್ವಭಾವ ಕಡಿಮೆಯಾಗುತ್ತದೆ. ಹೆಣ್ಣು ಮಗುವಿಗೆ ಜನ್ಮ ಕೊಟ್ಟಾಗ, ಮುಂದೆ ಮಗುವನ್ನು ಸಾಕಿ ಸಲಹುವಾಗ ತನ್ನ ಹೇಸಿಕೆಯಾಗುವ ಸ್ವಭಾವ ಕಳೆದುಕೊಳ್ಳುತ್ತಾಳೆ. ಹೆಣ್ಣಿನ ಬೆಳವಣಿಗೆಯ ಭಾವನಾತ್ಮಕ ಅಂಶಗಳು.

ನೆರೆಮನೆ ಮೊದುವೆಲಿ ಮಿಂಡಂಗೆ ಸಂಮಾನ
ಕುಟುಂಬದ ರಹಸ್ಯ ವೈರಿಗೆ, ನೆರೆಮನೆಯ ಮದುವೆಯಲ್ಲಿ ತುಂಬು ಆತಿಥ್ಯ.
Giving dinner to the secret enemy of our house in the marriage function of our neighbours.

ನೋಡಿ ಕಲಿಯೋಕು, ಕೂಡಿ ಬಾಳೊಕು
ಅನುಭವದಿಂದ ಪಾಠ ಕಲಿಯುಬೇಕು, ಎಲ್ಲರೂ ಕೂಡಿ ಒಗ್ಗಟ್ಟಿನಿಂದ ಬಾಳಬೇಕು.
Learn by experience and live together unitedly.

ಪ್ರತೀ ಕಪ್ಪು ಮೋಡದ ಒಳಗೆ ಒಂದು ಬೆಳ್ಳಿ ಗೆರೆ ಇದ್ದದೆ
ಪ್ರತಿಯೊಂದು ಸಮಸ್ಯೆಗೂ ಒಂದು ಪರಿಹಾರ ವಿರುತ್ತದೆ.
There is a silver line in every cloud. Every problem has its own solution.

ಪ್ರತೀ ಕಪ್ಪು ಮೋಡದ ಒಳಗೆ ಒಂದು ಬೆಳ್ಳಿ ಗೆರೆ ಇದ್ದದೆ
ಪ್ರತಿಯೊಂದು ಸಮಸ್ಯೆಗೂ ಒಂದು ಪರಿಹಾರ ವಿರುತ್ತದೆ
There is a silver lining in every cloud. Every problem has its own solution.

ಪಾಪಿ ಹೋದಲ್ಲಿ ಪಾತಾಳ
ಪಾಪ ಕಾರ್ಯ ಮಾಡಿದವ ಮುಂದೆ ಎಲ್ಲಿ ಹೋದರೂ ಕಷ್ಟ, ನಷ್ಟ ಸಂಕಷ್ಟಗಳನ್ನು ಎದುರಿಸುತ್ತಾನೆ.
A sinnner always faces problems and difficulties in his life wherever he goes.

ಪ್ರಾಯ ಬಾಕನ ಆಯ ತಪ್ಪಿತ್
ಯೌವನ ಬಂದಾಗ ತುಂಬಾ ಯುವಕರು ದುಶ್ಚಟಗಳಿಗೆ ಬಲಿಬಿದ್ದು ಜೀವನವೆಂಬ ಆಯದಲ್ಲಿ ತಪ್ಪಿ ಹೋಗುತ್ತಾರೆ.
Most of the young men fall into bad habits and fail in their life.

ಪ್ರಾಯ ಆದರೆ ಸಾಲದ್ ಬುದ್ಧಿನೂ ಬೆಳೆಯೋಕು
ಪ್ರಾಯ ಆದಂತೆಲ್ಲ ನಾವು ಲೋಕ ಜ್ಞಾನವನ್ನು, ಹಾಗೂ ಯಶಸ್ವಿಯಾಗಿ ಹೇಗೆ ಬದುಕಲು ಸಾಧ್ಯ ಎಂಬುದನ್ನು ಅರಿತುಕೊಳ್ಳಬೇಕು.
As we grow, we should become more wise and learn how to live better in this world.

ಪ್ರಾಯಲಿ ನಾಯಿ ಕೂಡಾ ಪೊರ್ಲು
ಯೌವನ ಬಂದಾಗ ಸೌಂದರ್ಯ ವೃದ್ಧಿಸುತ್ತದೆ. ಯುವಕ ಯುವತಿಯರ ಕಣ್ಣಿಗೆ ಜಗತ್ತೇ ಸುಂದರವಾಗಿ ಕಾಣುತ್ತದೆ.
The world looks beautiful for the youth.

ಪ್ರೀತಿ ಇದ್ದರೆ ಜಾತಿಯಾಕೆ?
ನಿಜವಾದ ಪ್ರೀತಿಗೆ ಜಾತಿ ಅಡ್ಡ ಬರಲಾರದು
Caste will not block the real love.

ಪೆಟ್ಟ್‌ನ ಗಾಯ ಮಾಸಿ ಹೋದು,

ಮಾತ್‌ನ ಗಾಯ ಮಾಸಿ ಹೋದುಲೆ
ಪೆಟ್ಟ್ ಹೊಡೆದಾಗ ಉಂಟಾಗುವ ಗಾಯ ಗುಣವಾಗಿ ಅದರ ಕಲೆ ಕೂಡಾ ಮಾಸಿ ಹೋಗಬಹುದು ಆದರೆ ಅವಮಾನಿಸಿದ ಮಾತುಗಳು ಸದಾ ಮನಸ್ಸಿನಲ್ಲಿ ರಿಂಗಣಿಸುತ್ತದೆ.
The wound caused in a quarrel will heal and its scar will fade away but the insulting words will always linger in the mind.

ಪೊಟ್ಟಂಗೆ ಉಟ್ಟು ಪೊಡಿ ಮೊದ್ದು
ಇಂದ್ರಿಯ ಶಕ್ತಿ ಇಲ್ಲದವರಿಗೆ ತನ್ನ ಲೋಪ ವನ್ನು ಪರಿಹರಿಸಿಕೊಳ್ಳಲು ವಿಶೇಷವಾದ (sixth sense) ಕೆಲವು ಬುದ್ಧಿಶಕ್ತಿ ಇರುತ್ತದೆ, ಇದರಿಂದ ಅವರು ಸುಲಭವಾಗಿ ಮೋಸ ಹೋಗುವುದಿಲ್ಲ.
People who doesn't have proper sensory organs possess a special sense to compensate the same.

ಪೊರ್ಲಿಗೆ ಮೊರ್ಲಿಲ್ಲೆ
ಸೌಂದರ್ಯಕ್ಕೆ ಮರುಳಾಗಬಾರದು
One should not become a fool for beauty.

ಪೊರ್ಲುನ ಹೆಣ್ಣ್ ಶತ್ರುಗೆ ಸಮ
ಸುಂದರಿಯಾದ ಪತ್ನಿಯನ್ನು ಹತ್ತಾರು ಕಾಮುಕ ಕಣ್ಣುಗಳು ಹಿಂಬಾಲಿಸುತ್ತವೆ. ಆದುದರಿಂದ ವೈರಿಗಳ ಜೊತೆ ನಾವು ಎಷ್ಟು ಜಾಗರೂಕರಾಗಿರುತ್ತೇವೋ ಅಷ್ಟೇ ಹೊಣೆಗಾರಿಕೆಯಿಂದ ಅವಳನ್ನು ರಕ್ಷಿಸಬೇಕಾಗುತ್ತದೆ.
So many sex hungry eyes follows a beautiful wife. So to save her we should be so careful to the extent we take care against the enemies.

ಪೊರ್ಲು ಇರ್ದು ಅವನವನ ಕಣ್ಣ್‌ಲಿ
ಸೌಂದರ್ಯವನ್ನು ಆಸ್ವಾದಿಸುವ ಕಣ್ಣುಗಳು ಸೌಂದರ್ಯವನ್ನು ಅಳೆಯುತ್ತವೆ.
Beauty is always measured by aesthetic sense.

ಬಂಗ ಬಂದವನ ಬಾಳ್ ಬಂಗಾರ್
ಕಠಿಣ ದುಡಿಮೆ ಬಾಳನ್ನು ಬಂಗಾರ ಮಾಡುತ್ತದೆ.
Hard work makes our life golden life

ಬಂದ ದಾರಿಗೆ ಸುಂಕ ಇಲ್ಲೆ
ಹೋದ ಕೆಲಸ ಏನೂ ಆಗದಿದ್ದರೆ ನಾವು ಸುಮ್ಮನೆ ಹಿಂದಿರುಗುತ್ತೇವೆ.
When we could not meet a person or couldnot find any thing in a place where we go, we return empty handed.

ಬಂದಂವ ಅಪ್ಪ ಬಾರದಂವ ಶೆಪ್ಪ
ಆಮಂತ್ರಣವನ್ನು ಮನ್ನಿಸಿ ನಮ್ಮ ಮನೆಗೆ ಬಂದವ ಪಿತೃ ಸಮಾನ, ಬಾರದಿದ್ದವ ತೃಣ ಸಮಾನ.
The person who attends a function or comes to our house obliging our invitation is as good as our parents but who never obliges is a negligible person.

ಬಡಂವ ಹುಲ್ಲು ತಿಂದರೆ ಹೊಟ್ಟೆಗಿಲ್ಲದೆ, ಶ್ರೀಮಂತ ತಿಂದರೆ ಮೊದ್ದಿಗೆ
ಬಡವರು ಏನೇ ಕೆಲಸ ಮಾಡಿದರೂ ಅದಕ್ಕೆ ಬಡತನದ ಛಾಯೆ. ಶ್ರೀಮಂತರು ಏನೂ ಮಾಡಿದರೂ ಅದಕ್ಕೆ ಸಮಾಜದ ರಕ್ಷಣೆ.
The rich are protected by the society even if they do wicked things where as the poor are humiliated by the society even if they do good works.

ಬಸವ ಎದ್ದ ಬಾಲ ಬೀಸಿದ
ಗೊತ್ತು ಗುರಿಯಿಲ್ಲದ ಜೀವನ

Life without any goal or ambition.

ಬಯಸಿದ್ ಸಿಕ್ಕಿಕಿಲೆ, ಸಿಕ್ಕಿದ್ ತಪ್ಪಿಕಿಲೆ
ಅನೇಕ ಬಾರಿ ನಾವು ಬಯಸಿದ್ದು ನಮ್ಮ ಕೈ ಸೇರುವುದಿಲ್ಲ. ಆದರೆ ನಮ್ಮ ಕೈ ಸೇರಿದ್ದು ತಪ್ಪಿ ಹೋಗುವುದಿಲ್ಲ.
Most of the times we won't get what we long for but we will not lose what we have already got.

ಬರಬರುತ್ತಾ ರಾಯರ ಕುದುರೆ ಕತ್ತೆ ಆತ್.
ಆರಂಭದಲ್ಲಿ ಚೆನ್ನಾಗಿದ್ದವ ನಿಧಾನವಾಗಿ ನಿಷ್ಕ್ರೀಯನಾಗುವುದು.
A person who is active in the beginning becoming inactive day by day.

ಬರ ಬಂದ ಕಾಲಕ್ಕೆ ಮಂಜ ಉಂಬಕೆ ಕಲ್ತತ್.
ಆರ್ಥಿಕ ಪರಿಸ್ಥಿತಿ ಹದೆಗೆಟ್ಟಾಗ ಮಗ ವೀಪರಿತ ಖರ್ಚು ಮಾಡಲು ಆರಂಭಿಸಿದ.
Son began to spend more money when the economic position was going bad.

ಬಲ ಕೈಲಿ ಕೊಟ್ರೆ ಎಡಕೈಗೆ ಗೊತ್ತಾಕಾಗದ್
ದಾನ ಮಾಡಿದರೆ ಪ್ರಚಾರ ಮಾಡಬಾರದು.
Charity does not need any publicity.

ಬಳೆಗಳಿಲ್ಲದ ಮನೆಲಿ ನೆಳಗಳ ಹಾವಳಿ ತಪ್ಪಿಕಿಲೆ
ಮನೆಯಲ್ಲಿ ಹೆಂಗಸರಿಲ್ಲದಿದ್ದರೆ ಮನೆಯ ಸ್ವಚ್ಛತೆ ಕಾಪಾಡಲು ಕಷ್ಟ.
It is difficult to keep the house clean if there are no women in the house.

ಬಾತಂವಂಗೆ ಹೂಸಿದಷ್ಟು ಲಾಭ
ತೊಂದರೆಯಲ್ಲಿರುವವನಿಗೆ ಪರಿಹಾರ ಸಿಕ್ಕಿದಷ್ಟು ಪ್ರಯೋಜನ.
A person who in deep trouble gets relieved with what all the little benefit he gets.

ಬಾಮಿ ತೆಗೆಯದೆ ನೀರ್ ಸಿಕ್ಕಿಕಿಲೆ
ಪ್ರಯತ್ನ ಮಾಡದೆ ಫಲ ಸಿಗಲಾರದು.
No result without effort.

ಬಾಯಿ ಮುಚ್ಚ್‌ಕನ ಹೃದಯ ತೆರ್ ಕಂಡದೆ
ಮಾತಿನಲ್ಲಿ ಹೇಳಲಾಗದ್ದನ್ನು ಹೃದಯ ಭಾಷೆಯಲ್ಲಿ ಹೇಳಲು ಸಾಧ್ಯ.
Some of the feelings can be expressed with the language of the heart.

ಬಾಯಿ ಸಣ್ಣದಾದರೂ ತುತ್ತು ದೊಡ್ಡದ್
ಗಾತ್ರ ಚಿಕ್ಕದಾದರೂ ಉತ್ತಮ ಕೆಲಸಗಾರ, ಮಾತು ಕಡಿಮೆಯಾದರೂ ಕೃತಿಯಲ್ಲಿ ಮೇಲು.
Poor speaker but a good worker.

ಬಾಯಿಲಿ ಬೆಣ್ಣೆ, ಕೈಲಿ ದೊಣ್ಣೆ
ಒಳಗೊಂದು, ಹೊರಗೊಂದು ಭಾವನೆ ಇರುವವರು. ಗೋಮುಖ ವ್ಯಾಘ್ರಗಳು.
People with dual feelings. People of cunning nature.

ಬಾಯಿಲಿ ಬಾ ಮಂಜ, ಮನ್ಸ್‌ಲಿ ಸೂಳೆ ಮಂಜ.
ಎದುರಿಗೆ ತುಂಬಾ ಪ್ರೀತಿ ತೋರಿಸಿ ಹಿಂದಿನಿಂದ ಟೀಕೆ ಮಾಡುವವರು.
Very loving and affectionate externally but internally cursing all the time.

ಬಾಯೊಳಗೆ ಬೊಮ್ಮ, ಹೊಟ್ಟೆಲಿ ಗುಮ್ಮ
ಬಾಯಲ್ಲಿ ಸದಾ ದೇವರ ನಾಮ, ಹೊಟ್ಟೆಯೊಳಗೆ ಸದಾ ಕೇಡು ಬಗೆಯುವ ಜಾಯಮಾನ.
Most pious people also wicked in their heart and attitude.

ಬಾರ್‌ಗೆ ಹೋಕನ ಎಲಿ, ಬಾಕನ ಹುಲಿ
ಮದ್ಯದಂಗಡಿಯ ಒಳಹೊಕ್ಕಾಗ ಇಲಿಯ ಹಾಗೆ ಇದ್ದವ ಹೊರ ಬರುವಾಗ ಮದ್ಯದ ಅಮಲಿನಲ್ಲಿ ಹುಲಿಯಂತಾಗುತ್ತಾನೆ.
When a person enters a bar he is as mild as a rat but when he comes out he is as wild as a tiger.

ಬಾಳೆಗೊಂದೇ ಗೊನೆ, ಬಾಳಿಗೊಂದೇ ಗುರಿ
ಒಂದು ಬಾಳೆ ಒಂದು ಗೊನೆಯನ್ನು ಮಾತ್ರ ನೀಡಬಲ್ಲುದು ಅಂತೆಯೇ. ಜೀವನಕ್ಕೊಂದು ನಿರ್ದಿಷ್ಠ ಗುರಿಯಿರಬೇಕು.
One should have a specific goal in his life.

ಬಾಳೆಹಣ್ಣ್ ಕೊಯ್ಯಕ್ಕೆ ಬಾಳ್ ಕತ್ತಿಯಾಕೆ
ಅತ್ಯಂತ ಸುಲಭವಾಗಿ ಪರಿಹರಿಸಬಹುದಾದ ಸಮಸ್ಯೆಯನ್ನು ಕ್ಲಿಷ್ಠಗೊಳಿಸುವುದು.
Making a silly problem which could be solved so easily into more rigid and complex.

ಬಿಸಿ ಆಗದೆ ಬೆಣ್ಣೆ ಕರ್‌ಗಿಕಿಲೆ
ಒಂದು ಕೆಲಸದ ಹಿಂದೆ ನಾವು ಗಂಭೀರವಾಗಿ ತೊಡಗಿಸಿಕೊಳ್ಳದಿದ್ದರೆ. ಆ ಕೆಲಸ ಆಗಲಾರದು. ಒಂದಷ್ಟು ಶಿಕ್ಷೆ ನೀಡಿದರೆ ಮಾತ್ರ ಮಕ್ಕಳು ಗಂಭೀರವಾಗಿ ಅಧ್ಯಯನದಲ್ಲಿ ತೊಡಗಿಕೊಳ್ಳುತ್ತಾರೆ.
Light punishment forces the lazy children to become more serious and responsible.

ಬೀಜ ಒಂದು ಫಲ ನೂರು
ಒಂದು ಕೊಡುಗೆ ಅದರ ಫಲಾನುಭವಿಗಳು ನೂರಾರು.
Hundred of beneficiaries from one contribution.

ಬಿತ್ತ್‌ಂತ ಹೇಳ್‌ಕನ ಬಿತ್ತಿದೆ, ಕೊಯ್ಯಿಂತ ಹೇಳ್‌ಕನ ಕೊಯ್ದೆ.
ವೈಯುಕ್ತಿ ತೀರ್ಮಾನ ಇಲ್ಲ, ಇನ್ನೊಬ್ಬ ಹೇಳಿದಂತೆ ಕೇಳುವುದು, ಹೌದಾ ಬಸವ ಹೌದು, ಇಲ್ಲ ಬಸವ ಇಲ್ಲ.
No individual decision. Performance in accordance with the direction of others.

ಬುದ್ಧಿ ಇದ್ದಲ್ಲಿ ಬಲ ಉಟ್ಟು, ಶ್ರಮ ಇದ್ದಲ್ಲಿ ಫಲ ಉಟ್ಟು.
ಬುದ್ಧಿವಂತ ಜನರಿಂದ ಒಂದು ಯೋಜನೆ ಯಶಸ್ವಿಯಾಗಬಲ್ಲುದು. ಅಂತೆಯೇ ನಿರಂತರ ಶ್ರಮ ಫಲ ತಂದು ಕೊಡಬಲ್ಲುದು.
Wisdom and hard work brings success.

ಬೂಡ್ಸ್ ಹಾಕಿದವಂಗೆ ಗೊತ್ತು,
ಅದ್ ಎಲ್ಲಿ ಕಚ್ಚಿದೇಂತ.
ಅನುಭವಿಸಿದವನಿಗೆ ಗೊತ್ತಿದೆ ಲೋಪ ಎಲ್ಲಿದೆ ಎಂದು.
An experienced person knows where the mistake is.

ಬೆಂಕಿ ಇದ್ದಲ್ಲಿ ಹೊಗೆ ಉಟ್ಟು,
ನೀರ್ ಇದ್ದಲ್ಲಿ ಕೆಸರ್ ಉಟ್ಟು.
ಯಾವುದಾದರೊಂದು ಕೆಲಸ ಕಾರ್ಯಗಳನ್ನು ನಾವು ಮಾಡುವಾಗ ಲೋಪ ದೋಷಗಳು ಬರುವುದು ಸಹಜ.
In each and every work there are loopholes and mistakes.

ಬೆಂದದ್ ಬಾಯಿಗೆ, ಹಳ್ಸಿದ್ ನಾಯಿಗೆ
ಹದವಾಗಿ ಬೆಂದು ಬಿಸಿ ಬಿಸಿಯಾದ ಆಹಾರ ತಿನ್ನಲು ರುಚಿಕರ. ಅದೇ ಆಹಾರ ಹಳಸಿ ಹೋದಾಗ ಅದು ನಾಯಿಗೆ ಹಾಕಲ್ಪಡುತ್ತದೆ. ಆರಂಭಿಸಿದ ಕೆಲಸವನ್ನು ತಕ್ಷಣ ಮುಗಿಸುವುದು ಒಳಿತು.
Completing the work started, at the earliest.

ಬೆನ್ನಿಗೆ ಬೀಳದೆ ಬುದ್ಧಿ ಬಾಕಿಲೆ
ದೈಹಿಕ ಶಿಕ್ಷೆ ನೀಡಿದರೆ ಮಾತ್ರ ಮಕ್ಕಳು ತಪ್ಪನ್ನು ತಿದ್ದಿಕೊಳ್ಳುತ್ತಾರೆ.
Children set right their mistakes if corporal punishment is given.

ಬೊಳ್ಪು ಇದ್ದಲ್ಲಿ ಭಯ ಇಲ್ಲೆ
ಬೆಳಕು ಇದ್ದಲ್ಲಿ ಭಯ ಇಲ್ಲ, ಜ್ಞಾನ ಇದ್ದಲ್ಲಿ ಧೈರ್ಯವಿರುತ್ತದೆ.
Where there is light there is no fear. Where there is wisdom there is courage.

ಬೆಳ್ಳಂಗಿದ್ದದೆಲ್ಲ ಹಾಲಲ್ಲ
ಬೆಳ್ಳಗಿರುವುದೆಲ್ಲ ಹಾಲಲ್ಲ ಮೇಲ್ನೋಟಕ್ಕೆ ಸಭ್ಯ ರಾಗಿರುವವರು ಆಂತರಿಕವಾಗಿ ಸಭ್ಯ ರಾಗಿರುವುದಿಲ್ಲ.
People who are very gentle externally may not be gentle internally.

ಬೆಳೆವ ಸಿರಿ ಮೊಳ್ಕೆಲಿ
ಒಂದು ಬೆಳೆ ಹೇಗೆ ಬೆಳೆದು ಫಸಲು ನೀಡ ಬಹುದು ಎಂದು ಅದನ್ನು ಅದರ ಮೊಳಕೆ ಯಲ್ಲಿ ಅಂದಾಜಿಸಬಹುದು, ಒಬ್ಬ ವ್ಯಕ್ತಿಯ ಬೆಳವಣಿಗೆಯನ್ನು ಆತ ಮಗುವಿದ್ದಾಗಲೇ ಗಮನಿಸಬಹುದು.
The development of a crop or a person can be made out when they are quite young and tender.

ಬೇರೆವರ ತಗ್ಗ್‌ಸಿರೆ ನಮ್ಮ ಘನತೆನೇ ತಗ್ಗಿದೆ
ನಾವು ಇನ್ನೊಬ್ಬರ ಘನತೆಯನ್ನು ಕುಗ್ಗಿಸಿದರೆ ಅದು ನಮ್ಮ ಘನತೆಯನ್ನು ಕುಗ್ಗಿಸುತ್ತದೆ.
If we suppress others, that in turn suppresses our dignity and decorum.

ಬೇಲಿನೇ ಗದ್ದೆ ಮೇದಾಂಗೆ
ರಕ್ಷಕರೆ ಭಕ್ಷಕರಾದಂತೆ.
Misusing the wealth by the people who look after it.

ಬೇಸಾಯಗಾರ ಬೇಗ ಸಾಯ
ಕೃಷಿಕ ಬಹುಬೇಗನೆ ಶ್ರೀಮಂತನಾಗದಿದ್ದರೂ ಬದುಕಲು ಆತನಿಗೆ ತೊಂದರೆಯಾಗದು.
There is no problem for the day to day existence of the farmer.

ಬೊಗ್ಗಿದಂವಂಗೆ ಗುದ್ದು ಜಾಸ್ತಿ
ತಗ್ಗಿ ಬಗ್ಗಿ, ವಿಧೇಯನಾಗಿ ಕೆಲಸ ಮಾಡುವವರು ಯಾವಾಗಲೂ ಶೋಷಣೆಗೆ ಒಳಗಾಗುತ್ತಾರೆ.
Obedient servants are always over burdened or exploited.

ಬೊಗುಳುವ ನಾಯಿ ಯಾಗೋಳು ಕಚ್ಚಿಕಿಲೆ
ಬಾಯಲ್ಲಿ ಬೊಬ್ಬೆ ಹೊಡೆಯುವವರು ಏನನ್ನೂ ಸಾಧಿಸಲಾರರು.
Barking dogs never bite.

ಬೊಜ್ಜಕ್ಕಿಲ್ಲದ ಕುಂಬಳಕಾಯಿ,
ಕುಡಿಯಕೆ ಇಲ್ಲದ ಮೊಜ್ಜಿಗೆ ಯಾಕೆ?
ಉಪಯೋಗಕ್ಕಿಲ್ಲದ ವಸ್ತುಗಳು ಹಾಗೂ ವ್ಯಕ್ತಿ ಗಳ ಅವಶ್ಯಕತೆ ಇರುವುದಿಲ್ಲ.
There is no necessity of the things or the persons who are not useful for us.

ಬೊಳ್ಪಿಗೆ ಬಂದ ನೆಂಟನೂ,
ಬೊಳ್ಪಿಗೆ ಬಂದ ಮಳೆನೂ ನಿಲ್ಲಿಕಿಲೆಗಡ.
ಬೆಳಿಗ್ಗೆ ಬಂದ ಅತಿಥಿ ಆ ದಿನ ಉಳಿದು ಕೊಳ್ಳುವುದಿಲ್ಲ. ಅಂತೆಯೇ ಬೆಳಿಗ್ಗೆ ಬಂದ ಮಳೆ ಹಗಲಿಡೀ ಸುರಿಯುವುದಿಲ್ಲ.
The guest who comes to our house in the morning will not stay that night likewise the rain which comes in the morning will not stay till that night.

ಭಕ್ತಿ ಇಲ್ಲದೆ ಮುಕ್ತಿ ಇಲ್ಲೆ
ದೇವರ ಮೇಲೆ ಭಕ್ತಿ ಇಟ್ಟವರಿಗೆ ಮುಕ್ತಿ ದೊರೆಯುತ್ತದೆ.
Devotion to God leads to salvation

ಭಾವಂಗೆ ಭಾವ ಬಲ, ಹಕ್ಕಿಗೆ ರೆಕ್ಕೆ ಬಲ, ಗಂಡಿಗೆ ರಟ್ಟೆ ಬಲ.
ಭಾವನಿಗೆ ತನ್ನ ಭಾವನ ಬೆಂಬಲ, ಹಕ್ಕಿಗೆ ತನ್ನ ರೆಕ್ಕೆಯ ಬಲ ಹಾಗೂ ಗಂಡಿಗೆ ತನ್ನ ತೋಳುಗಳ ಬಲ ಈ ಜಗತ್ತಿನಲ್ಲಿ ಬದುಕಿ ಬಾಳಲು ಅಗತ್ಯ.
Brother in law for his brother in law, wings for the birds and strong arms for a man are considered as the strength for existence and survival.

ಮಂಜ ಸತ್ತರೂ ಸೊಸೆ ಮುಂಡೆ ಆಕು
ತನ್ನವರಿಗೆ ತೊಂದರೆಯಾದರೂ ಕೂಡ ಪರವಾಗಿಲ್ಲ ತನ್ನ ವೈರಿಗೆ ತೊಂದರೆ ಆಗಬೇಕು.
My enemy should be put into trouble even though it causes problems to my own people.

ಮಂತ್ರ ಹೇಳ್‌ರೆ ಮ್ಯಾನ ಕಾಯಿ ಬಿದ್ದೆದೆನಾ?
ಕೇವಲ ಪುಸ್ತಕದ ತಿಳುವಳಿಕೆಯಿಂದ ಏನನ್ನೂ ಸಾಧಿಸಲಾಗದು.
Nothing can be achieved through bookish knowledge.

ಮಂತ್ರಿನ ಮನೆ ಹಾಳ್, ತಂತ್ರಿನ ಕುಲ ಹಾಳ್
ಮಂತ್ರಿ ಸದಾ ಮನೆ ಬಿಟ್ಟಿರುವುದರಿಂದ, ಮನೆ ಕಡೆ ಗಮನ ಕೊಡದೆ ಆತನ ಮನೆ ಹಾಳು, ತಂತ್ರಿ ಕೆಲವೊಂದು ಬಾರಿ ಕುತಂತ್ರ ಮಾಡುವುದರಿಂದ ಅವನ ಕುಲವೂ ಹಾಳಾಗುತ್ತದೆ.

ಮಕ್ಕಳ ಕರ್ಕಂಡ್ ಸಂತೆಗೆ ಹೋಕಾಗದ್, ಹೆಣ್ಣ್‌ನ ಕರ್ಕಂಡ್ ಪೇಟೆಗೆ ಹೋಕಾಗದ್
ಮಕ್ಕಳನ್ನು ಕರೆದುಕೊಂಡು ಸಂತೆಗೆ ಹೋದರೆ ಅವರು ಕಂಡದ್ದನ್ನೆಲ್ಲಾ ಕೇಳುತ್ತಾರೆ, ಹೆಂಡತಿಯನ್ನು ಕರೆದುಕೊಂಡು ಪೇಟೆಗೆ ಹೋದರೆ ಆಕೆಯ ಬೇಡಿಕೆಗಳು ಹತ್ತಾರು.
It is difficult to meet the demands of the children if we take them to the fair, like wise it is also hard to meet the demands of the wife when we take her to the town.

ಮಕ್ಕಳೇ ಮನೆಗೆ ಆಭರಣ
ಹೆಣ್ಣಿಗೆ ಆಭರಣವಿದ್ದಂತೆ ಮಕ್ಕಳು ಮನೆಗೆ ಆಭರಣ.
Children are the ornaments to the house.

ಮಡ್ಕೆ ಒಡ್ದರೆ ಕಕ್ಕೆಗೆ ಲಾಭ
ಕೆಲವರು ಇತರರ ಸೋಲಿನಿಂದ ಲಾಭ ಮಾಡಿಕೊಳ್ಳುತ್ತಾರೆ.
There are some who find profit in the loss and defeat of others.

ಮಣ ಮಾತ್‌ಂದ ಕಣ ಕೃತಿ ಲೇಸ್
ತುಂಬಾ ಮಾತಾಡುವುದಕ್ಕಿಂತ, ಅನೇಕ ಭರವಸೆ ಆಶ್ವಾಸನೆಗಳಿಂದ ಕೆಲವೊಂದು ಕೆಲಸ ಕಾರ್ಯಗಳೇ ಲೇಸು.
Few deeds are better than loads of assurances.

ಮಣ್ಣಿಗಾಗಿ ಕೌರವ ಸತ್ತತ್, ಹೆಣ್ಣಿಗಾಗಿ ರಾವಣ ಸತ್ತತ್
ಹೆಣ್ಣು, ಹೊನ್ನು, ಮಣ್ಣು ಮನುಷ್ಯನ ದೌರ್ಬಲ್ಯಗಳು
Desire for woman, wealth, land or property are human weaknesses.

ಮದುವೆ ಖರ್ಚ್ ಚಪ್ಪರಕ್ಕೆ ಮುಗ್ತ್
ಯೋಜನಾ ರಹಿತ ವೆಚ್ಚ, ಕಡಿಮೆ ಆದಾಯದಲ್ಲಿ ದೊಡ್ಡ ಯೋಜನೆ.
Planless budget; with little money in hand and going for a big estimate.

ಮನುಷ್ಯನ ಮನ್ಸೆ ಅವನ ರೂಪ
ಮನುಷ್ಯನ ಮನಸ್ಸನ್ನು ಅವನ ರೂಪ ತೋರಿಸುತ್ತದೆ.
Face is the index of mind.

ಮನೆಗೆ ಹಿರಿಯಣ್ಣನಾಗಿ ಹುಟ್ಟಬಡ, ಭಾಷಣಕ್ಕೆ ಕಡೇಂವ ಆಗಿ ಬರ್ಬಡ.
ಮನೆಗೆ ಹಿರಿಯಣ್ಣನಾಗಿ ಹುಟ್ಟಿದರೆ ಮನೆಯ ಎಲ್ಲಾ ಜವಾಬ್ದಾರಿಯನ್ನು ನಿರ್ವಹಿಸಬೇಕು. ಭಾಷಣಕ್ಕೆ ಕೊನೆಯವನಾಗಿ ಬಂದರೆ ಆತನಿಗೆ ಮಾತನಾಡಲು ಏನೂ ಉಳಿದಿರುವುದಿಲ್ಲ.
The eldest brother in the house has to take all the responsibility of the house. There is nothing left to speak if one goes for a speech at the end.

ಮನೆಗೆ ಮಾರಿ, ಊರಿಗೆ ಉಪಕಾರಿ
ಕೆಲವರು ಊರಿನವರಿಗೆ ಉಪಕಾರಿಯಾಗಿದ್ದು ಮನೆಯವರಿಗೆ ಅಪ್ರಯೋಜಕರಾಗಿರುತ್ತಾರೆ.
There are people who are ready to serve the society but not to his house.

ಮನೆ ಸಣ್ಣದಿರೊಕು, ಮನ್ಸ್ ದೊಡ್ಡದಿರೊಕು
ಮನೆ ಚಿಕ್ಕದಿದ್ದರೂ ಪರವಾಗಿಲ್ಲ, ಮನಸ್ಸು ವಿಶಾಲವಾಗಿರಬೇಕು.
It is O.K. if the house is small but our mind should be broad.

ಮನೆ ಇಲ್ಲದಂವಂಗೆ ಮಾನ ಇಲ್ಲೆ, ಹಣ ಇಲ್ಲದಂವಂಗೆ ಬೆಲೆ ಇಲ್ಲೆ.
ಮನೆ ಇಲ್ಲದವರಿಗೆ ಗೌರವ ಘನತೆ ಇರುವುದಿಲ್ಲ, ಅಂತೆಯೇ ಹಣ ಇಲ್ಲದವರಿಗೆ ಸಮಾಜದಲ್ಲಿ ಬೆಲೆ ಇಲ್ಲ.
There is no dignity and decorum for a person who has no house likewise there is no value for a man who hasno money.

ಮನೆಗೆ ಮಕ್ಕ ಪೊರ್ಲು, ಕೆರೆಗೆ ತಾವರೆ ಪೊರ್ಲು
ಮಕ್ಕಳಿದ್ದರೆ ಮನೆ ಸುಂದರ, ತಾವರೆಯಿದ್ದರೆ ಕೆರೆ ಸುಂದರ.
Children add beauty to the house likewise lotus adds beauty to the lake.

ಮನೆ ಬುಟ್ಟ ಹೆಣ್ಣ್, ಮರ ಬಿಟ್ಟ ಕುರೆನಾಂಗೆ
ಮನೆ ಬಿಟ್ಟು ತೆರಳಿದ ಹೆಣ್ಣು ಮರ ಬಿಟ್ಟ ಮಂಗನಂತೆ. ತಮ್ಮ ಆಶ್ರಯದಾತರನ್ನು ನಾವು ಬಿಟ್ಟು ಹೊರಬಂದಾಗ ನಾವು ಅನಾಥ ರಾಗಿ ಚಡಪಡಿಸುತ್ತೇವೆ.
The woman who had left the house and the monkey which had left its home tree suffer from loneliness and orphanage feeling

ಮನೆಗೆ ಹುಲಿ, ಹೊರಗೆ ಎಲಿ
ಮನೆಯಲ್ಲಿ ಹುಲಿಯಂತೆ ಜೋರು, ಹೊರಗಡೆ ಇಲಿಯಂತೆ ಭಯಬೀತ.
Tiger in the house and a rat outside.

ಮರ ಫಲ ಕೊಡ್ದುಲೇಂತ ಕಡಿಯಕಾದುಲೆ, ಹೆಣ್ಣ್ ಬಂಜೆಂತ ಬುಡಿಕಾದುಲೆ.
ಮರ ಫಲ ಬಿಡುವುದಿಲ್ಲ ಎಂದು ಕಡಿಯಲಾಗುವುದಿಲ್ಲ. ಅಂತೆಯೆ ಬಂಜೆ ಹೆಂಡತಿಯನ್ನು ಬಿಡಲಾಗುವುದಿಲ್ಲ.
It is not fair to cut an unproductive tree likewise it is not fair to divorce a childless woman.

ಮಲ್ಗಿದಂವಂಗೆ ಮೊದುವೆ ಇಲ್ಲೆ
ನಿದ್ರೆ ಮಾಡಿದವ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸಲಾರ.
A sleepy person can't take part in any activities.

ಮಳೆಗೆ ಹೆದ್‌ರಿ ಹಳ್ಳಕ್ಕೆ ಹಾರ್ತ್
ಚಿಕ್ಕ ವಿಷಯಕ್ಕೆ ಹೆದರಿ ದೊಡ್ಡ ಆಪತ್ತಿಗೆ

ಸಿಲುಕಿಕೊಂಡಂತೆ.
Putting in to danger fearing for silly reasons

ಮಳೆ ಇಲ್ಲದ ಬೆಳೆ, ಅಪ್ಪ ಇಲ್ಲದ ಮಂಜ
ಮಳೆ ಇಲ್ಲದೆ ಬೆಳೆ ಸಾಧ್ಯವಿಲ್ಲ, ಅಪ್ಪ ಇಲ್ಲದೆ ಮಗನಾಗುವುದಿಲ್ಲ ಸೃಷ್ಟಿಗೆ ಮೂಲ ಬೇಕು.
There should be some source for birth and growth.

ಮಳೆ ಇಲ್ಲದೆ ಬೆಳೇ ಇಲ್ಲೆ,
ನೀರಿಲ್ಲದೆ ಹೊಳೆ ಇಲ್ಲೆ
ಮಳೆ ಇಲ್ಲದೆ ಬೆಳೆ ಬರಲಾರದು, ನೀರಿಲ್ಲದೆ ಹೊಳೆ ತುಂಬಲಾರದು.
Without rain there is no crop and without water there is no river.

ಮಾತ್‌ಲಿ ಹೆಡ್ಡಿ, ಕೆಲಸಲಿ ದಡ್ಡಿ
ಮಾತಿನಲ್ಲೂ, ಕೆಲಸದಲ್ಲೂ, ಎರಡರಲ್ಲೂ ಹಿಂದೆ.
Dull in both speaking and working.

ಮಾತ್ ಸಕ್ಕರೆನಾಂಗೆ, ಕೆಲ್ಸ ಕತ್ತೆನಾಂಗೆ
ಅತ್ಯಂತ ನಯುವಿನಯು ಸೌಜನ್ಯತೆಯು ಮಾತು, ನಿರಂತರ ದುಡಿಮೆ.
Polite words and hard work.

ಮಾತ್‌ನಾಂಗೆ ಇದ್ದರೆ ಮಂಜ,
ನೀತಿಲಿ ಇದ್ದರೆ ಸೊಸೆ
ಮಾತಿಗೆ ತಪ್ಪದಿದ್ದರೆ ಮಗನಂತೆ, ನಿಯತ್ತಿನಲ್ಲಿದ್ದರೆ ಸೊಸೆಯಂತೆ.
If he keeps up his words all the time, he is as good as son; if she is perfect and disciplined, she is as good as daughter in law.

ಮಾತ್ ಬಲ್ಲಂವಂಗೆ ಜಗಳ ಇಲ್ಲೆ
ಚೆನ್ನಾಗಿ ಮಾತಾಡಲು ಬರುವವ ಜಗಳಕ್ಕೆ ಆಸ್ಪದ ನೀಡುವುದಿಲ್ಲ.
Person who speaks well faces no quarrel.

ಮಾತ್ ಬೆಳ್ಳಿ, ಮೌನ ಬಂಗಾರ
ಮಾತು ಬೆಳ್ಳಿಯಂತಿದ್ದರೆ ಮೌನವನ್ನು ಬಂಗಾರಕ್ಕೆ ಹೋಲಿಸುತ್ತಾರೆ.
Speech is silver, silence is golden.

ಮಾತನಾಡದಂವ ಮನೆ ನುಂಗಿತ್‌ಗಡ
ಏನೊಂದೂ ಮಾತನಾಡದೆ, ಏನೊಂದೂ ಪ್ರತಿಭಟನೆ ಇಲ್ಲದೆ ಮೌನವಾಗಿದ್ದು ಸೋಲಿಗೆ ಕಾರಣವಾಗುವುದು.
Responsible for the loss silently and unknowingly.

ಮಾತಿಗೆ ತಕ್ಕ ನಡತೆ ಬೇಕು,
ನಡತೆಗೆ ತಕ್ಕ ಮಾತು ಬೇಕು.
ಮಾತು ಮತ್ತು ನಡತೆ ಎರಡೂ ಹೊಂದಿಕೊಂಡು ಹೋಗಬೇಕು, ಆಗಲೆ ವ್ಯಕ್ತಿತ್ವಕ್ಕೆ ಮೆರಗು.
Speech and behaviour should go hand in hand. They are complementary to each other.

ಮಾತಿಗೆ ತಪ್ಪಿದಂವ ಮಾರಿ ಹೊಲಿಯ
ಕೊಟ್ಟ ಮಾತಿಗೆ ತಪ್ಪಿದಂವ ಮಾರಿ ಹೊಲಿಯಂಗೆ ಸಮ.
One who fails to keep up his promise is as good as an uncivilized and uncultured person.

ಮಾನ ಹೋದ ಮೇಲೆ ಮರಣ ಬಂದ ಹಾಂಗೆ
ಮಾನ ಮರ್ಯಾದಿ, ಘನತೆ, ಗೌರವ ಹೋದಾಗ ಮಾನಸಿಕವಾಗಿ ಹಾಗೂ ಸಾಮಾಜಿಕವಾಗಿ ಆತ ಮರಣಿಸುತ್ತಾನೆ. ಆ ನಂತರ ಬರುವುದು ದೈಹಿಕ ಸಾವು ಮಾತ್ರ.
If a person loses his respect, dignity and decorum, it is as good as mental death, then comes the actual physical death.

ಮಾಡಿ ತಿಳಿಯೊಕು, ನೋಡಿ ಕಲಿಯೊಕು
ಅನುಭವದಿಂದ ಕಲಿ, ಸರಿಯಾಗಿ ನೋಡಿ ಕಲಿ
Learn by doing it or by experience and learn by observing or looking properly at it.

ಮಾಡಿಕೆ ಕೆಲ್ಸ ಇಲ್ಲೆ, ಕುದ್ರಿಕೆ ಪುರುಸೊತ್ತು ಇಲ್ಲೆ.
ನಿರ್ದಿಷ್ಟವಾದ ಕೆಲಸ ಇರುವುದಿಲ್ಲ, ಆದರೆ ಏನಾದರೊಂದು ಸಣ್ಣ ಪುಟ್ಟ ಕೆಲಸದಲ್ಲಿ ತೊಡಗಿಸಿಕೊಂಡಾಗ ಕುಳಿತುಕೊಳ್ಳಲೂ ಸಮಯ ಸಿಗುದಿಲ್ಲ.
No specific work to do but no time to take rest.

ಮಾಳಪ್ಪ ಮೀನ್ ತಿಂದ್ ಸತ್ತಾಂಗೆ
ಕಾರಣವಿಲ್ಲದೆ ಅಥವಾ ಕ್ಷುಲ್ಲಕ ಕಾರಣಕ್ಕಾಗಿ ಸಾವನ್ನಪ್ಪುವುದು.
Death for silly reason or for no reason.

ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲ ಇಲ್ಲೆ
ಕಳೆದುಹೋದ ಕಾರ್ಯಗಳಿಗೆ ಚಿಂತಿಸಿ ಸುಖವಿಲ್ಲ.
It is better not to worry for lost things, past happenings and failures.

ಮಿಡಿಗೆ ಹಣ್ಣ್‌ನ ರುಚಿಬಾಕಿಲೆ
ಹಿರಿಯ ವ್ಯಕ್ತಿಗಳಿಗೆ ಇರುವ ಜೀವನದ ಪರಿಪಕ್ವತೆ, ಜೀವನಾನುಭವ, ಸೌಜನ್ಯತೆ, ಮಾತುಗಾರಿಕೆ, ಜೀವನದ ಸಿಹಿಮೌಲ್ಯಗಳು ಯುವಕರಿಗೆ ಬರಲಾರದು.
The sweet value of elderly people can't be seen in the young.

ಮೀಸೆ ಇದ್ದರೆ ಸಾಲದ್, ಭಾಷೆನೂ ಬೇಕು
ದೈಹಿಕವಾಗಿ ಬೆಳೆದರೆ ಸಾಲದು, ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕು.
Only physical growth is not enough one should grow culturally.

ಮೀಸೆ ಇದ್ದಂವಂಗೆ ಭಾಷೆ ಭಾರನಾ?
ದೈಹಿಕವಾಗಿ ಬೆಳೆದವನಿಗೆ ಸಂಸ್ಕೃತಿ ಭಾರವಾಗಲಾರದು. ಅದು ಅವನ ವ್ಯಕ್ತಿತ್ವಕ್ಕೆ ಮೆರುಗು ನೀಡಬಲ್ಲುದು.
Culture adds beauty to physical growth.

ಮೀಸೆ ಇರ್‌ಕನ ಮೀಸಿಕಣಕು
ದೇಹ ಆರೋಗ್ಯದಲ್ಲಿರುವಾಗ ಸಾಧನೆ ಮಾಡಿಕೊಳ್ಳಬೇಕು.
All achievement should be made when our physical health is good.

ಮೀಸೆ ಬಾಕನ ದೇಶ ಕಾಂಬಕಿಲೆ
ಗಂಡಿಗೆ ಮೀಸೆ ಬರುವ ಯೌವನದ ದಿನಗಳಲ್ಲಿ ತಾನು ಏನು ಮಾಡಿದರೂ ನಡೆಯುತ್ತದೆ ಎಂಬ ಜಂಭ ಅವನ ಬುದ್ಧಿಯನ್ನು ಕುಂಠಿತಗೊಳಿಸುತ್ತದೆ.
The days of youth makes the young boys to develop a sense of pride, arrogance and egoism.

ಮೀಸೆ ಬಿಳಿ ಆದರೂ ಆಸೆ ಬುಟ್ಟತ್ಲೆ
ಇಳಿವಯಸ್ಸಾದರೂ ಸ್ವಾರ್ಥ, ಆಶೆ, ಜಿಪುಣತನ ಕಾಮಲಾಲಸೆ ಮನುಷ್ಯರನ್ನು ಬಿಟ್ಟು ಹೋಗಲಾರದು.
Even in the old age also the selfishness greediness and craze for sex will not leave away the people.

ಮುಂಡಾಸ್‌ನಂವ ಬಾದುಲೆ ಮಡ್ವಳೆಯವಂಗೆ ಕೊಡ್ದುಲೆ
ಮಗಳಿಗೆ ಮದುವೆ ಮಾಡಬೇಕೆಂದಾಗ ಶ್ರೀಮಂತ ವರ ಸಿಗುವುದಿಲ್ಲ, ಬಡವನಿಗೆ ಕೊಡುವುದಿಲ್ಲ.

When the daughter is ready for marriage, rich suitor never comes and the poor is not entertained.

ಮುತ್ತ್ ಕೊಟ್ಟ್ ಕುತ್ತಿಗೆ ಕೊಯ್ತ್
ತುಂಬಾ ಪ್ರೀತಿ ತೋರಿಸಿ ಮೋಸ ಮಾಡಿದಂತೆ.
Deceiving a person showing all love.

ಮುದ್ದಾಟಕ್ಕೆ ಹೋಗಿ ಗುದ್ದಾಟ ಆತ್
ಪ್ರೀತಿಸಲು ಹೋಗಿ ಜಗಳ ಕಾಯಬೇಕಾಯಿತು.
Love leads to quarrel.

ಮುಳ್ಗಂವಂಗೆ ಹುಲ್ಲು ಕಡ್ಡಿ ಸಿಕ್ಕಿದಾಂಗೆ
ಸೋತವನಿಗೆ ಅಲ್ಪ ಸಹಾಯ ದೊರೆತಂತೆ ಹಸಿದು ಹೈರಾಣವಾದವನಿಗೆ ಒಂದು ತುತ್ತು ಅನ್ನ ಸಿಕ್ಕಿದಂತೆ.
A drowning man catches even a reed while drowning.

ಮುಳ್ಳನ ಮುಳ್ಳುಂದಲೇ ತೆಗೆಯೊಕು
ಹಿಂಸೆಯನ್ನು ಹಿಂಸೆಯಿಂದಲೇ ತೊಲಗಿಸ ಬೇಕು.
Violence should be faced through violence.

ಮೂಕ್‌ಲಿ ತಿಂದರೆ ಹೊಟ್ಟೆ ತುಂಬಿಕಿಲೆ
ಸ್ವಲ್ಪ ಸ್ವಲ್ಪವೇ ತಿಂದರೆ ಹೊಟ್ಟೆ ತುಂಬಲಾರದು ವಾಮ ಮಾರ್ಗದಲ್ಲಿ ಗಳಿಸಿದ ಆಹಾರವನ್ನು ತೆಗೆದುಕೊಳ್ಳುವುದರಿಂದ ನೆಮ್ಮದಿ ದೊರೆಯ ಲಾರದು.

ಮೂಕು ಇಲ್ಲದ ಹೆಣ್ಣಿಗೆ ಮೂಕುತಿ ಯಾಕೆ?
ಮಾನ, ಮರ್ಯಾದಿ ಇಲ್ಲದ ಹೆಣ್ಣಿಗೆ ಆಭರಣಗಳು ಯಾಕೆ
What is the necessity of ornaments for a woman of lose character.

ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದ್
ಗಾತ್ರ ಚಿಕ್ಕದಾದರೂ ಪ್ರಸಿದ್ಧಿ ದೊಡ್ಡದು
Small in size but great in fame.

ಮೆಚ್ಚಿದಂವಂಗೆ ಮಸಣ ಸುಖ
ಇಷ್ಟವಾದರೆ ಯಾವುದೇ ಕೆಟ್ಟ ವಾತಾವರಣ ದಲ್ಲು ಮನುಷ್ಯ ಬದುಕಬಲ್ಲ.
People can live anywhere in a very poor environment if he likes it.

ಮೆದ್ದ್ ನೋಡ್ ಮದ್ದ್‌ನ ಗುಣ
ತಿಂದು ನೋಡದೆ ಮದ್ದಿನ ಪರಿಣಾಮವನ್ನು ತಿಳಿಯುವುದು ಸಾಧ್ಯವಿಲ್ಲ. ಅಂತೆಯೇ ಪ್ರಯೋಗ ಮಾಡಿ ನೋಡದೆ ಪರಿಣಾಮ ತಿಳಿಯಲು ಸಾಧ್ಯವಿಲ್ಲ
Result can not be found with out experimenting it or without putting it into practice.

ಮೇಲೆ ಉಗ್ದ್ ನಮ್ಮ ಮೋರೆಗೆ ಬೀಳ್ಸಿಕಂಡ ಹಾಂಗೆ.
ನಮ್ಮ ದೌರ್ಬಲ್ಯಗಳನ್ನು ನಾವೇ ಪ್ರದರ್ಶಿಸಿ ಕೊಂಡಂತೆ
Exposing our own weaknesses

ಮೇಲೆ ಏರ್ದಂವ ಕೆಳಗೆ ಇಳಿಯೊಕೆ
ಮೇಲೆ ಏರಿದವ ಕೆಳಗೆ ಇಳಿಯಲೇ ಬೇಕು. ಜೀವನದಲ್ಲಿ ಏಳುಬೀಳುಗಳನ್ನು ಎದುರಿಸಲೇ ಬೇಕು
One has to face the ups and downs of life.

ಮೊದುಮಂಜನ ಬುಟ್ಟು ದಿಬ್ಬಣ ಹೋದಾಂಗೆ
ಅತ್ಯಂತ ಪ್ರಮುಖ ಹಾಗೂ ಅವಶ್ಯಕ ವ್ಯಕ್ತಿಗಳ ಉಪಸ್ಥಿತಿಯಿಲ್ಲದೆ ಕಾರ್ಯಕ್ರಮ ನಡೆಸಿದಂತೆ.
Executing the programme without the presence of important and the people who are necessary.

ಮೊದುವೆ ಆಗದೆ ಮೊರ್ಲುರ್ಜ ಬುಡಿಕಿಲೆ, ಮೊರ್ಲುರ್ಜಬುಡದೆ ಮೊದುವೆ ಆಕಿಲೆ.
ಬದುಕು ಇಲ್ಲದೆ ಅನುಭವವಿಲ್ಲ, ಅನುಭವ ಇಲ್ಲದೆ ಬದುಕು ಇಲ್ಲ
No experience without life like wise no life without experience.

ಮೋರೆ ನೋಡಿ ಎಲೆ ಹಾಕುದು
ಮುಖ ನೋಡಿ ಆತನ ವ್ಯಕ್ತಿತ್ವಕ್ಕನುಗುಣವಾಗಿ ಆತಿಥ್ಯ ನೀಡುವುದು.
Hospitality in accordance with the status and weight of the people

ಮೋರೆ ತುಂಬಾ ಗಡ್ಡ ಬೆಳ್ಸುದಕ್ಕಿಂತ ತಲೆ ತುಂಬಾ ಬುದ್ಧಿ ಬೆಳ್ಸೊಕು.
ದಿನೇ ದಿನೇ ಹುಲುಸಾಗಿ ಬರುವ ಗಡ್ಡದಂತೆ ನಮ್ಮ ಬುದ್ಧಿಯನ್ನೂ ದಿನೇ ದಿನೇ ಬೆಳೆಸಿಕೊಳ್ಳ ಬೇಕು.
Every day we should enrich our knowledge and wisdom just like the beard that grows on our face.

ಮೋರೆ ಹೋದ ಮೇಲೆ ಮೂಕುನ ಆಸೆ ಏಕೆ?
ಮಾನ, ಮರ್ಯಾದಿ, ಗೌರವ, ಘನತೆ ಕಳೆದು ಕೊಂಡ ಮೇಲೆ ವೈಭವ ಪೂರ್ಣ ಜೀವನದ ಆಸೆ ಏಕೆ ಬೇಕು?
What is the necessity of luxury after losing our image, respect, and dignity.

ಯಾರ್‍ಯಾರ ಚಿನ್ನ ನನ್ನ ಮಗಳು ಚಿನ್ನ
ಯಾರದೋ ಚಿನ್ನ, ನನ್ನ ಮಗಳು ಧರಿಸಿ ಮೆರೆಯುತ್ತಿದ್ದಾಳೆ. (ಯಾರದೋ ಹಣ ಎಲ್ಲಮ್ಮನ ಜಾತ್ರೆ) ದುಡಿಮೆ, ಸಂಪತ್ತು ಯಾರದೊ, ಮೆರೆಯುವುದು ಯಾರೊ?
Enjoying luxury in others earnings.

ಯೋಗ ಇಲ್ಲದಂವಂಗೆ ಭೋಗ ಇಲ್ಲೆ
ಅದೃಷ್ಟ ಇಲ್ಲದವರಿಗೆ ಸಂಪತ್ತು ದೊರೆಯಲಾರದು.
A person never becomes wealthy without fortune.

ಯೋಗ್ಯತೆ ಹಾಳಾದ ಮೇಲೆ ಮನುಷ್ಯಂಗೆ ಹಾಳಾಕೆ ಬೇರೇನೂ ಇಲ್ಲೆ.
ಒಬ್ಬ ವ್ಯಕ್ತಿಯ ಯೋಗ್ಯತೆ ಹಾಳಾದ ಮೇಲೆ ಸಮಾಜದಲ್ಲಿ ಆತನ ಘನತೆ, ಗೌರವ ಏನೂ ಉಳಿಯುವುದಿಲ್ಲ.
ರಟ್ಟೆ ಗಟ್ಟಿ ಇದ್ದರೆ ಹೊಟ್ಟೆಗೆ ತೊಂದರೆ ಇಲ್ಲೆ
ದೈಹಿಕವಾಗಿ ಬಲಿಷ್ಠನಾಗಿದ್ದರೆ ದುಡಿದು ಬದುಕಲು ಏನೂ ಭಯ ಇಲ್ಲ.
If one is physically strong, no fear for earnings.

ರಸಿಕತೆ ಇಲ್ಲದ ಬಾಳ್ ಒರ್ತೆ ಇಲ್ಲದ ಬಾಮಿ
ಪ್ರೀತಿ, ನೆಮ್ಮದಿ, ಸಂತೋಷ, ತಮಾಷೆ, ನಗು ಇಲ್ಲದ ಜೀವನ ಒಸರು ಇಲ್ಲದ ಬಾವಿಯಂತೆ
Life without love, contentment, happiness, jokes and laugh is as good as a well without spring.

ರಾಗಿ ತಿಂದ ಮನೆಗೆ ರೋಗ ಇಲ್ಲೆ
ರಾಗಿ ಅತ್ಯುತ್ತಮ ಆಹಾರ, ಅದನ್ನು ತಿನ್ನುವವರಿಗೆ ರೋಗ ಬರಲಾರದು.
A person who eats ragi will not face any illness.

ರಾತ್ರೆ ಉಣದಂವನೊಟ್ಟಿಗೆ ಮಾರನೇ ದಿನ ತಣ್ಣಿಣ ಕೇಳ್ದಾಂಗೆ
ಆರ್ಥಿಕವಾಗಿ ಪರಿಸ್ಥಿತಿ ಚೆನ್ನಾಗಿ ಇಲ್ಲದವನ ಜೊತೆ ಸಾಲ, ಸಹಾಯ ಕೇಳಿದಂತೆ.
Asking for help and loan with a person who is facing acute financial problems.

ರೊಕ್ಕ ಇಲ್ಲದ ಮನುಷ್ಯ ರೆಕ್ಕೆ ಇಲ್ಲದ ಹಕ್ಕಿ
ಹಣಕಾಸು ಇಲ್ಲದ ವ್ಯಕ್ತಿ ರೆಕ್ಕೆಯನ್ನು ಕಳಕೊಂಡ ಹಕ್ಕಿಯಂತೆ.

A person without money is like a bird without wings.

ಲತ್ತೆ ಕೊಡುವ ಕತ್ತೆ ಮುತ್ತು ಕೊಡುದಾ?
ನಮ್ಮನ್ನು ದ್ವೇಷಿಸುವಂತಹ ಹಾಗೂ ತೊಂದರೆ ನೀಡುವ ವ್ಯಕ್ತಿಗಳು ನಮ್ಮನ್ನು ಪ್ರೀತಿಸಲು ಎಂದಿಗೂ ಸಾಧ್ಯವಿಲ್ಲ.
The people who hate us will never love us.

ಲಾಭ ಇಲ್ಲದೆ ಶೆಟ್ಟಿ ಬೊಳ್ಳಲಿ ಹೋಕಿಲೆ
ವ್ಯಾಪಾರಿ ಲಾಭ ಸಿಗುವುದಾದರೆ ಯಾವುದೇ ಅಪಾಯ ಎದುರಿಸಲು ಸಿದ್ಧ.
A businessman is ready to face any amount of risk to make profit.

ವಿದ್ಯೆ ಇದ್ದರೆ ಸಾಲದ್ ಭಾಷೆನೂ ಬೇಕು.
ವಿದ್ಯೆ ಇದ್ದರೆ ಸಾಲದು ಸಂಸ್ಕೃತಿಯೂ ಇರಬೇಕು.
Education and culture should go hand in hand.

ವಿದ್ಯೆ ಇದ್ದರೆ ಸಾಲದ್ ವಿನಯನೂ ಬೇಕು.
ವಿದ್ಯೆಯೊಟ್ಟಿಗೆ ವಿನಯ ಸೌಜನ್ಯತೆ ಎಲ್ಲವನ್ನು ಕಲಿತುಕೊಳ್ಳಬೇಕು.
Politeness adds beauty to one's education.

ವೇದ ಸುಳ್ಳಾದರೂ ಗಾದೆ ಸುಳ್ಳಾಕಿಲೆ
ವೇದಗಳಲ್ಲಿ ಬರುವ ಮಾತುಗಳು, ಪುಸ್ತಕದ ಆದರ್ಶಗಳು. ಗಾದೆಯು ಮಾತುಗಳು. ಅನುಭವದಿಂದ ಪರಿಪಕ್ವವಾಗಿ ಬಂದ ಮಾತುಗಳು. ಆದುದರಿಂದ ಗಾದೆಯ ಮಾತುಗಳು ಎಂದೂ ಸುಳ್ಳಾಗಲಾರವು.
The ideals of Veda is merely theoretical but the ideals depicted by proverbs' are more practicable.

ಶತ್ರುನ ಶತ್ರು ನಮ್ಮ ದೊಸ್ತಿ;
ಶತ್ರುನ ಮಿತ್ರ ನಮ್ಮ ಶತ್ರು
ನಮ್ಮ ಶತ್ರುವಿನ ಶತ್ರು ನಮಗೆ ಗೆಳೆಯನಾಗಬಹುದು ಆದರೆ ಶತ್ರುವಿನ ಮಿತ್ರ ನಮಗೆ ಶತ್ರುವಾಗಬಲ್ಲನು.
Our enemy's enemy may become our friend, but our enemy's friend will also be our enemy.

ಶನಿ ಹಿಡಿಯಕನ ಬಳ್ಳಿನೇ ಹಾವಾಗಿ ಕಚ್ಚುದು
ಶನಿ ಹಿಡಿದಾಗ, ಸಂಕಷ್ಟದ ದಿನಗಳ್ಲಿ ಬಳ್ಳಿಯೇ ನಮಗೆ ಹಾವಾಗಬಹುದು
(ಉರುಳಾಗಬಹುದು)
At the time of distress even the rope also may become a snake.

ಶ್ರೀಮಂತನ ಸಾಲ ಸತ್ತಮೇಲೆ
ಶ್ರೀಮಂತ ಭಾರಿ ವ್ಯವಹಾರ ನಡೆಸುತ್ತಿರುವುದರಿಂದ ಆತನ ಸಾಲದ ಗಾತ್ರ ಅರಿವಾಗುವುದು ಆತನ ಸಾವಿನ ನಂತರ;
People come to know the amount of loan of a rich man only after his death.

ಶುದ್ಧಾಚಾರದವನ ಮಗಳ್ ಕದ್ದ್ ಬಸುರಾತ್‌ಗಡ
ಶುದ್ಧಾಚಾರ, ಮಡಿವಂತಿಗೆ ಎಂದು ಆಚರಿಸಿಕೊಳ್ಳುವವರಲೂ ಮಾನವೀಯ ದೌರ್ಬಲ್ಯಗಳಿರುತ್ತವೆ.
Human failure and weaknesses are common to all men.

ಸಂಕೋಚ ಮಾಡ್‌ರೆ ಸಂಕಪಾಷಾಣನೂ ಸಿಕ್ಕಿಕಿಲೆ.
ಊಟ ಮಾಡುವುದರಲ್ಲಿ ಯಾವ ಸಂಕೋಚವೂ ಮಾಡಬಾರದು
Don't hesitate while eating.

ಸಂತೋಷನೇ ಯೌವನ, ಚಿಂತೆನೇ ಮುಪ್ಪು
ಸಂತೋಷ ಇದ್ದರೆ ಯಾವಾಗಲೂ ಆರೋಗ್ಯ ಮತ್ತು ಯೌವನವಿರುತ್ತದೆ. ಚಿಂತೆ, ದು:ಖ ಮುಪ್ಪನ್ನು ತರುತ್ತದೆ.

Happiness brings health and youth; worry and grief makes man old.

ಸಂಪತ್ತ್ ಹೆಚ್ಚಿದಾಂಗೆ ಕೆಸರೂ ಅಂಟಿಕಂಡದೆ.
ಸಂಪತ್ತು ಹೆಚ್ಚಿದಂತೆ, ಶ್ರೀಮಂತನಾದಂತೆ ಕೆಟ್ಟ ಚಟಗಳು, ಕೆಟ್ಟ ಗುಣಗಳು ನಮ್ಮಲ್ಲಿ ಹೆಚ್ಚುತ್ತದೆ.
Our habit and behaviour worsens when we become richer and richer.

ಸಣ್ಣ ಮೀನ್‌ನ ತಿಂದೇ ದೊಡ್ಡಮೀನ್ ಬದ್ಕುದು
ಬಡವರನ್ನು ಶೋಷಣೆ ಮಾಡಿಯೇ ಶ್ರೀಮಂತರು ಉದ್ಧಾರವಾಗುವುದು.
The rich exist only by exploiting the poor.

ಸತ್ತ ಎಮ್ಮೆಗೆ ಹತ್ತು ಕುತ್ತಿ ಹಾಲು
ಜೀವಂತವಿರುವಾಗ ಯಾರು ಯಾರನ್ನೂ ಹೊಗಳುವುದಿಲ್ಲ. ಮರಣಿಸಿದಾಗ ನಾವು ನಮ್ಮ ವೈರಿಗಳನ್ನೂ ಹೊಗಳುತ್ತೇವೆ.
We praise even our enemy after his death.

ಸತ್ಯ ಇದ್ದಲ್ಲಿ ಧರ್ಮ ಇದ್ದದೆ
ಸತ್ಯ ಇದ್ದಲ್ಲಿ ಜೀವನ ಧರ್ಮವು ಚೆನ್ನಾಗಿರುತ್ತದೆ.
Truth leads to fruitful life.

ಸತ್ಯ ಇಲ್ಲದ ಧರ್ಮ, ಧರ್ಮನೇ ಅಲ್ಲ
ಒಂದು ಧರ್ಮ ಸತ್ಯವನ್ನು ಪ್ರತಿಪಾದಿಸದಿದ್ದರೆ ಅದು ಧರ್ಮವೇ ಅಲ್ಲ.
A religion which does not advocate truth is not a relgion at all.

ಸತ್ಯಕ್ಕೆ ಸಾವಿಲ್ಲೆ, ಸುಳ್ಳಿಗೆ ಸುಖ ಇಲ್ಲೆ
ಸತ್ಯ ಅಮರ, ಸುಳ್ಳು ಚಿಂತೆ ಮತ್ತು ದುಃಖಕ್ಕೆ ಮೂಲ.
Truth is immortal; lie leads to worry and grief.

ಸದಾಭೋಗಿ, ಸದಾ ರೋಗಿ
ಸದಾ ಊಟ, ತಿಂಡಿ, ನಿದ್ರೆ, ಕಾಮದಲ್ಲಿ ತೊಡಗಿಸಿಕೊಂಡವ ಬೇಗನೆ ಕಾಯಿಲೆಯನ್ನು ಹಿಡಿಸಿಕೊಳ್ಳುತ್ತಾನೆ.
Too much sleep, food and sex leads to physical hindrance.

ಸಮಯಕ್ಕೆ ಬಾರದ ಗಾದೆ,
ಊಟಕ್ಕಿಲ್ಲದ ಉಪ್ಪಿನಕಾಯಿ
ಗಾದೆಗಳು ಮಾತಿನ ಸೌಂದರ್ಯವನ್ನು ಹೆಚ್ಚಿಸುತ್ತದೆ. ಆದರೆ ಸಮಯ ಸಂದರ್ಭಕ್ಕನು ಗುಣವಾಗಿ ಗಾದೆಗಳು ನೆನಪಾಗದಿದ್ದರೆ ಅದು ಊಟಕ್ಕಿಲ್ಲದ ಉಪ್ಪಿನಕಾಯಿಯಂತಾಗುತ್ತದೆ.
If we do not remember the proverbs when needed during our speech, our speech becomes less attractive and pale.

ಸರಕಾರಕ್ಕೆ ಕಟ್ಟಿದ ಹಣವೂ,
ಸ್ಮಶಾನಕ್ಕೆ ಹೋದ ಹೆಣವು ಪುಃನ ಬಾಕಿಲೆ
ಸ್ಮಶಾನಕ್ಕೆ ಕೊಂಡೊಯ್ದ ಹೆಣವು ಹೇಗೆ ಪುನಃ ಬರುವುದಿಲ್ಲವೋ ಅಂತೆಯೇ ಸರಕಾರಕ್ಕೆ ಕಟ್ಟಿದ ಹಣವನ್ನು ಪುನಃ ಪಡೆಯುವುದು ಸಾಧ್ಯವಾಗಲಾರದು.
Amount once remitted to the government will not be taken back like the dead body taken to the cemetry.

ಸಸಾರ ಕೊಟ್ಟ ನಾಯಿ ಆಳೆಗೆ ನೆಕ್ಕಿತ್
ಸಲುಗೆ ಕೊಟ್ಟ ವ್ಯಕ್ತಿ ಅದನ್ನು ದುರುಪಯೋಗ ಪಡಿಸಿಕೊಂಡ. Misusing the lenience.

ಸ್ವರ್ಗಲಿ ಗುಲಾಮ ಆಗಿ ಇರುದಕ್ಕಿಂತ ನರಕಲಿ ರಾಜ ಆಗಿ ಮೆರಿದು ಒಳ್ಳೆದ್.
ಎಲ್ಲಾ ಸೌಲಭ್ಯಗಳನ್ನು ಅನುಭವಿಸಿಕೊಂಡು ಗುಲಾಮನಾಗಿ ಸ್ವಾತಂತ್ರ್ಯವಿಲ್ಲದೆ ಬಾಳುವುದಕ್ಕಿಂತ ಬಡತನದಲ್ಲಿದ್ದು ಸ್ವತಂತ್ರನಾಗಿ, ನಾಯಕನಾಗಿ ಮೆರೆಯುವುದು ಲೇಸು.

It is better to rule in the hell rather than a slave in the heaven.

ಸಾಲ ಮಾಡ್ದಂವ ಸ್ವಾತಂತ್ರ್ಯ ಕಳ್ಕಂಡದೆ
ಸಾಲ ಮಾಡಿದವ ಹಂಗಿಗೆ ಒಳಗಾಗುವುದರಿಂದ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾನೆ.
A borrower loses his freedom and dignity.

ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡ್
ಸಾವಿರಾರು ಸುಳ್ಳು ಹೇಳಿ ಒಂದು ಉತ್ತಮ ಕಾರ್ಯ ಮಾಡುವುದು ಶ್ರೇಯಸ್ಕರ ಎನ್ನುತ್ತಾರೆ.
While doing a constructive work, telling lies has no harm.

ಸಾವಿಲ್ಲದ ಮನೆ ಇಲ್ಲೆ,
ಸೋಲಿಲ್ಲದ ಮನುಷ್ಯ ಇಲ್ಲೆ
ಸಾವು ಕಾಣದ ಮನೆಯಿರಲಾರದು, ಸೋಲನುಭವಿಸದ ವ್ಯಕ್ತಿ ಇರಲಾರ.
We can't see a house without death and likewise we can't find a man without defeat or failure.

ಸಾಹುಕಾರನ ಊಟ ಕಾಯಿಲೆಗೆ,
ಬಡವನ ಊಟ ಹೊಟ್ಟೆಗೆ
ಸಾಹುಕಾರ ದೇಹವನ್ನು ದುಡಿಮೆಗೆ ಒಳಪಡಿಸದೆ ಇರುವುದರಿಂದ ಆತ ತಿಂದ ಉತ್ತಮ ಆಹಾರ ಆತನ ದೇಹಕ್ಕೆ ಅಧಿಕವಾಗಿ ಖಾಯಿಲೆಗಳಿಗೆ ಪೂರಕವಾಗುತ್ತದೆ. ಬಡವ ಶ್ರಮಪಟ್ಟು ದುಡಿಯುವುದರಿಂದ ಆತ ಸೇವಿಸುವ ಸಾಧಾರಣ ಆಹಾರ ಚೆನ್ನಾಗಿ ಜೀರ್ಣವಾಗಿ ದೇಹಕ್ಕೆ ಪೂರಕವಾಗುತ್ತದೆ.
The food that the rich consumes leads to desease where as the poor consumes supports his body.

ಸುಳ್ಳ್‌ನ ಮಾತ್ ಮುಳ್ಳು ಮೆಟ್ಟಿದಾಂಗೆ
ಸುಳ್ಳಾಡುವುದು ಮುಳ್ಳನ್ನು ಮೆಟ್ಟಿದಂತೆ, ಸದಾ ಚುಚ್ಚುತ್ತಾ ಇರುತ್ತದೆ.
Telling a lie is just like stepping on to the thorn.

ಸೆಗಣಿನೊಟ್ಟಿಗೆ ಸರಸಕ್ಕಿಂತ ಗಂಧದೊಡನೆ ಗುದ್ದಾಟ ಒಳ್ಳದ್
ಕೆಟ್ಟವರ ಜೊತೆ ಬೆರೆತಾಗ ಅವರ ಕೆಟ್ಟತನ ನಮಗೆ ಅಂಟಿಕೊಳ್ಳುತ್ತದೆ. ಸಜ್ಜನರ ಜೊತೆ ಜಗಳ ಮಾಡಿದರೂ ಅವರ ಒಳ್ಳೆಯತನ ನಮಗಂಟಿಕೊಳ್ಳುತ್ತದೆ.
It is better to quarrel with sandal wood rather than to make love with cowdung.

ಸೋಪಂದ ಹಾಸಿಗೆಗೆ ದೂಡಿ ಹಾಕಿದಾಂಗೆ
ಆರಾಮವಾಗಿದ್ದವನಿಗೆ ಇನ್ನಷ್ಟು ಆರಾಮಕ್ಕೆ ಅವಕಾಶ ಮಾಡಿಕೊಡುವುದು.
Giving more leisure to a person who is already free by allotting a work of ease.

ಹಂದಿ ಹೊಲ್ಸು ತಿಂದ್ ಎಮ್ಮೆ ಕರ್ ಮೇಲೆ ಉಜ್ಜಿದಾಂಗೆ
ದುರ್ಜನರು ಕೆಟ್ಟ ಕೆಲಸ ಮಾಡಿ ಮುಗ್ಧರ ಮೇಲೆ ಆರೋಪ ಹೊರಿಸಿದಂತೆ.
Wicked people do wicked things and pose the blame on innocents.

ಹಕ್ಕಲೆಂದ ಹೆಣ್ಣ್ ತಾಕೆ ಬೊತ್ತ್ ದೂರಂದ ದನ ತಾಕೆ ಆಗದ್.
ಹತ್ತಿರದಿಂದ ಹೆಣ್ಣು ತರಬಾರದು– ಆಕೆ ಆಗಾಗ ತವರು ಮನೆಗೆ ಹೋಗುತ್ತಿರುತ್ತಾಳೆ, ತವರು ಮನೆಯವರು ಬರುತ್ತಿರುತ್ತಾರೆ. ದೂರದಿಂದ ದನ ತಂದರೆ ಅದರ ಲೋಪದೋಷಗಳ ಅರಿವು ನಮಗಿರುವುದಿಲ್ಲ.

ಹಗ್‌ಲ್ ಮಲ್ಗಿದವಂಗೆ ಬುದ್ಧಿ ಮಂದ
ಹಗಲು ಮಲಗಿದರೆ ನಿರಾಸಕ್ತಿ, ಮಂಕು ಬುದ್ಧಿ,

ನಿಶ್ಶಕ್ತಿ ಉಂಟಾಗುತ್ತದೆಂದು ಹಿರಿಯರು ಹೇಳುತ್ತಾರೆ.
Sleeping in the day leads to inactiveness, weakness and mental sluggishness.

ಹಟ್ಟಿಲಿ ಹತ್ತೆಮ್ಮೆ ಕರಿಯಕೆ ಒಂದೆಮ್ಮೆ
ಒಂದು ಮನೆಯಲ್ಲಿ ದುಡಿಯುಲು ಮತ್ತು ಗಳಿಸಲು ಒಂದೇ ವ್ಯಕ್ತಿ. ಕೂತು ತಿನ್ನುವವರು ಹತ್ತಾರು ಮಂದಿ.
In a family there is only one person to earn and ten to eat without earning.

ಹಟ್ಟಿಗೆ ಹುಕ್ಕ ಮೇಲೆ ಕಾಲಿಗೆ ಸೆಗ್‌ಣೆ ಆದೇಂತಾ ನೋಡಿಕಾದೆನಾ
ಒಂದು ಕೆಲಸ ಕಾರ್ಯ ಆರಂಭಿಸಿದ ಮೇಲೆ ಆ ಕೆಲಸದಲ್ಲಿನ ಲೋಪ, ನ್ಯೂನತೆ, ಹೇಸಿಕೆ ಗಳನ್ನು ಅನುಭವಿಸಲೇಬೇಕು.
We should bear the loopholes and problems that we face in our project.

ಹಟ್ಟಿ ತುಂಬಾ ಎಮ್ಮೆಗ ಇದ್ದರೂ ಕೂಸಿಗೆ ಹಾಲಿಲ್ಲೆ
ಒಂದು ಕುಟುಂಬದಲ್ಲಿ ಹತ್ತಾರು ಜನರಿದ್ದರೂ ಮಗುವನ್ನು ನೋಡಿಕೊಳ್ಳಲು ಯಾರು ಇಲ್ಲ.
Even though there are so many members in a family, there is no one to look after the child.

ಹಣ ಇಲ್ಲದಂವ ಹೆಣಕ್ಕಿಂತಲೂ ಕಡೆ
ಕೈಯಲ್ಲಿ ಹಣ ಇಲ್ಲದಿದ್ದರೆ, ಸಂಪತ್ತು ಇಲ್ಲದಿದ್ದರೆ ಯಾರೂ ಆತನ ಬಳಿ ಇರುವುದಿಲ್ಲ. ಆತ ನಿಷ್ಕ್ರೀಯನಾಗಿ ಉಳಿಯಬೇಕಾಗುತ್ತದೆ.
If there is no money or wealth in hand nobody will be with him.

ಹಣ ನೋಡ್ರೇ ಹೆಣನೂ ಬಾಯಿ ಬುಟ್ಟದೆ
ಈ ಸಮಾಜದಲ್ಲಿ ಹಣಕ್ಕೆ ಮಾತ್ರ ಪ್ರಾಮುಖ್ಯತೆ. ಹಣ ಇದ್ದವನ ಜೊತೆ ಮಾತ್ರ ಎಲ್ಲರಿರುತ್ತಾರೆ.
Money alone plays an important role in this society.

ಹಣ ಇದ್ದರೆ ಪೇಟೆ, ಎತ್ತಿದ್ದರೆ ಹೂಟೆ
ಪೇಟೆಗೆ ಹೋಗಬೇಕೆಂದಿದ್ದರೆ ಕೈಯಲ್ಲಿ ಹಣ ಬೇಕು. ಅಂತೆಯೇ ಉಳುಮೆಗೆ ಹೋಗ ಬೇಕೆಂದಿದ್ದರೆ ಜೊತೆಗೆ ಎತ್ತುಗಳು ಬೇಕು.
While going to the town we need money like wise while going for ploughing, we need a pair of oxen.

ಹಣ್ಣ್ ತಿಂದವ ಜಾರ್ತ್,
ಚೋಲಿ ತಿಂದಂವ ಸಿಕ್ಕಿಬೀತ್
ಹೆಚ್ಚಿನ ಹಣಕಾಸಿನ ದುರ್ವ್ಯವಹಾರಗಳಲ್ಲಿ ಮುಖ್ಯವಾಗಿ ಬಹುಪಾಲು ತಿಂದವ ತಪ್ಪಿಸಿಕೊಳ್ಳುತ್ತಾನೆ. ಒಂದಷ್ಟು ತಿಂದವರು ಸಿಕ್ಕಿ ಹಾಕಿಕೊಳ್ಳುತ್ತಾರೆ.
In most of the mis appropriation cases the main culprit succeeds to escape where as the partial culprits are caught.

ಹಣ್ಣೆಲೆ ಉದುರ್‌ಕನ ಕಾಯೆಲೆ ನೆಗಾಡ್ತ್
ಮುದುಕರನ್ನು ನೋಡಿ ಯುವಕರು ನಕ್ಕಂತೆ
Youth laugh by looking at the old.

ಹತ್ತ್ ಗಂಡ್‌ಸ್‌ಗ ಒಟ್ಟಿಗೆ ಇರುವೊ,
ಎರಡು ಹೆಳ್ಮಕ ಒಟ್ಟಿಗೆ ಇರಿಕಿಲೆ
ಹತ್ತು ಗಂಡಸರು ಹೊಂದಾಣಿಕೆಯಿಂದ ಒಟ್ಟಿಗೆ ಇರಬಲ್ಲರು. ಎರಡು ಹೆಂಗಸರು ಒಟ್ಟಿಗೆ ಇರಲಾರರು.
Jealousy thy name is woman - Shakespeare.

ಹತ್ತ್ ಅಡ್ಗೆವು ಸೇರಿ ಊಟದ ರುಚಿ ಕೆಟ್ಟತ್
ಹತ್ತು ಜನ ಅಡುಗೆಯವರಿದ್ದರೂ ಅವರಿಗೊಬ್ಬ ನಾಯಕನಿಲ್ಲದಿದ್ದರೆ ಅವರು ತಯಾರಿಸಿದ ಊಟ ಕೆಟ್ಟಂತೆ ಅದೇ ರೀತಿ ಕೆಲಸ ನಿರ್ವಹಿಸು ವವರು ಎಷ್ಟು ಜನರಿದ್ದರೂ ಅವರಿಗೊಬ್ಬರು

ನಿರ್ದೇಶನ ನೀಡುವವರು ಬೇಕೇ ಬೇಕು.
A team needs a leader to direct or else they can't turn out the work effectively.

ಹತ್ತ್ ಕಟ್ಟುವ ಕಡೆ ಒಂದು ಮುತ್ತು ಕಟ್ಟ್
ಹತ್ತಾರು ಸಣ್ಣಪುಟ್ಟ ಕಾರ್ಯಗಳನ್ನು ಮಾಡುವ ಬದಲು ಒಂದು ಬೃಹತ್ ಯೋಜನೆಯನ್ನು ರೂಪಿಸು.
Instead of doing so many negligible social works execute a megha project which benefits thousands of people.

ಹತ್ತ್ ಮಕ್ಕಳ ಅಯ್ಯೆ ಹೊತ್ತ್ ಉಂಬಕಿಲ್ಲದೆ ಸತ್ತತ್
ಹತ್ತು ಮಕ್ಕಳಿದ್ದರೂ ಕೊನೆಗಾಲದಲ್ಲಿ ತಾಯಿಯನ್ನು ನೋಡಿಕೊಳ್ಳುವವರು ಯಾರೂ ಇರುವುದಿಲ್ಲ.
Even if the mother has ten children there are nobody to look after her in her old age.

ಹತ್ತು ಕೊಟ್ಟಲ್ಲಿ ಮುತ್ತು
ಹತ್ತು ಕಡೆ ದಾನ ಧರ್ಮ ಮಾಡಿದರೆ ಎಲ್ಲರೂ ಗೌರವಿಸುತ್ತಾರೆ.
Charity brings respect, popularity and recognition.

ಹನಿ ಕೂಡ್ರೆ ಹಳ್ಳ ತೆನೆ ಕೂಡ್ರೆ ಬಳ್ಳ
ಹನಿ ಹನಿ ಸೇರಿದಾಗ ಅದು ಒಟ್ಟಾಗಿ ಹರಿದು ಹಳ್ಳವಾಗುತ್ತದೆ. ಅಂತೆಯೇ ತೆನೆ ತೆನೆ ಸೇರಿದಾಗ ಧಾನ್ಯದ ರಾಶಿಯಾಗುತ್ತದೆ.
The drops of water make a river, likewise the corn of grains pile up and make a heap of grain.

ಹಲ್ಲ್ ಇರ್‌ಕನ ಕಡ್ಲೆ ಇಲ್ಲೆ,
ಕಡ್ಲೆ ಇರ್‌ಕನ ಹಲ್ಲ್ ಇಲ್ಲೆ
ಯೌವನ ಇರುವಾಗ ಹಣಕಾಸಿನ ಬೆಂಬಲ ವಿರಲಿಲ್ಲ. ಕೈಯಲ್ಲಿ ಹಣ ಬರುವಾಗ ಯೌವನ ಕಳೆದುಹೋಗಿತ್ತು.
Comb given when the head is bald.

ಹಳ್ಳ ದಾಟಿದ ಮೇಲೆ ದಾಟಿಸಿದವನ ಮರ್ತಾಂಗೆ
ಕೃತಜ್ಞತೆ, ಉಪಕಾರ ಸ್ಮರಣೆ ಇಲ್ಲದಿರುವುದು.
Ingratitude.

ಹಳೆ ತಡ್ಪೆಗೆ ಸೆಗ್‌ಣಿ ಗಟ್ಟಿ, ಅಜ್ಜಂಗೆ ಅನ್ನ ಗಟ್ಟಿ
ಹಳೆಯ ತಡ್ಪೆಗೆ ಸೆಗ್‌ಣಿ ಉಜ್ಜಿದಾಗ ಅದು ಗಟ್ಟಿಯಾಗೇ ಇರುತ್ತದೆ. ಮುದುಕರು ಸರಿಯಾಗಿ ಆಹಾರ ತೆಗೆದುಕೊಂಡರೆ ಆರೋಗ್ಯವಾಗಿರುತ್ತಾರೆ.
Winnowing pan becomes strong if cowdung is smeared on it likewise aged people should take regular food and remain healthy.

ಹಾಂಕಾರಕ್ಕೆ ಉದಾಸೀನ ಮೊದ್ದು
ಜಂಭ ಮಾಡುವವನನ್ನು ಯಾರೂ ಗುರುತಿಸದೆ, ಗೌರವಿಸದೆ, ಕಡೆಗಣಿಸುವುದೇ ಆತನ ಜಂಭಕ್ಕೆ ಮದ್ದು.
Negligence is the only medicine for the pride and arrogant people.

ಹಾಗಲ ಹಣ್ಣಾದರೇನ್, ಸೊಪ್ಪಾದರೇನ್
ಹಾಗಲ್‌ಕಾಯಿ ಹಣ್ಣಾದರೂ ಕಹಿಯೇ, ಅದರ ಸೊಪ್ಪು ತಿಂದರೂ ಕಹಿಯೇ. ಕಹಿ ಅನುಭವ ನೀಡುವವರು ಸದಾ ಕಹಿಯನ್ನೇ ನೀಡುತ್ತಾರೆ.
Bitter incidents always give bitter experience.

ಹಾಲ್‌ಲಿ ಬಂದ ದುಡ್ಡು ನೀರ್‌ಲಿ ಹೋತು
ಹಾಲು ಮಾರಿ ಬಂದ ಹಣ ಯಾವುದೇ ಪ್ರಯೋಜನಕ್ಕೆ ಬಾರದೆ ಹೋಯಿತು.
Sometimes the money accrued through minor earnings goes unserved.

ಹಾಲಿಗೆ ಬಂದಂವಂಗೆ ಎಮ್ಮೆನ ಕ್ರಯ ಏಕೆ?
ಯಾವುದೋ ಸಣ್ಣ ಉದ್ದೇಶಕ್ಕಾಗಿ ಬಂದವ ದೊಡ್ಡ ವಿಚಾರವನ್ನು ಪ್ರಸ್ತಾಪಿಸುವುದು.
A person who comes for some little things speaks about major things.

ಹಾವು ಸಾಯಕಾಗದ್,
ಕೋಲು ಮುರಿಯಕಾಗದ್
ಎರಡೂ ಕಡೆಯವರಿಗೂ ತೊಂದರೆಯಾಗ ದಂತೆ ಸಮಸ್ಯೆಯನ್ನು ಇತ್ಯರ್ಥಪಡಿಸುವುದು.
Settling the dispute without harming both the parties.

ಹಾವ್‌ನ ಹೊಡ್ಡ್ ಹದ್ದಿಗೆ ಹಾಕಿದಾಂಗೆ
ತೊಂದರೆ ಕೊಟ್ಟು ಸಂಪೂರ್ಣ ನಾಶ ಮಾಡಿದಂತೆ.
Totally destroying a person by giving disturbance and torture.

ಹಾಸ್ಯ ಇಲ್ಲದ ಬಾಳ್ ಅದ್ ಬರೀ ಗೋಳ್
ಹಾಸ್ಯವಿಲ್ಲದ ಬಾಳಿನಲ್ಲಿ ಯಾವುದೇ ಸಂತೋಷ ಇರುವುದಿಲ್ಲ.
Life without jokes and amusement is dull and monotonous.

ಹಾಸಿಗೆ ಇದ್ದಷ್ಟೇ ಕಾಲ್ ಚಾಚ್
ಆರ್ಥಿಕ ಸ್ಥಿತಿ ಎಷ್ಟು ಇದೆಯೋ ಅಷ್ಟೇ ಖರ್ಚು ಮಾಡಿಕೊಂಡು ಅಷ್ಟಕ್ಕೇ ಜೀವನ ವನ್ನು ಸೀಮಿತಗೊಳಿಸುವುದು.
Try to meet the both ends. Try to balance the income and expenditure.

ಹಿರಿಯಕ್ಕನ ಚಾಳಿ ಮನೆವುಕ್ಕೆಲ್ಲ
ಮನೆಯ ಹಿರಿಯಕ್ಕನ ದೌರ್ಬಲ್ಯಗಳು ಮನೆಯ ಇತರ ಎಲ್ಲರಿಗೂ ಅಂಟು ರೋಗದಂತೆ ಹರಡುವ ಸಾಧ್ಯತೆ ಇದೆ.
The weakness and bad habits of the eldest sister might spread to all the members of the family.

ಹುಚ್ಚರೊಟ್ಟಿಗೆ ಜ್ಞಾನಿನೂ ಹುಚ್ಚ
ಹುಚ್ಚರ ಜೊತೆಯಲ್ಲಿ ಜ್ಞಾನಿಯೂ ಹುಚ್ಚ ನೆಂದೇ ಪರಿಗಣಿಸಲ್ಪಡುತ್ತಾನೆ. ಜ್ಞಾನಿಗಳ ಜೊತೆಯಲ್ಲಿ ಹುಚ್ಚನೂ ಜ್ಞಾನಿಯಾಗುತ್ತಾನೆ. ನಾವು ಯಾರ ಜೊತೆ ಇರುತ್ತೇವೋ ಅವರಂತೆಯೇ ನಾವಾಗುತ್ತೇವೆ.
The character, behaviour, interests and the life style of the people whom we live with will definitely influence our life style also.

ಹುಟ್ಸ್‌ಕನ ಯಾರೂ ತಾತ್‌ಲೆ,
ಸಾಯಕನ ಯಾರೂ ತಕಂಡ್ ಹೋತ್‌ಲೆ
ಸಂಪತ್ತು ಕೂಡಿ ಹಾಕುವುದು ವ್ಯರ್ಥಪ್ರಯತ್ನ. ಸಮಾಜದ ಒಳಿತಿಗಾಗಿ ಅದು ವ್ಯಯವಾಗಬೇಕು.
The wealth accumulated should be spent for the good of the humanity.

ಹುಟ್ಟಿದವಂಗೆ ಸಾವು ತಪ್ಪಿಕಲೆ
ಹುಟ್ಟು ಸಾವು, ಬದುಕಿನ ಎರಡು ಅವಿಭಾಜ್ಯ ಅಂಗಗಳು.
Death is inevitable for all those who have born.

ಹುಟ್ಟು ಗುಣ ಘಟ್ಟ ಹತ್ತಿರೂ ಬುಡಿಕಿಲೆ
ವಂಶವಾಹಿಯಲ್ಲಿ ಬರುವ ನಮ್ಮ ವರ್ತನೆ ಗಳು ಯಾವ ಕಾರಣಕ್ಕೂ ಬದಲಾಗುವುದಿಲ್ಲ.
The hereditory qualities of human beings will not change.

ಹೂ ಗವು ಬರೋಕಾದರೆ ಮುಗುಟು ಅರಳೊಕು
ಹೂವು ಪರಿಮಳ ಸೂಸಬೇಕಾದರೆ ಅದು ಅರಳಿ ನಿಲ್ಲಬೇಕು. ವ್ಯಕ್ತಿ ಜನಪ್ರಿಯನಾಗ ಬೇಕಾದರೆ ಆತ ಸಮಾಜದ ಒಳಿತಿಗಾಗಿ ಶ್ರಮಿಸಬೇಕು.
A person becomes popular only if he works for the betterment of society.

ಹೂಡದ ಗದ್ದೆ ಹಾಳಾತ್,
ನೋಡದ ಮನೆ ಬಿದ್ದೋತ್
ಉಳುಮೆ ಮಾಡದೇ ಬಿಟ್ಟ ಗದ್ದೆ ತನ್ನ ಫಲವತ್ತತೆಯನ್ನು ಕಳೆದುಕೊಳ್ಳುತ್ತದೆ. ಅಂತೆಯೇ ನಿರ್ವಹಣೆ ಮಾಡದ ಮನೆ ಬಿದ್ದು ಹೋಗುತ್ತದೆ.
The uncultivated paddy field loses its fertility likewise the house which is not maintained may fall down.

ಹೆಣ್ಮಕ್ಕಳ ಬುದ್ಧಿ ಮೊಣಕಾಲ್ ಕೆಳಗೆ
ಹೆಂಗಸರಲ್ಲಿ ಕೆಲವೊಮ್ಮೆ ಸಣ್ಣ ಬುದ್ಧಿ ಅಧಿಕ ವಾಗಿ ಇರುತ್ತದೆ.
Ladies sometimes behave less than the expectation.

ಹೆಚ್ಚ್ ಆಳ್, ಕೆಲ್ಸ ಹಾಳ್
ಒಂದು ಕೆಲಸಕ್ಕೆ ಅಗತ್ಯಕ್ಕಿಂತ ಹೆಚ್ಚು ಕೆಲಸಗಾರ ರನ್ನು ನಿಯೋಜಿಸಿದರೆ ಆ ಕೆಲಸ ಸುಸೂತ್ರ ವಾಗಿ ನಡೆಯಲಾರದು. Too many cooks spoil the dinner.

ಹೆಣಕ್ಕೆ ಶೃಂಗಾರ ಯಾಕೆ, ಗುಣಕ್ಕೆ ಮತ್ಸರ ಯಾಕೆ
ಹೆಣಕ್ಕೆ ಶೃಂಗಾರ ವ್ಯರ್ಥ, ಗುಣಕ್ಕೆ ಮತ್ಸರ ಮಾಡುವುದು ಕೂಡಾ ಒಂದು ವ್ಯರ್ಥ ಪ್ರಕ್ರಿಯೆ.
One should not feel jealous for the good character of others. We should feel proud of it.

ಹೆಣ್ ಒಲ್‌ದರೆ ನಾರಿ, ಮುನ್‌ದರೆ ಮಾರಿ
ಒಲಿದರೆ ಹೆಣ್ಣು ತಾಯಿಯಾಗಿ, ಹೆಂಡತಿ ಯಾಗಿ, ಸಹೋದರಿಯಾಗಿ, ಮಗಳಾಗಿ ನಿಜಾರ್ಥದಲ್ಲಿ ಹೆಣ್ಣಾಗಿ ಗಂಡಿಗೆ ಪೂರಕ ವಾಗಿ ನಿಲ್ಲುತ್ತಾಳೆ. ಅದೇ ಹೆಣ್ಣು ಕೆರಳಿದರೆ ಗಂಡಿಗೆ ಮಾರಿಯಾಗಬಲ್ಲಳು.

ಹೆಣ್ಣ್‌ನ ಒಲ್ಸಿಕೆ ಗೊತ್ತುಬೇಕು,
ಕಲ್ಸಿಕೂ ಗೊತ್ತುಬೇಕು
ಹೆಂಡತಿಯನ್ನು ಒಲಿಸಲೂ ಗೊತ್ತುಬೇಕು, ಹೆಂಡತಿಗೆ ಕಲಿಸಲೂ ಗೊತ್ತುಬೇಕು.
One should know how to attract his wife and how to teach his wife.

ಹೆಣ್ಣಿಲ್ಲದ ಮನೆ, ಮಣ್ಣಿಲ್ಲದ ಮರ
ಮರ ಬೆಳೆಯಲು, ಮರ ದೃಢವಾಗಿ ನಿಲ್ಲಲು ಮಣ್ಣು ಬೇಕು. ಅಂತೆಯೇ ಒಂದು ಕುಟುಂಬ ವೃದ್ಧಿಯಾಗಿ ಗಟ್ಟಿಯಾಗಿ ನಿಲ್ಲಲು ಹೆಣ್ಣಿನ ಕೊಡುಗೆ ಅಪಾರ.
The contribution of a housewife in the prosperity of a family is always noteworthy.

ಹೆರದಂವ ಹೆತ್ತರೆ ಮನೆ ತುಂಬ ನಾತ
ಅಪರೂಪದ ಸಾಧನೆ ವಿಶೇಷ ಪ್ರಚಾರ ಪಡೆದುಕೊಳ್ಳುತ್ತದೆ.
Rare achievements gets more publicity.

ಹೆರದ ಹೆಣ್ಣಿಗೆ ಹೊಟ್ಟೆ ಬೇನೆ ಬಂಗ ಏನ್‌ಗೊತ್ತ್?
ಅನನುಭವಿಗಳಿಗೆ ಒಂದು ಸಾಧನೆಯ ಹಿಂದಿರುವ ಶ್ರಮ ಅರ್ಥವಾಗಲಾರದು.
An inexperienced person can't understand the effort and hard work behind an achievement.

ಹೇನಿಗೆ ಹೆದ್‌ರಿ ತಲೆ ಬೋಳ್ಸಿದಾಂಗೆ
ಸಣ್ಣಪುಟ್ಟ ಕಿರಿಕಿರಿ ಮತ್ತು ಬೆದರಿಕೆಗೆ ಹೆದರಿ ಇಡೀ ಯೋಜನೆಯನ್ನೇ ಕೈ ಬಿಟ್ಟ ಹಾಗೆ.
Leaving off a project fearing for some negligible disturbance.

ಹೇಲ್ ಬಾಕನ ಹಿತ್ತಿಲು ಹುಡ್ಕಿದಾಂಗೆ
ಕೊನೆಯ ಹಂತದಲ್ಲಿ ತಯಾರಿ ನಡೆಸಿದಂತೆ.
Eleventh hour preparation.

ಹೇಳ್ದು ಶಾಸ್ತ್ರ, ಇಕ್ಕುದು ಗಾಳ.
ಬೋಧಿಸುವುದು ಆದರ್ಶ, ತಾನು ಮಾಡು

ವುದು ಅನಾಚಾರ.

Teaching ideals, practicing nonsense. (ಹೇಳುವುದು ಆಚಾರ ಮಾಡುವುದು ಅನಾಚಾರ).

ಹೇಳೊವ್ ಕೇಳೊವ್ ಇಲ್ಲದ ಮಕ್ಕ ಹಾಳ್

ಸರಿಯಾದ ಮಾರ್ಗದರ್ಶನ, ತಪ್ಪಿದಾಗ ಪಶ್ನಿಸುವಿಕೆ ಇಲ್ಲದಿದ್ದಾಗ ಮಕ್ಕಳು ದಾರಿ ತಪ್ಪುತ್ತಾರೆ.

Children take the wrong path if they are not properly guided or questioned wherever and whenever necessary.

ಹೊಟ್ಟೆ ತುಂಬಿದ ಮೇಲೆ ಮತ್ತೆ ಉಂಬಕಾಗದ್, ಮಳೆ ನಿತ್ತ ಮೇಲೆ ಮರದಡಿ ನಿಲ್ಲಿಕಾಗದ್

ಹೊಟ್ಟೆ ತುಂಬಿದ ತಕ್ಷಣ ಆಹಾರ ಸೇವನೆ ನಿಲ್ಲಿಸಬೇಕು ಅಂತೆಯೇ ನಮ್ಮ ಕೆಲಸ ಆದ ತಕ್ಷಣ ನಾವು ಆ ಜಾಗದಿಂದ ಹೊರಟು ಬಿಡಬೇಕು.

ಹೊಟ್ಟೆ ಹಿಸಿರೆ ತಣ್ಯಣನೂ ಅಮೃತ

ಹಸಿದವನಿಗೆ ತಂಗುಳನ್ನವೂ ಅಮೃತವಾಗುತ್ತದೆ. ಹೊಟ್ಟೆ ತುಂಬಿದವನಿಗೆ ಅಮೃತವೂ ತಂಗುಳಾಗುತ್ತದೆ.

For hungry man any food becomes tasty.

ಹೊಟ್ಟೆನೇ ಹೆಣ್ಣ್, ತುಣ್ಣೆನೇ ಕೂಸು

ಮದುವೆಯಾಗದೆ, ಉಂಡಾಡಿಯಂತೆ ಇರುವ ಬೇಜವಾಬ್ದಾರಿ ಹುಡುಗರಿಗೆ ಊರಿನ ಹಿರಿಯರು ಹಗುರವಾಗಿ ಹೇಳುವ ಮಾತು. ತಿನ್ನುವುದು ಮತ್ತು ಲೈಂಗಿಕ ದಾಹ ಮಾತ್ರ ಅವರ ಕೆಲಸವಾಗಿರುತ್ತದೆ.

Cursing words for unmarried, wandering youths who indulge only in eating and sex

ಹೊರಗೆ ಸಿಂಗಾರ, ಒಳಗೆ ಗೋಳಿಸೊಪ್ಪು

ಬಾಹ್ಯ ಆಡಂಬರ, ಒಳಗಡೆ ಟೊಳ್ಳು.

External show, internal poverty.

ಹೊಸ ವೈದ್ಯಂದ ಹಳೆರೋಗಿ ವಾಸಿ

ಪುಸ್ತಕ ಓದಿ ಜ್ಞಾನ ಸಂಪಾದಿಸಿದವರಿಗಿಂತ ಅನುಭವದಿಂದ ಪಾಠ ಕಲಿತವರು ಎಷ್ಟೋ ಮೇಲು.

People who had learnt the lesson of life through experience are better than the people with theoretical knowledge.

ಹೊಳ್ಪುದು ಎಲ್ಲಾ ಚಿನ್ನ ಅಲ್ಲ

ಹೊಳೆಯುವಂತಹ, ಆಕರ್ಷಣೀಯವಾದ ವಸ್ತುಗಳು, ಸುಂದರವಾದ ವಸ್ತುಗಳೆಲ್ಲವೂ ಅಮೂಲ್ಯವಾದ ವಸ್ತುಗಳಾಗಿರುವುದಿಲ್ಲ.

Glittering, attractive, beautiful things may not be precious things.

ಹೋಗುಂತ ಹೇಳುವ ಬದಲ್ ಮನೆಗೆ ಹೊಗೆ ಹಾಕಿದಾಂಗೆ

ಅನವಶ್ಯಕ ವ್ಯಕ್ತಿಗಳನ್ನು ಹೊರಹಾಕಲು ಮನೆಯಲ್ಲಿ ಅವರಿಗೆ ಅನಾನುಕೂಲ ವಾದಂತಹ ವಾತಾವರಣವನ್ನು ಸೃಷ್ಟಿಸುವುದು.

Creating an unconducive atmosphere to expel unwanted guests.

ಹೋದ ಸಮಯ ಮತ್ತೆ ಸಿಕ್ಕಿಕಿಲೆ, ಹೋದ ಜೀವ ಮತ್ತೆ ಬಾಕಿಲೆ

ಒಂದು ಬಾರಿ ವ್ಯಕ್ತಿಯ ಜೀವ ಹೋದರೆ ಮತ್ತೆ ಮರಳಲಾರದು ಅಂತೆಯೇ ಒಂದು ಬಾರಿ ಕಳೆದುಹೋದ ಸಮಯ ಮತ್ತೆ ಬರಲಾರದು.

Once the life of a person is lost, it is lost for ever. Likewise lost time also lost for ever and cannot be recovered.

ಹೋದರೆ ಒಂದು ಕಲ್ಲ್ ಬಿದ್ದರೆ ಒಂದು ಹಣ್ಣ್

ಸಿಗಲಾರದು, ಸಾಧಿಸಲಾಗದು ಎಂಬ ನಿರಾಶಾಭಾವನೆಯಿಂದ ಸುಮ್ಮನಿರುವುದಕ್ಕಿಂತ ಪ್ರಯತ್ನಿಸಿ ನೋಡುವುದು ಒಳಿತು. ಕೆಲವೊಮ್ಮೆ ವಿಫಲನಾಗಬಹುದಾದರೂ ಯಶಸ್ವಿಯೂ ಆಗಬಹುದು.

Rather than sitting passively thinking that it can not be achieved, it is better to try and see.

ಹೋದರೆ ರೋಮ, ಬಂದರೆ ಗುಡ್ಡೆ

ಕಳೆದುಕೊಳ್ಳುವುದು ಕ್ಷುಲ್ಲಕ, ಸಿಕ್ಕಿದರೆ ರಾಶಿ ಸಂಪತ್ತು ಎಂಬ ಆಶಾದಾಯಕ ಮನೋಭಾವದಿಂದ ನಾವು ಸಾಧನೆ ಮಾಡಬೇಕು.

We should be always optimistic in our attitude hoping for the best, rather than losing a little.

ಅರೆಭಾಷೆ ನುಡಿಗಟ್ಟ್‌ಗ

ಅಂವ ಪೊಲಜಿ ಇಲ್ಲದಂವ
ಮಾನ ಮರ್ಯಾದಿ ಇಲ್ಲದವ.
Person without dignity and decorum.

ಅಂವಂದ ಹೆಣ ಹೊರಿಕೂ ಆಕಿಲೆ
ನಿಷ್ಪ್ರಯೋಜಕ.
Useless.

ಅಗ್ದದರೇ ಅಗಿದು
ಒಂದೇ ವಿಷಯದ ಬಗ್ಗೆ ಪದೇ ಪದೇ ಮಾತಾಡುವುದು.
Talking repeatedly on one subject.

ಅಜ್ಜಿಗೆ ಪುಳ್ಳಿ ಕೆಮ್ಮಿಕೆ ಕಲ್ಸುದು
ಅನುಭವಿಗೆ ಅನನುಭವಿಯ ಪಾಠ.
Teaching from the inexperienced to the experienced.

ಅಟ್ಟಕೇರ್ಸ್
ಹೊಗಳು
praise, flatter

ಅರ್ಧರಾತ್ರಿಲಿ ಕೊಡೆ ಹಿಡ್ದಾಂಗೆ
ಮೂಢತನ, ಅಜ್ಞಾನ
Less knowledge, ignorance

ಅಡ್ಡ ಗೋಡೆಲಿ ದೀಪ ಇಸಿದಾಂಗೆ
ಸ್ಪಷ್ಟವಾದ ತೀರ್ಮಾನ ನೀಡದವ
One who could not give effective decision.

ಅನುಭವನೇ ಗುರು
ಜೀವನಾನುಭವ ದೊಡ್ಡ ಗುರು
Learning from experience.

ಅಪಕಾರಕ್ಕೆ ಉಪಕಾರ
ಅಪಕಾರ ಮಾಡಿದವನಿಗೆ ಉಪಕಾರ ಮಾಡು
Helping those who have not helped.

ಅಪಮಾನಕ್ಕೆ ಬಹುಮಾನ
ಅಪಮಾನ ಮಾಡಿದವನನ್ನು ಗೌರವದಿಂದ ಕಾಣುವುದು.
Rewarding the person who humiliates.

ಅಮಾಸೆಗೊಮ್ಮೆ ಹುಣ್ಣಿಮೆಗೊಮ್ಮೆ
ಅಪರೂಪಕ್ಕೆ
Rarely.

ಅಮಾಸೆಗೆ ಹುಟ್ಟಿದಂವ
ದಾಕ್ಷಿಣ್ಯ ಇಲ್ಲದವ, ಪ್ರತಿಭಟನಾ ಮನೋಭಾವದವ
Protesting mentality, cynic.

ಅಯ್ಯೆ ಇಲ್ಲದ ಮಂಜನಾಂಗೆ
ಸೂಕ್ತ ಮಾರ್ಗದರ್ಶನವಿಲ್ಲದ.
Not properly guided.

ಅರ್ದ್ ಕುಡ್ದುಟು
ಚೆನ್ನಾಗಿ ತಿಳಿದುಕೊಂಡವ
Authoritative.

ಅಂವನ ತಲೆಕೂದಲ್ ಕಮ್ಯೂನಿಸ್ಟ್ ಬಲ್ಲೆ
ಚೆನ್ನಾಗಿ ಕೂದಲು ಬಾಚಿಕೊಳ್ಳದವ
Not properly combed.

ಅಂವನ ಮೊರೆ ಸುಟ್ಟ ಬದನೆನಾಂಗೆ
ಕಳೆಗುಂದಿದ, ನಿಸ್ತೇಜ ಮುಖ.
Pale face, worried face.

ಅವನಕ್ಕೆಲೆ ಹಲ್ಲುಟ್ಟು ಕಡ್ಲೆನೂ ಉಟ್ಟು
ಆತನಲ್ಲಿ ಅಧಿಕಾರವು ಇದೆ, ಸಾಮರ್ಥ್ಯವೂ ಇದೆ.
Possesses both power and capacity.

ಅವಸರಕ್ಕೆ ನಿಯಮ ಇಲ್ಲೆ
ಅವಸರ ಮಾಡಿದಾಗ ನಿಯಮ ಮೀರುತ್ತೇವೆ.
Rules and regulations are broken due to haste and hurry.

ಆಕಾಶ ತಲೆ ಮೇಲೆ ಬಿದ್ದಾಂಗೆ
ದೊಡ್ಡ ಸಮಸ್ಯೆಗೆ ಸಿಲುಕು.
Put into complex problem.

ಆಡ್ ಬೇಕುಂತೇಳ್ದವಂಗೆ ಆನೆ ಸಿಕ್ಕಿದಾಂಗೆ
ಸಣ್ಣ ಆಕಾಂಕ್ಷೆ ಹೊಂದಿದವ, ಭಾರಿ ಸಾಧನೆ ಮಾಡುವುದು.
Less ambition- more achievement

ಆತುರಂದ ಅನಾಹುತ
ಅವಸರ ಅಪಾಯಕಾರಿ.
Haste leads to disaster.

ಆನೆ ಬೇಕುಂತೇಳ್ದವಂಗೆ ಆಡ್ ಸಿಕ್ಕಿದ್ದಾಂಗೆ
ಭಾರೀ ನಿರೀಕ್ಷೆ ಮಾಡಿದವ ಏನೇನೂ ಸಾಧನೆ ಮಾಡಲಾಗದಿರುವುದು.
More ambition, less achievement.

ಆನೆ ಹೋದಲ್ಲೇ ದಾರಿ
ದೊಡ್ಡ ಮನುಷ್ಯರಿಗೆ ಅವರದೇ ದಾರಿ, ಅವರು ಹೇಳಿದ್ದೇ ವೇದವಾಕ್ಯ.
Rich have their own way of life.

ಅಪತ್ತ್‌ಗಾದಂವ ನೆಂಟ
ನಾವು ತೊಂದರೆಯುಲ್ಲಿರುವಾಗ ನಮ್ಮ ಸಹಾಯಕ್ಕೆ ಬರುವವನೇ ನಮ್ಮ ನಿಜವಾದ ಬಂಧು.
People who help us in the time of distress are our real relatives.

ಆರೋಗ್ಯವೇ ಭಾಗ್ಯ
ಆರೋಗ್ಯ ಇದ್ದರೆ ಅದೇ ಭಾಗ್ಯ.
Health is wealth.

ಆಶೆ ತೋರ್ಸಿ ಮೋಸಮಾಡ್
ಆಮಿಷ ತೋರಿಸಿ ಮೋಸಮಾಡು
Deceive through bait or temptation.

ಇದ್ದಲ್ಲಿಯೂ ಇಲ್ಲೆ, ಹೋದಲ್ಲಿಯೂ ಇಲ್ಲೆ
ಊರಲ್ಲಿಯೂ ಏನನ್ನು ಸಾಧಿಸಲಾಗಲಿಲ್ಲ, ಹೋದಲ್ಲಿಯೂ ಏನನ್ನು ಸಾಧಿಸಲಾಗಲಿಲ್ಲ.
One who couldn't achieve anything both in his native place and outside.

ಇನ್ನೊಬ್ಬ ಬಾಲ ಎತ್ತದಿದ್ದರೆ ಉಚ್ಚೆ ಹೊಯ್ಯಕೆ ಆದುಲೆ
ಇನ್ನೊಬ್ಬರ ಸಹಾಯವಿಲ್ಲದೆ ಯಾವುದೇ ಕೆಲಸ ಮಾಡಲಾಗುವುದಿಲ್ಲ.
One who can't perform any work without the help of others.

ಇಲ್ಲದ ಊರಿಗೆ ದಾರಿ ಕೇಳ್ದಾಂಗೆ
ಉತ್ತರ ಇಲ್ಲದ ಪ್ರಶ್ನೆ.
Question without any answer.

ಉಂಡೆ ಇಸುದು
ಮೋಸ ಮಾಡು, ಹಿಂದಿನಿಂದ ದ್ರೋಹ ಬಗೆಯುವುದು Deceive, dupe

ಉಂಬ ಗಂಜಿಗೆ ಕಲ್ಲ್ ಹಾಕಿಕಾಗದ್
ಒಬ್ಬನ ದೈನಂದಿನ ಬದುಕಿಗೆ ತೊಂದರೆ ಮಾಡಬಾರದು.
One should not be an obstacle to the daily earnings of others.

ಉಪ್ಪುನೂ ಇಲ್ಲೆ ಹುಳಿನೂ ಇಲ್ಲೆ
ಏನೇನೂ ಆಸಕ್ತಿ ಇಲ್ಲದ, ಸಪ್ಪೆ.
Not interesting, without any taste, pale.

ಉಪ್ಪು ತಿಂದ ಮನೆಗೆ ಎರಡ್ ಬಗಿಬಡ
ತಿಂದುಂಡು ಬದುಕಿದ ಮನೆಗೆ ಕೇಡು ಬಗೆಯಬೇಡ.

Don't show your disloyalty to the house where you have been brought up.

ಉರ್‌ದ್ ಬೀಳು
ಸಿಟ್ಟುಗೊಳ್ಳು, ಕೆರಳು.
Be angry, get enraged.

ಉಳಿಕೆಗಾಗಿ ಉಪಾಸಬೇಡ
ದೇಹವನ್ನು ದಂಡಿಸಿಕೊಂಡು, ಸರಿಯಾಗಿ ಆಹಾರವನ್ನು ತಿನ್ನದಿರುವ ಮೂಲಕ ಮಿತ ವ್ಯಯ ಬೇಡ.
No saving is necessary without taking food.

ಊಟಕ್ಕಿಲ್ಲದ ಉಪ್ಪಿನಕಾಯಿ
ಅಗತ್ಯಕ್ಕೆ ಬಾರದ ಅತ್ಯಂತ ಅವಶ್ಯಕ ವಸ್ತು.
An important thing that we could not get at the time of necessity.

ಎತ್ತಿದ ಕೈ
ಪ್ರವೀಣ Expert, Skilful.

ಎದ್‌ರ್ ಹಾಕಿಕಂಬದು
ವಿರೋಧ ಕಟ್ಟಿಕೊಳ್ಳು
Getting opponents.

ಎದೆಗುಂದುಬಡ
ಧೈರ್ಯ ಕಳೆದುಕೊಳ್ಳಬೇಡ.
Not to lose courage.

ಎದೆ ತಟ್ಟಿ ಹೇಳ್
ಧೈರ್ಯ ಮಾಡಿ ಹೇಳು.
Tell with courage. Speak with confidence.

ಎದೆ ಬೊಗ್ಗದ ಜಾತಿ
ಸೋಮಾರಿ,
Lazy man.

ಎದೆ ಮೇಲೆ ಕೈಹಿಸಿ ಹೇಳ್
ಪ್ರಮಾಣ ಮಾಡಿ ಹೇಳು. Swear.

ಎದೆ ಹೊಡಿ ಮಾಡಿಕಂಡ್
ದೈಹಿಕವಾಗಿ ಶ್ರಮಿಸಿ, ಎದೆಮುರಿದು ಕೆಲಸ ಮಾಡಿ.
By doing hardwork.

ಎರ್‌ಡ್ ಬಗಿದು
ದ್ರೋಹ ಮಾಡು. Deceive, dupe.

ಎಲ್ಲರ ಬಾಯಿಲೂ ಅದೆ
ಜನಪ್ರಿಯ, ಎಲ್ಲರ ಬಾಯಲ್ಲಿರುವ ಮಾತು, ಪ್ರಚಾರ
Popular, publicity, talk of the town.

ಎಲ್ಲರ ಮನೆ ದೋಸೆ ತೂತ್
ಎಲ್ಲರ ಮನೆಗಳಲ್ಲೂ ಸಮಸ್ಯೆಗಳು, ಲೋಪ ಗಳು ಇವೆ.
Every house has its own problems and lapses.

ಎಲ್ಲಾ ಅಂವ ಹೇಳ್ದಾಂಗೆ
ಇನ್ನೊಬ್ಬ ಹೇಳಿದಂತೆ ಕೇಳು. ಒಬ್ಬನ ನಿರ್ದೇಶನದಂತೆ ನಡೆಯು.
Following or obeying the orders of someone.

ಎಲ್ಲಾ ಇದ್ದ್ ಬೇಕಾದ್ದ್ ಇಲ್ಲೆ
ಎಲ್ಲವೂ ಇದ್ದು ಅಗತ್ಯವಾದುದು ಇಲ್ಲ.
One has everything except what he needs most.

ಎಲ್ಲಾ ಬಣ್ಣ ಮೊಸಿ ನುಂಗಿತ್
ಒಂದು ಚಿಕ್ಕ ತಪ್ಪು ಉಳಿದ ಎಲ್ಲಾ ಸದ್ಗುಣ ಗಳನ್ನು ಮರೆಮಾಡುತ್ತದೆ.
One little mistake overtakes all the good qualities.

ಎಲಿಗೆ ಹೆದ್ರ್‌ದಂವ ಹುಲಿ ಹಿಡಿಯಕೆ ಹೋತ್
ಸಣ್ಣಪುಟ್ಟ ಕೆಲಸ ಮಾಡಲು ಹಿಂಜರಿಯುವವ ದೊಡ್ಡ ಕೆಲಸಕ್ಕೆ ಕೈ ಹಾಕುವುದು.
One who is afraid of little things, attempting for a big task.

ಎಲಿನ ಹೊಟ್ಟೆಲಿ ಹುಲಿ ಹುಟ್ಟಿಕಿಲೆ
ಶೌರ್ಯ ಎಂಬುದು ವಂಶಪಾರಂಪರ್ಯವಾಗಿ ಬರುವ ಗುಣ.
Heroism is a hereditary quality.

ಎಳ್ತ್‌ಲೇ ಚಿಂಟಿ ಹಾಕೊಕು
ದುರಭ್ಯಾಸಗಳನ್ನು ಎಳವೆಯಲ್ಲಿಯೇ ಚಿವುಟಿ ಹಾಕಬೇಕು.
Bad habits have to be exterminated at the young age itself.

ಎಳ್ಳ್ ನೀರ್ ಬುಡ್
ಸಂಬಂಧ ಕಡಿದುಕೊಳ್ಳು.
Cut off all the relations

ಏರ್ದಷ್ಟೇ ಇಳಿಯೊಕು
ನಾವು ಜೀವನದಲ್ಲಿ ಎಷ್ಟೇ ಮೇಲಕ್ಕೇರಿದರೂ ನಮ್ಮ ತಳವುಟ್ಟದ ಜೀವನವನ್ನು ಮರೆಯಬಾರದು.
We should not forget the bad days even if we are on the top.

ಏಳ್ ತಿಂಗಳ್‌ಲಿ ಹುಟ್ಟಿದಂವ
ಅತ್ಯಂತ ಅವಸರದ ವೃತ್ತಿ.
Person of hasty attitude.

ಏಳ್ ಕೆರೆ ನೀರು ಕುಡ್ದಂವ
ಅಪಾರ ಲೋಕಾನುಭವ ಹೊಂದಿದವ.
A very very experienced person. A person with worldly knowledge.

ಒಂದಕ್ಕೂ ತಲೆಬುಡ ಇಲ್ಲೆ
ಪೀಠಿಕೆ ಉಪಸಂಹಾರ ಇಲ್ಲದ, ವ್ಯವಸ್ಥಿತವಿಲ್ಲದ. Not in order.

ಒಂದು ಕಡ್ಡಿ ಎತ್ತಿ ಇಸಿಕಿಲೆ
ಏನೂ ಕೆಲಸ ಮಾಡದಂವ, ಸೋಮಾರಿ
A person who does not do any work; lazy person.

ಒಂದು ಭತ್ತಕ್ಕೆ ಒಂದೇ ಅಕ್ಕಿ
ಎಲ್ಲರಿಗೂ ತಿಳಿದ ವಿಚಾರ
Known fact.

ಒಂದೇ ಕಲ್ಲ್‌ಲಿ ಎರಡ್ ಹಕ್ಕಿ
ಒಂದೇ ಪ್ರಯತ್ನದಲ್ಲಿ ಎರಡು ಸಾಧನೆ.
Two achievements in one attempt.

ಒಕ್ಲ್ ಇಲ್ಲದ ಮನೆನಾಂಗೆ
ವಾಸವಿಲ್ಲದ ಮನೆ ಅವ್ಯವಸ್ಥೆಯ, ಶುಚಿತ್ವವಿಲ್ಲದ ಆಗರ.
A house without the residence of the people is not clean and organized.

ಒಗ್ಗರಣೆ ಹಾಕ್
ರಂಗುರಂಗಾಗಿ ವರ್ಣಿಸು.
Giving a rosy picture

ಒಣ್‌ಗಿಲ್‌ನೊಟ್ಟಿಗೆ ಹಸಿನೂ ಸುಟ್ಟು ಹೋತ್
ದುಷ್ಟರ ಜೊತೆ ಮುಗ್ಧರೂ, ನಿರಪರಾಧಿಗಳೂ ಶಿಕ್ಷೆ ಅನುಭವಿಸಬೇಕಾಗುವುದು.
The innocents also sometimes get convicted along with wicked people.

ಒಣ್‌ಗಿಲ್ ಮೊತ್ತಿನಾಂಗೆ
ದೈಹಿಕವಾಗಿ ಸೊರಗಿ ಹೋಗು.
Becoming physically weak.

ಒಬ್ಬಂಗೆ ಒಳ್ಳದ್, ಇನ್ನೊಬ್ಬಂಗೆ ಕೆಟ್ಟದ್
ಒಬ್ಬನ ಜೊತೆ ಒಳ್ಳೆಯ ಸಂಬಂಧ, ಇನ್ನೊಬ್ಬನ ಜೊತೆ ಕೆಟ್ಟ ಸಂಬಂಧ.

Goodness for one and wickedness for the other.

ಓಡ್ದಂವಂಗೆ ಗೊತ್ತು ಕಾಲ್ ಬೇನೆ
ಶ್ರಮ ವಹಿಸಿದವನಿಗೆ ಮಾತ್ರ ಗೊತ್ತು ಆಯಾಸದ ಮಹತ್ವ.
The amount of tiredness is known only who has toiled hard.

ಓಬಿರಾಯನ ಕಾಲದ್ದ್
ತುಂಬಾ ಹಳೇಯದಾದ, ಪ್ರಾಚೀನವಾದ.
Very old, ancient.

ಕಕ್ಕೆಗಳಾಂಗೆ ಸುತ್ತುವರ್ದೋ
ಸುತುಮುತ್ತಲಿನ ಎಲ್ಲರೂ ಒಮ್ಮೆಲೆ ದಾಳಿ ಮಾಡುವುದು.
Attacking from all sides at a time.

ಕಟ್ಟಿಟ್ಟ ಬುತ್ತಿ
ಮುಂದೋಂದು ದಿನ ಅನುಭವಿಸಲೇಬೇಕು.
The day will come you will be penalized.

ಕಡಿವಾಣ ಇಲ್ಲದ ಕುದುರೆನಾಂಗೆ
ಹತೋಟಿ ಇಲ್ಲದ, ಹಿಡಿತವಿಲ್ಲದ
Without any control.

ಕಡ್ಡಿ ಮುರ್ದಾಂಗೆ
ಖಡಾಖಂಡಿತವಾಗಿ ಹೇಳು, ಖಡಕ್ ಮಾತು.
Tell frankly, harsh statement, say as it is without any hesitation.

ಕಣ್ಣ್ ಇಸ್
ಸದಾ ಗಮನಿಸು
Keep an eye, keep watch.

ಕಣ್ಣ್ ತಾಂಗುದು
ದೃಷ್ಟಿಯಾಗು,
Bad effect due to vision.

ಕಣ್ಣ್ ಬೀಳ್
ಗಮನಕ್ಕೆ ಬರು
Coming to one's attention, take notice of.

ಕಣ್ಣ್‌ಲಿ ರಕ್ತ ಇಲ್ಲದ ಜಾತಿ
ಕರುಣೇ ಇಲ್ಲದವ
Merciless man, man without pity and sympathy.

ಕಣ್ಣ್ ಕಣ್ಣ್ ಬುಡು
ತಬ್ಬಿಬ್ಬಾಗು
Puzzled, totally confused

ಕಣ್ತಪ್ಪುಸು
ಕಣ್ಣಿಗೆ ಬೀಳದಂತೆ ಚಲಿಸು
Move without the notice of others.

ಕಣ್ಣಿಗೆ ಹಬ್ಬ
ನೋಡಲು ಸುಂದರ,
ಮನಸ್ಸಿಗೆ ಹಿತ ನೀಡುವ.
Pleasant to see, delightful view..

ಕಣ್ಣಿದ್ದೂ ಕುರುಡನಾಂಗೆ
ನೋಡಿಯೂ ನೋಡದಂತಿರುವ
Pretending as if not seen.

ಕತ್ತಲೆಲಿ ಬಾಣ ಬುಟ್ಟಾಂಗೆ
ಯಾವುದೇ ಯೋಜನೆ ಇಲ್ಲದ ಕೆಲಸ ಮಾಡುವುದು
Work without any plan and without any preparation

ಕತ್ತೆಗೆ ಪ್ರಾಯ ಆದಾಂಗೆ
ಎಷ್ಟೇ ಕೆಲಸ ಮಾಡಿದರೂ, ಪ್ರಾಯ ಆದರೂ ಅನುಭವ, ಕೌಶಲ್ಯ ಪಡೆಯದಿರುವುದು.
Not getting any experience in spite of elderliness

ಕನ್ಸ್‌ಲಿ ಬಾಳೆಹಣ್ಣ್ ತಿಂದಾಂಗೆ
ಸುಖದಕನಸು ಕಾಣುವುದು
Dreaming of luxurious life.

ಕರುಳು ಕಿತ್ತ್ ಹೋದಾಂಗಾತ್
ಭಾರಿ ಬೇಸರ ಉಂಟುಮಾಡುವ
Totally grief or sorrow.

ಕಲ್ಲ್ ಹಾಕ್
ತೊಂದರೆ ಮಾಡು. Disturb, trouble.

ಕಲ್ತ್ ಕಲ್ತ್ ಹೊಂಡಕೆ ಬೀತ್
ತುಂಬಾ ತಿಳಿದವರು ಕೂಡಾ ಕೆಲವೊಂದು ಬಾರಿ ತೊಂದರೆಗೆ ಸಿಲುಕುವುದು
Even learned people also sometimes face defeat.

ಕಳ್ಳ್ ಕುಡ್ದ ಕುರೆನಾಂಗೆ
ಅಮಲು ಪದಾರ್ಥ ಸೇವಿಸಿದ ಮಂಗನಂತೆ, ಹಣ, ಅಧಿಕಾರ, ಅಂತಸ್ತಿನ ಅಮಲು ತಲೆಗೆ ಏರಿ ಮಾನಸಿಕ ಸ್ಥಿಮಿತ ಕಳೆದುಕೊಳ್ಳುವುದು.
Losing mental balance due to richness, money and status.

ಕಳ್ಳನ ಕಾವಲುಗಾರ ಮಾಡ್ದಂಗೆ
ಕಳ್ಳನ ಕೈಲಿ ಬೀಗದ ಕೈ ಕೊಟ್ಟ ಹಾಗೆ.
Trusting the thief.

ಕಾರ್‌ದರೇ ತಿಂಬದು
ತಾನು ಮಾಡಿದ ದುಷ್ಕರ್ಮವನ್ನು ತಾನೇ ಅನುಭವಿಸುವುದು.
Falling prey into the self wicked act.

ಕಾಲ್ ಹಾಕಿಕೂ ಜಾಗ ಇಲ್ಲೆ
ಜನರಿಂದ ತುಂಬಿ ಹೋಗು, Jam packed.

ಕಿಚ್ಚಿಗೆ ತುಪ್ಪ ಸುರಿದು
ಸಮಸ್ಯೆಯನ್ನು ಇನ್ನಷ್ಟು ಉಲ್ಬಣಗೊಳಿಸುವುದು
Making the problem more complex. Adding fuel to the fire.

ಕುಂಡೆಗೆ ಚವುಳಿ ಕಚ್ಚಿದಾಂಗೆ
ಚಡಪಡಿಸು, ಕಿರಿಕಿರಿ ಅನುಭವಿಸು.
Irritating experience.

ಕುತ್ತಿಗೆ ಕೊಯ್ಯು
ಮೋಸ ಮಾಡು, ಮಾತಿಗೆ ತಪ್ಪು
Deceive, dupe

ಕುತ್ತಿಗೆಗೆ ಕಟ್ಟಿಕ
ಮದುವೆ ಮಾಡಿಕೊ. Marry her.

ಕುರುಡಂಗೆ ಕುರುಡ ದಾರಿ ತೋರ್ಸಿದಾಂಗೆ
ಬುದ್ಧಿ ಇಲ್ಲದವರಿಗೆ ಇನ್ನೊಬ್ಬ ಬುದ್ಧಿ ಇಲ್ಲದವ ಮಾರ್ಗದರ್ಶನ ನೀಡಿದಂತೆ.
A stupid person advising another stupid person.

ಕುರೆ ಸತ್ತ ಕೊಂರ್ಬನಾಂಗೆ
ಬದುಕಿನ ಆಸರೆ ಕಳೆದುಕೊಂಡ ದುಃಖ
Grief due to loss of daily earnings.

ಕೆಂಡಕಾರ್
ಅತಿರೇಕ ಸಿಟ್ಟಿನಿಂದ ಅಬ್ಬರಿಸು
Bang with anger.

ಕೆಬಿ ಉರ್ಗುದು
ಚಾಡಿ ಹೇಳುವುದು,
Back biting.

ಕೆಬಿಗೆ ಬೀಳ್
ಕೇಳಿ ಬರು, ಕೇಳಿಬಂತು,
It is heard.

ಕೆಬಿಗೆ ಹಾಕಣ್ತ್‌ಲೆ
ಗಮನಕ್ಕೆ ತೆಗೆದುಕೊಳ್ಳಲಿಲ್ಲ
Did not take notice of.

ಕೆಲ್ಸ ಆಕೊರೆ ಕತ್ತೆ ಕಾಲ್ ಹಿಡಿಯೊಕು
ತಮ್ಮ ಕೆಲಸ ಆಗಬೇಕೆಂದರೆ ತಮ್ಮ ಸ್ವಾಭಿಮಾನ ಬಿಟ್ಟು ಕೆಳಮಟ್ಟಕ್ಕೆ ಇಳಿಯಬೇಕು

ಕೆಸದ ಎಲೆಲಿ ನೀರಿದ್ದಾಂಗೆ
ಕ್ಷಣಿಕ ಸುಖಃ; ಕ್ಷಣಿಕ ಜೀವನ
Glimpse of Luxury, life is short.

ಕೈಕಾಲ್ ಬುದ್ದು
ಧೈರ್ಯ ಕಳೆದುಕೊಳ್ಳು, Lose courage.

ಕೈಕೊಡು
ಮಧ್ಯದಲ್ಲಿ ಸಹಾಯ ಹಿಂತೆಗೆದುಕೊಳ್ಳು
Withdrawing the support in the middle.

ಕೈ ಬಿಸಿ ಮಾಡ್ದು
ಲಂಚಕೊಡು, Bribing..

ಕೈ ಸುಟ್ಟ್ ಕಂಡತ್
ನಷ್ಟ ಅನುಭವಿಸು. Get into loss.

ಕೈ ಬುಡ್ ಬಡ
ಸಹಾಯ ಮಾಡುವುದನ್ನು ನಿಲ್ಲಿಸಬೇಡ
Do not stop giving your help.

ಕೈ ಮಾಡ್
ಹೊಡಿ. Beat, man handling.

ಕೈ ಶುದ್ಧ ಇಸಿಕಂಬದು
ಯಾವುದೇ ಲಂಚ, ಕಮಿಷನ್ ಪಡೆಯದೆ ಕೈ ಸ್ವಚ್ಛವಾಗಿರಿಸಿಕೊಳ್ಳುವುದು.
Keep hands financially clean.

ಕೊಟ್ಟೆಕ್ಯಾ ಕಟ್ಟ್
ನಿಧನ ಹೊಂದು, ಮರಣಿಸು, Dead.

ಕೊಡಿ ಕಡೆ ಗೊತ್ತಿಲ್ಲದವು
ಒಂದು ವಿಷಯದ ಹಿನ್ನೆಲೆ ಹಾಗೂ ಪರಿಣಾಮ ತಿಳಿಯದಿರುವುದು.
Not knowing the background and effects of something.

ಕೊತ್ತಿ ಕಣ್ಮುಚ್ಚಿ ಹಾಲ್ ಕುಡ್ದಾಂಗೆ
ತಾನು ಮಾಡಿದ ತಪ್ಪು ಇತರರಿಗೆ ತಿಳಿದಿಲ್ಲ ಎಂಬ ಭಾವನೆ.
Thinking that nobody is knowing my fault.

ಕೋಣನ ಮುಂದೆ ಕಿನ್ನರಿ ಬಾರ್ಸಿದಾಂಗೆ
ಅಜ್ಞಾನಿಗಳಿಗೆ ಬೋಧನೆ ಮಾಡಿದಂತೆ; ಸಂಗೀತ ಕಾರ್ಯಕ್ರಮ ನೀಡಿದಂತೆ.

ಕೋಣನ ಬೆನ್ನಿಗೆ ಮಳೆ ಬಿದ್ದಾಂಗೆ
ಯಾವುದೇ ಪರಿಣಾಮ ಬೀರದಿರುವುದು.
No effect at all.

ಕೋಳಿ ಒಕ್ಕಿದಾಂಗೆ
ಅಲ್ಲಲ್ಲಿ ಬೇರೆ ಬೇರೆ ಕೆಲಸ ಆರಂಭಿಸಿ ನಿಲ್ಲಿಸುವುದು.
Incomplete work at different places.

ಕೋಳಿ ತನ್ನಂದಲೇ ಬೊಳ್ಪಾದೂಂತ ಹೇಳ್ದಾಂಗೆ
ಒಂದು ಕೆಲಸ ತಾನೇ ಮಾಡಿದ್ದು ಎಂದು ಕೊಚ್ಚಿಕೊಳ್ಳುವುದು.
Boasting of one's own work.

ಖಾರಲಿ ಮಾತಾಡ್ದು
ತೀಕ್ಷ್ಣವಾಗಿ ಮಾತನಾಡು
Talk harshly, talk without politeness.

ಗಂಟ್ ಕರ್‌ಗುದು
ಇದ್ದ ಹಣ ಖರ್ಚಾಗಿ ಹೋದು
Spending out all the money.

ಗಂಟ್ ಬೀಳ್
ಅವಲಂಬಿಸು,
Depend.

ಗಂಟ್ ಮೂಟೆ ಕಟ್ಟುದು
ಊರುಬಿಟ್ಟು ಹೋಗು, ಗುಳೇ ಹೋಗು
Leave the place permanentaly.

ಗಟ್ಟಲಿ ನಿಲ್ಲ್
ದೃಢವಾಗಿ ಬೆಂಬಲಿಸು
Support strongly.

ಗಾಣದ ಎತ್ತ್ ದುಡ್ದಾಂಗೆ
ಕಾರ್ಮಿಕರ ಶೋಷಣೆ, ಕಠಿಣ ಶ್ರಮ
Hard work, exploitation of working class.

ಗಾಳ ಹಾಕ್
ವಶಕ್ಕೆ ತೆಗೆದುಕೊಳ್ಳಲು ಆಶೆ ತೋರಿಸು, ಆಮಿಷವೊಡ್ಡು.
Tempting to take hold of.

ಗಾಳಿ ಬಂದಾಂಗೆ ತೂರಿಕಂಬವ
ಅವಕಾಶವಾದಿ, Opportunist.

ಗಾಳಿ ಹಾಕ್
ಹೊಗಳಿ ಉಬ್ಬಿಸು, Praise, flatter.

ಗಾಳಿ ಬಂದ ಕಡೆ ಕೊಡೆ ಹಿಡ್ದಾಂಗೆ
ಯಾರಿಂದ ಲಾಭವುಂಟೋ ಅವರ ಪರವಾಗಿ ನಿಲ್ಲುವುದು.
Standing in favour of someone from whom we have some benefit.

ಗುಡ್ಡೆಗೆ ಮಣ್ಣ್ ಹೊತ್ತಾಂಗೆ
ಶ್ರೀಮಂತರಿಗೆ ಇನ್ನೂ ಶ್ರೀಮಂತರಾಗಲು ಅವಕಾಶ. ಪ್ರತಿಫಲವಿಲ್ಲದೆ ಕೆಲಸ.
Making the rich more richer. unrewarded work.

ಗುಣಕ್ಕೆ ಮತ್ಸರ ಇರಿಕಾಗದ್
ಒಳ್ಳೆತನಕ್ಕೆ ಗೌರವ.
Recognizing the good.

ಗೇಣ್ಸ್ ಚೊಲ್ಲಿಕೂ ಆಕಿಲೆ
ನಿಷ್ಪ್ರಯೋಜಕ,
Good for nothing.

ಗೊತ್ತಾತನ ಬೊಳ್ಪಾತ್
ಅರ್ಥವಾದಾಗ ಕಾಲ ಮಿಂಚಿಹೋಗಿತ್ತು
Realising lately.

ಚಟ್ಟ ಹತ್ತ್‌ಕನ ಮುಟ್ಟ ಹಠ
ಸಾಯುವ ತನಕ ಹಠ
Stubbornness till death.

ಚಪ್ಪೆ ಗುಟ್ಟುದು
ಕೇಳುಗನಿಗೆ ಆಸಕ್ತಿ ಇಲ್ಲದಿದ್ದರೂ ಒಂದು ವಿಷಯವನ್ನು ಪದೇ ಪದೇ ಹೇಳುವುದು.
Repeating same subject or matter again and again.

ಚವುಳಿ ಮೂಡೆನ ಕೋಮಣದೊಳಗೆ ಹಿಸಿ ಕಟ್ಟಿಕಂಡಾಂಗೆ
ಕಿರಿಕಿರಿಯನ್ನು ಆಹ್ವಾನಿಸುವಿದು.
Inviting the irritating trouble.

ಚಿನ್ನಕ್ಕೆ ಒಪ್ಪ ಕೊಟ್ಟಾಂಗೆ
ಇನ್ನಷ್ಟು ಪ್ರಜ್ವಲಿಸು.
Making the thing to shine more.

ಜಾಗ ಖಾಲಿ ಮಾಡ್ದು
ಆ ಜಾಗದಿಂದ ತೆರಳುವುದು.
Eaving from that place.

ಜಾರಿ ಹೋದ ಮಾತು
ತಪ್ಪಿ ಆಡಿ ಹೋದ ಮಾತು
Wrongly spoken words.

ಜೀವ ಹಿಂಡಿದೆ
ಕಾಡಿಸು, ಪೀಡಿಸು, ಉಪದ್ರ ಕೊಡು.
Troubling, pester.

ಜುಟ್ಟು ಹಿಡಿ
ಹಿಡಿತಕ್ಕೆ ತೆಗೆದುಕೊಳ್ಳು
Take him to control.

ಜೋಬುಯಾಗೋಳು ಒಟ್ಟೆ
ಕಿಸೆ ಯಾವಾಗಲೂ ಖಾಲಿ
Empty pocket.

ತಲೆ ಚಾಣೆ ಆಕನ ಬಾಚಣಿಗೆ ಕೊಟ್ಟಾಂಗೆ
ಅನುಭವ ಬರುವಾಗ ಮುಪ್ಪು ಬಂದಿರುತ್ತದೆ.
Experience is of no use in the old age.

ತಲೆ ಬುಡ ಗೊತ್ತಾದುಲೆ
ಏನೊಂದು ಅರ್ಥವಾಗದಿರುವುದು.
Could not understand anything.

ತಲೆ ಎತ್ತಿ ತಿರ್ಗುದು
ಮರ್ಯಾದೆಯಿಂದ ಬದುಕು.
Live with dignity.

ತಲೆ ಓಡ್ದುಲೆ
ಏನೂ ಯೋಚನೆ ಬರುವುದಿಲ್ಲ.
Could not get any idea.

ತಲೆ ಕೊಡು
ಜವಾಬ್ದಾರಿ ವಹಿಸಿಕೊಳ್ಳು.
Take over the responsibility.

ತಲೆ ತಿಂಬೊದು
ತನ್ನ ವಿಷಯವನ್ನು ತಾನೇ ಪದೆ ಪದೇ ಹೇಳಿಕೊಳ್ಳುವುದು.
Irritating some one by repeating his own problems all the time.

ತಲೆ ಬಿಸಿ
ಹಲವಾರು ಕೆಲಸಕಾರ್ಯಗಳಿಂದಾಗಿ ಮಾನಸಿಕ ಶ್ರಮ ಉಂಟಾಗುವುದು.
Mental tension due to busy schedule.

ತಲೆ ಬೋಳ್ಸು
ನಷ್ಟ ಉಂಟಾಗುವಂತೆ ಮಾಡು.
Put him under loss.

ತಲೆಗೆ ಕೈ ಹೊತ್ತು ಕುದ್ದುರ್ದು
ಏನೊಂದು ತೋಚದಾಗು.
Do not know what to do

ತಲೆ ಆಡ್ಸ್
ಒಪ್ಪಿಗೆ ಕೊಡು. Give consent.

ತಲೆ ಇಲ್ಲೆ
ಬುದ್ಧಿ ಇಲ್ಲೆ,
No sense, not wise.

ತಲೆ ಕೆಡ್ಸಿಕಂಬೊದು
ಚಿಂತಿಸು, ಯೋಚಿಸು, Think deeply.

ತಲೆ ಹಾಕ್
ಮಧ್ಯ ಪ್ರವೇಶಿಸು, Interfere.

ತಲೆ ಹೋವ ಕೆಲ್ಸ
ಅಪಾಯಕಾರಿ ಕೆಲಸ,
ಮರ್ಯಾದಿ ಹೋಗುವ ಕೆಲಸ.
Dangerous work which damages our dignity.

ತಲೆ ಮೇಲೆನ ಭಾರ ಇಳ್ತ್
ಜವಾಬ್ದಾರಿಯಿಂದ ವಿಮುಖನಾಗು.
Relieving from the responsibility.

ತಲೆಲಿ ಏನೊ ಉಟ್ಟು
ಅಹಂಭಾವದಿಂದ ಮೆರೆಯುವವ
A person with head weight.

ತಿರ್ಗಿ ಬೀಳ್
ಪರವಾಗಿದ್ದವ ಒಮ್ಮೆಲೆ ವಿರೋಧ ವ್ಯಕ್ತಪಡಿಸು.
Person who is infavour of, begins opposing suddenly.

ತುಟ್ಟಿ ಬಿಚ್ಚಿತ್ತೆ
ಮಾತನಾಡಲೇ ಇಲ್ಲ, Keeping silent.

ತೆಳಿಲಿ ಬಿದ್ದ ಎಲಿನಾಂಗೆ
ನಿಸ್ತೇಜ, ಆಸಕ್ತಿ ಇಲ್ಲದವ. Dull.

ತಾ ಕಳ್ಳ ಪರರ ನಂಬ
ತನ್ನ ಬಗ್ಗೆ ನಂಬುಗೆ ಇಲ್ಲದವ ಇನ್ನೊಬ್ಬರ ಬಗ್ಗೆಯೂ ಸದಾ ಸಂಶಯಪಡುತ್ತಾನೆ.
One who does not believe himself always suspects others.

ದಾರಿ ಕಾಂಬದುಲೆ
ಮುಂದೇನು ಮಾಡಬೇಕೆಂದು ತೋಚದಿರುವುದು.
Do not know what to do next.

ದಿನ ಇದ್ದಾಂಗೆ ದಿನ ಇರ್ದುಲೆ
ಸಮಯ ಸಂದರ್ಭಗಳು ಸದಾ ಬದಲಾಗುತ್ತವೆ.
Situations and circumstances change day by day.

ದುಟ್ಟು ಕೊಟ್ಟು ಮೊಲ್ಲುತಕಂಬದು
ಅಮಲು ಪದಾರ್ಥ ಸೇವನೆ.
Consuming alchohol.

ದುಷ್ಟಂಗೆ ಮುಂದೆ ಮಣೆಹಾಕ್
ದುಷ್ಟರನ್ನು ಆದಷ್ಟು ಬೇಗ ದೂರ ಮಾಡು.
Keep the wicked away as early as possible.

ದೃಷ್ಟಿನಾಂಗೆ ಸೃಷ್ಟಿ
ಯೋಚನೆಯಂತೆ ಕಾರ್ಯ
Action as per thought.

ಧೈರ್ಯವೇ ಮನುಷ್ಯಂಗೆ ಆಯುಧ
ಧೈರ್ಯ, ಆತ್ಮವಿಶ್ವಾಸವಿದ್ದರೆ ಯಾವುದೇ ಕೆಲಸದಲ್ಲಿ ಮುನ್ನುಗ್ಗಬಹುದು
Courage and confidence makes us to go ahead in our projects.

ನಡ್ದರೆ ತಾನೇ ಎಡ್ಡುದು
ಪ್ರಯತ್ನಿಸಿದರೆ ಮಾತ್ರ ಎದುರಾಗುವ ಕಷ್ಟಗಳ ಅನುಭವವಾಗುವುದು The experience of facing difficulties can be understood if we try and see.

ನಡಿಯಕನ ಪಿಜಿನೂ ಸಾಯಕಾಗದ್
ತುಂಬಾ ತುಂಬಾ ನಿಧಾನದ ಕೆಲಸ.
Very very slow work.

ನಡುಮನೆ ದೀಪ
ಎರಡೂ ಪಕ್ಷಕ್ಕೂ ಪರವಾಗಿರುವವ.
In favour of both sides.

ನಡು ನೀರ್‌ಲಿ ಕೈ ಬುಡ್ದು
ಅರ್ಧದಲ್ಲಿ ಸಹಾಯ ನಿಲ್ಲಿಸು
Withdraw the support in the middle.

ನಮ್ಮ ಉಚ್ಚೆನ ನಾವ್‌ಗೇ ಕುಡ್ಸುದು
ನಾವು ಮಾಡಿದ ಪಾಪದ ಹೊರೆಯನ್ನು ನಮ್ಮ ಮೇಲೆಯೇ ಹೊರಿಸುವುದು.
We have to face the punishment for our own sins.

ನಮ್ಮ ದುಡ್ಡು ನಮ್ಮ ಖರ್ಚ್
ನಾವು ಖರ್ಚು ಮಾಡುವುದಕ್ಕೂ ಮುನ್ನ ಸಂಪಾದನೆ ಮಾಡಬೇಕು.
Earn before you spend.

ನಾ ಓಟಲಿ ಒಳೆ
ನಾನು ಸ್ಪರ್ಧೆಯಲ್ಲಿದ್ದೇನೆ.
I am on the race.

ನಾಲ್‌ಗೆ ಉದ್ದ ಮಾಡ್ಬಡ
ಅತಿಯಾಗಿ ಮಾತನಾಡಬೇಡ
Do not be over talkative.

ನಾಲ್‌ಗೆ ಬಿಗಿಹಿಡಿ
ಮಾತಿಗೆ ಮಿತಿ ಹಾಕು
Control your tongue.

ನಾವೇ ಭೂತ ಕಟ್ಟಿಸಿ ನಾವೇ ಕೈಮುಗ್ದ್ ನಿಂತಾಂಗೆ
ನಾವೇ ರೂಪಿಸಿದ, ಬೆಳೆಸಿದ ವ್ಯಕ್ತಿಗಳೊಂದಿಗೆ ನಾವೇ ತಗ್ಗಿ ಬಗ್ಗಿ ನಡೆಯುವುದು.
Showing obedience to the people developed by us/appointed by us.

ನಾಹಿಡ್ದ ಮೊಲಕ್ಕೆ ಮೂರೇ ಕಾಲ್
ತಾನು ಹೇಳಿದ್ದೇ, ತಾನು ಮಾಡಿದ್ದೇ ಸರಿ ಎಂದು ವಾದಿಸುವುದು, ಹಠವಾದಿ.
Claiming/arguing what he had done is right.

ನಾಳೆನ ಕೆಲ್ಸ ಹಾಳ್
ನಮ್ಮ ಕೆಲಸವನ್ನು ಸದಾ ಮುಂದೂಡುವುದು ಕೈಗೊಂಡ ಕೆಲಸಕ್ಕೆ ಧಕ್ಕೆ ಉಂಟು ಮಾಡಿದಂತೆ.
Postponement of work spoils its speed and perfection.

ನಿತ್ಯ ಬಡವಂಗೆ ಚಿಂತೆ ಇಲ್ಲೆ
ಸದಾ ಬಡವನಿಗೆ ಹಣಕಾಸಿನ ಚಿಂತೆ ಇಲ್ಲ.
Poor has no worry for money.

ನೀರ್‌ನ ಮೇಲೆನ ಗುಳ್ಳೆನಾಂಗೆ
ಕ್ಷಣಿಕ ಸುಖಃ, ಕ್ಷಣಿಕ ಜೀವನ
Life/ Wealth is short.

ನೀರ್‌ಲಿ ಬಿದ್ದ ಕೋಳಿನಾಂಗೆ
ಸಪ್ಪೆ, ಅನಾಸಕ್ತ, ಅನಾಕರ್ಷಕ
Dull, unattractive.

ನೀರ್‌ಂದ ಹೊರಗೆ ಬಂದ ಮೀನ್‌ನಾಂಗೆ
ಚಡಪಡಿಸುವಿಕೆ, ಹೊರಗಿನ ವಾತಾವರಣ ದಲ್ಲಿ ಒಗ್ಗಿಕೊಳ್ಳಲಾರದ ಪರಿಸ್ಥಿತಿ.
Fish out of water- finding it difficult to get accustomed.

ನೀರ್‌ಲಿ ಮೀನ್‌ನ ಹುಡ್ಕಿದಾಂಗೆ
ಆತನನ್ನು ಹುಡುಕಿ ಕಂಡುಹಿಡಿಯುವುದು ತುಂಬಾ ಕಷ್ಟ. It is very difficult to find him out.

ನೀರಿಲ್ಲದಲ್ಲಿ ತಲೆಕಡಿಯಕು
ಕಠಿಣ ಶಿಕ್ಷೆ ನೀಡಬೇಕು.
Severe punishment to be given.

ನೀರು ಕುಡ್ಸು
ಶಿಕ್ಷಿಸು, ಆಯಾಸವಾಗುವಂತೆ ಮಾಡು.
Punish, make one to get dam tired.

ನೀರಿಗೆ ಹಾಕ್
ವ್ಯರ್ಥವಾಗು, ನಷ್ಟವಾಗು
Toal waste or loss.

ನುಂಗಿಕಾಗದ ತುತ್ತ್
ಕ್ಲಿಷ್ಟಕರವಾದ ಸಮಸ್ಯೆ.
Very complex situation.

ನೆಗ್ದ್ ಬೀತ್
ಸತ್ತು ಹೋಗು, Sudden death.

ನೆಗಾಡ್‌ಕನ ಎಲ್ಲವೂ ನೆಂಟ್ರ್
ಸುಖದಲ್ಲಿ ಎಲ್ಲರೂ ಪಾಲುಗಾರರು.
Happiness is always shared

ನೆರಳ್ ಕಂಡರೆ ಆದುಲೆ
ಬದ್ಧ ವೈರಿ.
Staunch enemy.

ನೆಲದ ಮೇಲಿಲ್ಲೆ
ಅಹಂಕಾರದ ಪ್ರದರ್ಶನ
Very pride egoism.

ನೆಳ ಹೊಡಿದು
ಏನೂ ಕೆಲಸ ಇಲ್ಲದಿರುವುದು
Without any work.

ಪ್ರಪಂಚ ನೋಡದಂವ
ಲೋಕಾನುಭವ ಇಲ್ಲದವ
Without any worldly knowledge.

ಪಾರೆಕಲ್ಲ್ ಮೇಲೆ ಮಳೆ ಬಿದ್ದಾಂಗೆ
ಯಾವ ರೀತಿ ಹೇಳಿದರೂ ಅರ್ಥವಾಗದಿರುವುದು.
Could not understand in spite of the best effort.

ಪ್ರಾಯ ಕತ್ತೆಗೂ ಆದೆ
ಎಷ್ಟು ವಯಸ್ಸಾದರೂ ಅನುಭವ ಸಂಪಾದಿಸದವ.
A person who could not gain any experience in spite of his elderliness.

ಪಿಣ್‌ಚಿ ಹಣ್ಣ್ ಮಾಡ್ದಾಂಗೆ
ಅತಿಯಾದ ತರಬೇತಿ ನೀಡಿ ಪಳಗಿಸುವುದು
Development through thorough imposed training.

ಪಿತ್ತಾಳೆ ಕೆಬಿ
ಚಾಡಿಮಾತ್ ಕೇಳುವವ
One who listens the backbiting.

ಪ್ರೀತಿಂದ ಹೊಟ್ಟೆ ತುಂಬಿಕಿಲೆ
ಸರಿಯಾದ ಆಹಾರ ನೀಡದೆ ಕೇವಲ ಪ್ರೀತಿ ಮಾತ್ರ ತೋರಿಸಿದರೆ ಹೊಟ್ಟೆ ತುಂಬಲಾರದು
Love and affection will not fill his stomach. Way to the heart is through stomach.

ಪೆಟ್ಟ್ ಕಡಿಮೆ
ಮಾನಸಿಕ ಅಸ್ವಸ್ಥ.
Mental disorder

ಪೆಟ್ಟೊಂದು ತುಂಡೆರಡ್
ಪ್ರಯತ್ನ ಒಂದು, ಲಾಭ ಎರಡು
Single attempt, double benefit.

ಬಂಡೆ ಕಲ್ಲ್‌ನಾಂಗೆ ಬಿದ್ದುಟು
ಗೋಚರವಿಲ್ಲದೆ ಮಲಗು.
Sleep without motion.

ಬಕಾಸುರನಾಂಗೆ ತಿಂದದೆ
ತಿಂಡಿಪೋತ
Over eater, Craze for eating.

ಬಣ್ಣ ಎಲ್ಲಾ ಹೊರಗೆ ಬಾತ್
ಆತನ ನೈಜ ಗುಣ ಬಯಲಾಯಿತು.
His real character was exposed

ಬಣ್ಣ ಕಟ್ಟಿ ಹೇಳ್
ವರ್ಣಮಯವಾಗಿ ವಿವರಿಸು.
Give a rosy picture.

ಬರಿಕೈಲಿ ಮೊಳ ಹಾಕಿದಾಂಗೆ
ಏನೂ ಮೂಲಭೂತ ಜ್ಞಾನ ಇಲ್ಲದೆ ಯೋಜನೆ ಆರಂಭಿಸಿದಂತೆ.
Launching the project without any basic knowledge and experience.

ಬಲೆಗೆ ಬೀಳ್
ಮಾತಿಗೆ ಮರುಳಾಗು
Attracted by the pleasing words.

ಬಾನಂದ ಇಳ್ದ್ ಬಂದಂವ
ದೊಡ್ಡ ಮನುಷ್ಯ ಎಂದು ಕರೆಯಲ್ಪಡುವವ
So called great man; a man with head weight.

ಬಾನಕ್ಕೆ ಏಣಿ ಇಸುದು
ಅಸಾಧ್ಯ ಕೆಲಸಕ್ಕೆ ಹೊರಡು
Attempting for impossible

ಬಾಡಿಗೆ ಎತ್ತ್‌ದುಡ್ದಾಂಗೆ
ಕಠಿಣ ಪರಿಶ್ರಮ, ಕಾರ್ಮಿಕ ಶೋಷಣೆ
Hardwork, exploitation of labourers.

ಬಿಸಿ ತುಪ್ಪದಾಂಗೆ
ಪ್ರೀತಿಪಾತ್ರರು ತಪ್ಪು ಮಾಡಿದಾಗ ಶಿಕ್ಷಿಸುವ ಹಾಗೂ ಇಲ್ಲ, ಕ್ಷಮಿಸುವ ಹಾಗೂ ಇಲ್ಲ

ಬೀಲ ಎತ್ತಿ ಸೆಗಣಿ ಹಾಕಿಕಾದುಲೆ
ಎದ್ದು ನಿಲ್ಲಲೂ ಆಗದಷ್ಟು ಕ್ಷೀಣ. ಆರ್ಥಿಕ ಸಂಕಷ್ಟ.
So weak even to stand up; acute financial problem.

ಬೀಲ ಕತ್ತುರ್ಸುದು
ಹತೋಟಿಗೆ ತರು.
Take him under control.

ಬೀಲ ಬಿಚ್ಚ್
ದುಷ್ಟ ಸ್ವಭಾವವನ್ನು ಮತ್ತೆ ಆರಂಭಿಸು.
Once again beginning the wicked act.

ಬುರುಡೆ ಬುಡ್ದು
ಸುಳ್ಳು ಹೇಳು, ಕೊಚ್ಚಿಕೊಳ್ಳು.
Tell a lie, boast of.

ಬುದ್ಧಿವಂತರಿಗೆ ಮೂರುದಿಕ್ಕ್
ಬುದ್ಧಿವಂತರಿಗೆ ಅನೇಕ ದಾರಿಗಳಿವೆ.
There are so many ways for the wise.

ಬೂದಿ ಮುಚ್ಚಿದ ಕೆಂಡದಾಂಗೆ
ಕೋಪ, ಸಿಟ್ಟು, ದ್ವೇಷವನ್ನು ತಾತ್ಕಾಲಿಕವಾಗಿ ಮುಚ್ಚಿಡುವುದು.
Hiding the anger and hatredness

ಭೂಮಿಗೆ ಭಾರ
ನಿಷ್ಪ್ರಯೋಜಕ, Fit for nothing.

ಬೆಂದ ಗಾಯಕ್ಕೆ ಉಪ್ಪು ಹಾಕಿದಾಂಗೆ
ಸಮಸ್ಯೆಗಳನ್ನು ಉಲ್ಬಣಗೊಳಿಸುವುದು.
Making the problem more complex.

ಬೆಕ್ಕಿಗೆ ಗಂಟೆ ಕಟ್ಟುದು
ವಿರೋಧಿಸುವವರ ನಾಯಕತ್ವ ವಹಿಸುವವರು ಯಾರು?
Who is to lead the opposition?

ಬೆಣ್ಣೆಲಿ ಕೂದಲ್ ಎಳ್ದಾಂಗೆ
ಅತ್ಯಂತ ಸುಸೂತ್ರವಾಗಿ, ಯಾವುದೇ ಅಡ್ಡಿ ಆತಂಕಗಳಿಲ್ಲದೆ ಕಾರ್ಯ ನಿರ್ವಹಿಸುವುದು.
Executing the work smoothly.

ಬೆಣ್ಣೆ ಹಾಕುದು
ನಯವಾಗಿ ಹೊಗಳು, ಮುಖಸ್ತುತಿ ಮಾಡು
Praise, flatter.

ಬೆನ್ನ್ ಹತ್ತ್
ಹಿಂಬಾಲಿಸು, ಬೆನ್ನಟ್ಟು
Follow him, chase him.

ಬೆನ್ನಿಗೆ ಚೂರಿ ಹಾಕುದು
ಹಿಂದಿನಿಂದ ಮೋಸ ಮಾಡು
Deceive, dupe.

ಬೆರಳ್ ತೋರ್ಸಿರೆ ಕೈನೇ ನುಂಗಿದೆ
ಕೆಟ್ಟ ಕೆಲಸಗಳಿಗೆ ಸ್ವಲ್ಪ ಬೆಂಬಲ ಕೊಟ್ಟರೆ, ಅದು ದೊಡ್ಡ ದುಷ್ಟ ಚಟುವಟಿಕೆಗಳಿಗೆ ನಾಂದಿ ಹಾಡಿದಂತೆ.
Lenience given to little mistake may lead to grave mistakes.

ಬೆಳ್ಳಂಗಿರ್ದು ಎಲ್ಲ ಹಾಲಲ್ಲ
ಸಭ್ಯರಂತೆ ಕಾಣುವವರೆಲ್ಲ ಸಭ್ಯರಲ್ಲ.
All those who look like gentle are not gentle.

ಬೇಜಾರಾವಷ್ಟ್ ಒಳ್ಳೆ ಮನುಷ್ಯ
ಗಟ್ಟಿತನ ಇಲ್ಲದ,
ಧೃಢನಿರ್ಧಾರ ಕೈಗೊಳ್ಳಲಾಗದವ.
Not solid, a person who can't take effective decision.

ಬೇಡಿ ತಿಂದರೂ ಹಂಚಿ ಉಣಕು
ಇದ್ದದ್ದನ್ನು ಹಂಚಿ ಊಟ ಮಾಡಬೇಕು.
Share your earnings.

ಬೇಡುದಕ್ಕಿಂತ ಸಾಯುದು ಒಳ್ಳದ್
ಆತ್ಮಾಭಿಮಾನ ಕಳೆದುಕೊಳ್ಳುವುದಕ್ಕಿಂತ ಸಾವು ಒಳಿತು.
Death is better than losing self respect.

ಬೇರೆ ಮನೆ ಗೈಪು ತಿಂಬಕೆಲ್ಯಾಕ್
ಬದಲಾವಣೆ ಮಾನವ ಸಹಜ.
Change is the spice of life.

ಬೇರೆವರ ಹೆಣ್ಣ್ ನೋಡಿಕೆ ಪೊರ್ಲು
ತಮ್ಮವರ ಬಗ್ಗೆ ಅಭಿಮಾನ ಇಲ್ಲದಿರುವುದು.
Not feeling proud of our own people.

ಬೇಳೆ ಬೇಯ್ಸುದು
ಪ್ರಭಾವ ಬೀರಿ ತನ್ನ ಕೆಲಸ ಮಾಡಿಸಿಕೊಳ್ಳುವುದು.
Getting the work done by personal influence.

ಬೊಗಳುವವಂಗೆ ನಾಯಿ ಯಾಕೆ?
ಬಯ್ಯುವವನಿಗೆ ಇನ್ನೊಬ್ಬನ ಸಹಾಯ ಬೇಕಿಲ್ಲ;
A person who always curses does not need the help of others.

ಬೊಳ್ಪು ನೀಡ್
ಜ್ಞಾನ, ಅರಿವು ನೀಡು.
Lead him to knowledge or wisdom.

ಮಂಡೆ ಬೆಚ್ಚ
ತಲೆಬಿಸಿ, ಚಿಂತೆ, worry, grief

ಮಕ್ಕಳೇ ಮನೆಗೆ ಆಸ್ತಿ
ಮಕ್ಕಳನ್ನು ಮನೆಯ ಆಸ್ತಿಯನ್ನಾಗಿ ಮಾಡುವುದು
Making the children as our wealth.

ಮಕ್ಕಳಾಟಿಕೆ
ಗಂಭೀರ ವಿಷಯವನ್ನು ಹಗುರವಾಗಿ ತೆಗೆದುಕೊಳ್ಳುವುದು.
Taking some serious matter lightly, boyish pranks.

ಮಟ್ಟ ತಿಳಿಯದೆ ಮಾತಾಡಿಕಾಗದ್
ಒಬ್ಬರ ಜ್ಞಾನದ ಮಟ್ಟ ತಿಳಿಯದೆ ಅವರ ಜೊತೆ ಮಾತನಾಡಲು ಹೋಗಬೇಡ.
Do not try to talk with a person without knowing his wisdom and knowledge.

ಮಡೆಕೈಲಿ ಓಡ್ಸಿಕಿಲೆ
ಮಹಾಜಿಪುಣ. Very very stingy.

ಮಣ್ಣ್ ಮುಕ್ಕಿತ್
ಸಂಪೂರ್ಣ ನಾಶವಾಗು, ಮರಣ ಹೊಂದು
Total destruction, Death.

ಮನ್‌ಸಲೇ ಬಾಳೆಹಣ್ಣ್ ತಿಂದಾಂಗೆ
ಮಾನಸಿಕ ಸಂತೋಷದ ಕನಸು.
Dream of mental happiness.

ಮನ್ಸಿದ್ದಾಂಗೆ ಮಾತ್
ಮನಸ್ಸಿಗನುಗುಣವಾಗಿ ಮಾತು.
Conversation according to his mind.

ಮರಗಟ್ಟಿ ಹೋಗು
ದೇಹ ನಿಶ್ಚಲವಾಗು
Body losing its movement.

ಮಾತ್ ಚಿನ್ನ ತೂಗಿದಾಂಗಿರೊಕು
ಅತ್ಯಂತ ಯೋಚಿಸಿ, ತೂಗಿ, ಜಾಗರೂಕನಾಗಿ ಮಾತನಾಡಬೇಕು.
Speak with all care.

ಮಾತ್‌ಲಿ ಹೊಟ್ಟೆತುಂಬುದ್ಲೆ
ಕೇವಲ ಮಾತಿನಿಂದ, ಆಶ್ವಾಸನೆಗಳಿಂದ ಬಡತನ ನಿವಾರಿಸಲು ಅಸಾಧ್ಯ.
It is not possible to eradicate poverty through speeches and promises.

ಮಾತ್‌ಲೇ ಹೊಟ್ಟೆ ತುಂಬಿತ್
ನಯ, ವಿನಯ, ಸೌಜನ್ಯತೆಯಿಂದ ಮಾತನಾಡಿಸುವುದು.
Speak with all politeness and etiquacy.

ಮಾತಾಡಿಕೆ ಮುಂದೆ ಯೋಚನೆ ಮಾಡ್
ಮಾತನಾಡುವ ಮೊದಲು ತುಂಬಾ ಯೋಚಿಸಿ ಮಾತನಾಡು.
Think twice before you speak.

ಮೀನಿಗೆ ಮೀಸಿಕೆ ಕಲ್ಸಕೋ?
ಒಂದು ಕ್ಷೇತ್ರದಲ್ಲಿ ಅನುಭವ ಗಳಿಸಿದವರಿಗೆ ತರಬೇತಿಯ ಅಗತ್ಯವಿರುವುದಿಲ್ಲ.
No need of training for already experienced person.

ಮುಲ್ಲೆ ಕತ್ರುಸುದು
ಹತೋಟಿಯಲ್ಲಿರಿಸು
Keep him under control.

ಮುಲ್ಲೆ ಪೊಕ್ಕುದುಲೆ
ನಿಶ್ಶಕ್ತ, ಬಡತನದಿಂದ ಹೊರಬರಲಾಗುತ್ತಿಲ್ಲ.
Weak, Could not come out of poverty.

ಮುಳ್ಳುನ ಹಾಸಿಗೆ
ಕಷ್ಟಕಾರ್ಪಣ್ಯದ ಜೀವನ.
Life full of difficulties.

ಮೂಕ್‌ದಾರ ಇಲ್ಲದ ಹೋರಿನಾಂಗೆ
ಹಿಡಿತ/ ಹತೋಟಿ ತಪ್ಪುವುದು.
No control of what so ever.

ಮೂಕ್‌ನ ಕೊಡಿಲಿ ಸಿಟ್ಟ್
ಮುಂಗೋಪಿ
Short tempered man.

ಮೂಕುನ ನೇರಕ್ಕೆ ಮಾತ್
ತನ್ನದೇ ಸರಿ ಎಂದು ಮಾತಾಡುವುದು.
Speaking as if I am always right.

ಮೂಕು ತೂರ್ಸುದು
ಮಧ್ಯೆ ಪ್ರವೇಶಿಸು
Interfere in others work.

ಮೂಕುನ ಕೆಳಗೆ ಇರ್ದು
ಒಬ್ಬನ ಆದೇಶದಂತೆ ವರ್ತಿಸು
Behave as per one's order.

ಮೂಕುಂದ ಬಾಯಿಗಿರುವ ದೂರ
ಅತೀ ಸನಿಹ, Very near by.

ಮೇಲೆ ಉಗ್ದ ಮಡೆ ನಮ್ಮ ಮೋರೆ ಮೇಲೇ ಬೀಳ್ಸಿಕಂಬದು
ನಮ್ಮ ಲೋಪವನ್ನು ನಾವೇ ತೋರಿಸಿಕೊಂಡು ನಮ್ಮ ಘನತೆಗೆ ಚ್ಯುತಿ ತಂದುಕೊಳ್ಳುವುದು.
Damaging our personality by exposing our own faults.

ಮೈಮನ್ಸ್ ಮರಗಟ್ಟಿ ಹೋತು
ದೈಹಿಕ ಹಾಗೂ ಮಾನಸಿಕ ಆಘಾತ
Physical and mental shock

ಮೋರೆ ಕಪ್ಪಾತ್
ಅವಮಾನಗೊಳ್ಳು,
Dishonoured.

ಮೊಸ್‌ರ್‌ಲಿ ಕಲ್ಲು ಹುಡ್ಕುದು
ಉದ್ದೇಶಪೂರ್ವಕವಾಗಿ ತಪ್ಪು ಹುಡುಕುವುದು.
Finding fault intentionally.

ಮೊಸಳೆ ಕಣ್ಣೀರ್
ಬೇಸರವಾದಂತೆ ನಟಿಸು
Pretend as if one is in grief.

ರಸ ಇಲ್ಲದ ಕಬ್ಬುನಾಂಗೆ
ಸಪ್ಪೆ, ಆಸಕ್ತಿ ಇಲ್ಲದ ವಿಷಯ
Subject without any interest.

ವಿಷ ತೆಗ್ದ ಹಾವುನಾಂಗೆ
ಸತ್ತ್ವ, ಪೌರುಷವಿಲ್ಲದ
Without courage / strength

ಶಕ್ತಿ ಮೀರಿ
ತಮ್ಮ ಸಾಮರ್ಥ್ಯಕ್ಕಿಂತಲೂ ಮಿಗಿಲಾಗಿ.
More than our capacity.

ಸತ್ಯಕ್ಕೆ ಸಾವಿಲ್ಲೆ
ಸತ್ಯ ಅಮರ, Truth is immortal.

ಸಮುದ್ರಕ್ಕೆ ಬೆಲ್ಲ ಹಾಕಿದಾಂಗೆ
ಪರಿವರ್ತನೆ/ ಸುಧಾರಣೆ ಅಸಾಧ್ಯ.
Impossible to reform.

ಸಾಸಿವೆ ಕಾಳು ಹಾಕಿಕೂ ಜಾಗ ಇಲ್ಲೆ
ಏನೇನೂ ಸ್ಥಳಾವಕಾಶ ಇಲ್ಲದ
No space at all.

ಸುಟ್ಟ ಬದನೆ ಮೋರೆ
ಸಪ್ಪಗೆಯಾದ ಮುಖ, Pale face

ಸುಟ್ಟ ಬಾಯಿಗೆ ಮಣ್ಣೂ ಮೆಚ್ಚಿಕಿಲೆ
ಬಾಯಿ ಸುಟ್ಟು ಹೋದರೆ ನಾಲಿಗೆ ರುಚಿಯನ್ನು ಆಸ್ವಾದಿಸುವ ಶಕ್ತಿ ಕಳೆದುಕೊಳ್ಳುತ್ತದೆ.
The burnt tongue loses its taste.

ಸುತ್ತಿ ಸುತ್ತಿ ಮಾತಾಡ್
ಒಂದು ವಿಷಯವನ್ನು ನೇರವಾಗಿ ಪ್ರಸ್ತಾವಿಸದೆ ಪರೋಕ್ಷವಾಗಿ ಪ್ರಸ್ತಾಪಿಸುವುದು.
Beating round the bush.

ಸೂಜಿ ಬಿದ್ದರೂ ಕೇಳುವಷ್ಟು ಮೌನ
ಸಂಪೂರ್ಣ ಮೌನ.
Pin drop silence.

ಸೂಜಿ ಮೊನೆಯಷ್ಟು ಬುಟ್ಟು ಕೊಡಿಕಿಲೆ
ರಾಜಿಯೇ ಇಲ್ಲ.
No compromise.

ಸೋತ್ ಗೆಲ್ಲ್
ಸೋಲಿನಿಂದ ಪಾಠ ಕಲಿ
Learn through defeat.

ಸೊಸೆಗೆ ಹೆದ್ರಿ ಅತ್ತೆ ತೌರಿಗೆ ಹೋದಾಂಗೆ
ಚಿಕ್ಕ ಪುಟ್ಟ ಸಮಸ್ಯೆಗಳನ್ನು ಎದುರಿಸಲಾಗದೆ ಯೋಜನೆಯಿಂದ ಹಿಂದೆ ಸರಿಯುವುದು.
Withdrawing from the project as one could not face some silly problems.

ಹಂದಿನಾಂಗೆ ಬಿದ್ದುಕಂಬದು
ಕೆಲಸ ಮಾಡದೆ ತಿಂದು ಮಲಗುವುದು.
Eating and sleeping without doing any work.

ಹರ್ಕ್ ಬಾಯಿ
ಎಲ್ಲವನ್ನೂ ಹೇಳಿಕೊಳ್ಳುವವ, ವಿಷಯ ಮರೆಮಾಚಲು ತಿಳಿಯದವ
Open hearted.

ಹಣ್ಣಿದ್ದ ಮರಕ್ಕೆ ಹಕ್ಕಿಗ ಬಂದಾಂಗೆ
ಎಲ್ಲಿ ಲಾಭ ಇದೆಯೋ ಅಲ್ಲಿಗೆ ಧಾವಿಸಿದಂತೆ
Rushing to the place where there is profit.

ಹಣ್ಣಿಲ್ಲದ ಮರಕ್ಕೆ ಕಣ್ಣಿಲ್ಲದ ಗಿಳಿ ಹೋದಾಂಗೆ
ಯಾವುದೇ ಉದ್ದೇಶವಿಲ್ಲದೆ ಅಥವಾ ಪ್ರಯೋಜನ ಇಲ್ಲದೆ ಅನಗತ್ಯ ಜಾಗಕ್ಕೆ ಹೋಗುವುದು.
Going to the unfamiliar place without any purpose.

ಹಣೆಬರನ ಕೈಲಿ ತಿದ್ದಿಕಾದುಲೆ
ನಮ್ಮ ಭವಿಷ್ಯತ್ತನ್ನು ಕೈಯಲ್ಲಿ ತಿದ್ದಲಾಗದು, ಆದರೆ ಪ್ರಯತ್ನದಲ್ಲಿ ತಿದ್ದಬಹುದು.
One can brighten his future not by his hands but by his efforts.

ಹತ್ತರೊಟ್ಟಿಗೆ ಹನ್ನೊಂದು
ಒಟ್ಟಾರೆ, ಗೋಸ್ಪಾರಿ
Not serious, carelessly.

ಹನುಮಂತನ ಬಾಲ
ಕೊನೆಯಿಲ್ಲದ್ದು.
Endless.

ಹನ್ನೊಂದು ಗಂಟೆನ ತಯಾರಿ
ಕೊನೆಗಳಿಗೆ ತಯಾರಿ
Eleventh hour preparation.

ಹಲ್ಲಿಲ್ಲದ ಹಾವು
ನಿರುಪದ್ರವಿ Harmless.

ಹಳ್ಳಿಂದ ಡಿಲ್ಲಿಗೆ
ಹಳ್ಳಿಯಿಂದ ನಗರಕ್ಕೆ, ಎತ್ತರಕ್ಕೆ ಏರು.
Grow from height to height.

ಹಳ್ಳಲಿ ಹರ್ದ್ ಹೋದ ನೀರ್‌ನಾಂಗೆ
ನಿರಂತರವಾಗಿ ನಡೆಯುವ ಪ್ರಕ್ರಿಯೆ
Continuous process.

ಹಳೆ ಹುಲಿ
ತುಂಬಾ ಅನುಭವಸ್ಥ ಹಿರಿಯ ವ್ಯಕ್ತಿ
An experienced elderly man.

ಹಲ್ಲ್‌ಬುಡು
ಮುಗುಳ್ನಗು.
Smile, respond.

ಹಾಲಿಗೆ ಹುಳಿ ಹಿಂಡಿದಾಂಗೆ
ಸಂಬಂಧ ಕೆಡಿಸು, ವೈರತ್ವ ಉಂಟುಮಾಡು

ಹಾವುನ ಹಗೆನಾಂಗೆ
ನಿರಂತರ ದ್ವೇಷ
Continuous hatredness.

ಹಾವು ಮೆಟ್ಟಿರೆ ಕಚ್ಚದಿರಿಕಿಲೆ
ತೊಂದರೆ ಮಾಡಿದರೆ ವಿರೋಧಿಸದಿರಲಾರರು.
A person who is hurt will definitely take revenge.

ಹಾಸಿಗೆ ಹಿಡಿ
ಖಾಯಿಲೆಯಿಂದ ಮಲಗು
Bed ridden.

ಹಿತ ಶತ್ರು
ಬಾಹ್ಯವಾಗಿ ಹಿತೈಷಿ, ಆಂತರಿಕವಾಗಿ ಶತ್ರು.
A wellwisher only by show.

ಹುಲಿ ಹೊಟ್ಟೆ ಇಸಿರೆ ಹುಲ್ಲು ತಿಂದದೆನಾ?
ಎಷ್ಟೇ ಬದಲಾವಣೆಯಾದರೂ ನಮ್ಮ ಮೂಲಭೂತ ಅಥವಾ ವಂಶವಾಹಿಗುಣ ಬದಲಾಗದು.
It is not possible to change the basic and innate qualities of a person.

ಹುಟ್ಟ್‌ಕನ ಬಂದದ್ ಕೊಳ್ಳಿಲಿ ಹೋದು
ಹುಟ್ಟುಗುಣ ಎಂದೂ ಬಿಟ್ಟುಹೋಗಲಾರದು
Inheritied qualities last long till death.

ಹೂವುನ ಹಾಸಿಗೆ
ಸಮಸ್ಯೆಗಳಿಲ್ಲದ ಜೀವನ.
Life without problems and difficulties.

ಹೆಣಕಾದಾಂಗೆ
ಏನೂ ಕೆಲಸವಿಲ್ಲದೆ ಕಾಯುವುದು
Waiting without any work.

ಹೆಣ್ಣಿಗೆ ಗುಣ ಇದ್ದರೆ ಚಿನ್ನಬೇಕಾ?
ಗುಣವೇ ಆಭರಣ.
Character itself is ornament.

ಹೆದ್‌ರ್ ಪುಕ್ಕ
ಪುಕ್ಕಲು ಮನುಷ್ಯ.
Man without courage; a person who has a lot of fear.

ಹೆದ್‌ರ್‌ದಂವನಾ ಮೇಲೆ ಹಾವು ಹಾಕಿದಾಂಗೆ
ಭಯಗೊಂಡವನ ಭಯವನ್ನು ಇನ್ನಷ್ಟು ಹೆಚ್ಚಿಸುವುದು.
Making a frightened person more frightened.

ಹೇಲ್‌ಂದ ದುಡ್ಡು ಹೆರ್ಕುವ ಜಾತಿ
ಮಹಾ ಜಿಪುಣ
Very stingy.

ಹೇಳ್ದಾಂಗೆ ಕೋಣೆದು
ಇನ್ನೊಬ್ಬ ಹೇಳಿದಂತೆ ವರ್ತಿಸುವುದು; ಸ್ವಂತ ಬುದ್ಧಿ ಇಲ್ಲ.
Behave as per others direction.

ಹೇಳ್ದೊಂದ್ ಮಾಡ್ದೊಂದ್
ಮಾತಿನಂತೆ ಕೃತಿ ಇಲ್ಲ.
Deeds are not as per his words.

ಹೊಟ್ಟೆಗೆ ಹೊಡಿದು
ಜೀವನಕ್ಕೆ, ಉದ್ಯೋಗಕ್ಕೆ, ಬದುಕಿಗೆ ತೊಂದರೆ ಕೊಡು.
Creating problem to one's life, job or earnings.

ಹೊಟ್ಟೆ ಬಾಯಿ ಕಟ್ಟ್
ಮಿತವ್ಯಯ ಮಾಡು, ಕಡಿಮೆ ಖರ್ಚು ಮಾಡು.
Minimize the expenses.

ಹೊಟ್ಟೆ ಮೇಲೆ ಹಾಕ
ಕ್ಷಮಿಸು. Pardon.

ಹೊಟ್ಟೆಗೆ ಹೊಡಿಯಕಾಗದ್
ಇನ್ನೊಬ್ಬನ ಬದುಕಿಗೆ ತೊಂದರೆ ಉಂಟು ಮಾಡಬಾರದು.
We should not hinder the earnings of others.

ಹೊತ್ತುವ ಕಿಚ್ಚಿಗೆ ಎಣ್ಣೆ ಹೊಯ್ದಾಂಗೆ
ಕಷ್ಟಕಾರ್ಪಣ್ಯಗಳನ್ನು ಹೆಚ್ಚಿಸುವುದು
Adding fuel to the fire.

ಹೊರಗೆ ಹಸು, ಒಳಗೆ ಹುಲಿ
ಗೋಮುಖ ವ್ಯಾಘ್ರ,
Hypocrite.

ಗ್ರಂಥ ಋಣ

1. ಕನ್ನಡ ರತ್ನ ಕೋಶ – ಕನ್ನಡ ಅಭಿವೃದ್ಧಿ ಪ್ರಾಧಿಕಾರ
2. ಸುಭಾಷ್ ನಿಘಂಟು – ಪ್ರೊ। ಎಲ್.ಎಸ್ ಶೇಷಗಿರಿರಾವ್
3. D.K Bharadwaj Standard Dictionary
4. Basic English - Dr. N. Sukumara Gowda
5. English Learner's Dictionary - Prof. Mudambadithaya
6. Easy English - L.P Fernandes
7. Learn English - ನಿತ್ಯಾನಂದ ಗ್ರಂಥಾಲಯ
8. ಡಾ। ಕೆ.ವಿ ರೇಣುಕಾ ಪ್ರಸಾದರ ಸಂಪಾದಕತ್ವಲಿ ಹೊರಬಂದ 'ವೀಳ್ಯ' ಸ್ಮರಣ ಸಂಚಿಕೆಲಿ ಪ್ರಕಟ ಆದ ಡಾ। ಕೆ. ಕುಶಾಲಪ್ಪ ಗೌಡ ಮತ್ತು ಎ.ಕೆ ಹಿಮಕರ ಅವರ ಲೇಖನಗ.
9. ಹೊದ್ದೆಟ್ಟಿ ಭವಾನಿಶಂಕರನವು ರಚಿಸಿದ ಕವನ ಸಂಕಲನ – ಸಂತೃಪ್ತಿ 2003–04
10. ಹೊದ್ದೆಟ್ಟಿ ಭವಾನಿಶಂಕರನವು ರಚಿಸಿದ ಕವನ ಸಂಕಲನ – ಮೋಟಿಗೂಡೆನ ಮೊದುವೆ.
11. ಎ.ಕೆ ಹಿಮಕರ ಮತ್ತು ಸಂಜೀವ ಕುದ್ಪಾಜೆಯವು ಸಂಪಾದಿಸಿದ ಕವನ ಸಂಕಲನ – ಸಡಗರ
12. ಬಿ.ಆರ್ ಜೋಯಪ್ಪನವು ರಚಿಸಿದ – ಚಾಂಪಾ ಸಣ್ಣ ಕಥೆಗ
13. ಯಶವಂತ ಕುಡೆಕಲ್‌ರವರ ಸಂಕಲನ– ತೊಂಬರ
14. ಕೆ.ಆರ್ ವಿದ್ಯಾಧರನವರ ಕಥಾ ಸಂಕಲನ – ಮಜಲು
15. ದ್ವಿತೀಯ ಪಿ.ಯು.ಸಿ. ಪ್ರಯೋಗ ಚಂದನ – 2012
16. ಜೆ.ಪಿ ಲೋಬೊರವರ – ಗೃಹ ಸಂಗಾತಿ



ಈ ಶಬ್ದಕೋಶ ಸಂಪಾದನೆ ಮಾಡ್ದ ಕೆ.ಆರ್. ಗಂಗಾಧರನವು ಮೂಲತ ಕೃಷಿ ಕುಟುಂಬದ ಬಂದವು. ಅಪ್ಪ ಕುರುಂಜಿ ರಾಮಯ್ಯ ಮಾಸ್ಟ್ರ, ಅವ್ವ ಗಿರಿಜಾ. ಇತಿಹಾಸಲಿ ಎಂ.ಎ. ಮಾಡಿ ಮತ್ತೆ ಬಿ.ಎಡ್. ಮಾಡಿ 1971 ರ್‌ಲಿ ಸಂಪಾಜೆ ಹೈಸ್ಕೂಲ್‌ಲಿ ಇಂಗ್ಲೀಷ್ ಮಾಸ್ಟ್ರಾಗಿ ಕೆಲಸಕ್ಕೆ ಸೇರಿ, 1980 ರ್‌ಲಿ ಅರಂತೋಡ್‌ಲಿ ಹೊಸ ಹೈಸ್ಕೂಲ್ ಆಕನ ಅದರ ಹೆಡ್‌ಮಾಸ್ಟ್ರ ಆದೊ. ಮುಂದೆ 1991 ರ್‌ಲಿ ಅವರ ಶಾಲೆ ಜೂನಿಯರ್ ಕಾಲೇಜಾಗಿ ಮೇಲ್ದರ್ಜೆಗೇರ್‌ಕನ್ ಅವು ಅದರ ಪ್ರಿನ್ಸಿಪಾಲ್ ಆಗಿ, ಒಟ್ಟು 41 ವರ್ಷಗಳ ಕಾಲ ಮಕ್ಕಳಿಗೆ ಇಂಗ್ಲೀಷ್ ಪಾಠ ಮಾಡಿ, ಜನಪ್ರಿಯ ಮಾಸ್ಟ್ರ ಆಗಿ, ಸಾವಿರಾರ್ ಮಕ್ಕಳಿಗೆ ಗೌರವದ ಗುರು ಆಗಿ, 31 ಮಾರ್ಚ್ 2012 ರ್‌ಲಿ ನಿವೃತ್ತಿ ಹೊಂದಿ ಈಗ ಅದೇ ಕಾಲೇಜ್‌ನ ಕರೆಸ್ಪಾಂಡೆಂಟ್ ಆಗಿ, ಜೊತೆಗೆ ಸುಳ್ಯದ ಅನೇಕ ಸಂಘ ಸಂಸ್ಥೆಗಳ್‌ಲಿ, ಕಾರ್ಯಕ್ರಮಗಳ್‌ಲಿ ತಮ್ಮ ತೊಡಗಿಸಿಕಂಡ್ ಸಕ್ರಿಯರಾಗಿ ಒಳೊ.

1986 ರ್‌ಲಿ ಇವು ಸುಳ್ಯ ಪಯಸ್ವಿನಿ ಜೇಸಿ ಅಧ್ಯಕ್ಷರಾಗಿ ಕರ್ನಾಟಕ ರಾಜ್ಯದ ಅತ್ಯುತ್ತಮ ಅಧ್ಯಕ್ಷ ಪ್ರಶಸ್ತಿ ಪಡ್‌ದೊಳೊ. ಅದೇ ವರ್ಷ ಭಾರತೀಯ ಜೇಸಿಸ್‌ನ ರಾಜ್ಯಮಟ್ಟದ ತರಬೇತುದಾರಂತ ಆಯ್ಕೆ ಆಗಿ ಮುಂದೆ ಸುಮಾರ್ ಒಂದು ಸಾವಿರಕ್ಕಿಂತಲೂ ಹೆಚ್ಚಿಗೆ ವ್ಯಕ್ತಿ ವಿಕಸನ ತರಬೇತಿ ನೀಡ್ದ ಹಿರಿಮೆ ಇವರ್ದ್. 1990-91 ರ ದ.ಕ.ಜಿಲ್ಲಾ ಸಂಪೂರ್ಣ ಸಾಕ್ಷರತಾ ಆಂದೋಲನಲಿ ಇವು ಜಿಲ್ಲಾ ಮಟ್ಟದ ಸಂಪನ್ಮೂಲ ವ್ಯಕ್ತಿ ಆಗಿ ಸೇವೆ ಸಲ್ಲಿಸ್ಯೊಳೊ. ಈಗ ಇವು ಕರ್ನಾಟಕ ರಾಜ್ಯ ಸಂಪನ್ಮೂಲಕೇಂದ್ರಲಿ ರಾಜ್ಯಮಟ್ಟದ ಸಂಪನ್ಮೂಲ ವ್ಯಕ್ತಿ ಆಗಿ ಸೇವೆ ಸಲ್ಲಿಸುತ್ತಾ ಒಳೊ.

ಸಾಧನೆ, ಸ್ಪಂದನ, ಆರಾಧನೆ, ಶ್ರೀಮಲ್ಲಿಕಾ, ಅಮರ, ಅಮರಶ್ರೀ, ಅಕ್ಷಯ, ನವನೀತ, ವೀಳ್ಯ, ಬಾಂಧವ್ಯ, ನಗಾರಿ, ಅರಳು, ಸುದ್ದಿ ಸುನೇರಿಗಳಂತಹ ಸುಮಾರ್ 20 ಕ್ಕಿಂತಲೂ ಹೆಚ್ಚ್ ಸ್ಮರಣ ಸಂಚಿಕೆಗಳ ಸಂಪಾದಕರಾಗಿ ಕೆಲ್ಸ ಮಾಡ್ದ ಅನುಭವ ಇವರ್ದ್. ಪತ್ರಿಕೆಗಳ್‌ಲಿ, ಮ್ಯಾಗಜೀನ್‌ಗಳ್‌ಲಿ, ಸ್ಮರಣ ಸಂಚಿಕೆಗಳ್‌ಲಿ ಶಿಕ್ಷಣಕ್ಕೆ ಸಂಬಂಧಪಟ್ಟ ಇವರ ತುಂಬ ಲೇಖನಗ ಪ್ರಕಟಣೆ ಆವುಟು. ಒಬ್ಬ ಜನಪ್ರಿಯ ಮಾಸ್ಟ್ರ ಆಗಿ, ಮಾರ್ಗದರ್ಶಕ ಆಗಿ, ಆಡಳಿತಗಾರ ಆಗಿ, ಅಂಚೆ ಚೀಟಿ ಸಂಗ್ರಾಹಕ ಆಗಿ, ಒಳ್ಳೆ ವಾಗ್ಮಿ ಆಗಿ, ಸಂಘಟಕ ಆಗಿ, ಲೇಖಕ ಆಗಿ, ಸಮಾಜ ಸೇವಕ ಆಗಿ ಕೆ.ಆರ್.ಜಿ. ಒಳ್ಳೆ ಕೆಲ್ಸ ಮಾಡ್ಯೊಳೊ. ಇವರ ಸಾಧನೆಗೆ ಮೆಚ್ಚಿ ಇವ್‌ಕೆ ಅತ್ಯುತ್ತಮ ಶಿಕ್ಷಕಾಂತ 1999ರಲಿ ಜಿಲ್ಲಾ ಪ್ರಶಸ್ತಿ, 2004 ರ್‌ಲಿ ರಾಜ್ಯ ಪ್ರಶಸ್ತಿ, 2007 ರ್‌ಲಿ ರಾಷ್ಟ್ರ ಪ್ರಶಸ್ತಿ ಬಂದದ್ ನಾವ್‌ಗೆಲ್ಲಾ ಖುಷಿ ಕೊಡುವ ಸಂಗತಿ. ನಮ್ಮ ಅರೆಭಾಷೆಗೆ ಸಂಬಂದಿಸಿದಾಂಗೆ ಇವರ ಪೆನ್ನ್‌ಂದ ಇನ್ನೂ ತುಂಬಾ ಕೃತಿಗ ಹೊರಬರ್‌ಲೀಂತ ನಾವು ಆಶಿಶುತ್ತಾ ಒಳೊ.

ಪ್ರಕಾಶಕರ್

Price: Rs.100